ಸಂವಾದ

ಸೆಪ್ಟೆಂಬರ್ ೨೦೦೪
ರೂ. ೨೦



ಡಿಆರ್‌ಎನ್ ನೆನಪು

ಬೆಂಗಳೂರೆಂಬ ಮೈ ಮಾರಾಟದ ಸಂತೆ

ಉಚಲ್ಯಾ ಮತ್ತು ಸಾಂಸ್ಕೃತಿಕ ಸಂಘರ್ಷ

ಚರ್ಚೆ :

ಪರಮಾಣು ರಾಜಕಾರಣ

ಸಂವಾದ

ಮಾಸ ಪತ್ರಿಕೆ

ಸಂಪುಟ ೨ ಸಂಚಿಕೆ ೧೧

ಸೆಪ್ಟೆಂಬರ್ ೨೦೦೪

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು. ಸುಮ

ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ,

ವಿಶ್ವನೀಡಂ ಅಂಚೆ

ಬೆಂಗಳೂರು - ೫೬೦ ೦೯೧

✆ ೨೩೨೮೭೯೪೩ / ೯೪೪೮೦ ೪೮೩೦೬

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANANAGAR, MAGADI ROAD

VISHWANEEDAM POST

BANGALORE - 560 091

✆ 080-23287943, 94480 48306

EDITOR :

INDUDHARA HONNAPURA

ಒಳಪುಟಗಳಲ್ಲಿ...





- ಪತ್ರಗಳು ೩
- ಮೇರಾ ಭಾರತ್ ಮಹಾನ್ ೪
- ಅಂತರಂಗ ೫
- ಚುನಾವಣೆ, ರಾಜಕೀಯ ಮತ್ತು ಯುವಶಕ್ತಿ ೬
  - ನಾ. ದಿವಾಕರ
- ಮೀಸಲಾತಿಯಿಂದ ಸರ್ಕಾರಿ ಆಡಳಿತದಲ್ಲಿ ದಕ್ಷತೆ ಕಡಿಮೆಯಾಗುತ್ತಿದೆಯೇ ? ೮
  - ಜಿ. ಪಾಂಡುನಾಯಕ್
- ಬಿಜೆಪಿ ಸೋಲಿಗೆ ಕೋಮುವಾದ ಕಾರಣವೇ ? ೧೦
  - ಪಿ.ಎಮ್.ಎನ್. ಮೂರ್ತಿ
- ಕಳಚಿದ ಹೋರಾಟದ ಕೊಂಡಿ ೧೩
  - ಕೆ.ಬಿ. ಸಿದ್ದಯ್ಯ





- ಬೆಂಗಳೂರೆಂಬ ಮೈ ಮಾರಾಟದ ಸಂತೆ ೧೪
  - ಸುಜಾತ ಕುಮಟಾ
- ೫೭ರ ಸ್ವಾತಂತ್ರ್ಯ: ಎರಡು ಸ್ವರ್ಗೀಯ ಸ್ವಗತಗಳು ೧೬
  - ಡಿ.ಆರ್. ನಾಗರಾಜ್
- ಉಚಲ್ಯಾ ಮತ್ತು ಸಾಂಸ್ಕೃತಿಕ ಸಂಘರ್ಷ ೨೦
  - ಡಾ॥ ಸಣ್ಣರಾಮ
- ನತದೃಷ್ಟ ಜನರ ಅನುಭವಗಳ ಸುತ್ತ... ೨೬
  - ಮೂಡ್ನಾಕೂಡು ಚಿನ್ನಸ್ವಾಮಿ
- ಆಡಳಿತಶಾಹಿ: ಪರೋಪಜೀವಿ ಪಳೆಯುಳಿಕೆ ೨೮
  - ಶಿವಸುಂದರ್
- ದಲಿತ್ ಡೈರಿ
  ಮೀಸಲಾತಿ: ಖಾಸಗೀ ವಲಯದ ಮಿಥ್ಯೆಗಳು ೩೨
  - ಚಂದ್ರಭಾನ್ ಪ್ರಸಾದ್
- ಹೊಸ ಪುಸ್ತಕ ೩೬
- ಝುನ್ ಝುಲಕ್ ೩೭
  - ಕೆ.ವಿ. ಸುಬ್ಬಣ್ಣ
- ಮಾನವ ಹಕ್ಕಿನ ಮೇಲೆ ಕರಿನೆರಳು ೩೮
  - ಅನು: ಡಿ. ಡೊಮಿನಿಕ್
- ವಿವೇಕಾನಂದರ ವಿಚಾರಗಳು ೪೨
  - ಜ. ಹೊ. ನಾರಾಯಣಸ್ವಾಮಿ

ಕವನಗಳು : ಅವ್ವ ಮತ್ತು ನಾನು - ೨೧ ; ನಾನೊಂದು ಮರವಾಗಿದ್ದರೆ - ೨೭ ; ಬದುಕು ಧರ್ಮ - ೩೧

ಮುಖಪುಟ ಕಲೆ: ಜಾನ್ ದೇವರಾಜ್ ವಿನ್ಯಾಸ: ರಾಥೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಪ್ರತಿಭೆ ಗುರುತಿಸಲು ಮೀಸಲಾತಿ ಬೇಕು

ಮಾನ್ಯ ಸಂಪಾದಕರಿಗೆ ವಂದನೆಗಳು,

'ಪಾಲುದಾರಿಕೆ ಎಂಬ ಸಹಜ ನ್ಯಾಯ' ಸಂಪಾದಕೀಯದಲ್ಲಿ ನೀವು ಹೇಳಿರುವ ಮೀಸಲಾತಿ ಏಕೆ ಬೇಕು, ಎಲ್ಲೆಲ್ಲಿ ಮೀಸಲಾತಿ ನೀಡಬಹುದು ಎಂಬಂತಹ ಇನ್ನೂ ಅನೇಕ ವಿಚಾರಗಳು ನೂರಕ್ಕೆ ನೂರರಷ್ಟು ನ್ಯಾಯ ಯುತವಾಗಿವೆ. ಶೇ ೧.೫ ರಿಂದ ೨ ರಷ್ಟಿರುವ ನೇರ ಉದ್ಯೋಗಗಳಿಗಿಂತ ಶೇ೯೮ ರಷ್ಟಿರುವ ಪರೋಕ್ಷ ಉದ್ಯೋಗಗಳಲ್ಲಿ ಮೀಸಲಾತಿ ಒದಗಿಸಬಹುದೆಂಬ ಅತ್ಯ ಮೂಲ್ಯ ಸಲಹೆ ಯನ್ನು ನೀಡಿರುವ ತಮಗೆ ಧನ್ಯವಾದಗಳು.

ಮೀಸಲಾತಿ ಅಲಕ್ಷಿತರ ಪ್ರತಿಭೆಯನ್ನು ಗುರು ತಿಸಲು ಇರುವ ಏಕೈಕ ಮಾರ್ಗ. ದಲಿತ್ ಡೈರಿಯಲ್ಲಿ ಚಂದ್ರಭಾನ್ ಪ್ರಸಾದ್ ಅವರು ಪ್ರಸ್ತಾಪಿಸುವುದನ್ನು ಓದಿದ ಯಾರಿಗೇ ಆದರೂ ಇದು ಮನದಟ್ಟಾಗುತ್ತದೆ. ನೀವೇ ಹೇಳುವಂತೆ ಅಮೆರಿಕಾದ ಮೂಲ ನಿವಾಸಿ



ಗಳನ್ನು ಸೇರಿಸಿಕೊಂಡು ಮೈಕ್ರೋಸಾಫ್ಟ್‌ನ ಬಿಲ್‌ಗೇಟ್ಸ್ ಮಿಲಿಯಗಟ್ಟಲೆ ಡಾಲರ್ ಗಳಿಸುವುದಾದರೆ, ಇನ್ಫೋಸಿಸ್ ನಾರಾಯಣ ಮೂರ್ತಿಗೇನು ದಾಡಿ? ಎಂದು ಕೇಳಬೇಕಾ ಗುತ್ತದೆ.

ಆದರೆ ನನ್ನದೊಂದು ಸಲಹೆ. ಮೀಸಲಾತಿ ಎಂಬ ಕಲ್ಪನೆಯನ್ನು ಆ ಹೆಸರಿನಿಂದ ಕರೆಯದೆ ಪಾಲುದಾರಿಕೆ ಎಂದು ಕರೆಯುವುದೇ ಹೆಚ್ಚು ಸೂಕ್ತ ಹಾಗೂ ಗೌರವಯುತವಾಗಿದೆ. ದೇಶದ ಯಾವುದೇ ಜನಾಂಗಕ್ಕೂ ಅನ್ಯಾಯ ವಾಗದಂತೆ ಆಯಾ ಜನಾಂಗದ ಪ್ರತಿಭಾ ವಂತರಿಗೆ ಆಯಾ ಜನಾಂಗದ ಜನಸಂಖ್ಯೆಗೆ ಆಧಾರವಾಗಿ ಎಲ್ಲವನ್ನು ಹಂಚುವುದೇ ಕ್ಷೇಮ, ಅದೇ ನಿಜವಾದ ಸಾಮಾಜಿಕ ನ್ಯಾಯ.

ಮೀಸಲಾತಿ ನೀಡುವ ವಿಚಾರದಲ್ಲಿ ವೋಟು ರಾಜಕೀಯ ಮಾಡುತ್ತಿರುವ ಪ್ರಸ್ತುತ ಆಡಳಿತದ ಚುಕ್ಕಾಣಿ ಹಿಡಿದಿರುವ ಜಾತ್ಯಾತೀತ ಪಕ್ಷಗಳು ಈ ವಿಚಾರದೆಡೆ ಗಮನಹರಿಸಿ ತಮ್ಮ ನೈಜ ಕಾಳಜಿಯನ್ನು ಪ್ರದರ್ಶಿಸಲಿ.

ಪದ್ಮನಾಭ, ಬೆಂಗಳೂರು

ಬುಡಮೇಲಾದ ಕಲ್ಪನೆ

ಮಾನ್ಯ ಇಂದೂಧರ ಹೊನ್ನಾಪುರ ಅವರೇ,

ಬಿ.ವಿ. ವೀರಭದ್ರಪ್ಪನವರ ಋಷಿ ಮೂಲ ಕೇಳಬಾರದು ಲೇಖನ ಓದಿ ನನಗೆ ಪುರಾಣ ಪುಣ್ಯ ಕಥೆಗಳ ಬಗ್ಗೆ ಇದ್ದ ಕಲ್ಪನೆಯೆ ಬುಡ ಮೇಲಾಗಿದೆ. ಋಷಿ ಮುನಿಗಳು ಹಾಗೂ ಇತರೆ ದೇವತೆಗಳು ಎಂಥ ವ್ಯಭಿಚಾರಿಗಳು, ಅಯೋಗ್ಯರು ಎಂಬುದನ್ನು ಲೇಖಕರು ವಿಷದವಾಗಿ ಮಂಡಿಸಿದ್ದಾರೆ.

ಇಂಥ ವೈಜ್ಞಾನಿಕ ಯುಗದಲ್ಲಿ ಇಂಥ ಕಾಗಕ್ಕ ಗುಬ್ಬಕ್ಕನ ಕಥೆಗಳ ಮೂಲಕ ಜನಸಾಮಾನ್ಯ ರನ್ನು ತಮ್ಮ ಕಪಿಮುಷ್ಠಿಯಲ್ಲಿ ಹಿಡಿದಿಟ್ಟು ಕೊಳ್ಳಲು ಪುರೋಹಿತಶಾಹಿ ನಡೆಸುತ್ತಿರುವ ಕುತಂತ್ರಗಳಿಗೆ ತಡೆಯೊಡ್ಡಬೇಕಾದರೆ ಇಂಥ ಲೇಖನಗಳು ಅಗತ್ಯವಾಗಿವೆ. ವೀರಭದ್ರಪ್ಪ ನವರಿಗೆ ವಂದನೆಗಳು. ದಯವಿಟ್ಟು ಇಂಥ ಲೇಖನಗಳನ್ನು ಹೆಚ್ಚು ಹೆಚ್ಚು ಪ್ರಕಟಿಸಿರಿ.

ಶಾಂತಾರಾಮ ಕುಡ್ವ, ಬಂಟ್ವಾಳ

ಸಂವಾದ 'ವಿಚಾರ ಹಾಗೂ ಜ್ಞಾನಪ್ರಧಾನ'

ಆತ್ಮೀಯ ಸಂಪಾದಕರೆ,

ನಿಮ್ಮ ಪತ್ರಿಕೆಯು 'ವಿದ್ವತ್‌ಪೂರ್ಣ ಹಾಗೂ ವಿಚಾರ ಪ್ರಧಾನ' ಪತ್ರಿಕೆಯೆಂದು ಹೇಳಲು 'ಹೃದಯ ತುಂಬಿ' ಆ ಸಂತೋಷವನ್ನು ಹಂಚಿಕೊಳ್ಳುತ್ತೇನೆ. ಇದು ನನ್ನ ಸ್ನೇಹಿತನಿಂದ ನನಗೆ ತಿಳಿದುಬಂತು. ಅವನಿಂದ ಪಡೆದು ಓದಿದಾಗ ನನಗೆ ಸಂತೋಷ ಹಾಗೂ ಮನದಲ್ಲಿ ವಿಚಾರದ ಮಂಥನ ಶುರುವಾಯಿತು. ಇದಕ್ಕೂ ಮೊದಲು ನೋಡದಿದ್ದುದಕ್ಕೆ ವ್ಯಥೆಪಟ್ಟು ಸದ್ಯ ಈಗಲಾದರೂ ಇಂತಹ ವಿಭಿನ್ನ ವೈಚಾರಿಕ ಹಾಗೂ ತಾತ್ವಿಕ ಚಿಂತನೆಯ ಪತ್ರಿಕೆ ಕೊಂಡದ್ದಕ್ಕೆ ಸಂತೋಷಿಸುತ್ತೇನೆ. ಸದ್ಯ ಪ್ರಕಟವಾಗುತ್ತಿರುವ ಎಲ್ಲ ಪತ್ರಿಕೆಗಳಿಗಿಂತಲೂ ಸಂವಾದ ಬಹು 'ವಿಚಾರ ಹಾಗೂ ಜ್ಞಾನಪ್ರಧಾನ' ಪತ್ರಿಕೆಯಾಗಿದೆ ಎಂದರೆ ಅತಿಶಯವಾಗಲಿಕ್ಕಿಲ್ಲ.

ಸಿ. ಮಂಜುನಾಥ, ಗುಲಬರ್ಗಾ

ಕಣ್ಣು ತೆರೆಸಿದ ಲೇಖನ

ಮಾನ್ಯ ಸಂಪಾದಕರೇ,

'ಬಸವಣ್ಣನೂ ಅಸ್ಪೃಶ್ಯರ ಉದ್ಧಾರವೂ' ಎಂಬ ರೆವ್ಹರೆಂಡ್ ಚೆನ್ನಪ್ಪ ಉತ್ತಂಗಿ ಅವರ ಲೇಖನ ನನ್ನ ಕಣ್ಣು ತೆರೆಸಿತು. ವೀರಶೈವ ಸಾಹಿತ್ಯದಲ್ಲಿ ಅಪಾರ ಆಸಕ್ತಿ ಇರುವ ನನಗೆ ಈ ಲೇಖನ ನಿಜಕ್ಕೂ ಹೊಸ ಹೊಳಹುಗಳನ್ನು ನೀಡಿತು. ಧನ್ಯವಾದಗಳು.

ಶರಣಪ್ಪ ಕಮತಗಿ, ಬೆಳಗಾವಿ

ಪತ್ರಾಗ್ನಿ

ಸಂಶೋಧನೆಗೆ ಪೂರಕ ಲೇಖನಗಳು

ಗೌರವಾನ್ವಿತ ಮಾನ್ಯ ಸಂಪಾದಕರೇ,

ಕುವೆಂಪು ವಿಶ್ವವಿದ್ಯಾನಿಲಯ ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ (ಕನ್ನಡ ಭಾರತಿ) ಇಲ್ಲಿ ಕಳೆದ ಸಾಲಿನಿಂದ ಪಿಎಚ್.ಡಿ ಸಂಶೋಧನೆ ಮಾಡುತ್ತಿದ್ದೇನೆ. ನನ್ನ ಸಂಶೋಧನೆಗೆ ಪೂರಕವಾಗಿ ಹಲವಾರು ಲೇಖನಗಳನ್ನು ಸಂವಾದದಲ್ಲಿ ಪ್ರಕಟಿಸುತ್ತಾ ಬಂದಿದ್ದೀರಿ. ನನ್ನ ಓದಿನ ವಿಸ್ತಾರಕ್ಕೆ ಹೆಚ್ಚು ಉಪಯುಕ್ತವಾದ ಆಕರವಾಗಿ ನಿಮ್ಮ ಪತ್ರಿಕೆ ಬರುತ್ತಿದೆ. ಅದಕ್ಕಾಗಿ ಕೃತಜ್ಞತೆಗಳು.

ಕೆ. ಆಂಜನಪ್ಪ, ಶಿವಮೊಗ್ಗ

ಚಂದಾ ವಿವರ

ಬಿಡಿ ಪ್ರತಿ ರೂ: ೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ. ೧೦೦/-	ರೂ. ೩೦೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ. ೨೪೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ		
ರೂ. ೫೦೦/-	ರೂ. ೧೫೦೦/-	ರೂ. ೨೫೦೦/-

ಅಜೀವ ಚಂದಾ ರೂ. ೫,೦೦೦/-

ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ವಿವಾದಾಗಳಿಗೆ ಉತ್ತರ

ಗೌರವಯುತ ಸಂಪಾದಕರೇ,

'ಸಂವಾದ' ಪತ್ರಿಕೆಯ ಹೆಸರೇ ಸೂಚಿಸುವಂತೆ ಅದರಲ್ಲಿನ ಎಲ್ಲ ವಿಚಾರಗಳು ವಾದಕ್ಕೆ ಎಡೆ ಮಾಡಿಕೊಡುತ್ತವೆ.

ಪ್ರಸ್ತುತ ಚಾಲ್ತಿಯಲ್ಲಿರುವ ವಿವಾದಾತ್ಮಕ ವಿಷಯಗಳನ್ನು ನಾವು ಬಸ್ಸಿನಲ್ಲಿ ಪ್ರಯಾಣಿ ಸುವಾಗ, ಹರಟೆ ಹೊಡೆಯುವಾಗ ಚರ್ಚಿಸುತ್ತಿದ್ದರೆ ನಮಗೆ ಒಂದು ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ. ಆಗ ಮನಸ್ಸಿನಲ್ಲಿ ಗೊಂದಲ ಮನೆ ಮಾಡಿಬಿಡುತ್ತಿತ್ತು. ಆದರೆ ಇದೀಗ ಸಂವಾದ ಆ ಕೊರತೆಯನ್ನು ನೀಗಿಸುತ್ತಿದೆ.

ಯಾವುದೋ ಒಂದು ವಿವಾದಾತ್ಮಕ ವಿಷಯವನ್ನು ಚರ್ಚಿಸುವಾಗ ನಮಗೆ ಅರಿವಿಲ್ಲ ದಂತೆ ಎಲ್ಲ ರೀತಿಯ ವಿಷಯಗಳೂ ಅದರೊಳಗೆ ತಳುಕು ಹಾಕಿಕೊಂಡು ಬಿಡುತ್ತವೆ. ಅವೆಲ್ಲಕ್ಕೂ ಉತ್ತರ ಈ ಪತ್ರಿಕೆಯಲ್ಲಿ ಸಿಗುತ್ತಿದೆ. ಕನ್ನಡದಲ್ಲಿ ಇಂತಹ ಪತ್ರಿಕೆಯೊಂದರ ಅವಶ್ಯಕತೆ ಖಂಡಿತ ಇತ್ತು. ಇದನ್ನು ಇನ್ನಷ್ಟು ಅಭಿವೃದ್ಧಿ ಪಡಿಸುವಲ್ಲಿ ಪ್ರಯತ್ನ ಸಾಗಲಿ ಎಂದು ಹಾರೈಸುವೆ.

ವಂದನೆಗಳೊಂದಿಗೆ,

ತೀರ್ಥ ಪ್ರಸಾದ್, ಸಾಗರ

ಮುಖಪುಟವೇ ಸೂಪರ್

ಆತ್ಮೀಯ 'ಸಂವಾದ' ಮಾಸ ಪತ್ರಿಕೆಯ ಸಂಪಾದಕರೆ,

ಬಣ್ಣ ಬಣ್ಣದ ಜಗತ್ತಿನ ಈ ಯುಗದಲ್ಲಿ ಎಲ್ಲವೂ, ಎಲ್ಲರೂ ಚೆನ್ನಾಗಿದ್ದಾರೆ ಎಂಬ ಭ್ರಮೆ ಮೂಡುವುದು ಸಹಜ. ಆದರೆ ಅದರೊಳಗಿನ ಹುಳುಕು ಯಾರಿಗೂ ಕಾಣದು.

ಕೇವಲ ಎರಡೇ ಬಣ್ಣಗಳಲ್ಲಿ ಮುದ್ರಿತವಾಗುತ್ತಿರುವ 'ಸಂವಾದ' ಮುಖಪುಟವು ನೈಜತೆಯ ಪ್ರತೀಕ ಎಂದರೆ ಅತಿಶಯೋಕ್ತಿಯೇನಲ್ಲ.

ಜಾನ್‌ದೇವರಾಜ್, ಬಂದಗದ್ದೆ ರಾಧಾಕೃಷ್ಣ ಹಾಗೂ ಇನ್ನಿತರರ ಅತ್ಯಮೂಲ್ಯ ಕಲೆಗಳನ್ನು ಬಳಸಿಕೊಂಡು ಕಲಾವಿದ ರಾಥೋಡ್ ಅವರ ವಿನ್ಯಾಸದಲ್ಲಿ ಮೂಡಿಬರುತ್ತಿರುವ ಸಂವಾದಕ್ಕೆ ಯಾವ ಪತ್ರಿಕೆಯೂ ಸರಿಸಾಟಿ ಯಾಗಲಾರದು. ಅದರೊಳಗಿನ ವಿಚಾರಗಳೂ ಅಷ್ಟೇ ವಾಸ್ತವ ಚಿತ್ರಣವನ್ನು ನೀಡುತ್ತಿರುವುದು ನಮಗೆ ಗಾಢಾಂಧಕಾರದಲ್ಲಿ ಸೂರ್ಯನ ಬೆಳಕಿನ ಕಿರಣವನ್ನು ಕಂಡಂತಾಗುತ್ತದೆ.

ಕಮಲ ತನಯ, ಶಿವಗಂಗೆ

ಕೋಳಿ, ಕುರಿ ದುಬಾರಿಯೆಂದು ಮಗುವನ್ನೇ ಬಲಿಕೊಟ್ಟರು!

ಖುರ್ಜಾ (ಉತ್ತರ ಪ್ರದೇಶ) ಆ. ೮- ದೇವಿಯನ್ನು ಒಲಿಸಲು ಮಗುವನ್ನು ಬಲಿಕೊಡುವ ಅಮಾನುಷ ಘಟನೆಗಳು ಅಪರೂಪಕ್ಕೊಮ್ಮೆ ನಡೆಯುತ್ತಿರುತ್ತವೆ. ಆದರೆ ದೇವಿಗೆ ಬಲಿ ನೀಡಲು ಕುರಿ, ಕೋಳಿಗಳು ದುಬಾರಿ ಎಂದು ಮಗುವನ್ನೇ ಬಲಿ ಕೊಟ್ಟ ಘಟನೆ ಉತ್ತರ ಪ್ರದೇಶದ ಖುರ್ಜಾ ಜಿಲ್ಲೆಯಲ್ಲಿ ನಡೆದಿದೆ.

ಮನೋಜ್ ಎಂಬಾತ ಮಂತ್ರವಾದಿಯ ಮಗ, ಈತನಿಗೂ ತಂದೆಯಂತೆ ಮಂತ್ರವಾದಿಯಾಗುವ ಹುಚ್ಚು, ತನ್ನಿಬ್ಬರು ಸ್ನೇಹಿತರಾದ ಭುರಾ ಮತ್ತು ರಾಮವತಾರ್ ಎಂಬವರೊಂದಿಗೆ ಸೇರಿಕೊಂಡು ಮಾಟ ಮಂತ್ರ ಕಲಿಯುತ್ತಿದ್ದ.

ತಂತ್ರ ಮಂತ್ರವೆಲ್ಲಾ ಕಲಿತಾದ ಬಳಿಕ ಅದನ್ನು ಪರೀಕ್ಷಿಸಿ, ದೇವಿಯನ್ನು ಸಂಪ್ರೀತಿಗೊಳಿಸಬೇಕಲ್ಲಾ, ಅದಕ್ಕೆ ದೇವಿಗೆ ಏನಾದರೂ ಬಲಿ ನೀಡಲು ನಿರ್ಧರಿಸಿದರು. ಮೊದಲಿಗೆ ಕುರಿ ಅಥವಾ ಕೋಳಿಯನ್ನು ದೇವಿಗೆ ಅರ್ಪಿಸಲು ನಿರ್ಧರಿಸಿದ್ದರು. ಆದರೆ ಕುರಿ ಕೋಳಿ ಖರೀದಿಸಲು ಕೈಯಲ್ಲಿ ಹಣವಿರಲಿಲ್ಲ, ಸರಿ, ಇನ್ನೇನು ಮಾಡುವುದು. ಕುರಿ ಕೋಳಿಗೆ ದುಬಾರಿ ಹಣ ನೀಡುವುದಕ್ಕಿಂತ ಸುಲಭದ ಹಾದಿ ಯೋಚಿಸಿದವರಿಗೆ ಹೊಳೆದದ್ದು ನರಬಲಿ. ಗ್ರಾಮದ ಒಂದುವರೆ ವರ್ಷದ ಗಂಡು ಮಗುವೊಂದನ್ನು ಅಪಹರಿಸಿ ದೇವಿಗೆ ಬಲಿ ಅರ್ಪಿಸಿಯೇಬಿಟ್ಟರು.



ಪ್ರೇಮ್ ಲಾಲ್ ಮತ್ತು ಪ್ರೇಂಭಾಟಿ ದಂಪತಿ ಮಗು ಸುನೀಲ್ ಬಲಿಯಾದ ದುರ್ದೈವಿ. ರುಂಡವಿಲ್ಲದ ಮಗುವಿನ ದೇಹ ಗ್ರಾಮದ ಗೋಧಿ ಗದ್ದೆಯಲ್ಲಿ ಪತ್ತೆಯಾಯಿತು. ಊರವರ ಗುಮಾನಿಯಂತೆ ಮೂವರು ಮಂತ್ರವಾದಿಗಳನ್ನು ಬಂಧಿಸಿದಾಗ ವಿಷಯ ಬಯಲಾಯಿತು. ದೇವಿಯನ್ನು ಒಲಿಸಿಕೊಳ್ಳಲು ತಾವು ಮೂವರು ಮಗುವಿನ ಬಲಿ ನೀಡಿರುವುದಾಗಿ ಆರೋಪಿಗಳು ಒಪ್ಪಿಕೊಂಡಿದ್ದಾರೆ. ಕುರಿ, ಕೋಳಿ ದುಬಾರಿಯೆಂದು ಈ ಕೃತ್ಯ ನಡೆಸಿರುವುದಾಗಿ ಅವರು ಬಾಯಿ ಬಿಟ್ಟಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. (ಕನ್ನಡ ಪ್ರಭ)

ಇಲ್ಲಿ ೫೦೦ ರೂಪಾಯಿಗೆ ಒಂದು ಮಗು ಮಾರಾಟ

ಅಜಮ್‌ಗಢ, ಆ. ೧೨- ಉತ್ತರ ಪ್ರದೇಶದ ನೂರ್‌ಪುರ್‌ನ ಬನ್ಸ್‌ರಾಜ್ ರಾಮ್ ಬಡ ನೇಕಾರ. ಎರಡು ದಿನಗಳಿಂದ ಮನೆಯಲ್ಲಿ ಒಲೆ ಹೊತ್ತಿಸಿಲ್ಲ, ಮನೆಯಲ್ಲಿ ಮಾರಲೂ ಏನೂ ಉಳಿದಿಲ್ಲ, ಕಡೆಗೊಮ್ಮೆ ಅವನ ದೃಷ್ಟಿ ಹರಿದಿದ್ದು ತನ್ನ ನಾಲ್ಕು ತಿಂಗಳ ಮಗನ ಮೇಲೆ ಒಂದು ವಾರದಿಂದ ಅಲೆದಾಡಿ ಅಂತೂ ಮಗನಿಗೊಬ್ಬ ಗಿರಾಕಿ ಹುಡುಕಿಯೇ ಬಿಟ್ಟ.

ಪಕ್ಕದೂರಿನ ಮೂವರು ಹೆಣ್ಣು ಮಕ್ಕಳ ತಂದೆ ದೀಪ್‌ಚಂದ್, ಬನ್ಸ್‌ರಾಜ್‌ನ ಮಗನನ್ನು ೫೦೦ ರೂಪಾಯಿಗೆ ಕೊಂಡುಕೊಂಡ. ಅಲ್ಲಿಗೆ ಬಡ ನೇಕಾರನ ಮನೆಯ ಒಲೆ ಒಂದು ವಾರ ಅಡೆತಡೆಯಿಲ್ಲದೆ ಉರಿಯತೊಡಗಿತು.

ಎರಡು ದಿನದಿಂದ ಹಸಿದಿದ್ದ ಮಗುವನ್ನು ಮಾರಿ ಬರುವಾಗ ಬನ್ಸ್‌ರಾಜ್ ದುಃಖದ ಕೋಡಿಯಾಗಿದ್ದ.

(ಸಂಯುಕ್ತ ಕರ್ನಾಟಕ)

ಸೀಗೆಹೊಸೂರು ಗಿರಿಜನರ ಹಾಡಿಯ ಜನರ ಹಾಡುಪಾಡು

ಮಡಿಕೇರಿ, ಆ. ೧೨- ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯ ಮಹತ್ತರ ಸಾಧನೆ ಮಾಡುತ್ತಿದ್ದರೂ, ಜಿಲ್ಲೆಯಲ್ಲಿ ಗಿರಿಯನ ಹಾಡಿಯೊಂದು ನಿಕೃಷ್ಟ ಬದುಕು ಸಾಗಿಸುತ್ತಿದೆ.

ನಾಗರಿಕತೆಯ ಸುಳಿವೇ ಇಲ್ಲದೆ, ಸರಕಾರದ ಯಾವ ಸೌಲಭ್ಯವೂ ದೊರೆಯದೆ, ಕಡುಬಡತನದಲ್ಲಿ ಈ ಜನತೆ ಜೀವಿಸುತ್ತಿದೆ. ಆದರೆ ಜಿಲ್ಲೆಯ ಜನ ಪ್ರತಿನಿಧಿಗಳಾಗಲೀ, ಸರ್ಕಾರವಾಗಲೀ ಇಂತಹ ಕುಟುಂಬಗಳಿಗೆ ಅದರಲ್ಲೂ ಮುಖ್ಯವಾಗಿ ಗಿರಿಜನರಿಗೆ ಶಾಶ್ವತ ವಸತಿ ಯೋಜನೆ ಕಲ್ಪಿಸಿಕೊಡುವಲ್ಲಿ ಹಿಂದೇಟು ಹಾಕುತ್ತಿರುವುದು ಸರಕಾರದ ನಿರ್ಲಕ್ಷ್ಯತೆಗೆ ಸ್ಪಷ್ಟನಿದರ್ಶನ.

(ಸೂರ್ಯೋದಯ)

ಜಾತಿ ನಿಂದನೆ : ನೊಂದ ಯುವತಿಯ ಆತ್ಮಹತ್ಯೆ

ದೊಡ್ಡಬಳ್ಳಾಪುರ, ಜು. ೨೦- ದೊಡ್ಡಬಳ್ಳಾ ಪುರ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಗಂಡರಾಜಪುರ ಗ್ರಾಮದಲ್ಲಿ ಜಾತಿ ನಿಂದನೆಯಿಂದ ಜಿಗುಪ್ಸೆಗೊಂಡ ತರುಣಿಯೊಬ್ಬಳು ಸೀಮೆಎಣ್ಣೆ ಸುರಿದು ಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ವರದಿಯಾಗಿದೆ.

ತಾಲ್ಲೂಕಿನ ಗಂಡರಾಜಪುರ ಗ್ರಾಮದ ಮಧುಕುಮಾರಿ (೧೯) ಎಂಬ ಪರಿಶಿಷ್ಟ ವರ್ಗದ ತರುಣಿಯೇ ಆತ್ಮಹತ್ಯೆ ಮಾಡಿ ಕೊಂಡ ದುರ್ದೈವಿ.

ಮಧುಕುಮಾರಿ ತನ್ನ ಮನೆಯ ಮುಂದೆ ಹೂವಿನ ಗಿಡಗಳನ್ನು ಬೆಳೆಸಿದ್ದರು. ಎದುರು ಮನೆಯ ವಿಜಯಕುಮಾರ್‌ಗೆ ಸೇರಿದ ಹಸುವೊಂದು ಹೂವಿನ ಗಿಡಗಳನ್ನು ತಿಂದ ಹಿನ್ನಲೆಯಲ್ಲಿ ಗಿಡಗಳು ನಾಶವಾದವೆಂದು ಮಧುಕುಮಾರಿ, ವಿಜಯಕುಮಾರ್ ದಂಪತಿಗಳನ್ನು ಟೀಕಿಸಿದ್ದಳು. ಇದರಿಂದ ಕೆರಳಿದ ದಂಪತಿಗಳು ಮಧುಕುಮಾರಿಯ ಜಾತಿ ನಿಂದನೆ ಮಾಡಿದರು ಎನ್ನಲಾಗಿದೆ.

ಇದರಿಂದ ಮನನೊಂದ ಮಧುಕುಮಾರಿ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿ ಕೊಂಡಳು. ಇದನ್ನು ಕಂಡ ವಿಜಯ ಕುಮಾರ್ ಕೂಡಲೇ ಆಟೋದಲ್ಲಿ ಆಕೆ ಯನ್ನು ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಸೇರಿಸಿದರು. ಶೇ ೮೦ ಭಾಗ ತೀವ್ರವಾಗಿ ಸುಟ್ಟುಹೋಗಿದ್ದ ಆಕೆಯನ್ನು ಕೂಡಲೇ ಅಲ್ಲಿಂದ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದರು.

ಮೂರು ದಿನಗಳ ಕಾಲ ಸಾವು- ಬದು ಕಿನ ನಡುವೆ ಹೋರಾಟ ನಡೆಸಿದ ಮಧು ಕುಮಾರಿ ಮೃತಪಟ್ಟಿದ್ದು, ಮರಣಕ್ಕೆ ಮುನ್ನ ದೊಡ್ಡಬಳ್ಳಾಪುರದ ದಂಡಾಧಿಕಾರಿಗಳಾದ ಸಂಪತ್‌ಕುಮಾರ್ ಮುಂದೆ ಹೇಳಿಕೆ ನೀಡಿ ದ್ದು, ಹೇಳಿಕೆಯನ್ವಯ ದೂರನ್ನು ದಾಖಲಿಸಿ ಕೊಂಡು ವಿಜಯಕುಮಾರ್‌ರನ್ನು ಬಂಧಿಸಲಾಗಿದೆ ಎಂದು ಗ್ರಾಮಾಂತರ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಎಚ್. ನಾಗ್ತೆ ಪತ್ರಿಕೆಗೆ ತಿಳಿಸಿದ್ದಾರೆ.

(ಸಂಯುಕ್ತ ಕರ್ನಾಟಕ)

ಇನ್ನೂ 'ಸ್ವತಂತ್ರ'ರಾಗದ ಗಂಗೂರು ಜೀತಮುಕ್ತರು !

ಹಾಸನ, ಆ. ೧೪- ದೇಶದೆಲ್ಲೆಡೆ ನಾಳೆ (ಆ.೧೫) ಸ್ವಾತಂತ್ರ್ಯೋತ್ಸವ ಆಚರಿಸ ಲಾಗುತ್ತಿದೆ. ಆದರೆ ಅರಕಲಗೂಡು ತಾಲೂಕು ಗಂಗೂರು ಜೀತ ವಿಮುಕ್ತರು ಮಾತ್ರ ಸ್ವತಂತ್ರ ಬದುಕಿಗಾಗಿ ಹೋರಾಟ ಮುಂದುವರಿಸಿದ್ದಾರೆ.

೧೦ ವರ್ಷಗಳ ಹಿಂದೆ ಜೀತವಿಮುಕ್ತ ರಾದ ೯೧ ದಲಿತ ಕುಟುಂಬಗಳು ಭೂಮಿಯ ಹಕ್ಕಿಗಾಗಿ ಹೋರಾಟ ನಡೆ ಸುತ್ತಾ ಬಂದಿದ್ದು ಗ್ರಾಮ ಸಮೀಪದ ಗೊಬ್ಬಳಿ ಅರಣ್ಯದಲ್ಲಿ ಭೂಮಿ ನೀಡಬೇಕೆಂದು ಒತ್ತಾಯಿಸಿ ಗುಡಿಸಲುಗಳನ್ನು ಹಾಕಿಕೊಂಡು ಆರಂಭಿಸಿರುವ ಹೋರಾಟ ನಾಳೆಗೆ ೫೦ ದಿನಕ್ಕೆ ಕಾಲಿಟ್ಟಿದೆ.

ಗೊಬ್ಬಳಿ ಅರಣ್ಯದಲ್ಲಿ ಜೀತವಿಮುಕ್ತ ಕುಟುಂಬಗಳನ್ನು ಇಲಾಖೆ ತೆರವುಗೊಳಿಸಿದ ನಂತರ ಬದುಕಿಗಾಗಿ ನೆಲೆ ಇಲ್ಲದೆ ಪರದಾಡುತ್ತಿದ್ದು ಸಮಸ್ಯೆ ದಿನದಿಂದ ದಿನಕ್ಕೆ ಸಂಕೀರ್ಣವಾಗುತ್ತಿದೆ.

ಗಂಗೂರು ಸುತ್ತಮುತ್ತಲಿನ ೨೦ ಹಳ್ಳಿಗಳ ಮೇಲ್ವರ್ಗದ ಜನರು ಜೀತ ವಿಮುಕ್ತರಿಗೆ ಭೂಮಿ ಮಂಜೂರು ಮಾಡ ಬಾರದೆಂದು ಒತ್ತಾಯ ಮಾಡುತ್ತಿರುವುದರ ಜೊತೆಗೆ ಈಗ ಜೀತ ವಿಮುಕ್ತರಿಗೆ ಕೂಲಿ ಯನ್ನೇ ಕೊಡುತ್ತಿಲ್ಲ ಎಂಬ ಆರೋಪಗಳು ಕೇಳಿ ಬರುತ್ತಿದ್ದು, ಸಮಸ್ಯೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿ ದಂತಾಗಿದೆ.

(ಉದಯವಾಣಿ)

ಸಂಪಾದಕೀಯ

ಅಂತರಂಗ

ಪರ್ಯಾಯ ರಾಜಕಾರಣದ ದಿಕ್ಕು ದಿಶೆ...

ಪರ್ಯಾಯ ರಾಜಕಾರಣದ ಮಾತು ಈಗ ಎಲ್ಲೆಲ್ಲೂ ಕೇಳಿಬರುತ್ತಿದೆ. ಎಪ್ಪತ್ತರ ದಶಕದಲ್ಲಿ ನಾಡಿನಲ್ಲಿ ಆರಂಭವಾದ ಜನಪರ ಚಳವಳಿಗಳು ಇದೀಗ ಹೊಸದಿಕ್ಕಿನತ್ತ ಆಲೋಚಿಸಲು ಆರಂಭಿಸಿವೆ. ಅಧಿಕಾರ ರಾಜಕಾರಣದಿಂದ ನಿರಂತರವಾಗಿ ದೂರವೇ ಉಳಿದು ಕೇವಲ ಒತ್ತಡದ ಗುಂಪುಗಳಾಗಿ ಮಾತ್ರ ಕೆಲಸ ನಿರ್ವಹಿಸುತ್ತಿದ್ದ ಚಳವಳಿಗಳು ಕಡೆಗೂ ಅಧಿಕಾರ ರಾಜಕಾರಣವೂ ಜನಪರ ಹೋರಾಟದ ಒಂದು ಭಾಗ ಎಂದು ಭಾವಿಸಿರುವುದು ಹೊಸ ವಿದ್ಯಮಾನವಾಗಿದೆ.

ಭಾರತೀಯ ಸಮಾಜ ತನ್ನದೇ ಆದ ಕಾರಣಕ್ಕೆ ವಿಚಿತ್ರವೂ, ವೈವಿಧ್ಯವೂ, ಪ್ರಬುದ್ಧವೂ ಆದುದಾಗಿದೆ. ಕ್ಷುದ್ರತೆಯ ಪ್ರಪಾತದಿಂದ ಹಿಡಿದು, ಔದಾರ್ಯ, ಪ್ರೀತಿ, ಕರುಣೆಗಳ ಪರಾಕಾಷ್ಠೆಯೂ ಇಲ್ಲಿದೆ. ಪುಷ್ಯಮಿತ್ರನಂಥ ಮಹಾ ಜನಾಂಗವಾದಿಯಿಂದ ಹಿಡಿದು ಗೌತಮ ಬುದ್ಧನಂಥ ಮಹಾ ಕರುಣಾಳು ಕೂಡ ಇಲ್ಲಿ ಆಗಿ ಹೋಗಿದ್ದಾರೆ. ಬಸವ, ಗಾಂಧಿ, ಅಂಬೇಡ್ಕರ್, ಲೋಹಿಯಾರಂಥ ಸಮಾಜ ಚಿಕಿತ್ಸಕರು ತೊಳೆದ ಕೊಳೆಯನ್ನೆಲ್ಲಾ ಕೆಲವೇ ವರ್ಷಗಳಲ್ಲಿ ಪುನರ್ ಸ್ಥಾಪಿಸಿ ಇಡೀ ಸಮಾಜವನ್ನು ಅಧೋಮುಖಿಯನ್ನಾಗಿಸುವ ವಾಜಪೇಯಿ, ಅದ್ವಾನಿಗಳೂ ಇಲ್ಲಿದ್ದಾರೆ.

ಆದರೂ ಭಾರತದಲ್ಲಿ ಅಲ್ಲಿನ ನಿರಕ್ಷರಕುಕ್ಷಿಗಳಲ್ಲಿ ಪ್ರೀತಿ ಕರುಣೆಯ ಅಂತರ್ ಪ್ರವಾಹವೊಂದು ಹರಿಯುತ್ತಲೇ ಇದೆ. ಪ್ರಜಾಸತ್ತೆಯ ಹೆಸರಲ್ಲಿ ಐದು ವರ್ಷಕ್ಕೊಮ್ಮೆ ನಡೆಯುವ ಚುನಾವಣೆಗಳಲ್ಲಿ ಈ ಅಂತರ್ ಪ್ರವಾಹ ತನ್ನ ಹಿರಿಮೆಯನ್ನು ತೋರಿಸುತ್ತಲೇ ಇದೆ. ಕಳೆದ ಚುನಾವಣೆಯಲ್ಲಂತೂ ಎಲ್ಲ ರಾಜಕೀಯ ಪಂಡಿತರ ಲೆಕ್ಕಾಚಾರವನ್ನು ತಲೆಕೆಳಗುಮಾಡಿದ ಈ ಅಂತರ್ ಪ್ರವಾಹ ಈಗ ಪರ್ಯಾಯ ರಾಜಕಾರಣದ ಯೋಚನೆಗೆ ಪ್ರೇರಕವಾಗಿ ನಿಂತಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ.

ನಾಡಿನ ಜನಪರ ಚಳವಳಿಗಳ ರಾಜಕೀಯ ಪ್ರಯತ್ನ ಹೊಸದೇನೂ ಅಲ್ಲ. ಎಂಭತ್ತರ ದಶಕದಲ್ಲೇ ದಲಿತ ಸಂಘರ್ಷ ಸಮಿತಿ ಅಂದಿನ ಜನತಾಪಕ್ಷಕ್ಕೆ ತನ್ನ ಬೇಷರತ್ ಬೆಂಬಲ ಘೋಷಿಸುವ ಮೂಲಕ ರಾಜಕೀಯ ಚಟುವಟಿಕೆಗೆ ಕೈ ಹಾಕಿತ್ತು. ನಂತರ ಕೆಲವು ಬಾರಿ ಚುನಾವಣೆಗೂ ಸ್ಪರ್ಧಿಸಿತ್ತು. ಬಹುಜನ ಸಮಾಜ ಪಕ್ಷ ಅಸ್ತಿತ್ವಕ್ಕೆ ಬಂದ ಮೇಲೆ ಇಡೀ ಚಳವಳಿ ತನ್ನ ರಾಜಕೀಯ ವೇದಿಕೆಯಾಗಿ ಬಿಎಸ್‌ಪಿಯನ್ನು ಒಪ್ಪಿಕೊಂಡಿತ್ತು. ಆದರೆ ಈ ನಿಲುವು ಬಹಳ ಕಾಲ ಮುಂದುವರಿಯಲಿಲ್ಲ. ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ, ಭಾರತೀಯ ಜನತಾ ಪಕ್ಷದೊಂದಿಗೆ ಸೇರಿ ಸರ್ಕಾರ ರಚಿಸಿದ ಕೂಡಲೇ ಅದು ಮುರಿದು ಬಿತ್ತು. ಅದೇ ಕಾರಣದ ಮೇಲೆ ದಸಂಸ ಹೋಳಾಯಿತು. ನಂತರ ಚುನಾವಣೆ ಬಂದಾಗ ತನಗೆ ಅನುಕೂಲ ಎಂದು ಕಂಡುಬರುವ ಪಕ್ಷಗಳಿಗೆ ಬೆಂಬಲ ನೀಡುತ್ತ ಬಂತು.

ರೈತ ಸಂಘ ನಿರಂತರವಾಗಿ ತನ್ನ ರಾಜಕೀಯ ಇರುವಿಕೆಯನ್ನು ಪ್ರತಿ ಚುನಾವಣೆಯಲ್ಲಿ ಪ್ರದರ್ಶಿಸುತ್ತಲೇ ಇತ್ತಾದರೂ ಅದೂ ಕೂಡ ಪೂರ್ಣ ಪ್ರಮಾಣದ ಅಧಿಕಾರ ರಾಜಕಾರಣ ಮಾಡಲು ಪ್ರಯತ್ನಿಸಲೇ ಇಲ್ಲ.

ಒಂದು ಹಂತದಲ್ಲಿ ವಿಧಾನ ಸಭೆಯನ್ನೇ ತನ್ನ ಕೈವಶ ಮಾಡಿಕೊಳ್ಳುವಷ್ಟು ಉತ್ಸಾಹ ರೈತಸಂಘದಲ್ಲಿತ್ತು. ೩-೪ ಜನ ಶಾಸಕರೂ ಆದರು. ಆದರೆ ಅದು ಅಷ್ಟೇ ಬೇಗ ಕುಸಿದುಹೋಯಿತು. ತನ್ನ ಆಂತರಿಕ ಗೊಂದಲ-ಅಹಂಕಾರಗಳಿಂದಾಗಿ ಅದೂ ಒಡೆಯಿತು. ಒಂದು ಗುಂಪು ಚಳವಳಿಯೊಂದಿಗೆ ಅಧಿಕಾರ ರಾಜಕಾರಣದ ಪರ ಮುಖ ಮಾಡಿದರೆ ಮತ್ತೊಂದು ವಿದೇಶೀ ಹಣದತ್ತ ಮುಖ ಮಾಡಿತು.

ಈ ಎಲ್ಲಾ ಬೆಳವಣಿಗೆಗಳ ನಡುವೆ ಭಾರತದ ರಾಜಕಾರಣ ತನ್ನ ಕ್ಷುದ್ರತೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಹೋಯಿತು. ಸೇವೆಯ ಕೇಂದ್ರಬಿಂದುವಾಗಬೇಕಾಗಿದ್ದ ರಾಜಕೀಯ ಕ್ಷೇತ್ರ ಸ್ವಜನ ಪಕ್ಷಪಾತಿಗಳ, ಪಟ್ಟಭದ್ರರ, ಜಾತಿವಾದಿಗಳ, ಭ್ರಷ್ಟರ ಕುಟಿಲ ಕಾರಸ್ಥಾನವಾಯಿತು. ಮಾನವಂತರು, ಸಜ್ಜನರು ದೂರ ಸರಿಯತೊಡಗಿದರು. ಸಾಮಾನ್ಯ ಜನ ಅಸಹಾಯಕರಾಗಿ, ದಿಕ್ಕು ತಪ್ಪಿ ಹೋದರು. ಜಾತಿ, ಧರ್ಮಗಳ ಸಂಕೋಲೆಗಳನ್ನು ಮೀರಿ ನಿಂತಿದ್ದ ಜನರಿಗೆ ಕೋಮುವಾದಿಗಳೇ ಸಜ್ಜನರಾಗಿ, ದೇಶಭಕ್ತರಾಗಿ ಕಾಣಿಸತೊಡಗಿದರು. ಅಧಿಕಾರವೇ ಸರ್ವೋಚ್ಚವೆಂದು ನಂಬಿದ ಕೆಲವು ಹುಸಿ ಪ್ರಗತಿಪರರೂ ಇದಕ್ಕೆ ಬೆನ್ನೆಲುಬಾಗಿ ನಿಂತರು. ದೇಶ ಕೋಮುವಾದಿಗಳ ಕೈಸೆರೆಯಾಯಿತು.

ಆರೂವರೆ ವರ್ಷಗಳ 'ಧರ್ಮ ಸೆರೆ'ಯನ್ನು ಈಗ ಜನರೇ ಬೇಧಿಸಿದ್ದಾರೆ. ಮಾನವೀಯ ನೆಲೆಗಟ್ಟಿನಲ್ಲೇ ಎಲ್ಲ ಸಂಕಷ್ಟಗಳಿಗೂ ಪರಿಹಾರ ಹುಡುಕುವ ಸಮಾಜ ಯಾವುದೇ ಹೇರಿಕೆಗಳಿಗೂ ಬಗ್ಗುವುದಿಲ್ಲ ಎಂಬ ಐತಿಹಾಸಿಕ ಸತ್ಯ ಮತ್ತೆ ಸಾಬೀತಾಗಿದೆ. ಆದರೆ ಉತ್ತಮ ಆಯ್ಕೆಗೆ ಅವಕಾಶವೇ ಇಲ್ಲದ ಜನ ಮತ್ತೆ ಹಿಂದೆ ತಿರಸ್ಕರಿಸಿದ್ದವರಿಗೇ ಗದ್ದುಗೆ ನೀಡಿದ್ದಾರೆ. 'ಜನಪರ ಪರ್ಯಾಯ'ವೊಂದು ಎದುರಿಗಿಲ್ಲದಿದ್ದರೆ ಇಬ್ಬರ ಕಳ್ಳರ ನಡುವೆ ಕಡಿಮೆ ಕಳ್ಳನನ್ನೂ ಆರಿಸಿಕೊಳ್ಳುವ ಅನಿವಾರ್ಯ ಅಸಹಾಯಕ ಸ್ಥಿತಿ ಮತದಾರನದಾಗುತ್ತದೆ ಎಂಬುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ ?

ರಾಜಕಾರಣ ಜನಸಮುದಾಯದ ಪ್ರತಿಯೊಂದು ಚಟುವಟಿಕೆಯನ್ನು ನಿಯಂತ್ರಿಸುತ್ತದೆ ಮತ್ತು ನಿರ್ದೇಶಿಸುತ್ತದೆ. ಇಂಥ ರಾಜಕಾರಣದಲ್ಲಿ ಪ್ರಾಮಾಣಿಕತೆ, ಮಾನವೀಯತೆ, ಪ್ರೀತಿ, ಸೇವಾ ಮನೋಭಾವ ಇಲ್ಲದಿದ್ದರೆ ಅಂಥ ಸಮಾಜ ಎಂಥ ಅರಾಜಕತೆಗೆ ಗುರಿಯಾಗಬಹುದು? ಹಲವು ಭಾಷೆ-ಧರ್ಮ-ಸಂಸ್ಕೃತಿ-ಜಾತಿ-ಉಪಜಾತಿಗಳಾಗಿ ಛಿದ್ರವಾಗಿದ್ದರೂ, ಒಟ್ಟಾರೆಯಾಗಿ ಒಂದು ದೇಶ ಎಂದು ಕರೆದುಕೊಳ್ಳುವ ಹಾಗೂ ಹಾಗೆ ವರ್ತಿಸುವ ಸಮುದಾಯವೇ ಭಾರತದ ಬಹು ದೊಡ್ಡ ಸಂಪತ್ತು. ಇಂಥ ಔದಾರ್ಯ ಸಮಾಜವೊಂದರ ಅಧಃಪತನವನ್ನು ಕಣ್ಣಾರೆ ಕಂಡೂ ಪ್ರಜ್ಞಾವಂತರು ಮೌನ ವಹಿಸುವುದು ಸರಿಯೇ ?

ನಾಡಿನ ಎಲ್ಲ ಪ್ರಗತಿಪರ ಶಕ್ತಿಗಳು ಜೊತೆಗೂಡಿ ಪರ್ಯಾಯ ರಾಜಕಾರಣದ ಪ್ರಯತ್ನಕ್ಕೆ ಕೈ ಹಾಕಿದ್ದರೆ ಇಷ್ಟರಲ್ಲಿ ಸಫಲರಾಗುತ್ತಿರಲಿಲ್ಲವೆ ? ಎಡಪಕ್ಷಗಳು, ಸಮಾಜವಾದಿಗಳು, ರೈತರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಎಲ್ಲರಿಗೂ ಇದು ಅನಿಸುತ್ತಿದೆ. ಆದರೂ ಅಂಥ ಪ್ರಯತ್ನಕ್ಕೆ ಯಾರೂ ಮುಂದಾಗುತ್ತಿಲ್ಲವೇಕೆ ? ಮೂರು ದಶಕಗಳ ಕಾಲ ನಾಡಿನ ಪ್ರಗತಿಪರ ಚಳವಳಿಗಳ ಭಾಗವಾಗಿರುವ ಎಲ್ಲರನ್ನು ಕಾಡುತ್ತಿರುವ ಈ ಪ್ರಶ್ನೆಗಳು ನನ್ನನ್ನೂ ಕಾಡುತ್ತಿವೆ.

ಈ ಹಿನ್ನೆಲೆಯಲ್ಲೇ ಪರ್ಯಾಯ ರಾಜಕಾರಣದ ಪ್ರಯತ್ನ ಆರಂಭವಾಗಿದೆ. ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಇಂಥ ಪ್ರಯತ್ನದ ಚಾಲನಶಕ್ತಿಯಾಗಿ ನಿಂತಿವೆ. ಸ್ವಾರ್ಥ ಮತ್ತು ಅಧಿಕಾರ ಲಾಲಸೆಯೇ ರಾಜಕಾರಣದ ಜೀವಾಳವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಪರ್ಯಾಯ ರಾಜಕಾರಣದ ಈ ಪ್ರಯತ್ನ ಜನಪರ ವಿಚಾರಧಾರೆಯುಳ್ಳ ಎಲ್ಲರಲ್ಲಿ ಹೊಸ ಸಂಚಲನವನ್ನು ಉಂಟು ಮಾಡಿದೆ.

ಇಂಥ ಪ್ರಯತ್ನಕ್ಕೆ ಪೂರಕವಾಗಿ 'ಸಂವಾದ' ಚರ್ಚೆಯೊಂದನ್ನು ಕೈಗೆತ್ತಿಕೊಂಡಿದೆ. ನಾಡಿನ ಚಿಂತಕರೊಂದಿಗೆ ಓದುಗರೂ ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂದು 'ಸಂವಾದ' ಬಯಸುತ್ತದೆ.

○ ಇಂದೂಧರ ಹೊನ್ನಾಪುರ

ಚಿಂತನೆ

ಇಡೀ ಚುನಾವಣಾ ಪ್ರಕ್ರಿಯೆಯಲ್ಲಿ ರಾಜಕಾರಣಿಗಳು ಯುವಕರನ್ನೇ ಮುಂದಿಟ್ಟುಕೊಂಡು ಓಡಾಡುತ್ತಿರುತ್ತಾರೆ. ಅಂಧರಂತೆ ನಾಯಕರುಗಳನ್ನು ಇವರು ಹಿಂಬಾಲಿಸುತ್ತಾರೆ. ನಮ್ಮ ರಾಜಕಾರಣಿಗಳೂ ಸಹ ಈ ಯುವಕರಲ್ಲಿ ಭ್ರಮೆ ಮೂಡಿಸುವುದರಲ್ಲಿ ಸಾಕಷ್ಟು ಪರಿಣತಿ ಪಡೆದಿದ್ದಾರೆ. ಕೆಲವು ಯುವಕರು ಹಣದ ಆಮಿಷಕ್ಕೆ ಬಲಿಯಾದರೆ ಅನೇಕರು ಭ್ರಮಾಲೋಕದಲ್ಲೇ ವಿಹರಿಸುತ್ತಾ ವಾಸ್ತವತೆಯನ್ನು ಮರೆಯುತ್ತಾರೆ. ಈ ಯುವಕರಲ್ಲಿ ಸರಿಯಾದ ರಾಜಕೀಯ ಪ್ರಜ್ಞೆ ಇಲ್ಲದಿದ್ದಲ್ಲಿ ಇವರು ವ್ಯವಸ್ಥೆಯ ಹರಕೆಯ ಕುರಿಗಳಾಗಿಬಿಡುತ್ತಾರೆ. ಈಗಾಗಿರುವುದು ಹಾಗೆಯೇ ಅಲ್ಲವೇ ?

○ ನಾ. ದಿವಾಕರ

ಚುನಾವಣೆ, ರಾಜಕೀಯ ಮತ್ತು ಯುವಶಕ್ತಿ

ವಿಶ್ವದಲ್ಲೇ ಅತಿ ದೊಡ್ಡ ಪ್ರಜಾತಾಂತ್ರಿಕ ದೇಶ ಎಂಬ ಹೆಗ್ಗಳಿಕೆಯಿರುವ ಭಾರತದಲ್ಲಿ ಪ್ರಜಾಪ್ರಭುತ್ವ ನಿಜವಾದ ಅರ್ಥದಲ್ಲಿ ಇದೆಯೋ ಇಲ್ಲವೋ ಎಂಬ ವಿಷಯ ಚರ್ಚಾಸ್ಪದವಾದರೂ ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸುವುದೇ ಭಾರೀ ಸಾಹಸ ಮಾಡಿದಂತಾಗುತ್ತದೆ. ಅದು ಒಂದು ಊರ ಹಬ್ಬದಂತೆಯೇ ಸರಿ.

೬೦ ಕೋಟಿ ಮತದಾರರು, ೫೪೪ ಲೋಕಸಭಾ ಕ್ಷೇತ್ರಗಳು, ಲಕ್ಷಾಂತರ ಮತಗಟ್ಟೆಗಳು, ಮತಗಟ್ಟೆಗಳನ್ನು ನಿರ್ವಹಿಸಲು ಲಕ್ಷಾಂತರ ಸರ್ಕಾರೀ ನೌಕರರು, ಅವರಿಗೆ ತರಬೇತಿ, ಅವರನ್ನು ಮತಗಟ್ಟೆಗೆ ಕೊಂಡೊಯ್ಯಲು ವಾಹನ ಸೌಕರ್ಯ, ಪರಿಸ್ಥಿತಿ ನಿಭಾಯಿಸಲು ಲಕ್ಷಾಂತರ ಪೊಲೀಸ್ ಗೃಹರಕ್ಷಕದಳ ಮತ್ತು ಅರೆಸೈನ್ಯ ಪಡೆಗಳು, ಇವುಗಳ ಮೇಲ್ವಿಚಾರಣೆಗಾಗಿ ಅವಶ್ಯವಾದ ಅಧಿಕಾರಿ ವರ್ಗ, ಸಾವಿರಾರು ಅಭ್ಯರ್ಥಿಗಳ ನಾಮಪತ್ರ ಪರಿಷ್ಕರಣೆ, ಹೀಗೆ ಪಟ್ಟಿ ಮಾಡುತ್ತಾ ಹೋದರೆ ಹನುಮನ ಬಾಲದಂತೆ ಬೆಳೆಯುವ ಭಾರತದ ಸಾರ್ವತ್ರಿಕ ಚುನಾವಣೆ ಪ್ರಕ್ರಿಯೆ ಹಿಮಾಲಯಾರೋಹಣದಷ್ಟೇ ಸಾಹಸ ಕಾರ್ಯ.

ಇದು ಒಂದೆಡೆಯಾದರೆ ಇನ್ನೊಂದೆಡೆ ಸಾವಿರಾರು ಅಭ್ಯರ್ಥಿಗಳು, ನೂರಾರು ಪಕ್ಷಗಳು, ಚುನಾವಣೆಗೆ ಮುನ್ನ ನಡೆಯುವ ಗಲಭೆಗಳು, ಚುನಾವಣೆಯಂದು ಮತಗಟ್ಟೆಗಳ ವಶ, ಗೂಂಡಾಗಿರಿ, ಪರಸ್ಪರ ಹಲ್ಲೆ, ಆರೋಪ-ಪ್ರತ್ಯಾರೋಪ, ಕೊಲೆ, ಸುಲಿಗೆ, ಬಂದ್, ಧರಣಿ, ರಸ್ತೆತಡೆ, ಮೆರವಣಿಗೆ, ಹಣ-ಹೆಂಡದ ಹೊಳೆ, ಸೀರೆ-ಪಂಚೆಗಳ ವಿತರಣೆ, ಹೀಗೆ ನಾಮಪತ್ರ ಸಲ್ಲಿಸುವ ಮುನ್ನ ಆರಂಭವಾಗುವ ಜಾತ್ರೆ ಫಲಿತಾಂಶ ಬರುವವರೆಗೂ ಏನಾದರೊಂದು ಪ್ರಕರಣ ನಡೆಯುತ್ತಲೇ ಇರುತ್ತದೆ. ನಾಮಪತ್ರ ಸಲ್ಲಿಸುವಾಗಲೇ ಲಾರಿಗಟ್ಟಲೆ ಜನ, ಅಭ್ಯರ್ಥಿಗಳ ಹಿಂದೆ ಜೈಕಾರ ಹಾಕುತ್ತಾ ಓಡಾಡುವುದು ಸಾಮಾನ್ಯ ದೃಶ್ಯ. ಆ ಸಮಯದಲ್ಲೇ ಶಾಮಿಯಾನ, ಊಟ, ಉಪಹಾರ, ಕಾಫಿ, ಟೀ, ಸಿಗರೇಟು, ಹೆಂಡ ಇವುಗಳಿಗಾಗಿ ಅಭ್ಯರ್ಥಿಗಳು ಹಣದ ಹೊಳೆಯನ್ನೇ ಹರಿಸಿರುತ್ತಾರೆ.

ಒಂದು ಗಮನೀಯ ಅಂಶವೆಂದರೆ ಈ ನಿಟ್ಟಿನಲ್ಲಿ ಎಲ್ಲಾ ಪಕ್ಷಗಳೂ ಒಂದೇ ಆಗಿರುತ್ತದೆ. ಇನ್ನು ಚುನಾವಣಾ ಪ್ರಚಾರ ಕಾರ್ಯ ಆರಂಭಗೊಂಡಿತೆಂದರೆ, ಎಲ್ಲೆಂದರಲ್ಲಿ ಶಾಮಿಯಾನಗಳು, ರಸ್ತೆಗಳಿಗೆ ಹಾನಿ, ಮುಗಿಲೆತ್ತರದ ಕಟೌಟ್‌ಗಳು, ದೊಡ್ಡ ಬ್ಯಾನರ್‌ಗಳು, ರಂಗು ರಂಗಾದ ಪೋಸ್ಟರ್‌ಗಳು, ಕರಪತ್ರಗಳು, ಪಕ್ಷದ ಚಿಹ್ನೆ ಹೊತ್ತ ಬಾವುಟಗಳು, ಅದರಿಂದಲೇ ಮಾಡಿದ ತೋರಣಗಳು ಹೀಗೆ ಊರಿನ ಪರಿಸರವನ್ನು ಹಾಳುಗೆಡವಿ, ಮುನಿಸಿಪಾಲಿಟಿಯ ನಾಲ್ಕನೆ ದರ್ಜೆ ನೌಕರರಿಗೆ ನಿರಂತರ ಕೆಲಸ ಇರುತ್ತದೆ. ಕೆಲವೊಮ್ಮೆ ಈ ಪ್ರಕ್ರಿಯೆಯಲ್ಲಿ ಇದೇ ನೌಕರರೇ ಭಾಗಿಯಾಗಿದ್ದು ಅವರೇ ಶುಚಿಗೊಳಿಸುವ ಸಂದರ್ಭಗಳು ಬರದೇ ಇರುವುದಿಲ್ಲ.

ಈ ಚುನಾವಣೆಯ ಪ್ರಕ್ರಿಯೆಯಲ್ಲಿ ಊರಿನ ಪರಿಸರ ಕೆಡುವುದೇ ಅಲ್ಲದೆ, ಪ್ಲಾಸ್ಟಿಕ್ ಹಾವಳಿಯಿಂದ ಜನರ ಆರೋಗ್ಯವೂ ಹದಗೆಡುತ್ತದೆ. ದಿನವಿಡೀ ಮೊಳಗುವ ಮೈಕಾಸುರನ ಹಾವಳಿಯಿಂದ ಸಮಾಜದ ನಿರ್ಮಲ ವಾತಾವರಣವೂ ಕಲುಷಿತಗೊಳ್ಳುತ್ತದೆ. ಕೆಲವೊಮ್ಮೆ ಚುನಾವಣೆಗಳ ಸಮಯದಲ್ಲೇ ಊರು ಕೇರಿಗಳು ಶುಚಿಯಾಗುವುದೂ ಉಂಟು. ಜನರ ಬೆಂಬಲ ಗಳಿಸಲು ಕೊನೆ ಗಳಿಗೆಯಲ್ಲಿ ರಸ್ತೆ ಡಾಂಬರು, ಮೋರಿಗಳು, ರಿಪೇರಿ, ಸ್ಲಂಗಳ ಶುಚೀಕರಣ, ನೀರಿನ ವ್ಯವಸ್ಥೆಯ ದೋಷ ನಿವಾರಣೆ, ಹೀಗೆ ಶಾಸಕರುಗಳು ತಾವು ಗುಳುಂ ಮಾಡಿದ ಹಣವನ್ನು ಬಿಟ್ಟು ಉಳಿದ ಹಣದಲ್ಲಿ ಈ ಎಲ್ಲಾ ಕೆಲಸಗಳನ್ನು ಮಾಡಿ ಮುಗಿಸಿಬಿಡುತ್ತಾರೆ. ಆದರೂ ಕೆಲವು ಶಾಸಕರು ಸೋಲುಂಡರೆ ಅದು ಅವರ ದುರಾದೃಷ್ಟವಷ್ಟೆ. ಕೆಲವು ಶಾಸಕರು ಪ್ರಾರಂಭದಿಂದಲೂ ಉತ್ತಮ ಕಾರ್ಯ ನಿರ್ವಹಿಸಿ ಜನರ ಮೆಚ್ಚುಗೆ ಪಡೆದಿರುತ್ತಾರೆ.

ಈ ಎಲ್ಲಾ ಚುನಾವಣಾ ಪ್ರಕ್ರಿಯೆಯ ಅಂಶಗಳು ಇರಬಾರದೆಂದಿಲ್ಲ. ಈ ತಮಾಷೆ-ನಾಟಕಗಳು ಇಲ್ಲದಿದ್ದರೆ, ಭಾರತೀಯ ಚುನಾವಣೆ ತನ್ನ ಮೆರುಗನ್ನೇ ಕಳೆದುಕೊಂಡು ಬಿಡುತ್ತದೆ. ಅದೂ ಅಲ್ಲದೆ ಅಧಿಕಾರಕ್ಕೆ ಬಂದ ನಂತರ ಜನತೆಗೆ ಉದ್ಯೋಗಾವಕಾಶ ಕಲ್ಪಿಸಿಕೊಡಲು ರಾಜಕೀಯ ಪಕ್ಷಗಳು ವಿಫಲವಾದರೂ, ಈ ಚುನಾವಣಾ ಪೂರ್ವ ಪ್ರಕ್ರಿಯೆಯ ಮೂಲಕ ಸಾವಿರಾರು ಜನಕ್ಕೆ ಉದ್ಯೋಗ ನೀಡುತ್ತಾರೆ. ನಿರುದ್ಯೋಗಿಗಳಿಗೆ ದಿನಗೂಲಿಯಂತೆ ಹಣವನ್ನು ನೀಡುವ ಅಭ್ಯಾಸವಿದೆ. ಜಾತಿ ಆಧಾರಿತ ಮೀಸಲಾತಿಯೂ ಇಲ್ಲಿ ಪ್ರಮುಖ ಸ್ಥಾನ ಗಳಿಸುತ್ತದೆ. ಹಾಗಾಗಿ ಈ ಪ್ರಕ್ರಿಯೆಗಳಿಂದ ಎಷ್ಟೋ ತೊಂದರೆ ಉಂಟಾದರೂ ಜನರು ಇದನ್ನು ಸ್ವಾಗತಿಸುತ್ತಾರೆ.

ವರ್ಷಕ್ಕೊಮ್ಮೆ ಬರುವ ಜಾತ್ರೆಯಂತೆ, ವಾರಕ್ಕೊಮ್ಮೆ ಬರುವ ಸಂತೆಯಂತೆ ಈ ಎಲ್ಲಾ ಆರ್ಭಟಗಳ ನಡುವೆ ಕಂಡು ಬರುವ ಪ್ರಮುಖ ಅಂಶವೆಂದರೆ ಒಂದು ಬಾರಿ ಲೋಕಸಭಾ ಚುನಾವಣೆ ನಡೆಸಲು ಸರ್ಕಾರಕ್ಕೆ ೧೧೦೦ ಕೋಟಿ ರೂ ಖರ್ಚಾಗುತ್ತದೆ (ಅಂದಾಜು). ಇದು ಅಧಿಕೃತವಾಗಿ ಸರ್ಕಾರ ಪ್ರಕಟಿಸುವ ವೆಚ್ಚದ ಮೊಬಲಗು ಮಾತ್ರ. ಅನಧಿಕೃತವಾಗಿ ಪಕ್ಷಗಳು, ಅಭ್ಯರ್ಥಿಗಳು, ಉದ್ಯಮಿಗಳು, ವ್ಯಾಪಾರಿಗಳು ಮಾಡುವ ವೆಚ್ಚಕ್ಕೆ ಎಲ್ಲೆಯೇ ಇರುವುದಿಲ್ಲ. ಮಳೆ ನೀರು ಬಂದಾಗ ಕಪ್ಪೆಗಳು ಹೊರಬರುವಂತೆ, ಭೂಮಿ ಬಿಸಿಯಾದಾಗ ಹಾವುಗಳು ಹೊರಬರುವಂತೆ, ಕಾಳಸಂತೆಯ ಹಣ, ಕಪ್ಪು ಹಣ ಗಂಗೆ-ಯಮುನೆಯಂತೆ ಹರಿಯುತ್ತದೆ. ತೀವ್ರ ಬರಗಾಲ, ದಾರಿದ್ರ್ಯ, ಬಡತನ, ನಿರುದ್ಯೋಗ, ಆತ್ಮಹತ್ಯೆ, ಹಸಿವು, ದಾಹ, ಇವುಗಳಿಂದ ಬಳಲುತ್ತಿರುವ ನಮ್ಮ ಸಮಾಜದಲ್ಲಿ ಇಷ್ಟೊಂದು ಹಣ ಇತ್ತೇ ? ಎಂದು ಅಚ್ಚರಿ ಪಡುವಂತೆ ಚುನಾವಣೆಗಳಲ್ಲಿ ಹಣದ ಹೊಳೆ ಹರಿಯುತ್ತದೆ. ಇದೂ ಸಹ ಪಕ್ಷಾತೀತ ಲಕ್ಷಣವೇ ಎಂದು ಹೇಳಬಹುದು. (ಕೆಲವೊಮ್ಮೆ ಕೆಲವು ಎಡಪಕ್ಷಗಳನ್ನು ಹೊರತುಪಡಿಸಿ).

ಈ ಚುನಾವಣೆ ಎಂಬ ಸರ್ಕಸ್ಸನ್ನು ಬದಿಗಿಟ್ಟು ಯೋಚಿಸಿದಾಗ ರಾಜಕೀಯ ರಂಗದಲ್ಲಿ ಎರಡು ಅಭಿಪ್ರಾಯಗಳು ನಿರಂತರವಾಗಿ ವ್ಯಕ್ತವಾಗುವುದನ್ನು ಕಾಣಬಹುದು. ಒಂದು ವರ್ಗದ ಚಿಂತಕರು, ಪ್ರತಿಯೊಂದು ಚುನಾವಣೆಗೂ ಸಾವಿರಾರು ಕೋಟಿ ವೆಚ್ಚ ತಗಲುತ್ತದೆ,

ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತದೆ. ಈ ವೆಚ್ಚವನ್ನು ಜನರೇ ನಿಭಾಯಿಸಬೇಕಾಗಿರುವುದರಿಂದ ಪ್ರತಿವರ್ಷ ಚುನಾವಣೆ ನಡೆಯುವುದು ದುಸ್ತರವಾಗುತ್ತದೆ. ಹಾಗಾಗಿ ೫ ವರ್ಷ ಸ್ಥಿರ ಸರ್ಕಾರ ಇರುವುದೇ ಸೂಕ್ತ ಎಂದು ವಾದಿಸುತ್ತಾರೆ. ಸ್ಥಿರ ಸರ್ಕಾರದಿಂದ ಚುನಾವಣಾ ವೆಚ್ಚ ಉಳಿದರೂ, ದೇಶದ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗದಿದ್ದಲ್ಲಿ ಅದರಿಂದೇನು ಪ್ರಯೋಜನ? ಸರ್ಕಾರ ಒಂದೇ ವರ್ಷ ಇದ್ದರೂ, ಅಭಿವೃದ್ಧಿ ಸಾಧಿಸುವುದು ಮುಖ್ಯ ಎಂದು ವಾದಿಸುವ ಚಿಂತಕರು, ಚುನಾವಣಾ ವೆಚ್ಚವನ್ನು ಅಷ್ಟು ಗಂಭೀರ ಸಮಸ್ಯೆ ಎಂದು ಪರಿಗಣಿಸುವುದಿಲ್ಲ. ಈ ಎರಡೂ ವಾದಗಳು ಒಂದು ರೀತಿಯಲ್ಲಿ ಸೂಕ್ತವೇ ಆದರೂ, ಸರ್ಕಾರದ ಸ್ಥಿರತೆ ಮತ್ತು ಅಭಿವೃದ್ಧಿಯ ನಡುವಿನ ಸಂಬಂಧದ ಕುರಿತು ವಸ್ತುನಿಷ್ಠ ಅವಲೋಕನ ಮಾಡುವುದು ಒಳಿತು.

ಭಾರತದ ರಾಜಕೀಯ ಇತಿಹಾಸವನ್ನು ನೋಡಿದಾಗ ಕಂಡು ಬರುವ ಅಂಶವೆಂದರೆ ೫ ವರ್ಷ ಪೂರ್ಣ ಅವಧಿ ಆಳ್ವಿಕೆ ನಡೆಸಿರುವ ಅನೇಕ ಸರ್ಕಾರಗಳು ದೇಶದ ಸಾಮಾಜಿಕ ಆರ್ಥಿಕ ಪರಿಸ್ಥಿತಿಯನ್ನು ಹದಗೆಡಿಸಿರುವ ನಿದರ್ಶನಗಳು ದೊರೆಯುತ್ತವೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರ ಸಾಧನೆ ಉತ್ತಮವಾಗಿ ಕಂಡರೂ, ಭಾರತ ಪ್ರಕಾಶಿಸುತ್ತಿದೆ, ಮೇರಾ ಭಾರತ್ ಮಹಾನ್‌ನಂತಹ ಘೋಷಣೆಗಳಲ್ಲಿ ಭಾರತ ಪ್ರಜ್ವಲಿಸಿದರೂ, ಸತ್ಯಾಂಶವೆಂದರೆ ದೇಶದಲ್ಲಿ ಅರಾಜಕತೆ-ದಾರಿದ್ರ್ಯ-ಬಡತನ-ಸಾವು-ಹಸಿವು, ರೋಗ ರುಜಿನಗಳು ತಾಂಡವವಾಡುತ್ತಿರುತ್ತವೆ.

ನಿದರ್ಶನ ರೂಪದಲ್ಲಿ ಹೇಳುವುದಾದರೆ ೧೯೮೪ ರಿಂದ ೮೯ರವರೆಗಿನ ರಾಜೀವ್‌ಗಾಂಧಿಯವರ ಸರ್ಕಾರ ಭ್ರಷ್ಟಾಚಾರಗಳ ಖಜಾನೆಯಾಗಿದ್ದೇ ಅಲ್ಲದೆ ಶಾಹಬಾನೋ ಪ್ರಕರಣ, ರಾಮಮಂದಿರ ಶಿಲಾನ್ಯಾಸ ಮತ್ತು ದಿಕ್ಕುದೆಶೆಯಿಲ್ಲದ ಆರ್ಥಿಕ ನೀತಿಗಳಿಂದ ದೇಶವನ್ನು ಹದಗೆಡಿಸಿತು. ನಂತರ ೧೯೯೧ ರಿಂದ ೯೬ ರವರೆಗಿನ ನರಸಿಂಹರಾವ್ ಸರ್ಕಾರವೂ ಭ್ರಷ್ಟಾಚಾರದಲ್ಲಿ ಮುಳುಗಿ ಬಾಬ್ರಿ ಮಸೀದಿ, ಬಾಂಬೆ ಗಲಭೆಗಳಿಂದ ಕಳಂಕಿತವಾಯಿತು. ಅಷ್ಟೇ ಅಲ್ಲದೆ ಪ್ರಸ್ತುತ ಪ್ರಧಾನಿಗಳಾಗಿರುವ ಮನಮೋಹನ್‌ಸಿಂಗ್‌ರವರ ನೇತೃತ್ವದಲ್ಲಿ ಆರಂಭವಾದ ಜಾಗತೀಕರಣ ಆರ್ಥಿಕ ಸುಧಾರಣೆಗಳು ದೇಶದ ಬಹುಸಂಖ್ಯಾತ ಜನರಿಗೆ ಮಾರಕವಾಯಿತು. ನಂತರ ೧೯೯೮ ರಿಂದ ೨೦೦೪ ರವರೆಗೆ ಆಳಿದ ಭಾಜಪ ನೇತೃತ್ವದ ಎನ್‌ಡಿಎ ಸರ್ಕಾರ, ಆರ್ಥಿಕ ಸುಧಾರಣೆಗಳನ್ನು ತೀವ್ರಗೊಳಿಸಿ ಕೋಮು ವಿಷಬೀಜವನ್ನು ದೇಶದಾದ್ಯಂತ ಹರಡಿ, ಅಲ್ಪಸಂಖ್ಯಾತರಿಗೆ, ದಲಿತರಿಗೆ, ಕಾರ್ಮಿಕರಿಗೆ, ದುಡಿಯುವ ವರ್ಗಗಳಿಗೆ ಬದುಕೇ ದುಸ್ತರವಾಗುವಂತೆ ಮಾಡಿತು. ಗಮನಾರ್ಹ ಅಂಶವೆಂದರೆ ಈ ಎಲ್ಲಾ ಸರ್ಕಾರಗಳೂ ಚುನಾವಣೆಗಳಲ್ಲಿ ಹೀನಾಯ ಸೋಲನುಭವಿಸಿದೆ. ಹಾಗಾಗಿ ಕೇವಲ ದೇಶದ ಬೊಕ್ಕಸಕ್ಕೆ ಭಾರವಾಗುವುದೆಂಬ ಕಾರಣಕ್ಕೆ ಸ್ಥಿರ ಸರ್ಕಾರ ಬಯಸುವುದು ಮರಗಳಿಗಾಗಿ ಅರಣ್ಯವನ್ನೇ ಕಳೆದುಕೊಂಡಂತಾಗುತ್ತದೆ.

ಬೋಫೋರ್ಸ್, ಮೇವು ಹಗರಣ, ತೆಹೆಲ್ಕಾ, ಕಾರ್ಗಿಲ್ ಶವಪೆಟ್ಟಿಗೆ, ಬಾಬ್ರಿ ಮಸೀದಿ, ರಾಮಮಂದಿರ, ಶಿಲಾನ್ಯಾಸ, ಶಾಹಬಾನೊ ಪ್ರಕರಣ, ಗುಜರಾತ್, ಸೂಟ್‌ಕೇಸ್ ಪ್ರಕರಣ, ಸಂಸದರ ಖರೀದಿ ಪ್ರಕರಣ, ಈ ಎಲ್ಲಾ ಭ್ರಷ್ಟಾಚಾರ ಹಗರಣಗಳೂ ಸ್ಥಿರ ಸರ್ಕಾರಗಳಿದ್ದಾಗಲೇ ನಡೆದಿದ್ದು, ಅಷ್ಟೇಕೆ ತುರ್ತು ಪರಿಸ್ಥಿತಿಯನ್ನು ಹೇರಿದ್ದೂ ಸ್ಥಿರ

ಇಂದಿನ ಯುವಕರೇ ನಾಳಿನ ನಾಯಕರು, ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಎಂಬ ಘೋಷಣೆಗಳನ್ನು ಆರು ದಶಕಗಳಿಂದಲೂ ಕೇಳುತ್ತಲೇ ಇದ್ದೇವೆ. ಮತದಾನದ ವಯೋಮಿತಿಯನ್ನು ೨೧ ವರ್ಷಕ್ಕೆ ಇಳಿಸಿದ ನಂತರವಂತೂ ದೇಶದ ಯುವಶಕ್ತಿಯು ರಾಜಕೀಯ ಕ್ಷೇತ್ರದಲ್ಲಿ ವಹಿಸುವ ಪಾತ್ರದ ಬಗ್ಗೆ ಸಾಕಷ್ಟು ಚರ್ಚೆ ನಡೆದವು. ಇತ್ತೀಚಿನ ಚುನಾವಣೆಗಳನ್ನು ನೋಡಿದರೆ ಅನೇಕ ಸಂಸದರು, ಶಾಸಕರು ಎಳೆವಯಸ್ಸಿನವರಿದ್ದಾರೆ, ಇದು ಉತ್ತಮ ಸೂಚನೆಯೇ. ಆದರೆ ಕೇವಲ ಯುವಕರೆಂಬ ಒಂದೇ ಕಾರಣದಿಂದ ಯುವಶಕ್ತಿಯ ರಾಜಕೀಯವನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಈ ಯುವಶಕ್ತಿಯ ರಾಜಕಾರಣವನ್ನು ವಾಸ್ತವತೆಗೆ ಒರೆ ಹಚ್ಚಿ ನೋಡಬೇಕಾಗುತ್ತದೆ.

ಸರ್ಕಾರವೇ. 'ಪವರ್ ಕರಪ್ಟ್ಸ್ ಆಬ್‌ಸಲ್ಯೂಟ್ ಪವರ್ ಕರಪ್ಟ್ಸ್ ಆಬ್‌ಸಲ್ಯೂಟ್‌ಲಿ' ಎಂಬ ಆಂಗ್ಲ ಗಾದೆ ಇಲ್ಲಿ ಸೂಕ್ತವೆನಿಸುತ್ತದೆ. (ಅಂದರೆ ಅಧಿಕಾರ ಭ್ರಷ್ಟತೆಯನ್ನುಂಟು ಮಾಡುತ್ತದೆ. ಸಂಪೂರ್ಣ ಅಧಿಕಾರ ಭ್ರಷ್ಟಾಚಾರವನ್ನು ಸಂಪೂರ್ಣಗೊಳಿಸುತ್ತದೆ ಎಂದರ್ಥ.)

ಇರಲಿ 'ಇಂದಿನ ಯುವಕರೇ ನಾಳಿನ ನಾಯಕರು, ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಎಂಬ ಘೋಷಣೆಗಳನ್ನು ಆರು ದಶಕಗಳಿಂದಲೂ ಕೇಳುತ್ತಲೇ ಇದ್ದೇವೆ. ಮತದಾನದ ವಯೋಮಿತಿಯನ್ನು ೨೧ ವರ್ಷಕ್ಕೆ ಇಳಿಸಿದ ನಂತರವಂತೂ ದೇಶದ ಯುವಶಕ್ತಿಯು ರಾಜಕೀಯ ಕ್ಷೇತ್ರದಲ್ಲಿ ವಹಿಸುವ ಪಾತ್ರದ ಬಗ್ಗೆ ಸಾಕಷ್ಟು ಚರ್ಚೆ ನಡೆದವು. ಇತ್ತೀಚಿನ ಚುನಾವಣೆಗಳನ್ನು ನೋಡಿದರೆ ಅನೇಕ ಸಂಸದರು, ಶಾಸಕರು ಎಳೆವಯಸ್ಸಿನವರಿದ್ದಾರೆ, ಇದು ಉತ್ತಮ ಸೂಚನೆಯೇ. ಆದರೆ ಕೇವಲ ಯುವಕರೆಂಬ ಒಂದೇ ಕಾರಣದಿಂದ ಯುವಶಕ್ತಿಯ ರಾಜಕೀಯವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

ಈ ಯುವಶಕ್ತಿಯ ರಾಜಕಾರಣವನ್ನು ವಾಸ್ತವತೆಗೆ ಒರೆ ಹಚ್ಚಿ ನೋಡಬೇಕಾಗುತ್ತದೆ. ಯುವಶಕ್ತಿ ರಾಜಕೀಯದಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಆಸಕ್ತಿ ತೋರುತ್ತಿದ್ದರೂ ಅದರ ಹಿಂದಿನ ಕಾರಣಗಳೇನು? ಯಾವ ರೀತಿಯ ರಾಜಕೀಯದಲ್ಲಿ ಭಾಗಿಯಾಗುತ್ತಿದ್ದಾರೆ? ಇವರ ಧ್ಯೇಯ ಏನಿದೆ? ಯಾವ ದಿಕ್ಕಿನಲ್ಲಿ ಯುವಶಕ್ತಿಯ ರಾಜಕಾರಣ ಸಾಗುತ್ತಿದೆ? ಈ ಎಲ್ಲಾ ಅಂಶಗಳ ಬಗ್ಗೆಯೂ ಕೂಲಂಕುಷ ವಿಶ್ಲೇಷಣೆ ಮಾಡುವುದು ಅಗತ್ಯವಾಗಿದೆ.

ಜಯಪ್ರಕಾಶ್ ನಾರಾಯಣ್‌ರವರ ಸಂಪೂರ್ಣ ಕ್ರಾಂತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ತುರ್ತುಪರಿಸ್ಥಿತಿಯ ವಿರುದ್ಧ ಹೋರಾಡಿದ ಅಂದಿನ ಯುವಶಕ್ತಿಯೇ, ಇಂದು ಕೇವಲ ೩೦ ವರ್ಷಗಳಲ್ಲಿ ನೈತಿಕ ಅಧಃಪತನದ ಹಾದಿ ಹಿಡಿದಿರುವುದು ನಾವು ನೋಡುತ್ತಿದ್ದೇವೆ. ಅದೇ ಯುವಶಕ್ತಿ ಇಂದು ಗೂಂಡಾಗಿರಿ, ಭ್ರಷ್ಟಾಚಾರ ಸಮಯ ಸಾಧಕತೆಗಳನ್ನೇ ಬಂಡವಾಳವಾಗಿರಿಸಿಕೊಂಡಿರುವುದು ನಿತ್ಯ ಕಾಣುತ್ತಿರುವ ಸತ್ಯ. ಹಾಗಾಗಿ ಯುವಶಕ್ತಿಯ ಅವಶ್ಯಕತೆ ರಾಷ್ಟ್ರಕ್ಕೆ ಇದೆಯಾದರೂ ಇಂದಿನ ಯುವಜನತೆ ರಾಜಕೀಯ ರಂಗದಲ್ಲಿ ಯಾವ ದಿಕ್ಕಿನಲ್ಲಿ ಚಲಿಸಬೇಕೆಂಬುದು ಚರ್ಚಾಸ್ಪದ ವಿಷಯವೇ.

ಇಂದಿನ ಯುವಶಕ್ತಿಯ ರಾಜಕೀಯ, ವಿದ್ಯಾರ್ಥಿ ದೆಸೆಯಿಂದಲೇ ಆರಂಭವಾಗುತ್ತದೆ. ಹಿಂದೆಯೂ ಸಹ ಸ್ವಾತಂತ್ರ್ಯ ಪೂರ್ವದಲ್ಲಿ ಅನೇಕ ಹೋರಾಟಗಾರರು ವಿದ್ಯಾರ್ಥಿ ದೆಸೆಯಿಂದಲೇ ಬಂದವರಾದರೂ ಅವರ ಧ್ಯೇಯ ಸ್ವಾತಂತ್ರ್ಯ ಮಾತ್ರವಾಗಿತ್ತು. ಆದರೆ ಆಧುನಿಕ ಭಾರತದಲ್ಲಿ ವಿದ್ಯಾರ್ಥಿ ರಾಜಕಾರಣವೇ ವಿಭಿನ್ನ ಹಾದಿ ಹಿಡಿದಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ರಾಜಕೀಯ ರಂಗ ಅವಶ್ಯವೇ, ಇಲ್ಲವೇ ಎಂಬ ಪ್ರಶ್ನೆ ಉದ್ಭವಿಸುವುದಾದರೂ ಅವಶ್ಯಕ ಎಂಬ ಗ್ರಹಿಕೆಯಿಂದಲೇ ವಿಶ್ಲೇಷಿಸಬಹುದು. ಏಕೆಂದರೆ ವಿದ್ಯಾರ್ಥಿ ದೆಸೆಯಲ್ಲಿ ಯುವಜನತೆಯ ಬುದ್ಧಿ ಹೆಚ್ಚು ಚುರುಕಾಗಿರುವುದರಿಂದ ಅವರಲ್ಲಿ ರಾಜಕೀಯದ ಒಳಿತು ಕೆಡುಕುಗಳನ್ನು ಗ್ರಹಿಸುವ ಶಕ್ತಿಯಿರುತ್ತದೆ. ಕೇವಲ ನಾಯಕತ್ವ ಉತ್ತಮವಾಗಿರುವುದು ಅವಶ್ಯವಾಗಿರುತ್ತದೆ.

ಇಂದು ಭಾರತದಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ತಮ್ಮವೇ ಆದ ವಿದ್ಯಾರ್ಥಿ ಸಂಘಟನೆಗಳನ್ನು ಹೊಂದಿವೆ. ಆದರೆ ಈ ಸಂಘಟನೆಗಳು ಹೆಚ್ಚಾಗಿ ಶೈಕ್ಷಣಿಕ ವಿಚಾರಗಳಿಗೇ ಸೀಮಿತವಾಗಿರುವುದರಿಂದ, ನೇರ ರಾಜಕೀಯ ಪ್ರವೇಶ ಮಾಡಲಿಚ್ಛಿಸುವುದಿಲ್ಲ. ವಿದ್ಯಾರ್ಥಿಗಳು ನೇರ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ತರವೂ ಅಲ್ಲ.

ಆದರೂ ಅವರಲ್ಲಿ ರಾಜಕೀಯ ಚಿಂತನೆ ಮೂಡಿಸುವುದು ರಾಜಕೀಯ ಪ್ರಜ್ಞೆ ಬೆಳೆಸುವುದು ಇಂದಿನ ಪರಿಸ್ಥಿತಿಯಲ್ಲಿ ಅತ್ಯಗತ್ಯವಾಗಿದೆ. ಏಕೆಂದರೆ ಯಾವುದೇ ವಿದ್ಯಾರ್ಥಿ ತನ್ನ ಶಿಕ್ಷಣವನ್ನು ಪೂರ್ಣಗೊಳಿಸಿ ಹೊರಬಂದ ನಂತರ ಸೈದ್ಧಾಂತಿಕವಾಗಿ ವಿಭಿನ್ನ ದೃಷ್ಟಿಕೋನ ಪಡೆದುಬಿಡುತ್ತಾನೆ. ಉದ್ಯೋಗ ಸಮಸ್ಯೆ, ಪರಿಸರ, ಸಾಮಾಜಿಕ ಒತ್ತಡಗಳು ಹಾಗೆ ಮಾಡುತ್ತದೆ. ಹಾಗಾಗಿ ವಿದ್ಯಾರ್ಥಿ ಸಂಘಟನೆಗಳಲ್ಲಿ ಸಕ್ರಿಯವಾಗಿರುವಾಗಲೇ ಅವರಲ್ಲಿ ರಾಜಕೀಯ ಪ್ರಜ್ಞೆ ಮೂಡುವುದಾದರೆ, ಮುಂಬರುವ ದಿನಗಳಲ್ಲಿ ಉಪಯುಕ್ತವಾಗುತ್ತದೆ. ಆದರೆ ಇಂದಿನ ಬಹುತೇಕ ವಿದ್ಯಾರ್ಥಿ ಸಂಘಟನೆಗಳಲ್ಲಿ ಈ ಕೊರತೆ ಎದ್ದು ಕಾಣುತ್ತಿದೆ. ಕೆಲವು ಎಡಪಕ್ಷಗಳನ್ನು ಹೊರತುಪಡಿಸಿ ಯಾವುದೇ ಸಂಘಟನೆಗಳೂ ಈ ವಿಚಾರ ಮಂಥನ ಮಾಡುವುದಿಲ್ಲ. ದೇಶದ ಪ್ರಚಲಿತ ವಿದ್ಯಮಾನಗಳನ್ನಾಗಲೀ, ರಾಜಕೀಯ ಸ್ಥಿತಿಗತಿಗಳನ್ನಾಗಲಿ ಸೈದ್ಧಾಂತಿಕವಾಗಿ ತಾತ್ವಿಕವಾಗಿ ವಿಚಾರ ಮಾಡುವ ಲಕ್ಷಣಗಳು ಕಂಡುಬರುವುದಿಲ್ಲ.

ತಮ್ಮ ಶಿಕ್ಷಣ ಕ್ಷೇತ್ರದಲ್ಲಿ ತಲೆ ಎತ್ತುವ ಹಲವಾರು ಸಮಸ್ಯೆಗಳು ಪ್ರಸ್ತುತ ವ್ಯವಸ್ಥೆಯ ಪ್ರತಿಫಲ ಎಂಬ ಅಂಶ ವಿದ್ಯಾರ್ಥಿಗಳಿಗೆ ಅರಿವಾಗುವುದು ಅತ್ಯವಶ್ಯವಾಗಿದೆ. ಕ್ಯಾಪಿಟೇಷನ್ ಆಗಲಿ, ಡೊನೇಷನ್ ಆಗಲಿ ಇವುಗಳ ಹಿಂದಿರುವ ಸಾಂಸ್ಥಿಕ ವ್ಯವಸ್ಥೆಯ ಪಿತೂರಿಯನ್ನು ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಹೇಳುವುದು ಸಂಘಟನೆಗಳ ಮುಖ್ಯ ಕಾರ್ಯವಾಗಬೇಕಾಗಿದೆ. ಇಲ್ಲದೆ ಹೋದಲ್ಲಿ ತಮ್ಮ ವಿದ್ಯಾಭ್ಯಾಸ ಮುಗಿದ ಕೂಡಲೇ ಈ ಅಮೂಲ್ಯ ಯುವಶಕ್ತಿ ನಮ್ಮ ರಾಜಕೀಯ ವ್ಯವಸ್ಥೆಯ ಸುಳಿಯಲ್ಲಿ ಸಿಲುಕಿ ಹಾದಿ ತಪ್ಪುವ ಸಾಧ್ಯತೆಗಳೇ ಹೆಚ್ಚಾಗಿರುತ್ತದೆ. ಇಲ್ಲಿ ವಿದ್ಯಾರ್ಥಿಗಳೆಂದರೆ ಇಂಜನಿಯರಿಂಗ್, ವೈದ್ಯಕೀಯ, ಎಂಬಿಎ ಮಾಡಿ ಡಾಲರ್ ಗಳಿಸಲು ಅಮೆರಿಕಕ್ಕೆ ರವಾನೆಯಾಗಿ ಭಾರತೀಯ ಸಂಸ್ಕೃತಿ

ಯನ್ನೆ ಹೀಗಳೆಯುವ ಮೇಲ್ವರ್ಗದ ವಿದ್ಯಾರ್ಥಿಗಳನ್ನು ಉಲ್ಲೇಖಿಸುತ್ತಿಲ್ಲ. ಇಂದು ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳ ಬೇಕಾಗಿರುವುದು ಗ್ರಾಮೀಣ-ನಗರ ಪ್ರದೇಶಗಳಲ್ಲಿನ ಮಧ್ಯಮ-ಬಡ ವರ್ಗದ ವಿದ್ಯಾರ್ಥಿಗಳು, ದಲಿತ, ಅಲ್ಪ ಸಂಖ್ಯಾತ ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳು. ಭಾರತದ ಭವಿಷ್ಯ ನಿರ್ಧಾರವಾಗುವುದು ಈ ಮಣ್ಣಿನ ಮಕ್ಕಳಿಂದಲೇ ಹೊರತು, ದಂತದ ಅರಮನೆಗಳಲ್ಲಿ ವಾಸಿಸುವ ಜೀನ್ಸ್‌ಧಾರಿಗಳಿಂದಲ್ಲ.

ಒಂದು ವೇಳೆ ವಿದ್ಯಾರ್ಥಿ ದೆಸೆಯಲ್ಲಿ ರಾಜಕೀಯ ಪ್ರಜ್ಞೆ ಬೆಳೆಸದಿದ್ದರೆ, ನಮ್ಮ ದೇಶದ ಭ್ರಷ್ಟ ರಾಜಕೀಯ ಪಕ್ಷಗಳು ಯುವಶಕ್ತಿಯನ್ನು ತಮ್ಮ ವೋಟು ರಾಜಕೀಯಕ್ಕಾಗಿ ಬಳಸಿಕೊಳ್ಳುವುದರಲ್ಲಿ ಕೊಂಚವೂ ತಡ ಮಾಡುವುದಿಲ್ಲ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ರೈತಾಪಿ ವರ್ಗದ ಯುವಕರು, ಶಾಲೆಗೇ ಹೋಗದ ಅನಕ್ಷರಸ್ಥ ಯುವಕರು, ಬಹಳ ಬೇಗನೇ ರಾಜಕೀಯಕ್ಕೆ ಬಲಿಯಾಗುತ್ತಾರೆ.

ಈ ಮೊದಲೇ ಹೇಳಿದಂತೆ ಇಡೀ ಚುನಾವಣಾ ಪ್ರಕ್ರಿಯೆಯಲ್ಲಿ ರಾಜಕಾರಣಿಗಳು ಯುವಕರನ್ನೇ ಮುಂದಿಟ್ಟು ಕೊಂಡು ಓಡಾಡುತ್ತಿರುತ್ತಾರೆ. ಒಂದೆಡೆ ನಿರುದ್ಯೋಗಿ ಯುವಕರಿಗೆ ಕನಿಷ್ಠ ಒಂದು ತಿಂಗಳು ಕಾಲ ದಿನಗೂಲಿ, ನಿತ್ಯ ಊಟ ದೊರೆಯುತ್ತದೆ. ಇನ್ನು ಕೆಲವರಿಗೆ ತಮ್ಮ ನಾಯಕರ ಮೇಲಿನ ಅಪ್ರತಿಮ ವಿಶ್ವಾಸ, ಪಕ್ಷದ ಮೇಲಿನ ಭರವಸೆ, ಅಥವಾ ಜಾತಿ ಬಾಂಧವ್ಯ, ವ್ಯಕ್ತಿ ಪೂಜೆಯ ಮನೋಭಾವ, ಇವುಗಳು ರಂಜನೀಯವಾಗಿ ಕಾಣುತ್ತವೆ. ಅಂಧರಂತೆ ನಾಯಕರುಗಳನ್ನು ಈ ವರ್ಗದ ಜನ ಹಿಂಬಾಲಿಸುತ್ತಾರೆ. ನಮ್ಮ ರಾಜಕಾರಣಿಗಳೂ ಸಹ ಈ ಯುವಕರಲ್ಲಿ ಭ್ರಮೆ ಮೂಡಿಸುವುದರಲ್ಲಿ ಸಾಕಷ್ಟು ಪರಿಣಿತಿ ಪಡೆದಿದ್ದಾರೆ. ಕೆಲವು ಯುವಕರು ಹಣದ ಆಮಿಷಕ್ಕೆ ಬಲಿಯಾದರೆ ಅನೇಕರು ಭ್ರಮಾಲೋಕದಲ್ಲೇ ವಿಹರಿಸುತ್ತಾ ವಾಸ್ತವತೆಯನ್ನು ಮರೆಯುತ್ತಾರೆ. ಈ ಯುವಕರಲ್ಲಿ ಸರಿಯಾದ ರಾಜಕೀಯ ಪ್ರಜ್ಞೆ ಇಲ್ಲದಿದ್ದಲ್ಲಿ ಇವರು ವ್ಯವಸ್ಥೆಯ ಹರಕೆಯ ಕುರಿಗಳಾಗಿ ಬಿಡುತ್ತಾರೆ. ಈಗಾಗಿರುವುದು ಹಾಗೆಯೇ ಅಲ್ಲವೇ?

ಕಂಬಾಲ ಪಲ್ಲಿಯಾಗಲೀ, ಗೋದ್ರಾ ಆಗಲಿ, ಗುಜರಾತ್ ಆಗಲೀ, ಬಾಬ್ರಿ ಮಸೀದಿಯಾಗಲೀ, ಕಾಶ್ಮೀರ, ಅಸ್ಸಾಂ, ನಾಗಾಲ್ಯಾಂಡ್ ಆಗಲಿ, ಮುಂಬೈ, ಸೂರತ್, ಮೀರತ್ ಆಗಲೀ, ಬಾಬಾ ಬುಡನ್‌ಗಿರಿಯಾಗಲಿ, ಭಯೋತ್ಪಾದನೆ ಆಗಲೀ, ಮುಸ್ಲಿಂ ಮೂಲಭೂತವಾದವಾಗಲೀ, ಕೋಮುವಾದೀ ಫ್ಯಾಸಿಸಂ ಆಗಲೀ, ಹಿಂದುತ್ವವಾಗಲೀ, ಎಲ್ಲೆಡೆ ಎದ್ದು ಕಾಣುವುದು ದೇಶದ ಯುವಶಕ್ತಿಯೇ. ಇದಕ್ಕೆ ಪ್ರತಿಯಾಗಿ ಪುರೋಗಾಮಿ ಚಳವಳಿಗಳಲ್ಲಿ - ಎಡಪಕ್ಷಗಳಲ್ಲಿಯೂ ಯುವಶಕ್ತಿ ಇದ್ದರೂ ಸಂಖ್ಯೆ ಕ್ರಮೇಣ ಕ್ಷೀಣಿಸುತ್ತಿದೆ. ಈ ಪ್ರವೃತ್ತಿಗೆ ಹೆಚ್ಚಾಗಿ ಕಾರಣಗಳನ್ನು ಹುಡುಕುವ ಅವಶ್ಯಕತೆಯಿಲ್ಲ, ಕಾಶ್ಮೀರ, ಗೋದ್ರಾ ಮುಂತಾದವುಗಳು ಯುವಕರನ್ನು ಶೀಘ್ರವಾಗಿ ಭ್ರಮೆಗೊಳಪಡಿಸುತ್ತದೆ.

ಭಾಜಪದಂತಹ ರಾಜಕೀಯ ಪಕ್ಷಗಳು ಸಂಘಪರಿವಾರದಂತಹ ಸಂಘಟನೆಗಳು, ಕಾಶ್ಮೀರ ಉಗ್ರಗಾಮಿಗಳು ಸಿಮಿಯಂತಹ ಮೂಲಭೂತವಾದಿ ಸಂಘಟನೆಗಳು ಯುವ ಶಕ್ತಿಯನ್ನು ವಶೀಕರಣಗೊಳಿಸುತ್ತವೆ. ಈ ಪ್ರಕ್ರಿಯೆಗಳಿಗೆ ಮಾರಕವಾಗಿ ರಾಜಕೀಯ ಪಕ್ಷಗಳು ಯುವಕರನ್ನು ತಯಾರು ಮಾಡಿರುತ್ತವೆ. ಚುನಾವಣಾ ಪ್ರಚಾರದಲ್ಲಿ ಲಾಂಗು, ಕತ್ತಿ ಮಚ್ಚುಗಳನ್ನು ಬಳಸುವುದು, ಪ್ರತಿಸ್ಪರ್ಧಿಗಳ ಮೇಲೆ ಕಲ್ಲೆಸೆಯುವುದು, ವಾಹನಗಳನ್ನು ಸುಡುವುದು, ಪರಸ್ಪರ ಹೊಡೆದಾಡುವುದು ಹೀಗೆ ಎಲ್ಲಾ ದುರ್ವಿದ್ಯೆಗಳನ್ನು ಶಿಸ್ತಾಗಿ ಹೇಳಿಕೊಳ್ಳುತ್ತವೆ. ಕೈಯಲ್ಲಿ ಆಯುಧ ನೀಡುವುದು ಹಿಂಸಾತ್ಮಕ ಪ್ರವೃತ್ತಿಯನ್ನು ಬೆಳೆಸುತ್ತದೆ. ಹಾಗಾಗಿಯೇ ರಾಜಕೀಯ ವಿಚಾರದಲ್ಲಿ ನೋಡಿದರೂ ಪರಸ್ಪರ ಕಾದಾಡಿ ಕೊಲೆಗೈಯುವ ಪರಿಸ್ಥಿತಿ ಕಂಡುಬರುತ್ತಿದೆ ಅಥವಾ ಯಾವುದೋ ಕಾರಣಕ್ಕೆ ಆದ ಕೊಲೆಗೆ ರಾಜಕೀಯ ಸ್ವರೂಪವನ್ನು ನೀಡುವುದನ್ನು ಕಾಣುತ್ತಿದ್ದೇವೆ.

ಸ್ಪಷ್ಟವಾಗಿ ಹೇಳುವುದಾದರೆ ಯುವಶಕ್ತಿಗೆ ಪ್ರಾಪ್ತ ವಯಸ್ಸಿನಲ್ಲಿ ವಿದ್ಯಾರ್ಥಿ ದೆಸೆಯಲ್ಲಿ ಸರಿಯಾದ ಪ್ರಜಾತಾಂತ್ರಿಕ ಪ್ರಜ್ಞೆ ಬೆಳೆಸದಿದ್ದಲ್ಲಿ ಅದು ದುಷ್ಟ ರಾಜಕೀಯಕ್ಕೆ ಬಲಿಯಾಗುವಲ್ಲಿ ಸಂಶಯವೇ ಇಲ್ಲ. ಭಾಜಪದಂತಹ ಕೋಮುವಾದಿ ಪಕ್ಷಗಳು ತಮ್ಮ ವಿದ್ಯಾರ್ಥಿ ಸಂಘಟನೆಗಳಲ್ಲಿ ಈ ರೀತಿಯಾದ ಸೈದ್ಧಾಂತಿಕ ರಾಜಕೀಯ ಪ್ರಜ್ಞೆ ಬೆಳೆಸುತ್ತವೆ. ಹಾಗಾಗಿಯೇ ಭಾಜಪದ ಕೋಮು ರಾಜಕೀಯವೂ ವ್ಯವಸ್ಥಿತವಾಗಿಯೇ ನಡೆಯುತ್ತದೆ. ಎಬಿವಿಪಿ ಸಂಘಟನೆಯಲ್ಲಿ ನೇರವಾಗಿ ರಾಜಕೀಯ ನಿಲುವು ತೆಗೆದುಕೊಳ್ಳಲಾಗುತ್ತದೆ. ಆದರೆ ಇತರ ರಾಜಕೀಯ ಪಕ್ಷಗಳ ವಿದ್ಯಾರ್ಥಿ ಸಂಘಟನೆಗಳಲ್ಲಿ ಈ ತೆರನಾದ ಪ್ರವೃತ್ತಿ ಅಷ್ಟಾಗಿ ಕಂಡುಬರುವುದಿಲ್ಲ. ಒಂದು ರೀತಿಯಲ್ಲಿ ಈ ಕಾರಣದಿಂದಲೇ ಇಂದು ಭಾಜಪ ಸಂಘಪರಿವಾರ ಹೆಚ್ಚು ಯುವಕರನ್ನು ಹೊಂದಿದೆ. ಎಬಿವಿಪಿ ಅತಿ ದೊಡ್ಡ ವಿದ್ಯಾರ್ಥಿ ಸಂಘಟನೆಯಾಗಿದೆ. ಸಂಘಪರಿವಾರ ತನ್ನ ಎಲ್ಲಾ ಕಾರ್ಯಕ್ರಮಗಳಲ್ಲಿ ಯುವಕರನ್ನು ಹೆಚ್ಚಾಗಿ ಉಪಯೋಗಿಸುತ್ತದೆ. ಇದೇ ಯುವಶಕ್ತಿ ಜಾಗತೀಕರಣವನ್ನು ಸ್ವಾಗತಿಸುತ್ತದೆ. ಅಲ್ಪಸಂಖ್ಯಾತರ ವಿರುದ್ಧ ಅಪಪ್ರಚಾರ ಮಾಡುತ್ತದೆ.

ಗೋದ್ರಾ ಆಗಲಿ, ಗುಜರಾತ್ ಆಗಲೀ, ಬಾಬ್ರಿ ಮಸೀದಿಯಾಗಲೀ, ಕಾಶ್ಮೀರ, ಅಸ್ಸಾಂ, ನಾಗಾಲ್ಯಾಂಡ್ ಆಗಲಿ, ಬಾಬಾ ಬುಡನ್‌ಗಿರಿಯಾಗಲಿ, ಭಯೋತ್ಪಾದನೆ ಆಗಲೀ, ಮುಸ್ಲಿಂ ಮೂಲಭೂತವಾದವಾಗಲೀ, ಕೋಮುವಾದೀ ಫ್ಯಾಸಿಸಂ ಆಗಲೀ, ಹಿಂದುತ್ವವಾಗಲೀ, ಎಲ್ಲೆಡೆ ಎದ್ದು ಕಾಣುವುದು ದೇಶದ ಯುವಶಕ್ತಿಯೇ. ಇದಕ್ಕೆ ಪ್ರತಿಯಾಗಿ ಪುರೋಗಾಮಿ ಚಳವಳಿಗಳಲ್ಲಿ - ಎಡಪಕ್ಷಗಳಲ್ಲಿಯೂ ಯುವಶಕ್ತಿ ಇದ್ದರೂ ಸಂಖ್ಯೆ ಕ್ರಮೇಣ ಕ್ಷೀಣಿಸುತ್ತಿದೆ. ಈ ಪ್ರವೃತ್ತಿಗೆ ಹೆಚ್ಚಾಗಿ ಕಾರಣಗಳನ್ನು ಹುಡುಕುವ ಅವಶ್ಯಕತೆಯಿಲ್ಲ. ಕಾಶ್ಮೀರ, ಗೋದ್ರಾ ಮುಂತಾದವುಗಳು ಯುವಕರನ್ನು ಶೀಘ್ರವಾಗಿ ಭ್ರಮೆಗೊಳಪಡಿಸುತ್ತದೆ. ಭಾಜಪದಂತಹ ರಾಜಕೀಯ ಪಕ್ಷಗಳು ಸಂಘಪರಿವಾರದಂತಹ ಸಂಘಟನೆಗಳು, ಕಾಶ್ಮೀರ ಉಗ್ರಗಾಮಿಗಳು ಸಿಮಿಯಂತಹ ಮೂಲಭೂತವಾದಿ ಸಂಘಟನೆಗಳು ಯುವ ಶಕ್ತಿಯನ್ನು ವಶೀಕರಣಗೊಳಿಸುತ್ತವೆ.

ಈ ಅಪಾಯಕರ ಸನ್ನಿವೇಶವನ್ನು ಎದುರಿಸಲು ದೇಶದ ಯುವಜನತೆಗೆ ಸರಿಯಾದ ಪ್ರಜಾತಾಂತ್ರಿಕ ದೃಷ್ಟಿಕೋನವುಳ್ಳ ಪುರೋಗಾಮೀ ಚಿಂತನೆಗೆ ಪುಷ್ಟಿ ನೀಡುವ ದೇಶದ ಸಾಮಾಜಿಕ ಚೌಕಟ್ಟನ್ನು ಸೌಹಾರ್ದತೆಯಿಂದ ನಡೆಸಿಕೊಂಡು ಹೋಗುವ ಚಿಂತನೆಯುಳ್ಳ ಹಾದಿಯನ್ನು ತೋರಬೇಕಾಗಿದೆ. ಇಂದಿನ ಯುವ ಜನತೆಯಲ್ಲಿ ಅತಿ ಹೆಚ್ಚಾಗಿ ಕಂಡುಬರುವ ಅಸಹನೆ, ಜಾತಿಪ್ರಜ್ಞೆ, ದ್ವೇಷ ಮನೋಭಾವ, ಹಿಂಸಾತ್ಮಕ ಪ್ರವೃತ್ತಿ ಇವುಗಳನ್ನು ಹೊಡೆದೋಡಿಸುವುದು ಪ್ರಜ್ಞಾವಂತರ ಕರ್ತವ್ಯವಾಗಬೇಕಾಗಿದೆ. ಮೂಲಭೂತವಾದ-ಭಯೋತ್ಪಾದನೆ-ಸಶಸ್ತ್ರ ಹೋರಾಟ ಇವೆಲ್ಲವೂ ಕೇವಲ ರಂಜನೀಯ ಪ್ರವೃತ್ತಿಗಳಷ್ಟೇ ಹೊರತು ಸಮಸ್ಯೆಗಳಿಗೆ ಪರಿಹಾರ ಮಾರ್ಗವಲ್ಲ. ಆದರೂ ಇವುಗಳಿಂದ ಮಾತ್ರ ಸಮಸ್ಯೆ ಪರಿಹಾರ ಸಾಧ್ಯ ಎಂಬ ಭ್ರಮೆಗೆ ಇಂದಿನ ಯುವಜನತೆ ಒಳಗಾಗಿದೆ. ಈ ಭ್ರಮೆಯನ್ನು ಹೋಗಲಾಡಿಸಬೇಕಾಗಿದೆ.

ಆದರೆ ರಾಜಕೀಯ ಪಕ್ಷಗಳು ರಾಜಕಾರಣಿಗಳು ದೇಶದ ಯುವಶಕ್ತಿಯನ್ನು ವಿರುದ್ಧ ದಿಕ್ಕಿನಲ್ಲಿ ಕೊಂಡೊಯ್ಯುತ್ತಿವೆ. ಕೊಲೆ, ಸುಲಿಗೆ, ಹಿಂಸೆ, ಹೊಡೆದಾಟಗಳು ರಾಜಕಾರಣದ ಮೆಟ್ಟಿಲುಗಳಾಗಿವೆ. ಒಂದು ಕಾಲದಲ್ಲಿ ಸಮಾಜ ಸೇವೆ, ನೈತಿಕತೆ, ನಿಷ್ಠೆ ಸ್ಪರ್ಧಾ ಮನೋಭಾವ, ಪರೋಪಕಾರ, ಇದೇ ರಾಜಕಾರಣಿಗಳಾಗಲು ಅವಶ್ಯವಾದ ಲಕ್ಷಣವಾಗಿತ್ತು. ಆದರೆ ಈಗಿನ ಪರಿಸ್ಥಿತಿಯಲ್ಲಿ ಇವೆಲ್ಲವೂ ವಿಲಕ್ಷಣಗಳಾಗಿವೆ. ಮಾರುಕಟ್ಟೆ ಸಮಿತಿ, ಗ್ರಾಮ ಪಂಚಾಯ್ತಿ ಚುನಾವಣೆಯಿಂದ ಹಿಡಿದು ಲೋಕಸಭೆಯ ಚುನಾವಣೆಗಳವರೆಗೂ ಹಣಬಲ, ತೋಳ್ಬಲಗಳೇ ನಿರ್ಣಾಯಕ ಪಾತ್ರ ವಹಿಸುತ್ತಿವೆ. ಈ ಪ್ರಕ್ರಿಯೆಯಲ್ಲಿ ದೇಶದ ಯುವ ಜನತೆ ಬಲಿಯಾಗಿದೆ ಎಂದರೆ ತಪ್ಪಾಗಲಾರದು. ಹಾಗಾಗಿಯೇ ಇಂದಿನ ಯುವಜನತೆ ಭ್ರಷ್ಟಾಚಾರ, ಕೋಮುವಾದ, ಜಾತಿವಾದ, ಮೂಲಭೂತವಾದ, ಹಿಂಸೆ, ಅತ್ಯಾಚಾರಗಳ ವಿರುದ್ಧ ಹೋರಾಡಲು ಮುಂದಾಗುತ್ತಿಲ್ಲ. ಜಾಗತೀಕರಣದಿಂದ ದೇಶ ಅವನತಿಯತ್ತ ಸಾಗುತ್ತಿದ್ದರೂ ಪ್ರತಿರೋಧ ಒಡ್ಡುತ್ತಿಲ್ಲ. ಸಾಂಸ್ಕೃತಿಕವಾಗಿ ದೇಶ ಅಧೋಗತಿಗಿಳಿಯುತ್ತಿದ್ದರೂ ವಿರೋಧಿಸುವುದಿಲ್ಲ. ಅಲ್ಲಲ್ಲಿ ಈ ರೀತಿ ಪ್ರತಿರೋಧ ಕಂಡು ಬಂದರೂ ಅಲ್ಲಿ ಯುವ ಜನತೆ ಬಹಳ ಕಡಿಮೆ ಸಂಖ್ಯೆಯಲ್ಲಿರುತ್ತಾರೆ.

ಈ ಅಪಾಯಕಾರ ಸನ್ನಿವೇಶವನ್ನು ಎದುರಿಸಲು ಪುರೋಗಾಮಿ ಶಕ್ತಿಗಳು ಪ್ರಗತಿಪರ ಸಂಘಟನೆಗಳು ಜನಪರ ರಾಜಕೀಯ ಪಕ್ಷಗಳು ಸಜ್ಜಾಗಬೇಕಾಗಿದೆ. ವಿಶೇಷವಾಗಿ ಎಡಪಕ್ಷಗಳು ತಮ್ಮ ವಿದ್ಯಾರ್ಥಿ ಸಂಘಟನೆಗಳಲ್ಲಿ ಯುವ ಸಂಘಟನೆಗಳಲ್ಲಿ ಮೌಲ್ಯಾಧಾರಿತ ರಾಜಕೀಯ ಪ್ರಜ್ಞೆ ಬೆಳೆಸುವಲ್ಲಿ ಸಕ್ರಿಯವಾಗಬೇಕಾಗಿದೆ. ಕೇವಲ ಯುವಶಕ್ತಿಯು ರಾಜಕೀಯವಾಗಿ ಸಕ್ರಿಯವಾಗಿದ್ದರೆ ದೇಶ ಪ್ರಗತಿ ಹೊಂದುವುದಿಲ್ಲ. ಅವರ ರಾಜಕೀಯ ಯಾವ ಮೌಲ್ಯಗಳನ್ನಾಧರಿಸಿದೆ ಎಂಬುದರ ಮೇಲೆ ದೇಶದ ಪ್ರಗತಿ ನಿರ್ಧಾರವಾಗುತ್ತದೆ. ಪ್ರಸಕ್ತ ಚುನಾವಣೆಗಳಲ್ಲಿ ಜನತೆ ಈ ನಿಟ್ಟಿನಲ್ಲಿ ಉತ್ತಮ ಸೂಚನೆ ನೀಡಿದ್ದಾರಾದರೂ, ಈ ತಳಹದಿಯನ್ನ ಭದ್ರವಾಗಿಸುವುದು ಅವಶ್ಯವಾಗಿದೆ. ಹಾಗಾದಲ್ಲಿ ಮಾತ್ರ ಇಂದಿನ ಯುವಶಕ್ತಿ ನಾಳಿನ ಉತ್ತಮ ನಾಯಕರಾಗಲು ಸಾಧ್ಯ. ಇಲ್ಲದಿದ್ದಲ್ಲಿ ಇದೇ ಯುವಶಕ್ತಿ ಫ್ಯಾಸಿಸ್ಟ್ ರಾಜ್ಯದ ತಳಹದಿಯಾಗುತ್ತಾರೆ. ಪ್ರಜಾತಾಂತ್ರಿಕ ಚುನಾವಣಾ ರಾಜಕೀಯದ ಸಾರ್ಥಕತೆ ಇದರಲ್ಲೇ ಅಡಗಿದೆ. □

ಮೀಸಲಾತಿಯಿಂದ ಸರ್ಕಾರಿ ಆಡಳಿತದಲ್ಲಿ ದಕ್ಷತೆ ಕಡಿಮೆಯಾಗುತ್ತಿದೆಯೇ?

ಸರ್ಕಾರಿ ಸೇವೆಗಳಲ್ಲಿ ಜಾತಿ ಆಧಾರಿತ ಮೀಸಲಾತಿ ನೀಡುವುದರಿಂದ ಆಡಳಿತದ ದಕ್ಷತೆ ಕಡಿಮೆಯಾಗುತ್ತಿದೆಯೇ? ಹೌದೆನ್ನುತ್ತಾರೆ ಇನ್‌ಫೋಸಿಸ್ ಸಂಸ್ಥೆಯ ಅಧ್ಯಕ್ಷ ಎನ್.ಆರ್. ನಾರಾಯಣಮೂರ್ತಿ ಮತ್ತು ಅವರ ಸಂಸ್ಥೆಯ ಹಿರಿಯ ಅಧಿಕಾರಿ ಎಸ್. ಸುಕುಮಾರ್.

ಇತ್ತೀಚೆಗೆ ನ್ಯೂಯಾರ್ಕ್‌ನಲ್ಲಿರುವ ವಿಶ್ವ ಆರ್ಥಿಕ ಸಂಸ್ಥೆಯು 'ಮಾಹಿತಿ ತಂತ್ರಜ್ಞಾನ ವರದಿ ೨೦೦೨-೨೦೦೩' ರನ್ನು ಹೊರತಂದಿದೆ. ಈ ವರದಿಯಲ್ಲಿ ಬೆಂಗಳೂರಿನ ಇನ್‌ಫೋಸಿಸ್ ಸಂಸ್ಥೆಯ ಹಿರಿಯ ಅಧಿಕಾರಿ ಎಸ್. ಸುಕುಮಾರ್ ಮತ್ತು ಅಧ್ಯಕ್ಷರಾದ ಎನ್.ಆರ್. ನಾರಾಯಣ ಮೂರ್ತಿಯವರು 'ಭಾರತ ಸ್ಪರ್ಧಾತ್ಮಕ ಅಭಿವೃದ್ಧಿಯಲ್ಲಿ ಮಾಹಿತಿ ತಂತ್ರಜ್ಞಾನದ ಪ್ರಭಾವ' ಎಂಬ ಲೇಖನವನ್ನು ಬರೆದಿರುತ್ತಾರೆ. ಮಾಹಿತಿ ತಂತ್ರಜ್ಞಾನದಿಂದ ಭಾರತೀಯರಿಗೆ ಲಭಿಸಿದ ಅವಕಾಶಗಳು ಮತ್ತು ಅನುಕೂಲಗಳನ್ನು ವಿವರಿಸುವ ಈ ಲೇಖನ ಕೊನೆಯಲ್ಲಿ ಭಾರತದ ಪ್ರಗತಿಗಾಗಿ ಯಾವ ಬದಲಾವಣೆಗಳನ್ನು ತರಬೇಕು ಮತ್ತು ಸರ್ಕಾರಿ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿವರಿಸುತ್ತದೆ. ಸರ್ಕಾರಿ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಬೇಕಾದರೆ ಸರ್ಕಾರಿ ಸೇವೆಗಳಲ್ಲಿ ಜಾತಿ ಆಧಾರಿತ ಮೀಸಲಾತಿಯನ್ನು ತೆಗೆದುಹಾಕ ಬೇಕೆನ್ನುತ್ತಾರೆ ಸುಕುಮಾರ್ ಮತ್ತು ನಾರಾಯಣಮೂರ್ತಿಯವರು.

ಲೇಖನವನ್ನು ಓದುವ ಬಹಳಷ್ಟು ಜನರು ಈ ಗಣ್ಯ ವ್ಯಕ್ತಿಗಳು ಬರೆದಿರುವುದನ್ನು ನಂಬುವುದು ಸಹಜವಾಗಬಹುದಾದರೂ ಕೆಲವು ಮೂಲಭೂತ ಪ್ರಶ್ನೆಗಳು ಉದ್ಭವಗೊಳ್ಳುತ್ತವೆ. ಅವುಗಳೆಂದರೆ ೧. ಸರ್ಕಾರಿ ಹುದ್ದೆಗಳಲ್ಲಿ ಜಾತಿ ಆಧಾರಿತ ಮೀಸಲಾತಿ ನೀಡುವುದರಿಂದ ಆಡಳಿತದಲ್ಲಿ ದಕ್ಷತೆ ಕಡಿಮೆಯಾಗುತ್ತದೆ ಎಂಬುದು ವೈಜ್ಞಾನಿಕ ಸಂಶೋಧನೆಯಿಂದ ಸಾಬೀತಾಗಿದೆಯೇ? ೨. ಇಂತಹ ಗಂಭೀರ ವಿಚಾರವನ್ನು ಭಾರತೀಯ ಪತ್ರಿಕೆಗಳಲ್ಲಿ ಬರೆಯುವ ಬದಲು ಅಥವಾ ಭಾರತದಲ್ಲಿ ಚರ್ಚಿಸುವ ಬದಲು ವಿಶ್ವಮಟ್ಟಕ್ಕೆ ಕೊಂಡೊಯ್ದ ಲೇಖಕರ ಉದ್ದೇಶ ವೇನು? ೩. ಮಾಹಿತಿ ತಂತ್ರಜ್ಞಾನದಲ್ಲಿ ಹಗಲಿರುಳು ದುಡಿವ ಸುಕುಮಾರ್ ಮತ್ತು ನಾರಾಯಣ ಮೂರ್ತಿಯವರಿಗೆ ಮೀಸಲಾತಿಯಂತಹ ಸಾಮಾಜಿಕ ವಿಚಾರದಲ್ಲಿ ಆಳವಾದ ಜ್ಞಾನವಿದೆಯೇ? ಮತ್ತು ೪. ಜನರಲ್ಲಿ ಮೇಲು ಕೀಳೆಂಬ ಭಾವನೆಗಳನ್ನು ಬೆಳೆಸಿ ಜನಸಾಮಾನ್ಯರ ಪ್ರಗತಿಗೆ ಮಾರಕವಾಗಿರುವ ಜಾತಿಪದ್ಧತಿಯನ್ನು ತೆಗೆದುಹಾಕಬೇಕೆನ್ನುವ ಬದಲು ಮೀಸಲಾತಿಯನ್ನು ತೆಗೆದುಹಾಕಬೇಕೆನ್ನುವ ಈ ಲೇಖಕರ ವಾದ ಎಷ್ಟರಮಟ್ಟಿಗೆ ಸಮರ್ಥನೀಯ.

ಇದುವರೆವಿಗೆ ಯಾವುದೇ ವೈಜ್ಞಾನಿಕ ಸಂಶೋಧನೆಗಳು ಸರ್ಕಾರಿ ಕ್ಷೇತ್ರದ ಹುದ್ದೆಗಳಲ್ಲಿ ಜಾತಿ ಆಧಾರಿತ ಮೀಸಲಾತಿ ನೀಡುವುದರಿಂದ ಆಡಳಿತದ ದಕ್ಷತೆ ಕಡಿಮೆಯಾಗುತ್ತದೆ ಎಂದು ಸಾಬೀತುಪಡಿಸಿಲ್ಲ. ಬದಲಿಗೆ ಜಾತಿ ಆಧಾರಿತ ಮೀಸಲಾತಿಯಿಂದ ಸಾವಿರಾರು ನಿರ್ಗತಿಕರ ಬದುಕಿನಲ್ಲಿ ಮಹತ್ತರವಾದ ಪ್ರಗತಿಯಾಗಿದೆ ಎಂಬುದು ಈಗಾಗಲೇ ನೂರಾರು ವೈಜ್ಞಾನಿಕ ಸಂಶೋಧನೆಗಳಿಂದ ಖಚಿತಪಟ್ಟಿದೆ. ಆದ್ದರಿಂದ ಸುಕುಮಾರ್ ಮತ್ತು ನಾರಾಯಣಮೂರ್ತಿಯವರು ಸರ್ಕಾರಿ ಆಡಳಿತದಲ್ಲಿ ದಕ್ಷತೆ ಹೆಚ್ಚಿಸುವುದು ಜಾತಿ ಆಧಾರಿತ ಮೀಸಲಾತಿಯನ್ನು ತೆಗೆದುಹಾಕುವುದರಿಂದ ಸಾಧ್ಯ ಎಂಬ ವಾದ ಸತ್ಯಕ್ಕೆ ದೂರವಾದದ್ದು ಮತ್ತು ಆಧಾರ ರಹಿತ ವಾದದ್ದು.

ಸವರ್ಣೀಯರಾದ ಈ ಲೇಖಕರಿಗೆ ಮೀಸಲಾತಿಯಿಂದ ಅನುಕೂಲವಾಗದಿರಬಹುದು, ಆದರೆ ಮೀಸಲಾತಿ

ಮೀಸಲಾತಿಯಿಂದ ಪ್ರತಿಭೆ ಹಾಳಾಗುತ್ತದೆ ಎಂದು ಬೊಬ್ಬೆಹೊಡೆಯುವ ನಾರಾಯಣಮೂರ್ತಿ

ಯಿಂದ ಬಾಳಲ್ಲಿ ಬೆಳಕು ಕಾಣಲೆತ್ನಿಸುವ ಲಕ್ಷಾಂತರ ಮಂದಿ ಬಡಜನರ ಹಿತದೃಷ್ಟಿಯನ್ನು ಗಮನದಲ್ಲಿಡುವುದು ಅವಶ್ಯಕ. ಮೀಸಲಾತಿ ನೀತಿಯು ಸಾಧಿಸಿರುವ ಪ್ರಗತಿಯನ್ನು ಕಂಡು ಕೇಂದ್ರದಲ್ಲಿದ್ದ ಬಿ.ಜೆ.ಪಿ. ಸರ್ಕಾರವು ಈ ಸವಲತ್ತುಗಳನ್ನು ಬ್ರಾಹ್ಮಣರಿಗೂ ವಿಸ್ತರಿಸುವ ಪ್ರಸ್ತಾಪ ಮಾಡಿದೆ.

ಸರ್ಕಾರಿ ಸೇವೆಗಳಲ್ಲಿ ಜಾತಿ ಆಧಾರಿತ ಮೀಸಲಾತಿಯನ್ನು ತೆಗೆದುಹಾಕಬೇಕೆಂಬ ವಿಚಾರವನ್ನು ಲೇಖಕರು ಭಾರತದ ಸಮೂಹ ಮಾಧ್ಯಮಗಳಲ್ಲಿ ಪ್ರಸ್ತಾಪ ಮಾಡಬಹುದಿತ್ತು ಅಥವಾ ಭಾರತ ಸರ್ಕಾರಕ್ಕೆ ಬರೆಯಬಹುದಿತ್ತು. ಹಾಗೆ ಮಾಡಿದ್ದರೆ ಈ ಗಣ್ಯ ಲೇಖಕರು ಭಾರತದ ಸಾಮಾನ್ಯ ಪ್ರಜೆಗಳಿಂದ ಛೀಮಾರಿಗೊಳಗಾಗುತ್ತಿದ್ದರು. ಇನ್‌ಫೋಸಿಸ್ ಕಟ್ಟಡಗಳ ಮೇಲೆ ಕಲ್ಲು ಬೀಳುತ್ತಿದ್ದವು. ರಾಜಕೀಯ ದೃಷ್ಟಿಯಿಂದ ಅಪಾಯಕಾರಿಯಾಗಿರುವ ಈ ಸಲಹೆಗೆ ಕೇಂದ್ರ ಸರ್ಕಾರ ಒಪ್ಪುತ್ತಿರಲಿಲ್ಲ. ಆದ್ದರಿಂದ ಅಂತಾರಾಷ್ಟ್ರೀಯ ಸಂಸ್ಥೆಯೊಂದರ ಒತ್ತಡಕ್ಕೆ ಭಾರತ ಮಣಿದು ಜಾತಿ ಆಧಾರಿತ ಮೀಸಲಾತಿ ತೆಗೆಯಲೆಂಬುದಿರಬೇಕು ಈ ಲೇಖಕರ ಉದ್ದೇಶ.

ಸುಕುಮಾರ್ ಅರ್ಥಶಾಸ್ತ್ರ ಮತ್ತು ಹಣಕಾಸು ನಿರ್ವಹಣೆಯಲ್ಲಿ ಪರಿಣಿತರು. ನಾರಾಯಣ ಮೂರ್ತಿ ಮಾಹಿತಿ ತಂತ್ರಜ್ಞಾನಿಗಳು. ಹೀಗಾಗಿ ಭಾರತದ ಸಾಮಾಜಿಕ ಸಮಸ್ಯೆಗಳಾದ ಅಸ್ಪೃಶ್ಯತೆ ಅಥವಾ ಜಾತಿಯತೆಯ ಬಗ್ಗೆ ಈ ಸವರ್ಣೀಯ ಲೇಖಕರಿಗೆ ಪರಿಜ್ಞಾನವೇ ಇಲ್ಲ. ಆದ್ದರಿಂದ ತಮಗೆ ತಿಳಿಯದಿರುವ ವಿಚಾರದಲ್ಲಿ ಲೇಖಕರು ಆಧಾರ ರಹಿತ ಸಲಹೆ ಮಾಡಿರುವುದು ವಿಷಾದಕರ.

ಜಾತಿಪದ್ಧತಿ ಜನರಲ್ಲಿ ಮೇಲು ಕೀಳು ಭಾವನೆಗಳನ್ನು ಹುಟ್ಟಿಸಿ ಸಮಾಜದ ಪ್ರಗತಿಯನ್ನು ಕುಂಠಿತಗೊಳಿಸುತ್ತಿದೆ. ಅದರೆ ಜಾತಿಪದ್ಧತಿಯ ಪಿಡುಗುಗಳನ್ನು ಪ್ರಶ್ನಿಸದ ಈ ಲೇಖಕರಿಗೆ ಜಾತಿ ಆಧಾರಿತ ಮೀಸಲಾತಿಯನ್ನು ಪ್ರಶ್ನಿಸುವ ನೈತಿಕ ಹಕ್ಕು ಇದೆಯೇ? ತಾವು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಗಳಿಸಿರುವ ಹೆಸರನ್ನು ದುರುಪಯೋಗಪಡಿಸಿಕೊಂಡು ವಿಶ್ವ ಆರ್ಥಿಕ ಸಂಸ್ಥೆಯ ಮಟ್ಟದಲ್ಲಿ ಭಾರತದ ಮೀಸಲಾತಿ ನೀತಿಯನ್ನು ಅವಹೇಳನ ಮಾಡಿರುವುದು ಮತ್ತು ಮಾಹಿತಿ ತಂತ್ರಜ್ಞಾನದ ಪ್ರಗತಿ ಕುರಿತ ಲೇಖನದಲ್ಲಿ ಮೀಸಲಾತಿ ನೀತಿಯ ಚರ್ಚೆಯಾಗಿರುವುದು ಅಸಮಂಜಸ.

ನಮ್ಮ ದೇಶದ ಸರ್ಕಾರಿ ಆಡಳಿದಲ್ಲಿ ಅದಕ್ಷತೆ ಇರುವುದಕ್ಕೆ ಹಲವಾರು ಕಾರಣಗಳು ಈಗಾಗಲೇ ಸಂಶೋಧನೆಗಳಿಂದ ಸಾಬೀತಾಗಿವೆ. ಅವುಗಳೆಂದರೆ ಸವರ್ಣೀಯರ ಪ್ರಾಬಲ್ಯ, ಬ್ರಾಹ್ಮಣಶಾಹಿ ಅಧಿಕಾರಿಗಳ ವರ್ತನೆ, ಭ್ರಷ್ಟಾಚಾರ, ಬಹುಜನರಿಗೆ ಆಡಳಿತದ ವ್ಯವಸ್ಥೆಯಲ್ಲಿ ಅಸಮ ಪಾಲು ಮತ್ತು ತಮ್ಮ ತಮ್ಮವರನ್ನೇ ಬೆಳೆಸುವ ಮೇಲ್ಜಾತಿಯವರ ಪ್ರವೃತ್ತಿ. ಹೀಗಿರುವಾಗ ಸರ್ಕಾರಿ ಸೇವೆಯಲ್ಲಿ ನೀಡುವ ಮೀಸಲಾತಿಯನ್ನು ತೆಗೆದು ಬಹುಜನರನ್ನು ಬೀದಿಪಾಲು ಮಾಡಲೆತ್ನಿಸುವ ನಾರಾಯಣಮೂರ್ತಿ ಮತ್ತು ಸುಕುಮಾರ್‌ರವರ ಗೊಡ್ಡು ವಾದ ಸುಳ್ಳು ಮತ್ತು ಆಧಾರ ರಹಿತವಾದ್ದರಿಂದ ಅದನ್ನು ಖಂಡಿಸಲು ನಾವೆಲ್ಲರೂ ಮುಂದಾಗೋಣ. □

ಜಾತಿ ಆಧಾರಿತ ಮೀಸಲಾತಿಯಿಂದ ಸಾವಿರಾರು ನಿರ್ಗತಿಕರ ಬದುಕಿನಲ್ಲಿ ಮಹತ್ತರವಾದ ಪ್ರಗತಿಯಾಗಿದೆ ಎಂಬುದು ಈಗಾಗಲೇ ನೂರಾರು ವೈಜ್ಞಾನಿಕ ಸಂಶೋಧನೆಗಳಿಂದ ಖಚಿತಪಟ್ಟಿದೆ. ಆದರೆ ಸುಕುಮಾರ್ ಮತ್ತು ನಾರಾಯಣ ಮೂರ್ತಿಯವರ ಸರ್ಕಾರಿ ಆಡಳಿತದಲ್ಲಿ ದಕ್ಷತೆ ಹೆಚ್ಚಿಸುವುದು ಜಾತಿ ಆಧಾರಿತ ಮೀಸಲಾತಿಯನ್ನು ತೆಗೆದುಹಾಕುವುದರಿಂದ ಸಾಧ್ಯ ಎಂಬ ವಾದ ಸತ್ಯಕ್ಕೆ ದೂರವಾದದ್ದು ಮತ್ತು ಆಧಾರ ರಹಿತವಾದದ್ದು. ಸವರ್ಣೀಯರಾದ ಈ ಲೇಖಕರಿಗೆ ಮೀಸಲಾತಿಯಿಂದ ಅನುಕೂಲವಾಗದಿರ ಬಹುದು, ಆದರೆ ಮೀಸಲಾತಿಯಿಂದ ಬಾಳಲ್ಲಿ ಬೆಳಕು ಕಾಣಲೆತ್ನಿಸುವ ಲಕ್ಷಾಂತರ ಮಂದಿ ಬಡಜನರ ಹಿತದೃಷ್ಟಿಯನ್ನು ಗಮನದಲ್ಲಿಡುವುದು ಅವಶ್ಯಕ.

❍ ಜಿ. ಪಾಂಡುನಾಯಕ್

ಬಿಜೆಪಿ ಸೋಲಿಗೆ ಕೋಮುವಾದ ಕಾರಣವೇ ?

ಹದಿನಾಲ್ಕನೇಯ ಲೋಕಸಭಾ ಚುನಾವಣೆಯು ನಡೆದು ಅದರ ಫಲಿತಾಂಶಗಳು ತಾರೀಖು ೧೩.೫.೨೦೦೪ ರಲ್ಲೇ ಪ್ರಕಟವಾಗಿದ್ದವು. ಬಿಜೆಪಿ ಪಕ್ಷದ ಮುಖಂಡರು ಎರಡು ವಾರಗಳ ತನಕ ತಮ್ಮ ಸೋಲಿನ ಕುರಿತು ಮಾತೆತ್ತಿರಲಿಲ್ಲ. ತಾ। ೨೮.೫.೨೦೦೪ ರಂದು ಬಿಜೆಪಿ ಪಕ್ಷದ ಹಿರಿಯ ಮುಖಂಡ ಅಡ್ವಾನಿಯವರು ಒಂದು ಹೇಳಿಕೆ ನೀಡಿ ತಮ್ಮ ಸಾಧನೆಗಳ ಬೆಳಕು ಗ್ರಾಮೀಣ ಪ್ರದೇಶದ ಜನಗಳ ಮುಂದೆ ಪ್ರಕಾಶಿಸಿಸು ವಂತೆ ತಮಗೆ ಮಾಡಲು ಅಸಾಧ್ಯವಾದದ್ದೇ ತಮ್ಮ ಸೋಲಿಗೆ ಕಾರಣ ವಾಯಿತು, ತಮ್ಮ ಹಿಂದುತ್ವ ವಾದವು ಇದಕ್ಕೆ ಕಾರಣವೆಂಬುದನ್ನು ಸಂಪೂರ್ಣ ನಿರಾಕರಿಸಿದ ಅವರು ತಮ್ಮ ಹಿಂದುತ್ವದ ವಾದಕ್ಕೆ ಇನ್ನಷ್ಟು ಚಾಲನೆ ನೀಡಿ ಅಧಿಕಾರಕ್ಕೆ ಪುನಃ ಬರಲು ನಿರ್ಧರಿಸಿದ್ದೇವೆ ಎಂದರು.

ಇದೇ ಸಮಯ ದಲ್ಲಿ ಅವರ ಇನ್ನೊರ್ವ ಮುಖಂಡ ವಿಜಯ ಕುಮಾರ ಮಲ್ಹೋತ್ರರವರು ದಲಿತರು, ಮುಸ್ಲಿಮರು, ಕ್ರೈಸ್ಥರು ಹಾಗೆಯೇ ಜಾತ್ಯತೀತತೆಯ ಹುಸಿ ತತ್ವವನ್ನು ನಂಬಿರುವ ಹಿಂದುಗಳು ಬಿಜೆಪಿಗೆ ವಿರುದ್ಧವಾಗಿ ಮತ ನೀಡಿದರು ಇದುವೇ ನಮ್ಮ ಸೋಲಿಗೆ ಕಾರಣ ಎಂದರು. ಈ ಎರಡು ಮುಖಂಡರ ಹೇಳಿಕೆಗಳಲ್ಲಿ ಒಂದು ಹೊಂದಾಣಿಕೆ ಇದೆ ಎಂಬುದು ನಿರ್ವಿವಾದ.

ಆದುದರಿಂದ ಈ ಮುಖಂಡರೀರ್ವರ ತರ್ಕಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸುವುದು ಭಾರತದ ಭವಿಷ್ಯಕ್ಕೆ ಅಗತ್ಯವಾಗಿದೆ. ಕಾರಣವೆಂದರೆ ತಮ್ಮ ಈ ಹಿಂದುತ್ವವನ್ನು ಬೆಳೆಸಲು ಈ ಜನವಿಭಾಗದ ವಿರೋಧವಾಗಿ ತಮ್ಮ ವಕ್ರದೃಷ್ಟಿಯನ್ನು ಹರಿಸುವುದು ಖಂಡಿತ.

ದಲಿತರನ್ನು ಅವರು ಕಾಣುವ ರೀತಿ

ದಲಿತ ಸಮುದಾಯವನ್ನು ಪಕ್ಕಾ ಹಿಂದುಗಳೆಂದು ಸಂಘ ಪರಿವಾರ ದವರು ಎಣಿಸುವುದಿಲ್ಲ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಿದ್ಧಾಂತವು ಇದನ್ನು ಖಾತರಿಪಡಿಸುತ್ತದೆ.

೧. ವರ್ಣಾಶ್ರಮ ಧರ್ಮವು ದೇವರಿಂದಲೇ ತಮಗೆ ನೀಡಲ್ಪಟ್ಟಿದೆ ಎಂಬುದು ಅವರ ನಿಲುವು. ಗೋಳ್ವಾಲ್‌ಕರ್‌ರ 'ಬಂಚ್ ಆಫ್ ಥಾಟ್ಸ್' ಎಂಬ ಪುಸ್ತಕದಲ್ಲಿ ಇದನ್ನು ವಿಷದೀಕರಿಸಲಾಗಿದೆ. ಆರ್ಯ ಕುಲದವರು ಮತ್ತು ನಂತರ ಅವರೊಡನೆ ಸಮ್ಮಿಶ್ರಗೊಂಡವರಿಗೆ ಮಾತ್ರ ಈ ಶ್ರೇಣೀಕೃತ ಸಮಾಜದಲ್ಲಿ ಸ್ಥಳವನ್ನು ಕಾದಿರಿಸಲಾಗಿದೆ. ದಲಿತರಿಗೆ ಈ ಚೌಕಟ್ಟಿನಲ್ಲಿ ಜಾಗವಿಲ್ಲ. ಆದರೆ ಈ ವರ್ಣಾಶ್ರಮ ಧರ್ಮಿಗಳು ಸೃಷ್ಟಿಸಿದ ಕೊಳಕನ್ನು ಶುದ್ಧೀಕರಿಸಲು ಅವರ ಸೇವೆಯು ಅಗತ್ಯ. ಆದುದರಿಂದ ಅವರಿಗೆ ದೂರ ದಲ್ಲಿ ಸ್ಥಳವನ್ನು ನೀಡಲಾಗಿದೆಯಷ್ಟೆ. ಈ ದಲಿತ ವರ್ಗದವರು 'ದಲಿತರಾಗಿಯೇ ಉಳಿಯಬೇಕು ಎಂಬ ಭಾವನೆಯು ಈ ಸವರ್ಣೀಯರಲ್ಲಿ ಹರಳುಗಟ್ಟಿದೆ.

೨. ದಲಿತರು ಆರ್ಯಕುಲದವರಲ್ಲ, ಆದುದರಿಂದ ಇತರರಿಗೆ ಇರುವ ಸ್ಥಾನಮಾನಗಳಿಗೆ ಅವರು ಅರ್ಹರಲ್ಲ (ಇದು ಶುದ್ಧ ಫ್ಯಾಸಿಸ್ಟ ಸಿದ್ಧಾಂತ)

೩. ದೈವದತ್ತವಾಗಿ ಬಂದ ಈ ವರ್ಣಾಶ್ರಮ ಧರ್ಮದಲ್ಲಿ ದಲಿತರನ್ನು ಸೇರಿಸಲು ಸಾಧ್ಯವಿಲ್ಲ. ಕಾರಣ ಅದಕ್ಕೆ ದೇವರ ಸಮ್ಮತಿ ಇಲ್ಲ.

೪. ದಲಿತರು ನಮ್ಮ ರಾಷ್ಟ್ರದ ಪ್ರೇಮಿಗಳಲ್ಲ. ಅವರು ಬ್ರಿಟಿಷರೊಡನೆ ಸೇರಿ (ಅಂದರೆ ಬ್ರಿಟಿಷರ ಸೈನ್ಯದಲ್ಲಿ ಸೇರಿ) ಮಹಾರಾಷ್ಟ್ರದ ಪೇಶ್ವೆಯವರ ಅರಸೊತ್ತಿಗೆಯನ್ನು ನಾಶಮಾಡಲು ಅನುವಾದವರೇ ಈ ದಲಿತರು ಎಂದು ಎಸ್.ಎ.ಡಾಂಗೆಯವರ ಪುಸ್ತಕದಲ್ಲಿದೆ. ಆರ್‌ಎಸ್‌ಎಸ್‌ನ ಮುಖಂಡ ಮಾದವದಾಸ್ ದೇವಿ ಎಂಬುವವರು ಹಿಂದೊಮ್ಮೆ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ವರದಿಗಾರನ ಪ್ರಶ್ನೆಗೆ ಉತ್ತರ ಕೊಡುತ್ತ ತಮ್ಮ ಸಂಘದಲ್ಲಿ ಎಲ್ಲರಿಗೂ ಪ್ರವೇಶವಿದೆ ಎಂದು ಮೊದಲಿಗೆ ಹೇಳಿದರು. ನೀವು ದಲಿತರ ಯುವಕರನ್ನು ನಿಮ್ಮ ಸಂಘಕ್ಕೆ ಸೇರಿಸು ತ್ತೀರಾ ಎಂಬ ಪ್ರಶ್ನೆಗೆ, ಅವರು ಬಂದರೆ ನಾವು ಸೇರಿಸಿಕೊಳ್ಳ ಬಹುದು. ನಿಮ್ಮ ಸಂಘಕ್ಕೆ ಎಷ್ಟು ದಲಿತ ರನ್ನು ಈ ತನಕ ಸೇರಿಸಿಕೊಂಡಿದ್ದೀರಿ ಎಂಬ ಪ್ರಶ್ನೆಗೆ ನಾವು ಜಾತಿಯ ಆಧಾರ ದಲ್ಲಿ ಸದಸ್ಯರ

ಲೆಕ್ಕವಿಡುವುದಿಲ್ಲ ಎಂದು ಈ ಪ್ರಶ್ನೆಯ ಪ್ರಾಮುಖ್ಯತೆಯನ್ನು ತಳ್ಳಿಹಾಕಿದ್ದರು.

೫. ಬಿಹಾರಿನಲ್ಲಿ ಬ್ರಾಹ್ಮಣರು ಕಾಯಸ್ಥರು ಭೂಮಿದಾರರು ಹಾಗೆಯೇ ಇನ್ನಿತರ ಭೂಮಾಲಕರು ಸೇರಿ ರಣಧೀರ ಸೇನೆಯೆಂಬ ಸಂಘಟನೆಯನ್ನು ರೂಪಿಸಿಕೊಂಡಿದ್ದಾರೆ. ಈ ಸಂಘ ಕಟ್ಟಿಕೊಂಡವರಲ್ಲಿ ಬಹುತೇಕ ಮಂದಿ ಬಿಜೆಪಿ ಪಕ್ಷದ ಮುಖಂಡರು. ತಮಗೆ ದಲಿತರಿಂದ ದೊರೆಯಬೇಕಾದ ಸೇವೆ ಈಗ ದೊರೆಯುತ್ತಿಲ್ಲ. ಆದುದರಿಂದ ಅವರನ್ನು ಬಗ್ಗುಬಡಿದು ತಮಗೆ ಅವರಿಂದ ಪಡೆಯಬೇಕಾದ ಸೇವೆ ಸದಾ ದೊರೆಯುವಂತೆ ಅವಕಾಶವನ್ನು ಕಲ್ಪಿಸಿಕೊಳ್ಳಲು ಕಟ್ಟಿದ ಸೇನೆ ಇದು.

೬. ಹರಿಯಾಣದ ಭೂ ಮಾಲೀಕರಿಗೆ ಹರಿಜನರು ಎದುರಾಗುತ್ತಿದ್ದಾರೆ. ಅವರನ್ನು ಹಿಡಿತಕ್ಕೆ ತರುವುದು ಅಗತ್ಯ ಎಂದೆಣಿಸುತ್ತಿದ್ದ ಈ ಭೂ ಮಾಲೀಕರ ಚಿಂತನೆಯನ್ನು ಕೃತಿಗಿಳಿಸಿದವರು ಸಂಘ ಪರಿವಾರದ ಕರಸೇವಕರು. ಜಬ್ಬಾರ್ ಪೊಲೀಸ್ ಸ್ಟೇಶನ್ನಿನ ಎದುರೇ ೫ ದಲಿತರ ಹತ್ಯೆ ನಡೆಯಿತು. ಈ ಭೂ ಮಾಲೀಕರು ಬಿಜೆಪಿಯ ಮುಖಂಡರು ಈ ಹತ್ಯದಿಂದ ಸಿಟ್ಟುಗೊಂಡ ದಲಿತರು ತಾವು ಬೌದ್ಧ ಧರ್ಮವನ್ನು ಸ್ವೀಕರಿಸುವೆವು ಎಂಬ ಬೆದರಿಕೆ ಹಾಕಿದಾಗ ಈ ವಿವಾದದ ಪಂಚಾಯಿತಿಗೆ ಸಂಘ ಪರಿವಾರದವರು ಉಡುಪಿ ಮಠದ ಪೇಜಾವರ ಸ್ವಾಮಿಯವರನ್ನು ಅಲ್ಲಿಗೆ ಕಳುಹಿಸಿದ್ದರು.

೭. ದಲಿತರಿಗೆ ಸರಕಾರದ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಸಂಘಟಿಸಲಾದ ಉದ್ಯಮಗಳಲ್ಲಿ ಶೇ ೧೮ರಷ್ಟು ಉದ್ಯೋಗವನ್ನು ಕಾದಿರಿಸಲು ಸಂವಿಧಾನವೇ ಅನುವು ಮಾಡಿದೆ. ಆದರೆ ಬಿಜೆಪಿ ಸರಕಾರದ ೫ ವರ್ಷಗಳ ಕಾಲದಲ್ಲಿ ಇದನ್ನು ಅನುಷ್ಠಾನಕ್ಕೆ ತರಲು ಯಾವ ಆಸಕ್ತಿಯನ್ನೂ ತೋರಿಸಿರುವುದಿಲ್ಲ. ಅನೇಕ ಸ್ಥಾನಗಳನ್ನು ಖಾಲಿಯಾಗಿ ಇರಿಸಲಾಗಿದೆ. ದಲಿತ ಸಮುದಾಯದ ವಿರುದ್ಧವಾಗಿ ನಡೆಯುತ್ತಲೇ ಇರುವ ಈ ಅನ್ಯಾಯದ ಕುರಿತು ಪ್ರಾಮಾಣಿಕವಾಗಿ ಚಿಂತಿಸಿದವರಲ್ಲಿ ಗಾಂಧೀಜಿ,

ವಿಶ್ಲೇಷಣೆ

ಕಳೆದ ಚುನಾವಣೆಯಲ್ಲಿ ಬಿಜೆಪಿ ಸೋಲಲು ಅದರ ಕೋಮುವಾದವೇ ಕಾರಣವೆಂದು ಅದರ ಮಿತ್ರಪಕ್ಷಗಳಾದ ಶಿವಸೇನೆ ಟಿಡಿಪಿ, ತೃಣಮೂಲ ಕಾಂಗ್ರೆಸ್ ಮಾತ್ರವಲ್ಲ ಬಿಜೆಪಿ ಎಂ ಪಿ ಶಹಾನವಾಝುಖಾನರು ಕೂಡಾ ಹೇಳಿದರು. ಆದರೆ ಬಿಜೆಪಿ ಮುಖಂಡರು ಇದನ್ನು ಅಲ್ಲಗಳೆಯುತ್ತಾರೆ. ಗ್ರಾಮೀಣ ಮತದಾರರಿಗೆ ಅವರ ಸಾಧನೆಗಳ ಪ್ರಕಾಶವು ತಲುಪದಿರಬಹುದು. ಆದರೆ ಮುಂಬೈ, ಪೂನಾ, ಡೆಲ್ಲಿ, ನಾಗಪುರ, ಚೆನ್ನೈ, ಚಂಢೀಗಡ ಇವೇ ಮೊದಲಾದ ನಗರಗಳಲ್ಲಿಯೂ ಅವರಿಗೆ ಸೋಲಾಗಿದೆ? ಬಿಜೆಪಿ ಸೋಲಿಗೆ ಕೋಮುವಾದವೇ ಕಾರಣವಾಗಿದ್ದರೂ ಮುಖಂಡರು ಅದನ್ನು ಒಪ್ಪುವುದಿಲ್ಲ ಏಕೆ ?

○ ಪಿ.ಎಮ್.ಎನ್. ಮೂರ್ತಿ

ಮಹಾತ್ಮಾ ಫುಲೆ, ಕರ್ನಾಟಕದ ಕುದ್ಮುಲ್ ರಂಗರಾವ್ ಹಾಗೆಯೇ ಡಾ|| ಅಂಬೇಡ್ಕರರು ಮುಖ್ಯರು. ಗಾಂಧೀಜಿ ಮತ್ತು ಇತರರು ಈ ಪ್ರಶ್ನೆಯನ್ನು ಬರೇ ಒಂದು ಮಾನವತಾ ದೃಷ್ಟಿಕೋನದಿಂದ ನೋಡಿ ಆ ಮೂಲಕ ಅವರಿಗೆ ಸುಧಾರಣೆಗಳನ್ನು ಕೊಡಿಸಿಕೊಡಲು ಪ್ರಯತ್ನಿಸಿದರು. ಅವರ ಯತ್ನಗಳು ಕೆಲವು ದಲಿತರಿಗೆ ವೈಯಕ್ತಿಕವಾಗಿ ಪ್ರಯೋಜನ ಆಗಿದೆ, ನಿಜ. ಆದರೆ ಅವರ ಶ್ರಮ, ಪ್ರಯತ್ನಗಳು ಇಡೀ ಸಮಾಜದ ಸುಧಾರಣೆಗೆ ಒಂದು ವಾಹಕವಾಗಿ ಸೇರಿ ಬರಲಿಲ್ಲ.

ಡಾ|| ಅಂಬೇಡ್ಕರರು ಈ ಪ್ರಶ್ನೆಯನ್ನು ಸಾಮೂಹಿಕವಾಗಿ ನೋಡಿ ದರು. ಇದೊಂದು ವರ್ಗದ ಪ್ರಶ್ನೆ ಎಂಬ ಸತ್ಯವನ್ನು ಅವರು ಕಂಡು ಕೊಂಡರು. ಇದು ನಿಜವಾಗಿಯೂ ಒಂದು ಕ್ರಾಂತಿಕಾರಕ ಚಿಂತನೆ ಯಾಗಿತ್ತು. ಬೌದ್ಧ ಮತ ನಮ್ಮ ರಾಷ್ಟ್ರದ ಮಣ್ಣಿನಲ್ಲೇ ಜನ್ಮತಾಳಿದ ಧರ್ಮ. ಅದರಲ್ಲಿ ವರ್ಗ ವಿಭಜನೆಗೆ ಅವಕಾಶ ಇಲ್ಲ. ಆದುದರಿಂದ ದಲಿತರೆಲ್ಲರೂ ಈ ಧರ್ಮವನ್ನು ಸ್ವೀಕರಿಸಬೇಕು ಎಂಬುದೇ ಅವರ ಇಚ್ಛೆಯಾಗಿತ್ತು. ಅವರ ಈ ಇಚ್ಛೆಯಲ್ಲಿ ಒಂದು ವಿಶೇಷತೆಯನ್ನು ನಾವು ಗುರುತಿಸುವುದು ಅಗತ್ಯವಿದೆ. ದಲಿತರು ಬೌದ್ಧಮತಾವಲಂಬಿಗಳಾಗುವುದರಿಂದ ನಮ್ಮ ರಾಷ್ಟ್ರದ ಗೌರವಕ್ಕೆ ಹಾನಿವುಂಟಾಗುವುದಿಲ್ಲ (ಮುಸ್ಲಿಂ ಅಥವಾ ಕ್ರೈಸ್ತ ಧರ್ಮಕ್ಕೆ ಅವರನ್ನು ಸೇರಿ ಎಂದರೆ ಈ ಪ್ರಶ್ನೆ ಉದ್ಭವವಾಗುತ್ತಿತ್ತು) ಆದುದರಿಂದ ಅಂಬೇಡ್ಕರರಿಗೆ ಭಾರತದ ಹಿನ್ನೆಲೆ, ಪರಂಪರೆ ಹಾಗೆಯೇ ಉಚ್ಚ ಸಂಸ್ಕೃತಿಯ ಕುರಿತು ಎಷ್ಟು ಅಭಿಮಾನವಿತ್ತು ಎಂದು ಅವರ ಈ ಚಿಂತನೆಯಲ್ಲಿ ಅಭಿವ್ಯಕ್ತವಾಗುತ್ತದೆ. ಇದೊಂದು ಅವರಲ್ಲಿದ್ದ ಹಿರಿತನ.

ಮುಸ್ಲಿಮರ ಕುರಿತು ಸಂಘಪರಿವಾರದ ನಿಲುವು

ಮುಸ್ಲಿಮರು ಪರಕೀಯರು. ಅವರಲ್ಲಿ ಸ್ವದೇಶ ಪ್ರೇಮವೆಂಬುದಿಲ್ಲ. ಅವರು ಮತ್ತು ಕ್ರೈಸ್ತರು ನಮ್ಮ ರಾಷ್ಟ್ರದ ಎಲ್ಲಾ ಸಂಸ್ಕಾರಗಳನ್ನು ವಿಧಿವತ್ತಾಗಿ ಪಾಲಿಸಿದರೆ ಮಾತ್ರ ಅವರಿಗೆ ಹಿಂದುಗಳಂತೆ ಸರಿಸಮನಾದ ಪೌರತ್ವವನ್ನು ಪಡೆಯಲು ಅವರು ಅರ್ಹರಾಗುತ್ತಾರೆ. ಇದಕ್ಕೆ ಅವರು ಸ್ಪಂದಿಸದಿದ್ದರೆ ಅವರು ದ್ವಿತೀಯ ಸ್ಥಾನದ ಪೌರತ್ವವನ್ನು ಪಡೆಯಲು ಮಾತ್ರ ಅರ್ಹರಾಗುತ್ತಾರೆ ಎಂದು ಸಂಘ ಪರಿವಾರದ ಗೋಳ್ವಾಲಕರ್ ರವರು ಬರೆದ Bunch of Thoughts ಎಂಬ ಪುಸ್ತಕದಲ್ಲಿ ಇದನ್ನು ಸ್ಪಷ್ಟವಾಗಿ ಹೇಳಲಾಗಿದೆ.

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರವು ಅಸ್ತಿತ್ವಕ್ಕೆ ಬಂದ ನಂತರ ಗುಜರಾತ್ ರಾಜ್ಯವನ್ನು ಮುಸ್ಲಿಮರ ವಿರುದ್ಧವಾಗಿರುವ ತಮ್ಮ ರೀತಿನೀತಿಗಳನ್ನು ಒರೆಗೆ ಹಚ್ಚುವ ಪ್ರಯೋಗ ಶಾಲೆಯನ್ನಾಗಿ ಮಾರ್ಪಡಿಸಲಾಯಿತು. ಗೋದ್ರ ಘಟನೆಯ ನಂತರ ೧೧೩ ದಿವಸಗಳ ಕಾಲ ಅಲ್ಲಿ ನಡೆದ ನರಹತ್ಯೆಯು ಗೋದ್ರಾದ ಘಟನೆಗೆ ಪ್ರತಿಕ್ರಿಯೆ ಅಷ್ಟೇ ಎಂದು ಸಂಘ ಪರಿವಾರದ ಮುಖಂಡರು ಬಹಿರಂಗವಾಗಿ ಹೇಳಿದರು. ಸುಮಾರು ೧,೦೦೦ ಮಂದಿಯ ಜೀವ ಹತ್ಯೆ, ಸಾವಿರಾರು ಮಂದಿಗೆ ಗಾಯ, ೩೦,೦೦೦ ಮುಸ್ಲಿಮರ ಮನೆಮಠಗಳ ನಾಶವನ್ನು ನ್ಯೂಟನ್ನನ ಸಿದ್ಧಾಂತಕ್ಕೆ ಹೋಲಿಸಿ ಕ್ರಿಯೆಗೆ ಪ್ರತಿಕ್ರಿಯೆ ಎಂಬುದೇ ಅವರ ಉತ್ತರವಾಗಿತ್ತು. ಗೋದ್ರಾ ಘಟನೆಯು ಮುಸ್ಲಿಂ ಮತಾಂತರದಿಂದಲೇ ನಡೆಯಿತು ಎಂಬುದೇ ಇನ್ನೂ ಸಾಬೀತಾಗಲಿಲ್ಲ.

೧. ರೈಲ್ವೆ ಪೊಲೀಸರು ಈ ಕುರಿತು ನಡೆಸಿದ ತನಿಖೆಯ ವರದಿಯು ಇನ್ನೂ ಪ್ರಕಟಿಸಲ್ಪಟ್ಟಿರುವುದಿಲ್ಲ.

ದಲಿತ ಸಮುದಾಯವನ್ನು ಪಕ್ಕಾ ಹಿಂದುಗಳೆಂದು ಸಂಘ ಪರಿವಾರ ದವರು ಎಣಿಸುವುದಿಲ್ಲ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಿದ್ಧಾಂತವು ಇದನ್ನು ಖಾತರಿ ಪಡಿಸುತ್ತದೆ. ವರ್ಣಾಶ್ರಮ ಧರ್ಮವು ದೇವರಿಂದಲೇ ತಮಗೆ ನೀಡಲ್ಪಟ್ಟಿದೆ ಎಂಬುದು ಅವರ ನಿಲುವು. ಗೋಳ್ವಾಲ್ಕರ್‌ರ 'ಬಂಚ್ ಆಫ್ ಥಾಟ್ಸ್' ಎಂಬ ಪುಸ್ತಕದಲ್ಲಿ ಇದನ್ನು ವಿಷದೀಕರಿಸಲಾಗಿದೆ.

೨. ಬೆಂಕಿಯ ಅನಾಹುತ ಮದ್ದುಗುಂಡಗಳ ಸ್ಫೋಟನೆಗಳ ಮೂಲವನ್ನು ಕಂಡು ಹಿಡಿಯುವ ತಜ್ಞರಿಗೆ Forensic Experts ಎಂದು ಹೆಸರು. ಈ ತಜ್ಞರು ರೈಲ್ವೆಗಾಡಿಗೆ ಬೆಂಕಿ ಇಟ್ಟ ಕುರಿತು ಕೂಲಂಕಷವಾದ ಪರೀಕ್ಷೆಯನ್ನು ಕೈಗೊಂಡಿದ್ದರು. ರೈಲ್ವೆ ಪೊಲೀಸರು ಬೆಂಕಿಯನ್ನು ಹೊರಗಿನಿಂದಲೇ ಕೊಡಲಾಗಿದೆ ಎಂದು ನೀಡಿರುವ ಪ್ರಥಮ ಮಾಹಿತಿಯನ್ನು (First Information Report) ಈ ತಜ್ಞರು ಬರೇ ಪ್ರಥಮ ಕಣ್ಣೋಟದಿಂದಲೇ ತಳ್ಳಿಹಾಕಿದ್ದರು. ಅವರು ಸರಕಾರಕ್ಕೆ ಒಪ್ಪಿಸಿದ ವರದಿಯನ್ನು ಮೋದಿ ಸರಕಾರವು ಗೋಪ್ಯವಾಗಿಯೇ ಇಟ್ಟುಕೊಂಡಿದೆ.

೩. ಗೋದ್ರಾ ಮತ್ತು ಅದರ ನಂತರ ನಡೆದ ಹತ್ಯಾಕಾಂಡಗಳ ಕುರಿತು ಸಾರ್ವತ್ರಿಕ ತನಿಖೆಯಾಗಬೇಕೆಂಬ ಜನಾಭಿಪ್ರಾಯವನ್ನು ತಡೆಯಲು ಸಾಧ್ಯವಾಗದೆ ಜಸ್ಟಿಸ್ ನಾನಾವತಿಯವರ ಆಯೋಗವನ್ನು ನೇಮಿಸಲಾಯಿತು. ಮೋದಿಯವರ ರಾಜ್ಯ ಸರಕಾರ ತೀರಾ ಅಲಕ್ಷತೆಯಿಂದಾಗಿ ಈ ಆಯೋಗದ ವಿಚಾರಣೆಯು ಇನ್ನೂ ಪ್ರಥಮ ಹೆಜ್ಜೆಯನ್ನೇ ದಾಟಿಲ್ಲ. ಈ ಕುರಿತು ಸುಮಾರು ೨ ವರ್ಷಗಳ ಹರಣವಾಯಿತಷ್ಟೆ!

ಗೋದ್ರಾ ಘಟನೆಗೆ ಸಂಬಂಧಿಸಿ ಮೋದಿ ಸರಕಾರವು ೨೮೦ ಮುಸ್ಲಿಮರನ್ನು ಬಂಧಿಸಿ ಅವರ ವಿರುದ್ಧ ರಾಜದ್ರೋಹ ಕೊಲೆಕೃತ್ಯ ಇತ್ಯಾದಿ ಕಠಿಣವಾದ ಅಪರಾಧಗಳನ್ನು ಹೊರಿಸಿ, ಅವರಿಗೆ ಪೋಟಾ ಕಾಯಿದೆಯನ್ನು ಅನ್ವಯ ಮಾಡಿ ಸ್ಥಾನಬದ್ಧತೆಯಲ್ಲಿಟ್ಟಿದೆ. ಅವರ ವಿರುದ್ಧ ಹೊರಿಸಲಾದ ಅಪರಾಧಗಳು ಯಾವುವು ಎಂಬುದನ್ನು ಕೂಡಾ ಈ ತನಕ ಅವರಿಗೆ ಕಳಿಸಿಲ್ಲ.

ಗೋದ್ರಾ ಘಟನೆಯ ನಂತರ ಅವ್ಯಾಹತವಾಗಿ ೧೧೩ ದಿವಸಗಳ ತನಕ ನಡೆದ ನರಹತ್ಯಾಕಾಂಡದಲ್ಲಿ ೧,೨೦೦ ಮಂದಿಯನ್ನು (ಅವರಲ್ಲಿ ಹೆಚ್ಚಿನವರು ಸಂಘ ಪರಿವಾರದವರು) ಬಂಧಿಸಲಾಗಿತ್ತು. ಅವರಲ್ಲಿ ಯಾರಿಗೂ ಪೋಟಾ ಕಾಯಿದೆಯನ್ನು ಅನ್ವಯ ಮಾಡಿಲ್ಲ. ಸ್ಥಾನಬದ್ಧತೆಯಲ್ಲಿ ಇಡಲಿಲ್ಲ. ಕೂಡಲೇ ಜಾಮೀನಿನ ಮೇಲೆ ಅವರನ್ನು ಬಿಡುಗಡೆಗೊಳಿಸಲಾಗಿದೆ. ಗೋದ್ರಾ ಘಟನೆಯ ನಂತರ ನಡೆದ ಬೆಸ್ಟ್ ಬೇಕರಿಯ ಮೇಲೆ ದಾಳಿ ನಡೆಸಿದ ಪರಿಣಾಮವಾಗಿ ೧೪ ಮಂದಿ ಮುಸ್ಲಿಮರ ಕೊಲೆಯಾಗಿತ್ತು. ಬೇಕರಿಯನ್ನು ಹುಡಿ ಮಾಡಲಾಗಿತ್ತು. ೧೪ ಮಂದಿ ಮುಸ್ಲಿಮರ ಕೊಲೆಯಾಗಿತ್ತು. ಈ ದುಷ್ಕರ್ಮಕ್ಕೆ ಸಂಬಂಧಿಸಿ ೨೧ ಮಂದಿಯನ್ನು ಬಂಧಿಸಲಾಯಿತು. ಅವರಿಗೆ ಕೂಡಲೇ ಜಾಮೀನು ನೀಡಲಾಯಿತು. ಕೆಳಗಿನ ನ್ಯಾಯಸ್ಥಾನದಲ್ಲಿ ಅವರ ವಿಚಾರಣೆ ನಡೆದು ಅಪಾಧಿತರ ವಿರುದ್ಧವಾಗಿ ಸಮರ್ಥನೀಯವಾದ ಸ್ಪಷ್ಟತೆಯ ಪುರಾವೆಗಳಿಲ್ಲ ಎಂದು ಅವರನ್ನು ದೋಷವಿಮುಕ್ತರನ್ನಾಗಿ ಮಾಡಿ ಅಪರಾಧಿಗಳಿಂದ ಅವರನ್ನು ಮುಕ್ತಿಗೊಳಿಸಲಾಯಿತು. ಈ ಕುರಿತು ಹೆಸರಿಗೆ ತಕ್ಕದಾಗಿ ಮಾತ್ರ ಹೈಕೋರ್ಟಿಗೆ ಮೇಲ್ಮನವಿಯನ್ನು ಗುಜರಾತ್ ಸರಕಾರವು ಸಲ್ಲಿಸಿತು. ಹೈಕೋರ್ಟ್‌ನ ನ್ಯಾಯಾಧೀಶರೂ ಕೂಡಾ ಈ ಕುರಿತ ಅಲಕ್ಷತೆಯನ್ನು ತೋರಿಸಿ ಕೆಳಗಿನ ಕೋರ್ಟಿನ ತೀರ್ಪನ್ನೇ ಎತ್ತಿಹಿಡಿದರು. ಅನಂತರ ಈ ಹತ್ಯಾಕಾಂಡದಲ್ಲಿ ಬದುಕಿ ಉಳಿದ ಏಕಮಾತ್ರ ಮಹಿಳೆ ಸೀಟಲ್‌ವಾದ್ ಎಂಬ ಮಾನವ ಹಕ್ಕಿನ ಆಯೋಗದ ಕಾರ್ಯಕರ್ತೆಯ ಸಹಾಯದಿಂದ ಸುಪ್ರೀಂ ಕೋರ್ಟಿಗೆ ತನ್ನ ಮೇಲ್ಮನವಿಯನ್ನು ಸಲ್ಲಿಸಿದಳು.

ಸುಪ್ರೀಂ ಕೋರ್ಟಿನ ನ್ಯಾಯಾಧೀಶರುಗಳು ಕೆಳಗಿನ ಕೋರ್ಟುಗಳಲ್ಲಿ ಹಾಜರುಪಡಿಸಲಾದ ಲಿಖಿತ ದಾಖಲೆಗಳು ಬಾಯಾರೆಯ ಸಾಕ್ಷಿ, ಅಂತೆಯೇ ಈ ಪ್ರಕರಣದಲ್ಲಿ ವಿವಿಧ ರೀತಿಗಳಲ್ಲಿ ಭಾಗಿಗಳಾದ ವ್ಯಕ್ತಿಗಳ ಹಾಗೆಯೇ ನ್ಯಾಯಾಧೀಶರುಗಳ ನಡವಳಿಗಳನ್ನು ವಿಮರ್ಶಿಸಿ ನೀಡಿದ ತೀರ್ಪಿನಲ್ಲಿ

೧. ಪೊಲೀಸು ಅಧಿಕಾರಿಗಳು ಈ ಕೇಸಿನ ಕುರಿತು ಸರಿಯಾಗಿ ತಪಾಸಣೆ ನಡೆಸಿರುವುದಿಲ್ಲ. ಅಗತ್ಯವಾದ ಸಾಕ್ಷಿ ವಿವರಗಳನ್ನು ಸಂಗ್ರಹ ಮಾಡಿರುವುದಿಲ್ಲ.

೨. ಸರಕಾರದ ಪರವಾಗಿ (ಅಂದರೆ ಅಪರಾಧಿಗಳ ವಿರುದ್ಧವಾಗಿ) ವಾದಿಸಲು ಬಿಜೆಪಿ ಪಕ್ಷದ ಸಕ್ರಿಯ ಸದಸ್ಯರಾಗಿದ್ದ ವಕೀಲರನ್ನು ಪ್ರಾಸಿಕೂಟರ್ ಆಗಿ ನೇಮಿಸಿದ್ದು ಉದ್ದೇಶಪೂರ್ವಕವಾಗಿಯೇ ಅಪರಾಧಿಗಳ ವಿರುದ್ಧವಾಗಿ ಅವರು ವಾದಿಸುವ ಬದಲು ಅವರನ್ನು ರಕ್ಷಿಸುವುದೇ ಅವರ ಉದ್ದೇಶವಾಗಿತ್ತು. ಪೊಲೀಸರಿಗೆ ನೀಡಿದ ಮೊದಲನೆಯ ಹೇಳಿಕೆಗಳಿಗೆ ವಿರುದ್ಧವಾಗಿ ಈ ಸಾಕ್ಷಿದಾರರನ್ನು ಅಪರಾಧಿಗಳ ಪರವಾಗಿ ಅವರು ಸಾಕ್ಷಿಗಾರರಿಂದ ಸಾಕ್ಷಿಯನ್ನು ಹೇಳಿಸಿದ್ದರು. ಪಟ್ಟಿಯಲ್ಲಿ ೩೬ ಸಾಕ್ಷಿದಾರರ ಹೆಸರುಗಳಿದ್ದರೂ ಬರೇ ೫ ಮಂದಿಯನ್ನು ಮಾತ್ರ ಸಾಕ್ಷಿ ವಿಚಾರಣೆಗೆ ಗುರಿಪಡಿಸಲಾಯಿತು. ಉಳಿದ ಸಾಕ್ಷಿದಾರರನ್ನು ಸಾಕ್ಷಿ ಹೇಳಿಸದಿರುವುದಕ್ಕೆ ಕಾರಣಗಳನ್ನು ನೀಡಿಲ್ಲ. ತಿರುಗಿಬಿದ್ದ ಸಾಕ್ಷಿದಾರರಿಗೆ ಅಡ್ಡ ಸವಾಲು ಹಾಕಲಿಲ್ಲ.

೩. ಸಾಕ್ಷಿ ವಿಚಾರಣೆಗೆ ಒಳಪಡಿಸಲ್ಪಟ್ಟ ಎಲ್ಲಾ ಸಾಕ್ಷಿದಾರರು ತಮ್ಮ ಮೊದಲಿನ ಹೇಳಿಕೆಗಳಿಗೆ ವಿರೋಧವಾಗಿ ಸಾಕ್ಷಿ ನೀಡುತ್ತಿದ್ದಾಗ ಇದಕ್ಕೇನು ಕಾರಣವೆಂದು ನ್ಯಾಯಾಧೀಶರು ಪ್ರಾಸಿಕೂಟರಿಗೆ ಪ್ರಶ್ನೆ ಹಾಕಿಲ್ಲ. ಸಾಕ್ಷಿದಾರರಿಗೆ ಬೆದರಿಕೆ ಹುಟ್ಟಿಸುವುದಕ್ಕಾಗಿ ನ್ಯಾಯಸ್ಥಾನದ ಒಳಗೆ ಸಂಘ ಪರಿವಾರದ 'ಗೂಂಡಾಗಳು' ಹಾಜರಿದ್ದರೂ ಅವರನ್ನು ಹೊರಹೋಗಲು ನ್ಯಾಯಾಧೀಶರು ಅಪ್ಪಣೆ ಮಾಡಿಲ್ಲ.

೪. ನ್ಯೂರೊ ಎಂಬುವನು ಬಹಳ ಹಿಂದೆ ರೋಮನ್ ರಾಜ್ಯದ ಅರಸನಾಗಿದ್ದ. ಕ್ರೂರತನದಲ್ಲಿ ಆತನಿಗೆ ಇತಿಹಾಸದಲ್ಲೇ ಯಾರೂ ಸಮಾನರಿಲ್ಲ ಎಂಬುದು ಜನಜನಿತವಾದ ವಿಚಾರ. ಆತನು ರೋಮಿಗೆ ಬೆಂಕಿ ಹತ್ತಿಸಿ ಅದು ಉರಿಯುವುದನ್ನು ನೋಡಿ ಸಂತೋಷಪಟ್ಟ ವ್ಯಕ್ತಿ ನ್ಯೂರೊ. ಹಾಗೆಯೇ ಗುಜರಾತ್ ರಾಜ್ಯದಲ್ಲಿ ಕೋಮುವಾದದ ದಳ್ಳುರಿಯು ಹರಡುವ ವೇಳೆ ಮೋದಿ ಸರಕಾರವು ಈ ದುಷ್ಕರ್ಮಿಗಳತ್ತ ಬೆನ್ನು ಹಾಕಿ ಇತರ ದಿಕ್ಕಿಗೆ ತನ್ನ ನೋಟವನ್ನು ತಿರುಗಿಸಿತ್ತು.

೫. ಗುಜರಾತಿನ ಹೈಕೋರ್ಟ್ ನ್ಯಾಯಾಧೀಶರೂ ಕೂಡಾ ಈ ಕುರಿತು ತಮ್ಮ ಅಲಕ್ಷತನವನ್ನೇ ಪ್ರದರ್ಶಿಸಿದರು.

೬. ಆದುದರಿಂದ ಈ ಬೆಸ್ಟ್ ಬೇಕರಿ ಕೇಸಿನಲ್ಲಿ ಬುಡದಿಂದ ತಲೆಯವರೆಗೂ ನ್ಯಾಯದ ಹರಣವಾಗಿದೆ. ಆದುದರಿಂದ ಅದರ ಪುನರ್ವಿಚಾರಣೆ ಅಗತ್ಯ. ಗುಜರಾತ್ ರಾಜ್ಯದೊಳಗೆ

ಇಂತಹ ಪುನರ್ವಿಚಾರಣೆ ನಡೆದರೆ ಅವರಿಂದ ನ್ಯಾಯ ದೊರಕಲಾರದು. ಆದಕಾರಣ ಈ ವಿಚಾರಣೆಯನ್ನು ಹೊರಗಿನ ರಾಜ್ಯದಲ್ಲಿ ಅಂದರೆ ಮಹಾರಾಷ್ಟ್ರದ ಒಂದು ನ್ಯಾಯ ಸ್ಥಾನದಲ್ಲಿ ಈ ಪುನರ್ವಿಚಾರಣೆಯು ನಡೆಯತಕ್ಕದ್ದು ಎಂದು ಸುಪ್ರೀಂ ಕೋರ್ಟಿನ ತೀರ್ಪಿನಲ್ಲಿ ಹೇಳಲಾಗಿದೆ. ಹೀಗೆ ಮೋದಿಯವರ ಕೋಮುವಾದ ಮತ್ತು ಮುಸ್ಲಿಮರತ್ತ ಅವರಲ್ಲಿಯ ಕಡು ದ್ವೇಷ ಭಾವನೆಯನ್ನು ಸುಪ್ರೀಂ ಕೋರ್ಟು ತನ್ನ ತೀರ್ಪಿನಲ್ಲಿ ಗುರುತಿಸಿ ಹೇಳಿದೆ.

ಗುಜರಾತಿನಲ್ಲಿ ಈ ಮೋದಿ ಸರಕಾರವು ಇಂತಹ ಒಂದು ಅರಾಜಕತೆಯನ್ನು ಸೃಷ್ಟಿಸಿದ್ದರೂ ಸಂಘ ಪರಿವಾರದ ಒಬ್ಬನೇ ಒಬ್ಬ ವ್ಯಕ್ತಿಯಾಗಲಿ ಮೋದಿಯನ್ನು ಈವರೆಗೂ ಖಂಡಿಸಿಲ್ಲ? ಬದಲು ಅದನ್ನು ಖಂಡಿಸಿದವರನ್ನೇ ಈ ಮುಖಂಡರು ಕ್ಷಣ ಕ್ಷಣಕ್ಕೂ ಖಂಡಿಸುತ್ತಿದ್ದಾರೆ.

ಕ್ರೈಸ್ತರ ವಿರುದ್ಧವಾಗಿ ಅನೇಕ ದೋಷಪೂರಿತ ಘಟನೆಗಳು ಈ ಸಂಘ ಪರಿವಾರದ ಜನಗಳಿಂದ ನಡೆಸಲ್ಪಟ್ಟಿವೆ. ೧೯೯೮ರಲ್ಲಿ ಗುಜರಾತಿನ ಜಬುವಾ ಎಂಬಲ್ಲಿ ವೃದ್ಧ ಸನ್ಯಾಸಿಯ ಮಾನಭಂಗ ನಡೆಯಿತು. ಒರಿಸ್ಸಾದಲ್ಲಿ ಸ್ಟೇನ್ಸ್ ಮತ್ತು ಆತನ ಎರಡು ಹಸುಳೆಗಳನ್ನು ಕಿಚ್ಚಿಟ್ಟು ಭಸ್ಮ ಮಾಡಲಾಯಿತು. ಮೈಸೂರಿನ ಹತ್ತಿರದ ಇಗರ್ಜಿಗೆ ಹಾಸಿ ಮಾಡಲಾಯಿತು. ಕ್ರೈಸ್ತರ ಅಖಿಲ ಭಾರತದ ಮಹಾಮಂಡಲವು ಈ ಹಿಂದಿನ ೫ ವರ್ಷಗಳು ಒಟ್ಟಾರೆ ೨೧೫ ದಾಳಿಗಳು (ಕ್ರೈಸ್ತರ ಮೇಲೆ ಹಾಗೆಯೇ ಅವರ ಮಂದಿರಗಳ) ನಡೆದಿವೆ ಎಂದು ಪ್ರಕಟಿಸಿದರು. ಬಿಜೆಪಿ ಪಕ್ಷವು ಆಳುತ್ತಿರುವ ರಾಜ್ಯಗಳಲ್ಲಿ ಕ್ರೈಸ್ತರ ಹಬ್ಬಗಳಾದ ಕ್ರಿಸ್‌ಮಸ್, ಗುಡ್‌ಫ್ರೈಡೆ ಇಂತಹ ದಿನಗಳಿಗೆ ನೀಡುತ್ತಿದ್ದ ರಜೆಗಳನ್ನು ರದ್ದುಪಡಿಸಲಾಗಿದೆ. ಶಾಲೆಗಳಲ್ಲಿ ಆ ದಿನಗಳಲ್ಲೆ ಪರೀಕ್ಷೆಗಳನ್ನು ನಡೆಸುವ ಏರ್ಪಾಡುಗಳು ನಡೆದಿವೆ.

ಕಾಂಗ್ರೆಸ್ ಹಾಗೂ ಎಡ ಪಕ್ಷಗಳು ಅಲ್ಪಸಂಖ್ಯಾತರನ್ನು ತುಷ್ಟೀಕರಿಸುತ್ತವೆ (appeasment) ಎಂಬುದು ಸಂಘ ಪರಿವಾರದ ನಿರಂತರ ಪ್ರಚಾರ. ಆದರೆ ಕಳೆದ ಲೋಕಸಭಾ ಚುನಾವಣೆಯ ಅವಧಿಯಲ್ಲಿ ತನ್ನ ಪಕ್ಷಕ್ಕೆ ಸೋಲು ಖಂಡಿತ ಎಂದು ತೋರಿಬಂದಾಗ ವಾಜಪೇಯಿಯವರು ತಾನು ಮಾಡಿದ ಲಕ್ನೋದ ಭಾಷಣದಲ್ಲಿ' ಮುಸ್ಲಿಂ ಸಮೇತವಾಗಿ ಅಲ್ಪಸಂಖ್ಯಾತರು ತಮ್ಮ ಪಕ್ಷಕ್ಕೆ ಮತ ನೀಡದಿದ್ದರೂ ತಮ್ಮ ಮತವನ್ನು ಮುಲಾಯಂ ಸಿಂಗ್‌ರ ಪಕ್ಷಕ್ಕೆ ನೀಡಿ ಕಾಂಗ್ರೆಸ್ಸಿಗೂ ಎಡಪಕ್ಷಗಳಿಗೂ ನೀವು ಮತ ನೀಡಬೇಡಿ ಎಂದಿದ್ದರು. ಅದರ ಮಾರನೇ ದಿವಸವೇ ಅವರು ಡೆಲ್ಲಿಯಲ್ಲಿ ಮಾಡಿದ ಭಾಷಣದಲ್ಲಿ 'ಹನ್ನೆರಡು ಕೋಟಿ ಮುಸ್ಲಿಮರಿದ್ದೀರಿ ನೀವು. ನೀವು, ಬಿಜೆಪಿ ಪಕ್ಷಕ್ಕೆ ಮತ ನೀಡಿ, ಎನ್‌ಡಿಎ ಸರ್ಕಾರವನ್ನು ಪುನಃ ಸ್ಥಾಪಿಸಲು ಅವಕಾಶ ನೀಡಿದರೆ ನಿಮ್ಮ ಪೈಕಿ ೨ ಕೋಟಿ ಯುವಕರಿಗೆ ಉದ್ಯೋಗಗಳನ್ನು ಒದಗಿಸುತ್ತೇವೆ. ಕೂಡಲೇ ೨ ಲಕ್ಷ ಮುಸ್ಲಿಮರಿಗೆ ಉರ್ದು ಕಲಿಕೆಯ ಶಿಕ್ಷಣವಿತ್ತು, ಹೆಚ್ಚಿನ ಉರ್ದು ಶಾಲೆಗಳನ್ನು ತೆರೆದು ಅವರಿಗೆ ಕೆಲಸ ನೀಡುತ್ತೇವೆ. ನಿಮ್ಮ ಮತೀಯ ಶಿಕ್ಷಣ ನೀಡುವ ಮದ್ರಸಗಳಿಗೆ ಕೂಡಲೇ ೬೬ ಕೋಟಿ ರೂಪಾಯಿಗಳ ಧನ ಸಹಾಯ ಮಾಡುತ್ತೇವೆ' ಎಂದು ಪ್ರತಿಜ್ಞೆ ಮಾಡಿದರು. ಇದಕ್ಕಿಂತ ಕೀಳರಿಮೆಯ ತುಷ್ಟೀಕರಣವಿದೆಯೇ? ಇಂತಹ ತುಷ್ಟೀಕರಣವನ್ನು ಇಷ್ಟರವರೆಗೆ ಭಾರತದ ಯಾವ ರಾಜಕೀಯ ಪಕ್ಷವೂ ಮಾಡಿದ್ದಿಲ್ಲ. ಇದು ಸಂಘ ಪರಿವಾರದ ಸಂದರ್ಭ ಸಾಧಕತನಕ್ಕೆ ಒಂದು ದೃಷ್ಟಾಂತ.

ಕಳೆದ ಚುನಾವಣೆಯಲ್ಲಿ ಬಿಜೆಪಿ ಸೋಲಲು ಅದರ ಕೋಮುವಾದವೇ ಕಾರಣವೆಂದು ಅದರ ಮಿತ್ರಪಕ್ಷಗಳಾದ ಶಿವಸೇನೆಯ ಮುಖಂಡ ಉದಯ ಠಾಕ್ರೆ, ಟಿಡಿಪಿ ಮುಖಂಡ ಚಂದ್ರಬಾಬು ನಾಯ್ಡು ತೃಣಮೂಲ ಕಾಂಗ್ರೆಸ್ಸಿನ ನಾಯಕಿ ಮಮತಾ ಬ್ಯಾನರ್ಜಿ ಮಾತ್ರವಲ್ಲ ಬಿಜೆಪಿ ಎಂ ಪಿ ಶಹಾನವಾಝುಖಾನರು ಕೂಡಾ ಹೇಳಿದರು.

ಆದರೆ ಬಿಜೆಪಿ ಮುಖಂಡರು ಇದನ್ನು ಅಲ್ಲಗಳೆಯುತ್ತಾರೆ. ತಾ ೧.೬. ೨೦೦೪ರಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡಿದ ವಾಜಪೇಯಿಯವರು ತಮ್ಮಲ್ಲಿಯ ಅತಿರೇಖದ ಆತ್ಮವಿಶ್ವಾಸ ಮತ್ತು ಜನಸಂಪರ್ಕದ ಕೊರತೆಯೇ ತಮ್ಮ ಸೋಲಿಗೆ ಕಾರಣವೆಂದರು. ನಿಮ್ಮ ಕೋಮುವಾದ ತತ್ವದ ರಾಜಕೀಯವೇ ಇದಕ್ಕೆ ಕಾರಣವಲ್ಲವೇ ? ಎಂಬ ಸ್ಪಷ್ಟವಾದ ಪ್ರಶ್ನೆಗೆ 'ಅಲ್ಲ' ಎಂಬ ಉತ್ತರ ನೀಡಿದರು.

ಗ್ರಾಮೀಣ ಮತದಾರರಿಗೆ ಅವರ ಸಾಧನೆಗಳ ಪ್ರಕಾಶವು ತಲುಪದಿರಬಹುದು. ಆದರೆ ಮುಂಬೈ, ಪೂನಾ, ಡೆಲ್ಲಿ ನಾಗಪುರ, ಚೆನ್ನೈ, ಚಂಡೀಗಡ ಇವೇ ಮೊದಲಾದ ನಗರಗಳಲ್ಲಿಯೂ ಅವರಿಗೆ ಸೋಲಾಗಿದೆಯಲ್ಲಾ? ಆದುದರಿಂದ ಅವರ ನಿಜವಾದ ಸೋಲಿಗೆ ಅದರ ದೃಷ್ಟಿಪೂರಿತವಾದ ಕೋಮುವಾದವೇ ಕಾರಣ. ಇದರಲ್ಲಿ ಸಂದೇಹವಿಲ್ಲ. ಆದರೆ ಮುಖಂಡರು ಅದನ್ನು ಒಪ್ಪುವುದಿಲ್ಲ ಏಕೆ?

ಹಿಂದೂ ರಾಷ್ಟ್ರ ಸ್ಥಾಪನೆಯೇ (ಅಂದರೆ ಫ್ಯಾಸಿಸ್ಟ್ ಗುಣಗಳಿಂದ ಕೂಡಿದ) ಅವರ ಹಿಂದುತ್ವದ ಉದ್ದೇಶ. ಈ ಉದ್ದೇಶ ಸಾಧನೆಗೆ ಹಿಂದುತ್ವದ ಕೋಮುವಾದವೇ ನೇರವಾದ ದಾರಿ. ತಮ್ಮ ಸೋಲಿಗೆ ಕೋಮುವಾದವೇ ಕಾರಣವೆಂದು ಒಪ್ಪಿಕೊಂಡರೆ ತಮ್ಮ ಉದ್ದೇಶ ಸಾಧನೆಗಾಗಿ ಗುರುತಿಸಿರುವ ತಮ್ಮ ದಾರಿಗೆ ಕಲ್ಲು ಹಾಕಿದಂತಾಗುತ್ತದೆ ಎಂಬುದು ಅವರ ಅರಿವು.

ಆದುದರಿಂದ ಅಡ್ವಾಣಿಯವರು ಕೋಮುವಾದವು ತಮ್ಮ ಸೋಲಿಗೆ ಕಾರಣ ಎಂಬುದನ್ನು ನಿರಾಕರಿಸಿ ತಮ್ಮ ಮುಂದಿನ ಕಾರ್ಯವೆಂದರೆ ಹಿಂದುತ್ವವಾದಕ್ಕೆ ಇನ್ನಷ್ಟು ಬಲ ಹಾಗೂ ಚಾಲನೆಯನ್ನು ನೀಡಿ ತಾವು ಪುನಃ ಅಧಿಕಾರಕ್ಕೆ ಬರಲು ಯತ್ನಿಸುತ್ತೇವೆ' ಎಂದು ಹೇಳಲು ಕಾರಣ.

ವಿ.ಕೆ. ಮಲ್ಹೋತ್ರರವರು ದಲಿತ ಹಾಗೂ ಅಲ್ಪಸಂಖ್ಯಾತರು ತಮಗೆ ಮತವೀಯದೆ ತಮ್ಮನ್ನು ಸೋಲಿಸಿದರು ಎಂದರು. ಅಷ್ಟೇ ಅಲ್ಲ, ಜಾತ್ಯತೀತತೆಯಲ್ಲಿ ವಿಶ್ವಾಸವಿಟ್ಟು ಕೋಮುವಾದವನ್ನು ತೀವ್ರವಾಗಿ ವಿರೋಧಿಸಿರುವ ಕೋಟ್ಯಾನುಕೋಟಿ ಹಿಂದೂಗಳು ಕೂಡಾ ಬಿಜೆಪಿಯನ್ನು ಸೋಲಿಸಲು ಅದಕ್ಕೆ ವಿರುದ್ಧವಾಗಿ ಮತವಿತ್ತಿದ್ದಾರೆ ಎಂಬುದನ್ನು ಅವರು ಗ್ರಹಿಸಿಕೊಳ್ಳುವುದಿಲ್ಲವೇನು. ಅಲ್ಲದಿದ್ದರೆ ತಮ್ಮ (ಸತ್ಯವೆಂದು ತಿಳಿದಿದ್ದರೂ) ಭಾವನೆಯನ್ನು ರಾಷ್ಟ್ರಕ್ಕೆ ಅನಿಷ್ಟಕರವಾದ ಹಿಂದೂ ರಾಷ್ಟ್ರದ ಸ್ಥಾಪನೆಗೆ ಇದನ್ನು ಪುನಃ ದಾರಿಯಾಗಿ ಉಪಯೋಗಿಸಲು ಹೊರಟರೆ ಅವರು ಇದ್ದುದನ್ನೂ ಕಳೆದುಕೊಳ್ಳುವುದು ಖಂಡಿತ. □

ಮುಸ್ಲಿಮರು ಮತ್ತು ಕ್ರೈಸ್ತರು ನಮ್ಮ ರಾಷ್ಟ್ರದ ಎಲ್ಲಾ ಸಂಸ್ಕಾರಗಳನ್ನು ವಿಧಿವತ್ತಾಗಿ ಪಾಲಿಸಿದರೆ ಮಾತ್ರ' ಹಿಂದುಗಳಂತೆ ಸರಿಸಮನಾದ ಪೌರತ್ವವನ್ನು ಪಡೆಯಲು ಅರ್ಹರಾಗುತ್ತಾರೆ. ಇದಕ್ಕೆ ಅವರು ಸ್ಪಂಧಿಸದಿದ್ದರೆ ಅವರಿಗೆ ದ್ವಿತೀಯ ಸ್ಥಾನದ ಪೌರತ್ವವನ್ನು ಪಡೆಯಲು ಮಾತ್ರ ಅರ್ಹರಾಗುತ್ತಾರೆ ಎಂದು ಗೋಳ್ವಾಲಕರ್ ರವರು ಬರೆದ Bunch of Thoughts ಪುಸ್ತಕದಲ್ಲಿ ಹೇಳಲಾಗಿದೆ.

ಸಂವಾದ ವಿಶೇಷಾಂಕ

ಅನುಭವದ ಗಣಿಯಿಂದ

ಹಸಿವು - ಅಸ್ಪೃಶ್ಯತೆ ಮತ್ತು ಅವಮಾನ ಮನುಷ್ಯನ ಅಂತಃಶಕ್ತಿಯನ್ನು ಉಡುಗಿಸಿ ಅವನನ್ನು ನಿಸ್ತೇಜನನ್ನಾಗಿಸುವ ಸಾಮಾಜಿಕ ದುರಂತಗಳು. ಇಪ್ಪತ್ತೊಂದನೆ ಶತಮಾನದ ವೈಜ್ಞಾನಿಕ ಯುಗದಲ್ಲಿ ಕೂಡ ಭಾರತೀಯ ಸಮಾಜ ಇವುಗಳಿಂದ ಹೊರಬರಲು ಸಾಧ್ಯವಾಗಿಲ್ಲ. ಬಡತನ ಮತ್ತು ಸಾಮಾಜಿಕ ಅಸಮಾನತೆಗಳ ಕಾರಣದಿಂದಲೇ ಭಾರತದಲ್ಲಿ ಪ್ರತಿಭೆಗಳನ್ನು ಗುರುತಿಸಲೂ ಸಾಧ್ಯವಾಗುತ್ತಿಲ್ಲ.

ಹಸಿವು ದಾರುಣವಾದುದಾದರೆ, ಅಸ್ಪೃಶ್ಯತೆ ಅಮಾನವೀಯವಾದುದು. ಅಸ್ಪೃಶ್ಯರಲ್ಲದ ಕೆಲವು ಕೆಳಜಾತಿಗಳ ಅಪಮಾನ ಕೂಡ ಕಡಿಮೆಯಾದದ್ದೇನಲ್ಲ.

ನಮ್ಮ ನಡುವಿನ ಹಲವಾರು ಅಸಮಾನ್ಯ ಪ್ರತಿಭೆಗಳು, ಸಾಹಿತಿ-ಕಲಾವಿದರು- ಮೊದಲ ತಲೆಮಾರಿನ ಶಿಕ್ಷಿತರು ಇಂಥ ಅಸಮಾನತೆಗಳನ್ನು ಉಂಡು ಬೆಳೆದವರೇ ಆಗಿದ್ದಾರೆ. ಇಂಥ ನೋವುಗಳ ಅನುಭವ ಕಥಾನಕಗಳನ್ನು 'ಸಂವಾದ' ವಿಶೇಷಾಂಕಕ್ಕಾಗಿ ಆಹ್ವಾನಿಸುತ್ತದೆ. ದಯಮಾಡಿ ಒಂದು ಸಾವಿರ ಪದಗಳಿಗೆ ಮೀರದಂತೆ ನಿಮ್ಮ ಅನುಭವಗಳನ್ನು ನಮಗೆ ಬರೆದು ಕಳುಹಿಸಿ. ಭಾಷೆ-ಶೈಲಿಯ ಬಗೆಗೆ ತಲೆಕೆಡಿಸಿಕೊಳ್ಳಬೇಡಿ. ನಿಮಗೆ ಅನಿಸಿದ ಹಾಗೆ ನಿಮ್ಮದೇ ಭಾಷೆ-ಶೈಲಿ ಇರಲಿ.

ನಿಮ್ಮ ಬರಹ ನಮಗೆ ತಲುಪಬೇಕಾದ ದಿನಾಂಕ ಅಕ್ಟೋಬರ್ ೩೧, ೨೦೦೪

ವಿಳಾಸ: ಸಂಪಾದಕರು, 'ಸಂವಾದ' ಮಾಸ ಪತ್ರಿಕೆ, ೬೩, ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಮಾಗಡಿ ರಸ್ತೆ, ಬೆಂಗಳೂರು - ೫೬೦ ೦೯೧

ಕಳಚಿದ ಹೋರಾಟದ ಕೊಂಡಿ



ರಂಗಸ್ವಾಮಿ ಬೆಲ್ಲದ ಮಡು

ಅಗಲಿಕೆ

ಮಧುಗಿರಿಯ 'ಏಕಶಿಲಾಪರ್ವತ' ವಿಶ್ವ ಮಾಹಿತಿಗಾಗಿ 'ಗಿನ್ನಿಸ್ ಪುಸ್ತಕದಲ್ಲಿ ದಾಖಲೆಯಾಗಿದೆ. ಬೆಲ್ಲದ ಮಡು ರಂಗಸ್ವಾಮಿಯವರ ಹೆಸರು ಕರ್ನಾಟಕ ದಲಿತ ಹೋರಾಟದ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ.

ಅವರು ತುಮಕೂರು ಜಿಲ್ಲೆಯ ಸಾರ್ವಜನಿಕ ಬದುಕಿನಲ್ಲಿ ಚಿರಪರಿಚಿತವಾದ ವ್ಯಕ್ತಿತ್ವ. ರಂಗಸ್ವಾಮಿಯವರು ಬಹಳ ದೊಡ್ಡ ಕುಟುಂಬದ ಸದಸ್ಯರಾಗಿದ್ದರು. ಅವರ ತಂದೆ ದಿ। ದೊಡ್ಡರಂಗಯ್ಯನವರು ನನ್ನ ಅತ್ಯಂತ ಆಪ್ತವಾಗಿದ್ದರು. ಬಹಳ ಹಿಂದೆಯೇ ಗುರುಬೋಧನೆ ಸ್ವೀಕರಿಸಿದ್ದರು. ಮೂಲತಃ ಧಾರ್ಮಿಕ ವ್ಯಕ್ತಿತ್ವ ಅವರದು. ಸ್ವತಂತ್ರ ಪೂರ್ವದಲ್ಲೇ ಶಾಲಾ ಶಿಕ್ಷಕರಾಗಿದ್ದವರು. ಆ ಕಾಲದಲ್ಲಿ ಅವರು ಅನುಭವಿಸಿದ ಬಡತನದ ಬೇಗೆ, ಅನಕ್ಷರತೆ, ಅಜ್ಞಾನ, ಅಸ್ಪೃಶ್ಯತೆಯ ಅನುಭವಗಳನ್ನು ತನ್ನೆದುರು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಿದ್ದರು. ಅವರ ಅನುಭವಮೂರ್ತಿ ಎದುರು ನಾನು ಮೌನಿಯಾಗಿರುತ್ತಿದ್ದೆ. ದಲಿತ ಸಂಘರ್ಷ ಸಮಿತಿಯ ಹುಟ್ಟಿನ ಬಗೆಗೆ ಅಪಾರ ಗೌರವ, ಕುತೂಹಲ ಆಸಕ್ತಿಯುಳ್ಳವರಾಗಿದ್ದರು.

ದೊಡ್ಡ ರಂಗಯ್ಯನವರು ಶಿವನ ಪಾದ ಸೇರಿಕೊಂಡ ಬಳಿಕ ದೊಡ್ಡ ಸಂಸಾರದ ಹೊರೆ ದೊಡ್ಡ ಮಗನಾಗಿ ಹುಟ್ಟಿದ ಕಾರಣಕ್ಕೆ ರಂಗಸ್ವಾಮಿಯವರ ಹೆಗಲ ಮೇಲೆ ಬಿತ್ತು. ಆದ ಕಾರಣ ರಂಗಸ್ವಾಮಿಯವರ ಹೋರಾಟದ ಬದುಕಿಗೆ ಎರಡು ಮುಖಗಳಿವೆ. ೧. ದೊಡ್ಡ ಸಂಸಾರದ ಜಟಕಾ ಬಂಡಿಯನ್ನು ಒಂಟಿ ಎತ್ತಿನಂತೆ ಎಳೆದ ಪರಿ. ೨. ದಲಿತ ಸಂಘಟನೆ ಸೇರಿ ಅಂಬೇಡ್ಕರ್ ಹೋರಾಟದ ರಥವನ್ನು ಎಳೆದ ಪರಿ. ಈ ಎರಡೂ ರೀತಿಯ ಹೋರಾಟಗಳಲ್ಲಿ ಅತ್ಯಂತ ಎಚ್ಚರಿಕೆಯಿಂದ ತಂತಿಯ ಮೇಲೆ ನಡೆದಂತೆ ರಂಗಸ್ವಾಮಿಯವರು ನಿಭಾಯಿಸುತ್ತಿದ್ದರು. ತಮ್ಮ ತಂಗಿಯರು, ಅಕ್ಕನ ಮಕ್ಕಳು, ಜೊತೆ ಊರಿನಿಂದ ತುಮಕೂರಿಗೆ ಓದಲು ಬರುತ್ತಿದ್ದವರು, ಖಾಯಿಲೆಯಿಂದ ನರಳುತ್ತ ದೊಡ್ಡಾಸ್ಪತ್ರೆಗೆ ಸೇರಿಸಿ ಎಂದು ಬರುತ್ತಿದ್ದ ರೋಗಿಗಳು ಎಲ್ಲರನ್ನೂ ತಮ್ಮ ಎದೆಯ ಮೇಲೆ ಎಳೆದುಕೊಂಡು ಕೈಲಾದ್ದನ್ನು ಮಾಡುತ್ತಾ ಬದುಕಿದ ವ್ಯಕ್ತಿ ರಂಗಸ್ವಾಮಿಯವರು.

ತಾವು ವಾಸಿಸುತ್ತಿದ್ದ ಒಂದು ಸಣ್ಣ ಬಾಡಿಗೆ ಹೆಂಚಿನ ಮನೆಯನ್ನು ಹೆಚ್ಚು ಕಮ್ಮಿ 'ಸಮಾಜ ಕಲ್ಯಾಣ ಇಲಾಖೆಯ ಹಾಸ್ಟಲ್‌ನಂತೆ ನಡೆಸುತ್ತಿದ್ದರು. ದಲಿತ ಸಂಘರ್ಷ ಸಮಿತಿ ತುಮಕೂರು ಜಿಲ್ಲೆಯಲ್ಲಿ ಆರಂಭವಾದ ಕಾಲಕ್ಕೆ ಏ ಮನೆಯ ಕಾರ್ಯಕರ್ತರು, ರಾಜ್ಯ ನಾಯಕರು ಬಂದು ಹೋಗುವ ಮನೆಯಾಗಿತ್ತು. ನಮ್ಮ ಕಾಲೋನಿಯ ನರಸೀಯಪ್ಪನವರ ಮನೆಯನ್ನು ಮರೆಯುವಂತಿಲ್ಲ. ಒಂದು ರೀತಿಯಲ್ಲಿ ಆ ಚಿಕ್ಕಮನೆ ಜಿಲ್ಲೆಯ ದಲಿತ ಸಂಘರ್ಷ ಸಮಿತಿಯ ಸಂಪರ್ಕ ಕೇಂದ್ರವಾಗಿತ್ತು. ಹೋರಾಟದ ಮುಖವಾಣಿಯಾಗಿದ್ದ ಪಂಚಮ ಪತ್ರಿಕೆಯ ಪ್ರಸಾರಕೇಂದ್ರವೂ ಆಗಿತ್ತು. ಈ ಕೇಂದ್ರದ ಆತ್ಮೀಯ ಅಪರೂಪದ ವಿಶೇಷ ಅತಿಥಿಯಾಗಿದ್ದನ್ನು ನಾನು ಮರೆಯಲಾರೆ. ದಲಿತ ಚಳವಳಿಯ ಜಿಲ್ಲಾ ಸಂಪರ್ಕ ಕೇಂದ್ರದ ಪಿತೃಸ್ಥಾನದಲ್ಲಿದ್ದ ರಂಗಸ್ವಾಮಿಯವರಿಗೆ ಎದುರಾಗುತ್ತಿದ್ದ ಸಮಸ್ಯೆಗಳು, ಸಂಕಟಗಳು ಅನೇಕ ಬಗೆಯವು. ಅವರು ಆ ಕ್ಷಣದಲ್ಲೇ ಸಂಕಟದ ನಡುವೆ ನಿಂತು ನಿಭಾಯಿಸುತ್ತ ಕಂಡುಕೊಳ್ಳುತ್ತಿದ್ದ ಮಾರ್ಗೋಪಾಯಗಳು ವಿಚಿತ್ರವಾಗಿದ್ದವು.

ಒಳಗಿನ ರಣರಂಗ ಹೊರಗಿನ ಶೃಂಗಾರ

ರಂಗಸ್ವಾಮಿಯವರು ಸದಾ ಉರಿಯುವ ಜ್ಯೋತಿಯಂತಿದ್ದರು. ತನ್ನ ಬಾಲ್ಯದ ಅಸ್ಪೃಶ್ಯತೆಯ ಅನುಭವದ ನೋವು, ತನ್ನ ಜನಾಂಗದವರು ಪಟ್ಟ ಪಾಡು, ಪರಿಹಾರ ಕಾಣದೆ ದಿಕ್ಕೆಟ್ಟು ಕೂತ ಘಳಿಗೆಗಳನ್ನು ನೆನೆದು ಪರಿತಪಿಸುತ್ತಿದ್ದರು. ತನ್ನೆದುರಿಗಿನ ಅನ್ಯಾಯವನ್ನು ಕಂಡು ಒಳಗೆ ಉರಿಯುತ್ತಿದ್ದರು. ಅದನ್ನೇ ಹೊರಗೆಡುವುತ್ತಿದ್ದರು. ಅದಕ್ಕಾಗಿ ಕೆಲವೊಮ್ಮೆ ಅತ್ಯಂತ ಕೋಪದಿಂದ ವರ್ತಿಸುತ್ತಿದ್ದರು. ಅವರ ಕೋಪದಲ್ಲಿ ಎದುರಿಗಿನ ಅನ್ಯಾಯಗಳ ವಿರುದ್ಧ ಸಿಡಿಯುವ ಆಕ್ರೋಶವಿತ್ತು. ಆದರೆ ದ್ವೇಷ, ಅಸೂಯೆ ಇರಲಿಲ್ಲ. ಇದೊಂದು ರೀತಿಯಲ್ಲಿ ಒಬ್ಬ ಹೋರಾಟಗಾರ ಹೊರಗಿನ ಸಮಾಜದ ಶೃಂಗಾರವನ್ನು ಬಯಸಿ, ತನ್ನೊಳಗೆ ನಡೆಸುವ ರಣರಂಗದಂತೆ ಕಾಣುತ್ತದೆ.

ಒಂದು ಸಾರಿ ಅವರನ್ನು ನೋಡಬೇಕೆಂದು ಪ್ರಾತಃಕಾಲದಲ್ಲೇ ಹೋಗಿದ್ದೆ. ಸುತ್ತಲೂ ಐದಾರು ಹುಡುಗರು ಮುತ್ತಿಗೆ ಹಾಕಿದ್ದರು. ಮಧ್ಯದಲ್ಲಿ ರಂಗಸ್ವಾಮಿಯವರು 'ನಡುರಂಗ ಜ್ಯೋತಿ'ಯಂತೆ, 'ಪಂಚಮ' ಸಂಚಿಕೆಗಳು, ಕರಪತ್ರಗಳು, ಅರ್ಜಿಗಳನ್ನು ರಾಶಿ ಹಾಕಿಕೊಂಡು ಕಿವಿಗೆ ಪೆನ್ ಸಿಕ್ಕಿಸಿಕೊಂಡು ಕುಂತಿದ್ದರು. ಪತ್ರಿಕೆಗಳಿಗೆ ವಿಳಾಸ ಬರೆದು ಸ್ಟಾಂಪ್ ಅಂಟಿಸಿ ಪೋಸ್ಟ್ ಮಾಡುವ ಕೆಲಸದಲ್ಲಿ ನಿರತರಾಗಿದ್ದರು. ಸುತ್ತಲೂ ಕುಂತಿದ್ದ ಜೀವಿಗಳ ಪೈಕಿ ಒಬ್ಬ ಪುಸ್ತಕ, ಪೆನ್ನು, ಬಟ್ಟೆಗಾಗಿ ಡಿಮ್ಯಾಂಡ್ ಮಾಡುತ್ತಿದ್ದರೆ, ಇನ್ನೊಬ್ಬ ಬಸ್‌ಚಾರ್ಜಿಗೆ ದುಡ್ಡು ಬೇಕು ಅಂತ ಹಠ ಹಿಡಿದಿದ್ದನು. ಮತ್ತೊಬ್ಬಳು ಲೇಡೀಸ್ ಹಾಸ್ಟಲ್‌ನಲ್ಲಿ ಸೀಟ್ ಸಿಕ್ಕಿಲ್ಲ, ಸೀಟು ಕೊಡಿಸು ಅಂತ ಕುಂತಿದ್ಲು. ಇದೆಲ್ಲದರ ನಡುವೆ ಒಂದು ಗೊರಗುಟ್ಟುವ ಧ್ವನಿ 'ನಿನ್ನೆಯಿಂದ ಆಸ್ಪತ್ರೆಗೆ ಹೋಗಿ ಹೋಗಿ ಬತ್ತಾ ಇದ್ದೀನಿ ಅಪ್ಪಯ್ಯಾ, ಡಾಕ್ಟರ್ ಸಿಕ್ತಾ ಇಲ್ಲ, ನೀನು ಒಂದು ತಡ ಬಂದು ಡಾಕ್ಟರ್ನ ಹುಡುಕು ಅನ್ನುತ್ತಿತ್ತು. ಹಳ್ಳಿಯಿಂದ ಬಂದಿದ್ದ ಕೆಲವರು ಇನ್ನು ಚಾಪೆಮೇಲೆ ಬಿದ್ಕಂಡು ರಂಗ ಶಾಮಣ್ಣ ಇವತ್ತು ಎಲ್ಲೂ ಹೋಗಬ್ಯಾಡಪ್ಪ ಎಸ್.ಪಿ. ನೋಡ್ಲೇಬೇಕು, 'ನಮ್ಮೂರ್ನಲ್ಲಿ ಕಾಫಿ, ಟೀ ಪುಡಿ, ಬೆಂಕಿ ಪೊಟ್ನ ಏನೂ ಕೊಡ್ತಾ ಇಲ್ಲ ಅಂಗಡಿ ಎಲ್ಲಾ ಮುಚ್ಚಿ ಅವರಿಗೆ ಬೇಕಾದವರಿಗೆ ಮಾತ್ರ ಕೊಡ್ತಾ ಅವ್ರೆ' ಎಂದು ಸಾಮಾಜಿಕ ಬಹಿಷ್ಕಾರ ವಿಧಿಸುವ ಬಗ್ಗೆ ವ್ಯಾಖ್ಯಾನಿಸುತ್ತಿದ್ದರು. ಇದೆಲ್ಲವನ್ನೂ ಗಂಭೀರವಾಗಿ ಆಲಿಸುತ್ತಲೇ 'ಪಂಚಮ' ಪತ್ರಿಕೆಗೆ ವಿಳಾಸ ಬರೆದು ಮಡುಚುವ ಕೆಲಸದಲ್ಲಿ ಮಗ್ನರಾಗಿದ್ದವರು, 'ನನ್ನ ಕಡೆ ತಿರುಗಿದರು. ನಾನು ಅವರ ಕೆಲಸದಲ್ಲಿ ಭಾಗಿಯಾಗದೆ ಇರಲು ಸಾಧ್ಯವೇ?

ರಂಗಸ್ವಾಮಿಯವರ ಪರಿನಿರ್ವಾಣ ಕಾರ್ಯಕ್ರಮ ಅವರ ಸ್ವಗ್ರಾಮವಾದ ಬೆಲ್ಲದಮಡುವಿನ ಪಿತ್ರಾರ್ಜಿತ ಜಮೀನಿನಲ್ಲಿ ನಡೆಯಿತು. ರಾಜ್ಯದ ನಾನಾ ಮೂಲೆಗಳಿಂದ ದಲಿತ ಮುಖಂಡರು, ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಪಾರ್ಥೀವ ಶರೀರವನ್ನು ಬಹುಜನರ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಹೆಣವನ್ನು ಗುಂಡಿಯ ಪಕ್ಕದಲ್ಲಿ ಮಲಗಿಸಿದರು. ಎಲ್ಲರೂ ಅಂತಿಮ ನಮನ ಸಲ್ಲಿಸಿದರು. ಸಾವಿನ ಸುತ್ತ ಹರಿದಾಡುವ ಕಣ್ಣೀರಿನ ದುಃಖವನ್ನು ಯಾರೂ ತಡೆಯಲಾಗಲಿಲ್ಲ.

❍ ಕೆ.ಬಿ. ಸಿದ್ದಯ್ಯ



'ಸಂವಾದ' ದೊರೆಯುವ ಸ್ಥಳ

☞ ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
❖ ಎಂಜಿಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧, ☎ : ೨೨೨೦೩೫೮೦
❖ ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೧೩೫೮೨ ❖ ಸ್ಟೇಷನ್ ರಸ್ತೆ, ಗುಲ್ಬರ್ಗ-೨, ☎ : ೪೨೪೩೦೨
❖ ಕೆ.ಎಸ್.ರಾವ್ ರಸ್ತೆ, ಮಂಗಳೂರು-೧, ☎ : ೨೪೪೧೦೦೧೬ ❖ ರಾಮಸ್ವಾಮಿ ವೃತ್ತ, ಮೈಸೂರು-೨೪, ☎ : ೨೪೨೪೮೯೪
☞ ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು - ೫೬೦ ೦೨೦
☞ ಕೆಎಸ್‌ಆರ್‌ಟಿಸಿ ಬುಕ್ ಸ್ಟಾಲ್, ಪ್ಲಾಟ್ ಫಾರಮ್ ನಂ. ೧, ಸ್ಟಾಲ್ ನಂ. ೬, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು





ಬೆಂಗಳೂರೆಂಬ ಮೈ ಮಾರಾಟದ ಸಂತೆ

ಒಳಸುಳಿ

ವೇಶ್ಯಾವೃತ್ತಿಯನ್ನು ಕಾನೂನು ಬದ್ಧಗೊಳಿಸಿದರೆ ಸಮಸ್ಯೆ ಪರಿಹಾರವಾಗದೆ? ಆದರೆ ಒಂದು ಪ್ರಶ್ನೆ, ಅದೆಷ್ಟು ಮಂದಿ ಹೆಣ್ಣು ಮಕ್ಕಳು ಬಹಿರಂಗವಾಗಿ ಮುಂದೆ ಬಂದು ತಾವು ವೇಶ್ಯಾವೃತ್ತಿ ಮಾಡುವುದನ್ನು ಒಪ್ಪಿಕೊಳ್ಳುತ್ತಾರೆ? ಅದರಲ್ಲಿಯೂ ವೇಶ್ಯೆಯರನ್ನು ಸರಬರಾಜು ಮಾಡುವ ದಲ್ಲಾಳಿಗಳಾಗಲಿ, ಗೂಂಡಾಗಳಾಗಲಿ ಅಂತಹ ಹೆಣ್ಣುಮಕ್ಕಳನ್ನು ಸುಲಭವಾಗಿ ಹೊರಗೆ ಬಿಟ್ಟಾರೆಯೇ? ವೇಶ್ಯಾವೃತ್ತಿಯ ಬಗ್ಗೆ ಯಾವುದೇ ರೀತಿಯ double standard ಇಲ್ಲದೇ ಯೋಚಿಸಬೇಕಾದ ಅನಿವಾರ್ಯ ಸ್ಥಿತಿ ನಮ್ಮೆದುರಿಗಿದೆ. ಆದರೂ ಈ ಸಮಸ್ಯೆಯ ಬಗ್ಗೆ ಮುಖಾ ಮುಖಿಯಾಗುವ ಧೈರ್ಯ ನಮ್ಮಲ್ಲಿಲ್ಲ. ಬೆಂಗಳೂರಿನಂತಹ ನಗರ ತನ್ನ ಹೊಟ್ಟೆಯಲ್ಲಿ ಎಲ್ಲ ರೀತಿಯ ಬದುಕನ್ನು ಬಚ್ಚಿಟ್ಟುಕೊಂಡಿದೆ.

○ ಸುಜಾತ ಕುಮಟಾ

ಬೆಂಗಳೂರೆಂಬ ಈ ಮಾಯಾನಗರಿಯನ್ನು ಹಿಂದೆ ಕಾರ್ಯಕ್ರಮವೊಂದನ್ನು ನೀಡಲು ಬಂದಿದ್ದ ಜಾನಪದ ಕಲಾವಿದೆ ದಿ. ಫಕೀರಮ್ಮ ಗುಡಿಸಾಗರ ಅವರು ಕುಣಿಯುವ ನವಿಲಿಗೆ ಹೋಲಿಸಿದ್ದರು. ಹಾಗೆಯೆ ಈ ನವಿಲು 'ನನ್ನ ಎದ್ಯಾಗ ನರ್ತನ ಮಾಡಾಕ ಶುರು ಹಚ್ತೈತಿ' ಅಂದಿದ್ದರು. ಅಂತಹ ಸಾಂಸ್ಕೃತಿಕ ನಗರ ಇಂದು ತೀವ್ರರೀತಿಯ ನಗರೀಕರಣದ ಒತ್ತಡಗಳಿಗೆ ಸಿಲುಕಿದೆ. ಇಲ್ಲಿ ಎಲ್ಲವೂ 'Instant' ಸಂಬಂಧ, ಕೆಲಸ, ಆಹಾರ ಪದ್ಧತಿ ಎಲ್ಲಾ. ಮನುಷ್ಯ ತನ್ನ ಒಳಬದುಕಿನ ಸೌಂದರ್ಯಕ್ಕಿಂತ ಹೊರಬದುಕಿನ ಆಕರ್ಷಣೆಗೆ ಹೆಚ್ಚು ಪ್ರಾಧಾನ್ಯ ನೀಡುತ್ತಿದ್ದಾನೆ. 'ಬದುಕು, ಬದುಕಲು ಬಿಡು' ಎನ್ನುವ ಮಾತೇ ಇಲ್ಲ. ನಾನೊಬ್ಬ ಬದುಕಿದರಾಯ್ತು, ಬೇರೆಯವರು ಏನಾದರೇನು? ಅನ್ನುವ ಮನೋಭಾವ.

ಜಾಗತೀಕರಣ ಕೆಲವೇ ಮಂದಿ ಉಳ್ಳವರಿಗೆ ಎಲ್ಲಾ ಅವಕಾಶಗಳನ್ನು ಧಾರೆಯೆರೆಯಿತು. ಜಾಗತೀಕರಣದಿಂದ ಧರೆಗೆ ಸ್ವರ್ಗವೆ ಬರುತ್ತದೆ ಎಂಬ ಹುಚ್ಚು ಭ್ರಮೆಯನ್ನು ಸೃಷ್ಟಿಸಿ, ಖಾಸಗೀಕರಣದ ಭೂತ ನಮ್ಮ ಇಡೀ ವ್ಯವಸ್ಥೆಯನ್ನು ಆಕ್ರಮಿಸಿತು. ಮೀಸಲಾತಿ ಮಾಯವಾಗಿ ಸಾಮಾಜಿಕ ನ್ಯಾಯ ಕನಸಿನ ಗಂಟಾಗಿ ಮಾತ್ರ ಉಳಿಯಿತು. ಹಳ್ಳಿ ಹಾಗೂ ನಗರ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆ ರಾಕ್ಷಸಾವತಾರ ಪಡೆಯುತ್ತಿದೆ. ಹಸಿವಿನ ಆಕ್ರಂದನ ಯಾರಿಗೂ ಕೇಳದು. ಬಡತನದ ಬೇಗೆಯಿಂದ ಅದೆಷ್ಟೋ ಕುಟುಂಬಗಳು ನೇಣಿಗೆ ಶರಣಾಗಿವೆ.

ಆದರೂ ಕೆಲವರು ಬದುಕನ್ನು ಅರಸಿ ಈ ಬೆಂಗಳೂರೆಂಬ ಮಹಾನಗರಿಗೆ ಕಾಲಿಡುತ್ತಾರೆ. ಈ ಸುಂದರಿ ತನ್ನ ಬಾಹುಗಳನ್ನು ಚಾಚಿ ಬರುವವರನ್ನೆಲ್ಲಾ ತನ್ನ ತೆಕ್ಕೆಯಲ್ಲಿಟ್ಟುಕೊಳ್ಳುತ್ತಾಳೆ. ಹೀಗೆ ಇಲ್ಲಿಗೆ ಬರುವ ಅನೇಕ ಜನ ಹೆಣ್ಣುಮಕ್ಕಳೂ ತಮ್ಮ ಬದುಕಿಗಾಗಿ ಹೋರಾಟ ನಡೆಸುತ್ತಿದ್ದಾರೆ.

ಹೀಗೆ ಬದುಕನ್ನು ಅರಸುವ ಮಾರ್ಗಗಳಲ್ಲಿ ಬೆಂಗಳೂರಿನ ಲೈವ್ ಬ್ಯಾಂಡ್‌ಗಳೂ ಒಂದು. ಹಣವಿರುವವರಿಗೆ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುವ ಒಂದು ಅಡ್ಡೆ ಈ ಲೈವ್‌ಬ್ಯಾಂಡ್‌ಗಳು. ಹದಿವಯಸ್ಸಿನ ಹರಯದವರು ಕುಡಿಯುವ ಸಮಯದಲ್ಲಿ ಲೈವ್ ಬ್ಯಾಂಡ್ ಗಾಯಕಿಯರ ಹಾಡು ಕೇಳಿ ತಲೆದೂಗುವ ದೃಶ್ಯ ಲೈವ್‌ಬ್ಯಾಂಡಿನ ಹೊರನೋಟವಾದರೆ ಈ ರೀತಿಯ ಲೈವ್‌ಬ್ಯಾಂಡ್‌ಗಳ ಗರ್ಭದೊಳಗೆ ದೇಶದ ವಿವಿಧ ಭಾಗದಿಂದ ಬಂದಂತಹ ಹೆಣ್ಣುಮಕ್ಕಳನ್ನು ಶ್ರೀಮಂತರ ಲೈಂಗಿಕ ತೃಷೆ ತೀರಿಸಲು ಬಳಸಿಕೊಳ್ಳಲಾಗುತ್ತಿದೆ. ಇದೆಲ್ಲ ಒಂದು ವ್ಯವಸ್ಥಿತ ಜಾಲವಾಗಿ ಬೆಂಗಳೂರಿನಲ್ಲಿ ತಮ್ಮ ಕಾರ್ಯನಿರ್ವಹಣೆ ಮಾಡುತ್ತಿವೆ. ಇಷ್ಟೂ ಸಾಲದೆಂಬಂತೆ 'ಹಮಾಮ್'ಗಳ ಹೆಸರಿನಲ್ಲಿ ಲೈಂಗಿಕ ಚಟುವಟಿಕೆಯನ್ನು ನಡೆಸುತ್ತಿರುವ ಹಿಜ್ರಾಗಳೂ ಕೂಡ ತಮ್ಮ ಬದುಕಿನ ನಿರ್ವಹಣೆಗೆ ಮೈಮಾರಿಕೊಳ್ಳುವುದು ಅನಿವಾರ್ಯ ಎಂದು ಪ್ರತಿಪಾದಿಸುತ್ತಾರೆ. ಹಿಜ್ರಾ ರಜನಿಯ ಪ್ರಕಾರ ನಾಗರಿಕ ಸಮಾಜದಲ್ಲಿ ಹಿಜ್ರಾಗಳಿಗೆ ತಮ್ಮದೇ ಆದ ಸೂಕ್ತ ಸ್ಥಾನಮಾನವಿಲ್ಲ. ಬಾಡಿಗೆ ಮನೆಯಾಗಲಿ, ದುಡಿಯುವ ಕೈಗೆ ಕೆಲಸವಾಗಲಿ ಸಿಗುವುದು ಕನಸಿನ ಮಾತು. ಇಂತಹ ಸಂದರ್ಭದಲ್ಲಿ ಜೀವನ ನಿರ್ವಹಣೆಗೆ ಮೈ ಮಾರಾಟ ಅನಿವಾರ್ಯ.

ಈ ರೀತಿಯ ಕೆಲಸದಲ್ಲಿ ತೊಡಗಿರುವ ಹಿಜ್ರಾಗಳಿಗೆ ಗೂಂಡಾಗಳಿಂದ ಹಾಗೂ ಪೊಲೀಸರಿಂದ ನಿರಂತರವಾದ ದೈಹಿಕ ಹಾಗೂ ಮಾನಸಿಕ ಕಿರುಕುಳಗಳು ನಡೆಯುತ್ತಲೇ ಇರುತ್ತದೆ. ರಕ್ಷಿಸಬೇಕಾದವರೆ ಶಿಕ್ಷಿಸುವಂತಹ ಪರಿಸ್ಥಿತಿಯ ಮಧ್ಯದಲ್ಲಿಯೆ ತಮ್ಮವರದೇ ಆದ ಗುಂಪು ಕಟ್ಟಿಕೊಂಡು ಪರಸ್ಪರ ನೋವು-ನಲಿವುಗಳನ್ನು ಹಂಚಿಕೊಳ್ಳುತ್ತಾ ಬದುಕುತ್ತಿರುವ ಹಿಜ್ರಾಗಳೂ ತಾವೂ ಸಾಮಾನ್ಯ ಹೆಂಗಸರಿಗಿಂತ ಕಡಿಮೆಯಿಲ್ಲದವರಂತೆ ವಸ್ತ್ರ ವೇಶ-ಭೂಷಣಗಳನ್ನು ಮಾಡಿಕೊಂಡು ಸಂಜೆ ಸೂರ್ಯ ಮುಳುಗುವ ಹೊತ್ತಲ್ಲಿ ಮಲ್ಲಿಗೆ ಮುಡಿದು, ಕೈಬಳೆಯನ್ನು ಘಲ್ ಘಲ್ ಎನಿಸುತ್ತಾ ನಗರದ ಪ್ರತಿಷ್ಠಿತ ವೃತ್ತಗಳ ಬಳಿ ಮುಗುಳುನಗೆ, ಕಣ್ಣಮಿಂಚಲ್ಲಿ ಗಿರಾಕಿಗಳಿಗೆ ಮೋಡಿಮಾಡುತ್ತಿರುತ್ತಾರೆ. ಇಂತಹವರನ್ನು ಹಿಡಿದು ತಮ್ಮ ಸಂಜೆ ಖರ್ಚಿಗೆ ದಾರಿಮಾಡಿಕೊಳ್ಳಲೋ ಅಥವಾ ಇನ್‌ಸ್ಪೆಕ್ಟರ್‌ರವರ ಆದೇಶದ ಮೇರೆಗೆ 'ಎಸ್‌ಟಿಪಿ' ಕೇಸ್‌ಗಳ ತಲಾಶ್‌ನಲ್ಲಿ ಕಾನ್‌ಸ್ಟೇಬಲ್‌ಗಳು ಹೊರಡುತ್ತಾರೆ. ಕೆಲವೊಮ್ಮೆ ಪೊಲೀಸರ ಕೈಗೆ ಸಿಕ್ಕವರು ಸ್ಟೇಶನ್‌ವರೆಗೆ ಹೋದರೆ ಮತ್ತೆ ಕೆಲವರು ತಮ್ಮ ಬಳಿಯಿರುವ

ಪುಡಿಕಾಸನ್ನೇ ಅವರಿಗೆ ನೀಡಿ ಕೈ ಕಾಲಿಗೆ ಬಿದ್ದು ಅಲ್ಲಿಂದ ಓಡುತ್ತಾರೆ.

ಲೈವ್ ಬ್ಯಾಂಡಿನ ಗಾಯಕಿಯರ ಜೀವನವೂ ಒಂದು ರೀತಿ ಕತ್ತಿ ಅಲುಗಿನ ಮೇಲಿನ ನಡಿಗೆ. ರಾತ್ರಿ ಬ್ಯಾಂಡ್ ಮುಗಿದ ಮೇಲೆ ತಾವು ಸುರಕ್ಷಿತವಾಗಿ ತಮ್ಮ ಗೂಡನ್ನು ಸೇರಲು ಪ್ರತಿನಿತ್ಯ ಕಷ್ಟ ಪಡಬೇಕಾದ ಸ್ಥಿತಿ. ಇಲ್ಲಿ ಕೆಲವು ಗಾಯಕಿಯರು ಮದುವೆಯಾಗಿ ಸಂಸಾರ ನಡೆಸುತ್ತಾರೆ. ಅವರಿಗೆ ತಮ್ಮ ಗಾಯನದ ಮೂಲಕ ಬದುಕನ್ನು ನಿರ್ವಹಣೆ ಮಾಡುವ ಅನಿವಾರ್ಯತೆ. ಆದರೆ ಬ್ಯಾಂಡ್‌ಗೆ ಬರುವ ಕೆಲವು ಕಾಮುಕ ಕಣ್ಣುಗಳು ಎಷ್ಟೋ ಬಾರಿ ಇಂತಹ ಅಮಾಯಕರನ್ನು ತಮ್ಮ ತೀಟೆಗೆ ಬಳಸಿಕೊಳ್ಳಲು ಯತ್ನಿಸುತ್ತಾರೆ. ತಮ್ಮ ಪ್ರಯತ್ನದಲ್ಲಿ ಸೋಲುವ ಸಂದರ್ಭ ಬಂದರೆ ಅವರನ್ನು ಕಿಡ್ನಾಪ್ ಮಾಡಿರುವಂತಹ ಅನೇಕ ಘಟನೆಗಳೂ ಪತ್ರಿಕೆಯಲ್ಲಿ ವರದಿಯಾಗಿದೆ.

ಜೊತೆಗೆ ಹೆಚ್ಚುತ್ತಿರುವ ಅತ್ಯಾಚಾರದ ಘಟನೆಗಳು, ಹೆಣ್ಣುಮಕ್ಕಳ ಬದುಕಿಗೆ ಬೆಲೆಯಿಲ್ಲದಂತಹ ಸ್ಥಿತಿ, ಎಳೆಯ ಮಕ್ಕಳನ್ನು ಸಾಕಷ್ಟು ಜೋಪಾನವಾಗಿ ಸಾಕಬೇಕಾದ ಅನಿವಾರ್ಯತೆ, ಕಣ್ಕಾಪಿನೀಚೆ ಸ್ವಲ್ಪ ಮರೆಯಾದರೂ ಪಶುಗಳಂತೆ ಎಳೆ ಮಕ್ಕಳನ್ನು ತಮ್ಮ ತೃಷೆಗೆ ಬಳಸಿಕೊಳ್ಳುವ ಕಾಮುಕರ ಹಾವಳಿ.

ಬೆಂಗಳೂರಿನ ಸಾಂಪ್ರದಾಯಿಕ ಮೌಲ್ಯಗಳೆಲ್ಲ ಎಲ್ಲಿ ಹೋದವು? ಗೃಹಿಣಿಯೊಬ್ಬಳು ತನ್ನ ಮನೆಯ ಖರ್ಚಿನ ನಿರ್ವಹಣೆಗಾಗಿ ಗಂಡ ಕೆಲಸಕ್ಕೆ ಹೋದ ಸ್ವಲ್ಪ ಹೊತ್ತಿನಲ್ಲಿಯೆ ಮನೆಬಿಟ್ಟು ತಾನೇ ಒಪ್ಪಂದ ಮಾಡಿಕೊಂಡಿರುವ ಒಂದು ಮನೆಗೆ ಹೋಗಿ ಅಲ್ಲಿ ಬರುವ ಗಿರಾಕಿಯ ಬಯಕೆ ತೀರಿಸಿ ಆ ಮನೆಯವರಿಗಿಷ್ಟು ತನಗಿಷ್ಟು ಹಣ ಸಂಪಾದಿಸುತ್ತಾಳೆ. ಮತ್ತೆ ಕೆಲವು ಶ್ರೀಮಂತರು ಶೋಕಿ ಜೀವನಕ್ಕಾಗಿ ದೊಡ್ಡ ದೊಡ್ಡ ಹೈಟೆಕ್ ಬಂಗಲೆಗಳಲ್ಲಿ ಎಲ್ಲ ರೀತಿಯ ಅತ್ಯಾಧುನಿಕ ವ್ಯವಸ್ಥೆಯಲ್ಲಿ ಈ ರೀತಿಯ ದಂಧೆ ನಡೆಸುತ್ತಾರೆ.

ಬಡತನದ ಬೇಗೆಯಿಂದ ಬೆಂಗಳೂರಿಗೆ ಬರುವ ಕೆಲವು ಹೆಣ್ಣುಮಕ್ಕಳೂ ನಗರದ ರಂಗಿನ ಬದುಕಿನತ್ತ ಆಕರ್ಷಿತರಾಗಿ ತಮಗೆ ಅರಿವಿಲ್ಲದಂತೆ ಈ ಕೂಪದಲ್ಲಿ ಸಿಕ್ಕಿ ಬೀಳುತ್ತಾರೆ. ಇದೊಂದು ನಿತ್ಯ ನಿರಂತರವಾದ ಸಂಗತಿಯೆ ಆಗಿದೆ. ಸಿಗ್ನಲ್ ದೀಪದ ಬಳಿ ಕೊಳಕು ಬಟ್ಟೆ ಧರಿಸಿ ಭಿಕ್ಷೆ ಬೇಡುತ್ತಿದ್ದ ಹದಿಮೂರು ವರ್ಷದ ಹುಡುಗಿ ಕೆಲವೇ ದಿನಗಳಲ್ಲಿ ಗರ್ಭಿಣಿಯಾಗಿರುತ್ತಾಳೆ. ಆ ಮಗುವಿನ ಕೈಗೆ ಮತ್ತೊಂದು ಮಗು ಬಂದಿರುತ್ತದೆ. ಮಹಾತ್ಮಗಾಂಧಿರಸ್ತೆಯ ಆಧುನಿಕ ಹಾಗೂ ರಂಗಿನ ಯುವಕ ಯುವತಿಯರ ನಡುವೆ ತೀಟೆಗೆ ಹುಟ್ಟಿದ ನೂರಾರು ಬೀದಿಮಕ್ಕಳು ತಮ್ಮ ತಾಯಿ-ತಂದೆ ಯಾರೆಂದು ತಿಳಿಯದಿದ್ದರೂ ಆ ಸಂಜೆಯ ಹಸಿವಿಗೆ ನಿಮ್ಮ ಕೈಕಾಲು ಹಿಡಿದು ಭಿಕ್ಷೆಗಾಗಿ ಪೀಡಿಸುತ್ತವೆ. ನಾಳೆಯಿಲ್ಲದ ಕಣ್ಣುಗಳಲ್ಲಿ ಶೂನ್ಯವೆ ತುಂಬಿರುತ್ತದೆ.

ಅಪ್ಪಿ ತಪ್ಪಿ ಒಂಟಿಯಾಗಿ ನಿಂತು ಸಂಜೆವೇಳೆಯಲ್ಲಿ ಬಸ್‌ಗಾಗಿ ಕಾಯುತ್ತಿದ್ದರೆ ಯಾವುದೋ ಕಾರು ಪರಿಚಿತ ನಗೆ ಬೀರುತ್ತದೆ. ನೀವೇನಾದರು ಅಪ್ಪಿತಪ್ಪಿ ಹಲ್ಲು ಬಿಟ್ಟರೆ ತಕ್ಷಣವೇ ಕಾರಿನ ಬಾಗಿಲು ತೆರೆಯಲು ಆರಂಭವಾಗುತ್ತದೆ. ಈ ತೀಟೆ ಸುಬ್ಬರಿಗೆ ಕಣ್ಣಿಗೆ ಬೀಳುವ ಎಲ್ಲಾ ಹೆಣ್ಣುಗಳೂ ತಮ್ಮ ಹಾಸಿಗೆಗೆ ಸಿಗಬಹುದೆಂಬ ಅನಿಸಿಕೆ. ಆಧುನಿಕ ಬದುಕಿನ ಭರಾಟೆಯಲ್ಲಿ ಗಂಡು-ಹೆಣ್ಣಿನ ನಡುವೆಯಿರಬೇಕಾದ ಸ್ನೇಹ ಪ್ರೀತಿಗಳು Time Pass ಗಳಾಗಿ ಡೇಟಿಂಗ್ ನಂತಹ ವಿಷಯಗಳು take it easy policy ಗಳು ನಮ್ಮ ಬದುಕಿನ ಮೌಲ್ಯಗಳು

ಆಕೆ ಒಬ್ಬ ಲೈಂಗಿಕ ಕಾರ್ಯಕರ್ತೆ, ಆ ದಿನ ಆಕೆಯನ್ನು ಒಬ್ಬ ಗಿರಾಕಿ ಕಾರಿನಲ್ಲಿ ಕರೆದುಕೊಂಡು ಹೋಗಿದ್ದಾನೆ. ಮೊದಲು ಒಬ್ಬನೇ ಇದ್ದವನು ಮಾರ್ಗ ಮಧ್ಯದಲ್ಲಿ ತನ್ನ ನಾಲ್ಕು ಜನ ಸ್ನೇಹಿತರನ್ನು ಕರೆದುಕೊಳ್ಳುತ್ತಾನೆ. ರಾತ್ರಿ ಊರಾಚೆಯಲ್ಲಿ ಆ ಎಲ್ಲರೂ ಆಕೆಯನ್ನು ಬಲವಂತವಾಗಿ ಭೋಗಿಸುತ್ತಾರೆ. ನೋವಿನಿಂದ ಆಕೆ ಕಿರುಚಿದರೂ ಆಕೆಯ ಬಾಯಯನ್ನು ಬಲವಾಗಿ ಮುಚ್ಚುತ್ತಾರೆ. ಬೆಳಗಿನ ಜಾವ ಹೆದ್ದಾರಿಯ ಯಾವುದೋ ಒಂದು ಕಡೆ ಆಕೆಯನ್ನು ಪ್ರಜ್ಞಾಹೀನ ಸ್ಥಿತಿಯಲ್ಲಿ ತಳ್ಳಿ ಬಿಡುತ್ತಾರೆ. ಆಕೆಯನ್ನು ಯಾವುದೋ ಒಂದು ಸ್ವಯಂ ಸೇವಾಸಂಸ್ಥೆ ರಕ್ಷಿಸುತ್ತದೆ. ಆಕೆಗೆ ಎರಡು ದಿನದ ನಂತರ ಪ್ರಜ್ಞೆ ಬಂದಾಗ ಆಕೆ ತನ್ನ ಕಣ್ಣೀರ ಕಥೆಯನ್ನು ಹೇಳಿಕೊಳ್ಳುತ್ತಾಳೆ. ಹೀಗೆ ಯಾವುದೇ ರಕ್ಷಣೆಯಿರದ ಇಂತಹ ಹೆಣ್ಣುಗಳು ನಿರಂತರವಾಗಿ ಭಯದ ನೆರಳಿನಲ್ಲಿಯೆ ಬದುಕುತ್ತಾರೆ. ಒಮ್ಮೆ ವೇಶ್ಯಾವೃತ್ತಿಯಲ್ಲಿದ್ದವರು ಹೊಸ ಜೀವನ ಆರಂಭಿಸಬೇಕೆಂದರೂ ಸಮಾಜ ಅವರಿಗೆ ಅವಕಾಶ ನೀಡುವುದಿಲ್ಲ.

ಕುಸಿಯುತ್ತಿವೆ. ಹಣವೊಂದಿದ್ದರೆ ಎಲ್ಲವೂ ಸರಿ ಎನ್ನುವ ಮನೋಭಾವ. ಕೆಲವು ಗಂಡು ವೇಶ್ಯೆಯರು ತಮ್ಮ ಬದುಕಿಗಾಗಿ ಮೈಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಇದನ್ನೆಲ್ಲಾ ನೋಡುತ್ತಾ ಸಹಿಸಲಾಗದೆ ಅನೇಕ ಸಂಘ ಸಂಸ್ಥೆಗಳು ಪರಿವರ್ತನೆಯ ಕೆಲಸ ಮಾಡಲು ಯತ್ನಿಸುತ್ತಿವೆ. ಆದರೆ ಗಂಭೀರವಾದ ಹಾಗೂ ವ್ಯಾಪಕವಾದ ಇಂತಹ ಸಮಸ್ಯೆಯನ್ನು ಪರಿಹರಿಸಲು ಕಾನೂನಿನಿಂದ ಸಾಧ್ಯವೆ?

ಮೊನ್ನೆ ರಾಜ್ಯಪಾಲರೊಬ್ಬರು ವೇಶ್ಯಾವೃತ್ತಿಯನ್ನು ಕಾನೂನಿನ ಚೌಕಟ್ಟಿಗೆ ತರಬೇಕೆಂದು ಹೇಳಿದರು. ಈ ಬಗ್ಗೆ ಮಾತನಾಡಲು ಆರಂಭಿಸಿದಾಗ ವಿಷಯ ಅಷ್ಟು ಸರಳವಲ್ಲ ಎನ್ನಿಸಿತು. ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಅಭಿಪ್ರಾಯದ ಪ್ರಕಾರ 'ವೇಶ್ಯಾವೃತ್ತಿಯನ್ನು ಕಾನೂನು ಬದ್ಧಗೊಳಿಸುವುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ, ಆದರೆ ಕಾನೂನುಬದ್ಧಗೊಳಿಸಿದ ನಂತರ ಆಗುವ ಅಪಾಯಕಾರಿ ಬೆಳವಣಿಗೆಗಳು (ಹಾಗೆ ನೋಡಿದರೆ ದರೋಡೆ ಮತ್ತು ಕಳ್ಳತನವನ್ನು ಕಾನೂನುಬದ್ಧಗೊಳಿಸಿದಂತಹದೆ ಇನ್ನೊಂದು ಘಟನೆ ಇದಾಗಿಬಿಡುತ್ತದೆ) ಇಲ್ಲಿ ಈ ವೃತ್ತಿಯನ್ನು ಬಳಸಿಕೊಳ್ಳುವ ಒಂದು ವರ್ಗವೇ ಸೃಷ್ಟಿಯಾಗಿ ಹೆಣ್ಣುಮಕ್ಕಳ ಶೋಷಣೆಯನ್ನು ರಾಜಾರೋಷವಾಗಿ ಮಾಡುವ ಮನಃಪ್ರವೃತ್ತಿ ಬೆಳೆಯುವ ಸಾಧ್ಯತೆಗಳೂ ನಿರ್ಮಾಣವಾಗುತ್ತದೆ. ಆದ್ದರಿಂದ ವೇಶ್ಯಾವೃತ್ತಿಯನ್ನು ಕಾನೂನು ಬದ್ಧಗೊಳಿಸುವ ಮೊದಲು ಅದರ ಸಾಧಕ ಹಾಗೂ ಬಾಧಕಗಳ ಬಗ್ಗೆ ಸಾಕಷ್ಟು ಸೂಕ್ಷ್ಮವಾಗಿ ಅಧ್ಯಯನ ನಡೆಸಬೇಕಾಗಿದೆ. ಇಲ್ಲದಿದ್ದರೆ ಕಾನೂನಿನ ದುರುಪಯೋಗವಾಗುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದಂತಾಗುತ್ತದೆ.

ಆದರೆ ಸ್ವಯಂ ಸಂಸ್ಥೆಯ ಸುಧಾ ಹೇಳುವಂತೆ 'ಬೆಂಗಳೂರಿನಲ್ಲಿ ಏಡ್ಸ್ ಇನ್ನಿಲ್ಲದಂತೆ ಹೆಚ್ಚಾಗುತ್ತಿದೆ. ಇದರ ಬಗ್ಗೆ ಅನೇಕರು ಎಚ್ಚರಿಕೆ ವಹಿಸುತ್ತಿಲ್ಲ. ವೇಶ್ಯಾವಾಟಿಕೆಯಲ್ಲಿ ತೊಡಗಿರುವ ಬಡಹೆಣ್ಣು ಮಕ್ಕಳ ಸಾಮಾಜಿಕ ಸ್ಥಿತಿ ಅತ್ಯಂತ ಕೆಳಮಟ್ಟದ್ದಾಗಿದೆ. ಅವರಿಗೆ ಅವರದೇ ಆದ ಸೂರಿಲ್ಲ, ಅವರ ಮಕ್ಕಳಿಗೆ ಭವಿಷ್ಯವೇ ಇಲ್ಲ, ಅವರ ಆಹಾರ, ಆರೋಗ್ಯದ ಬಗ್ಗೆ ಸರ್ಕಾರ ತನ್ನದೇ ಆದ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಈ ರೀತಿಯ ಲೈಂಗಿಕ ಕಾರ್ಯಕರ್ತರಿಗೆ ಕಾರ್ಡುಗಳನ್ನು ನೀಡಿ ಕೆಲವು ಸವಲತ್ತುಗಳನ್ನು ನೀಡಬೇಕು. ನಗರದ ಯಾವುದಾದರೊಂದು ಕಡೆ ವಾಸಿಸಲು ಸ್ಥಳ ನೀಡಬೇಕು. ಅಲ್ಲಿ ಕೆಲಸಮಾಡುವ ಮಹಿಳೆಯರು ಹಾಗೂ ಮಕ್ಕಳ ಹೆಸರುಗಳನ್ನು ರಿಜಿಸ್ಟರ್ ಮಾಡಿಕೊಂಡು ಅಂತಹ ಮಕ್ಕಳ ಶಾಲೆಯ ವ್ಯವಸ್ಥೆ ಸೂಕ್ತವಾಗಿದೆಯೆ ಎಂದು ಗಮನ ಹರಿಸಬೇಕು. ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಬೇಕು. ಎಲ್ಲಾ ಮೆಟ್ರೊಸಿಟಿಗಳಲ್ಲಿಯೂ ರೆಡ್‌ಲೈಟ್ ಏರಿಯಾಗಳಿವೆ. ಹಾಗೆಯೆ ಬೆಂಗಳೂರಿನಲ್ಲಿಯೂ ಇದ್ದರೆ ತಪ್ಪೇನು? ಇದರಿಂದ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಅತ್ಯಾಚಾರದ ಘಟನೆಗಳನ್ನು ತಡೆಗಟ್ಟಬಹುದು.

ವೇಶ್ಯಾವೃತ್ತಿ ಹಿಂದೊಂದು ದಿನ ಕತ್ತಲೆಯ ಗಲ್ಲಿಗಳಲ್ಲಿ ಸದ್ದುಗದ್ದಲವಿಲ್ಲದೆ ಕೆಲವೇ ಜನರ ಬದುಕಾಗಿತ್ತು. ಆ ವೃತ್ತಿ ತನ್ನೆಲ್ಲಾ ಘನತೆಯೊಂದಿಗೆ ಮೆರೆದಿತ್ತು. ಈ ವೃತ್ತಿಯಲ್ಲಿದ್ದ ಮಹಿಳೆಯರಿಗೆ ಸಮಾಜದಲ್ಲಿಯೂ ಉತ್ತಮ ಸ್ಥಾನಮಾನವಿತ್ತು. ಆದರೆ ಈಗ ? ತನ್ನ ಬಯಕೆಗಾಗಿ ಹೆಣ್ಣನ್ನು ಬಳಸಿಕೊಳ್ಳುವ ಅನೇಕರಿಗೆ ಹೆಣ್ಣಿನ ಸ್ಥಾನಮಾನದ ಬಗ್ಗೆ ಯಾವುದೇ ಗೌರವವಿರುವುದಿಲ್ಲ. ಮಹಿಳೆಯನ್ನು 'ಭೂಮಿ'ಯ ಕಲ್ಪನೆಯಲ್ಲಿ ಭೋಗಿಸುವ ಪಾಳೆಗಾರಿಕೆಯ ಮನೋವೃತ್ತಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಜಾಹೀರಾತುಗಳಲ್ಲಿ ಹೆಣ್ಣಿನ ಮೈಮಾಟವನ್ನೇ ಬಂಡವಾಳ ಮಾಡಿಕೊಳ್ಳಲಾಗುತ್ತಿದೆ. ಮಹಾನಗರಗಳು ಮೈಮಾರಾಟದ ಸಂತೆಯಾಗುತ್ತಿದೆ. ಇದೇ ಸ್ಥಿತಿ ಮುಂದುವರೆದರೆ ಸ್ತ್ರೀ ಭ್ರೂಣ ಹತ್ಯೆಯನ್ನು ಸಮರ್ಥಿಸುವ ದಿನವೂ ಎದುರಾದರೆ ಆಶ್ಚರ್ಯವಿಲ್ಲ. ಪಾಶ್ಚಾತ್ಯ ದೇಶಗಳ ಅತೀವ ಅನುಕರಣೆಯಿಂದಾಗಿ ಹದಿಹರಯದ ಮಕ್ಕಳಲ್ಲಿ ಸ್ವೇಚ್ಛಾ ಪ್ರವೃತ್ತಿ ಹೆಚ್ಚುತ್ತಿದೆ. ಧರಿಸುವ ಉಡುಪು, ಆಹಾರದ ಕ್ರಮ, ಬದುಕಿನ ರೀತಿಗಳು ಎಲ್ಲವೂ ಅಂಧಾನುಕರಣೆಯಾಗುತ್ತಿದೆ. ಬೆಂಗಳೂರೆಂಬ ಕನ್ನಡಿಗರ ಊರು, ಸಾಂಸ್ಕೃತಿಕ ರಾಜಧಾನಿಯಲ್ಲಿ ಎಲ್ಲವೂ ಸಾಧ್ಯ. ಡಿಸ್ಕೊ ತೆಕ್‌ಗಳಲ್ಲಿ ತೆಕ್ಕೆಯಲ್ಲಿ ಬೀಳುವ ಹೆಣ್ಣನ್ನು ಒಂದು ರಾತ್ರಿಗೆ ಬಳಸಿ ಮಾರನೆಯ ದಿನ ತನಗೂ ಆಕೆಗೂ ಸಂಬಂಧವೇ ಇಲ್ಲದಂತೆ ತಿರುಗುವ ಗಂಡುಗಳು ತಾವು ಮಲಗಿರುವ ಹೆಣ್ಣುಗಳ ಒಂದು ಪಟ್ಟಿಯನ್ನೇ ತಯಾರಿಸಿ ತಮ್ಮ ಸ್ನೇಹಿತರ ನಡುವೆ ಪೌರುಷ ಮೆರೆಯುತ್ತಾರೆ. ಈ ಮನೋಭಾವದ ಹಿಂದೆ ತನ್ನ ಸಹಜೀವಿಯೊಂದರ ಬಗ್ಗೆ ಇರಬೇಕಾದ ಕನಿಷ್ಠ ಮಾನವೀಯ ಗೌರವದ ಪ್ರಜ್ಞೆಯೂ ಇರುವುದಿಲ್ಲ.

ಈ ನಿಟ್ಟನಲ್ಲಿ ಒಂದು ಸಾಂಸ್ಕೃತಿಕ ಚಳವಳಿಯ ಅಗತ್ಯವಿದೆ. ಬಹುರಾಷ್ಟ್ರೀಯ ಕಂಪನಿಗಳು ಹುಟ್ಟುಹಾಕುತ್ತಿರುವ ನಾಗರಿಕತೆಯ ಹೆಸರಿನ ಶೋಷಣೆಯ ಬಗ್ಗೆ ಹಾಗೂ ಬದುಕಿನ ಬಗ್ಗೆ ಅತಿಯಾದ ಅವಾಸ್ತವ ಕಲ್ಪನೆ ಬೆಳೆಸಿಕೊಳ್ಳುವ ಮನಸ್ಸುಗಳು ವೇಶ್ಯಾವೃತ್ತಿಯನ್ನು ಅನುಸರಿಸದಂತೆ ತಡೆಗಟ್ಟಿದರೆ ಹೊಟ್ಟೆಪಾಡಿಗಾಗಿ ವೇಶ್ಯಾವೃತ್ತಿ ಮಾಡುವಂತಹ ಅಮಾಯಕ ಹೆಣ್ಣುಮಕ್ಕಳಿಗೆ ಕಾಯಕಲ್ಪ ಒದಗಿಸುವ ದಿಸೆಯಲ್ಲಿ ಅರ್ಥಪೂರ್ಣ ಕೆಲಸಗಳಾಗಬಹುದು.

ಆಕೆ ಒಬ್ಬ ಲೈಂಗಿಕ ಕಾರ್ಯಕರ್ತೆ, ಆ ದಿನ ಆಕೆಯನ್ನು ಒಬ್ಬ ಗಿರಾಕಿ ಕಾರಿನಲ್ಲಿ ಕರೆದುಕೊಂಡು ಹೋಗಿದ್ದಾನೆ. ಮೊದಲು ಒಬ್ಬನೇ ಇದ್ದವನು ಮಾರ್ಗ ಮಧ್ಯದಲ್ಲಿ ತನ್ನ ನಾಲ್ಕು ಜನ ಸ್ನೇಹಿತರನ್ನು ಕರೆದುಕೊಳ್ಳುತ್ತಾನೆ. ರಾತ್ರಿ ಊರಾಚೆಯಲ್ಲಿ ಆ ಎಲ್ಲರೂ ಆಕೆಯನ್ನು ಬಲವಂತವಾಗಿ ಭೋಗಿಸುತ್ತಾರೆ. ನೋವಿನಿಂದ ಆಕೆ ಕಿರುಚಿದರೂ ಆಕೆಯ ಬಾಯಿಯನ್ನು ಬಲವಾಗಿ ಮುಚ್ಚುತ್ತಾರೆ. ಬೆಳಗಿನ ಜಾವ ಹೆದ್ದಾರಿಯ ಯಾವುದೋ ಒಂದು ಕಡೆ ಆಕೆಯನ್ನು ಪ್ರಜ್ಞಾಹೀನ ಸ್ಥಿತಿಯಲ್ಲಿ ತಳ್ಳಿ ಬಿಡುತ್ತಾರೆ. ಆಕೆಯನ್ನು ಯಾವುದೋ ಒಂದು ಸ್ವಯಂ ಸೇವಾಸಂಸ್ಥೆ ರಕ್ಷಿಸುತ್ತದೆ. ಆಕೆಗೆ ಎರಡು ದಿನದ ನಂತರ ಪ್ರಜ್ಞೆ ಬಂದಾಗ ಆಕೆ ತನ್ನ ಕಣ್ಣೀರ ಕಥೆಯನ್ನು ಹೇಳಿಕೊಳ್ಳುತ್ತಾಳೆ. ಹೀಗೆ ಯಾವುದೇ ರಕ್ಷಣೆಯಿರದ ಇಂತಹ ಹೆಣ್ಣುಗಳು ನಿರಂತರವಾಗಿ ಭಯದ ನೆರಳಿನಲ್ಲಿಯೆ ಬದುಕುತ್ತಾರೆ. ಒಮ್ಮೆ ವೇಶ್ಯಾವೃತ್ತಿಯಲ್ಲಿದ್ದವರು ಹೊಸ ಜೀವನ ಆರಂಭಿಸ ಬೇಕೆಂದರೂ ಸಮಾಜ ಅವರಿಗೆ ಅವಕಾಶ ನೀಡುವುದಿಲ್ಲ.

ಇಂತಹ ಸ್ಥಿತಿಯಲ್ಲಿ ವೇಶ್ಯಾವೃತ್ತಿಯನ್ನು ಕಾನೂನು ಬದ್ಧಗೊಳಿಸಿದರೆ ಸಮಸ್ಯೆ ಪರಿಹಾರವಾಗದೆ? ಆದರೆ ಒಂದು ಪ್ರಶ್ನೆ. ಅದೆಷ್ಟು ಮಂದಿ ಹೆಣ್ಣು ಮಕ್ಕಳು ಬಹಿರಂಗವಾಗಿ ಮುಂದೆ ಬಂದು ತಾವು ವೇಶ್ಯಾವೃತ್ತಿ ಮಾಡುವುದನ್ನು ಒಪ್ಪಿ ಕೊಳ್ಳುತ್ತಾರೆ? ಅದರಲ್ಲಿಯೂ ವೇಶ್ಯೆಯರನ್ನು ಸರಬರಾಜು ಮಾಡುವ ದಲ್ಲಾಳಿಗಳಾಗಲಿ, ಗೂಂಡಾಗಳಾಗಲಿ ಅಂತಹ ಹೆಣ್ಣುಮಕ್ಕಳನ್ನು ಸುಲಭವಾಗಿ ಹೊರಗೆ ಬಿಟ್ಟಾರೆಯೇ?

ಮಹಿಳೆ ತನ್ನ ಮೇಲಾಗುತ್ತಿರುವ ಎಲ್ಲ ರೀತಿಯ ಅವಮಾನಗಳನ್ನು ಮೌನವಾಗಿಯೆ ಸಹಿಸಿದ್ದಾಳೆ, ಹಾಗೆಯೆ ತನ್ನ ಪ್ರತಿಭಟನೆಯನ್ನೂ ತನ್ನ ಕಂಬನಿಯಲ್ಲಿ ಕಂಡಿದ್ದಾಳೆ. ಹಾಗಾದರೆ ಈ ರೀತಿಯ ಶೋಷಣೆ ಎಲ್ಲಿಯವರೆಗೆ? ವೇಶ್ಯೆಯರಿಗೂ ಅವರದೇ ಆದ ಸುಂದರ ಸಂಸಾರದ ಮಕ್ಕಳ ಭವಿಷ್ಯದ ಕನಸುಗಳಿಲ್ಲವೆ?

ವೇಶ್ಯಾವೃತ್ತಿಯ ಬಗ್ಗೆ ಯಾವುದೇ ರೀತಿಯ double standard ಇಲ್ಲದೇ ಯೋಚಿಸಬೇಕಾದ ಅನಿವಾರ್ಯ ಸ್ಥಿತಿ ನಮ್ಮೆದುರಿಗಿದೆ. ಆದರೂ ಈ ಸಮಸ್ಯೆಯ ಬಗ್ಗೆ ಮುಖಾ ಮುಖಿಯಾಗುವ ಧೈರ್ಯ ನಮ್ಮಲ್ಲಿಲ್ಲ. ಬೆಂಗಳೂರಿನಂತಹ ನಗರ ತನ್ನ ಹೊಟ್ಟೆಯಲ್ಲಿ ಎಲ್ಲ ರೀತಿಯ ಬದುಕನ್ನು ಬಚ್ಚಿಟ್ಟು ಕೊಂಡಿದೆ. ಕತ್ತಲಲ್ಲಿ ನಡೆಯುವ ಈ ವ್ಯವಹಾರದಲ್ಲಿ ಮನುಷ್ಯರು ಮನುಷ್ಯರಾಗದೆ ನೆರಳುಗಂತೆ ಕರಗಿ ಹೋಗು ತ್ತಾರೆ. ಆದರೆ ಹೆಣ್ಣೆಂಬ ಹೆಣ್ಣು ಹೊಟ್ಟೆಗಾಗಿ, ತನ್ನ ಮಕ್ಕಳಿಗಾಗಿ ಮತ್ತೊಂದು ಸಂಜೆಗೆ ಕಾಯುತ್ತಾಳೆ. ಬಜಾರಿನ ಈ ಹೆಣ್ಣಿಗೆ ಸುಂದರ ಬದುಕಿನ ಕನಸನ್ನು ಕಾಣುವ ಆಸೆಯಿರುವುದಿಲ್ಲವೆ?

ಮೊನ್ನೆ ತಾನೆ ಬೆಂಗಳೂರಿನ ಲೈವ್‌ಬ್ಯಾಂಡ್‌ಗಳ ಮೇಲೆ ದಾಳಿ ಮಾಡಿದ ಎಸಿಪಿ ಒಬ್ಬರ ಪ್ರಕಾರ ಲೈವ್‌ಬ್ಯಾಂಡ್‌ಗಳ ಕಣ್ಣು ಕೋರೈಸುವ, ಹಾಡುವ, ಕುಣಿಯುವ ಹೆಣ್ಣುಗಳ ಬದುಕು ನರಕದಂತೆ. ಅವರಿಗೆ ಹಸಿವಾದಾಗ ಒಂದು Bowl ನಲ್ಲಿ ಕಲಿಸಿದ ಅನ್ನವಿಟ್ಟಿರುತ್ತಾರೆ. ಅವರ ಸುತ್ತ ಮುತ್ತ ಕಾವಲು ಕಾಯುವ ಗೂಂಡಾಗಳಿರುತ್ತಾರೆ. ನಡುವಿನಲ್ಲಿ ಸುಳಿದಾಡುವ, ವ್ಯವಹಾರ ಕುದುರಿಸುವ ಪಿಂಪ್‌ಗಳು ಇವರ ಕಣ್ಕಾಪಿನಲ್ಲಿ ಹೆಣ್ಣು ಮಕ್ಕಳು ದಿನ ದೂಡುತ್ತಾರೆ.

ಮತ್ತೆ ಪೊಲೀಸರು ರೈಡ್ ಮಾಡಿದಾಗಲೂ ಈ ಅಮಾಯಕ ಹೆಣ್ಣುಮಕ್ಕಳೇ ಬಂಧಿಯಾಗುತ್ತಾರೆ. ವ್ಯವಸ್ಥೆ ಯಿದ್ದವರು ತಕ್ಷಣ ಖುಲಾಸೆ ಆದರೆ ಕೆಲವರು ಮಾರನೆಯ ದಿನ ಕೋರ್ಟಿಗೆ ಹಾಜರಾಗಲು ಬೇಕಾದ ಹಣದ ಸಿದ್ಧತೆ ಬಗ್ಗೆ ತಲೆಕೆಡಿಸಿಕೊಳ್ಳುತ್ತಾರೆ. ಕೆಲವೊಮ್ಮೆ ಪೊಲೀಸ್ ಠಾಣೆಗಳ ಲ್ಲಿಯ ರಾತ್ರಿ ಪಾಳಿಯ ಕೆಲವು ಪೇದೆಗಳಿಗೆ ಬಲಾತ್ಕಾರವಾಗಿ ತಮ್ಮ ಮೈಯನ್ನು ಒಪ್ಪಿಸಬೇಕಾಗುತ್ತದೆ. ಈ ಎಲ್ಲಾ ಘಟನೆಗಳಿಗೂ ಕಾರಣ ಸೂಕ್ತವಾದ ಕಾನೂನಿನ ಚೌಕಟ್ಟಿನಲ್ಲಿ ಈ ರೀತಿಯ ವ್ಯವಹಾರಗಳು ನಡೆಯದೇ ಇರುವುದು.

ಕಲ್ಕತ್ತಾದಲ್ಲಿ ಕೆಲವು ವರ್ಷಗಳ ಹಿಂದೆ ಲೈಂಗಿಕ ಕಾರ್ಯಕರ್ತೆಯರು ತಮ್ಮ ವೃತ್ತಿಯನ್ನೂ ಇತರೇ ಯಾವುದೇ ವೃತ್ತಿಯಂತೆ ಭಾವಿಸಿ ಅಗತ್ಯವಾದ ಔದ್ಯೋಗಿಕ ಘನತೆ (dignity of labour) ಯಿರುವಂತೆ ನೋಡಿಕೊಳ್ಳಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು. ಆದರೆ ಸಮಸ್ಯೆಯಿರುವುದು ಸಮಾಜದಲ್ಲಿಯೇ ಅಥವಾ ಕಾನೂನಿನ ವ್ಯವಸ್ಥೆಯಲ್ಲಿಯೇ? ಎನ್ನುವುದು ನಿರಂತರ ಪ್ರಶ್ನೆಯಾಗಿಯೆ ಉಳಿದಿದೆ.

ಇಂದು ಕಲ್ಕತ್ತಾದ ಹಲವಾರು ಪ್ರತಿಷ್ಠಿತ ಪ್ರದೇಶಗಳಲ್ಲಿ ೧೨ ರಿಂದ೧೩, ಮೂರು ವರ್ಷದ ಹೆಣ್ಣುಮಕ್ಕಳನ್ನು ಮದುವೆ ಆಸೆಗೋ, ಬಡತನದ ಅನಿವಾರ್ಯತೆಗೋ ವಂಚಿಸಿ ಹಳ್ಳಿ ಗಳಿಂದ, ಅರೆ ನಗರ ಪ್ರದೇಶಗಳಿಂದ ತರುವ ದಲ್ಲಾಳಿಗಳ ವ್ಯವಸ್ಥಿತ ಜಾಲವೇ ನಿರ್ಮಾಣವಾಗಿದೆ. ದೇಶ ವಿದೇಶ ಗಳಿಗೂ ಇಂತಹ ಬಾಲಕಿಯರನ್ನು ಮಾರಾಟ ಮಾಡಲಾಗು ತ್ತದೆ. ಸರಿ ಸುಮಾರು ೨೦ ವರ್ಷಗಳವರೆಗೆ ಮಕ್ಕಳನ್ನು ವ್ಯವಸ್ಥಿತವಾಗಿ ನೋಡಿಕೊಳ್ಳಲಾಗುತ್ತದೆ. ವಯಸ್ಸಾದ ನಂತರ ಮತ್ಯಾವುದೋ ಘರ್‌ವಾಲಿಗಳಿಗೆ ಅಂತಹ ಹೆಣ್ಣು ಮಕ್ಕಳನ್ನು ಕಡಿಮೆ ಬೆಲೆಗೆ ಮಾರಲಾಗುತ್ತದೆ.

ಮಹಿಳೆ ತನ್ನ ಮೇಲಾಗುತ್ತಿರುವ ಎಲ್ಲ ರೀತಿಯ ಅವಮಾನಗಳನ್ನು ಮೌನವಾಗಿಯೆ ಸಹಿಸಿದ್ದಾಳೆ, ಹಾಗೆಯೆ ತನ್ನ ಪ್ರತಿಭಟನೆಯನ್ನೂ ತನ್ನ ಕಂಬನಿಯಲ್ಲಿ ಕಂಡಿದ್ದಾಳೆ. ಹಾಗಾದರೆ ಈ ರೀತಿಯ ಶೋಷಣೆ ಎಲ್ಲಿಯವರೆಗೆ? ವೇಶ್ಯೆಯರಿಗೂ ಅವರದೇ ಆದ ಸುಂದರ ಸಂಸಾರದ ಮಕ್ಕಳ ಭವಿಷ್ಯದ ಕನಸುಗಳಿಲ್ಲವೆ? ಹಾಗಾದರೆ ಮೈಮಾರಿಕೊಳ್ಳು ವಂತಹ ವೃತ್ತಿಗೆ ಹೆಣ್ಣುಗಳಾದರು ಏಕೆ ಬರಬೇಕು? ಕಷ್ಟಪಟ್ಟು ದುಡಿಯುವ ಗೌರವದಿಂದ ಬದುಕುವ ಧೈರ್ಯ ಅವರಿಗೇಕೆ ಇಲ್ಲ?

ಇವು ಕೇವಲ ಪ್ರಶ್ನೆಗಳು. ಹೆಣ್ಣಿನ ಅಸಹಾಯಕತೆ ಯನ್ನು ಉಪಯೋಗಿಸಿಕೊಳ್ಳುವ ಪುರುಷ ಪ್ರವೃತ್ತಿ ಎಂದಿ ಗಿಂತಲೂ ಇಂದು ಹೆಚ್ಚಾಗುತ್ತಲೇ ಇದೆ. ಆದರೂ ದೋಷ ವಿರುವುದು ಕೇವಲ ಹೆಣ್ಣಿಗೆ ಮಾತ್ರ ಎನ್ನುವ ಬಿರುದಾವಳಿ.

ವೇಶ್ಯಾವೃತ್ತಿಯನ್ನು ಕಾನೂನಿನ ಚೌಕಟ್ಟಿಗೆ ತರುವ ನಿಟ್ಟಿನಲ್ಲಿ ಇನ್ನಷ್ಟು ಚರ್ಚೆಗಳಾಗಿ, ಅವರ ಆರೋಗ್ಯ ಹಾಗೂ ಅವರ ಮಕ್ಕಳ ಭವಿಷ್ಯವನ್ನು ಗಮನದಲ್ಲಿರಿಸಿ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವಂತಹ ಮೌನಕ್ರಾಂತಿಯೊಂದರ ಅಗತ್ಯ ಎಂದಿಗಿಂತ ಇಂದು ಅನಿವಾರ್ಯ.

ಹಾಗೆಯೆ ಬೆಂಗಳೂರಿನಂತಹ ಸಾಂಸ್ಕೃತಿಕ ನಗರ ತನ್ನೆಲ್ಲಾ ಮೌಲ್ಯಗಳನ್ನು ಆಧುನಿಕತೆ ಗಾಳಿಗೆ ತೂರಿಬಿಡದೆ ಕೆಲಮಟ್ಟಿನ ಮಾನವೀಯ ಘನತೆಯೊಂದಿಗೆ ಮಹಿಳೆಯರ ಸ್ಥಾನಮಾನಗಳ ಬಗ್ಗೆ ಗಂಭೀರವಾಗಿ ಆಲೋಚಿಸುವಂತಾಗ ಬೇಕಾಗಿದೆ. □

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹ ದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾ ಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗ ಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬ ಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

೪೭ರ ಸ್ವಾತಂತ್ರ್ಯ : ಎರಡು ಸ್ವರ್ಗೀಯ ಸ್ವಗತಗಳು

ನೆನಪು

ನಮ್ಮೆಲ್ಲರ ನಡುವೆ ಇದ್ದ ದಂತಕಥೆ ಡಿ.ಆರ್. ನಾಗರಾಜ್. ಸದಾ ಸಮಾಜಮುಖಿ ಚಿಂತನೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ ಅಪ್ರತಿಮ ಚಿಂತಕ. ನೋಡನೋಡುತ್ತಿದ್ದಂತೆ ತನ್ನ ವಾರಿಗೆಯ ಎಲ್ಲರೂ ಅಸೂಯೆ ಪಡುವಂತೆ ಬೆಳೆದವರು. ಪ್ರತಿಭೆ, ಪಾಂಡಿತ್ಯಗಳೆರಡರಲ್ಲೂ ಅದ್ವಿತೀಯರಾಗಿದ್ದ ಡಿ.ಆರ್. ಗೆಳೆಯರ ಬಳಗದಲ್ಲಿ ಮೂಡಿಸಿದ ಅಚ್ಚರಿ-ಅನುಮಾನಗಳು ಅವರ ಜೀವಂತಿಕೆಗೆ ಸಾಕ್ಷಿಯಾಗಿದ್ದವು. ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಖ್ಯಾತಿಯ ಉತ್ತುಂಗಕ್ಕೇರಿದ ನಾಗರಾಜ್ ತಮ್ಮ ೪೭ನೇ ವಯಸ್ಸಿನಲ್ಲಿ (ಆಗಸ್ಟ್ ೧೭, ೧೯೯೮) ಅಕಾಲ ಮೃತ್ಯುವಿಗೆ ತುತ್ತಾದರು. ಅವರ ನೆನಪಿಗಾಗಿ ಅವರೇ ಬರೆದ ಈ ಲೇಖನ.

❍ ಡಿ.ಆರ್. ನಾಗರಾಜ್

ಬಾಬಾ ಸಾಹೇಬ್ ಅಂಬೇಡ್ಕರ್

ಆಗಸ್ಟ್ ೧೫, ೧೯೪೭ರ ಮಧ್ಯಾಹ್ನ, ಹೇಳಿಕೇಳಿ ಶ್ರಾವಣದ ದಿನ, ಉರಿಬಿಸಿಲು, ಬೀಸುವ ಗಾಳಿ, ಇದು ಸ್ವರ್ಗವೊ ಅಥವಾ ನನಗೆ ಪರಿಚಿತವಿರದ ಯಾವುದೋ ಒಂದು ಪರಲೋಕವೋ ಇರಬೇಕು. ನನಗೆ ಬೌದ್ಧದೀಕ್ಷೆ ಕೊಟ್ಟ ಭಿಕ್ಕು ಸಂಘರಕ್ಷಿತ ಈ ಯಾವ ಲೋಕಗಳ ಬಗೆಗೂ ನನಗೆ ಮಾಹಿತಿ ನೀಡಿರಲಿಲ್ಲ. ಶುದ್ಧ ವಿಚಾರವಾದಿ ಯುರೋಪಿಯನ್ ಭಿಕ್ಕು ಆತ. ಈ ಜಂಬೂದ್ವೀಪೇ ಭರತಖಂಡ ಬೌದ್ಧ ಧರ್ಮದೊಳಗೆ ಈ ರೀತಿಯ ಹತ್ತಾರು ಭೀಕರ, ಮೋಹಕ ಲೋಕಗಳನ್ನು ಸೃಷ್ಟಿಸಬಲ್ಲುದು ಎಂಬುದು ಆ ಭಿಕ್ಕುವಿಗೆ ಹೇಗಾದರೂ ತಿಳಿಯಬೇಕು? ಈ ಮಾಯಾವಿ ದೇಶದ ಸಹವಾಸವೇ ಬೇಡವೆಂದು ಈಗ ಆತ ಲಂಡನ್ನಿಗೆ ಹತ್ತಿರದಲ್ಲಿ 'ತ್ರೈಲೋಕ್ಯ ಮಹಾಸಂಘ' ಎಂತಲೋ ಏನೋ ಒಂದು ಬೌದ್ಧ ವಿಹಾರ ಕಟ್ಟಿ ಆರಾಮಾಗಿದ್ದಾನಂತೆ. ಈ ಮಾಯಾವಿ ದೇಶದಿಂದ, ಸರ್ಸ್ ರಾಣಿಯಿಂದ ಬಿಡುಗಡೆ ಪಡೆದ ಯೂಲಿಸಿಸ್ ಆತ. ಆತ ಅದೃಷ್ಟಶಾಲಿ. ನನಗೆಲ್ಲಿ ಆ ಸೌಭಾಗ್ಯ ! ನನಗೆ ನೆನಪುಗಳಿಂದ ಬಿಡುಗಡೆಯಿಲ್ಲ. ನೆನಪುಗಳೇ ವಾಸ್ತವ ಕೂಡಾ. ಅದು ದಲಿತರ ವಿಧಿ.

ಸಾವಿನ ನಂತರದ ಲೋಕಗಳ ಬಗ್ಗೆ ಟಿಬೆಟನ್ ಬೌದ್ಧಧರ್ಮ ಮಾತನಾಡುವ ರೀತಿ ಬಗ್ಗೆ ಗಾಬರಿಯಾಗಿದ್ದೇನೆ. ನಾನು ಬೌದ್ಧ ಧರ್ಮದ ಬಗ್ಗೆ ತಿಳಿದದ್ದು ಪಾಲಿಟೆಕ್ಸ್ಟ್ ಸೊಸೈಟಿಯ ಪ್ರಕಟಣೆಗಳಿಂದ. ಆಗ ಎಲ್ಲವೂ ಎಷ್ಟು ಸ್ಪಷ್ಟವಾಗಿ, ಸರಳವಾಗಿ, ತೀವ್ರವಾಗಿ ಕಂಡಿತ್ತು ? ಶೂನ್ಯದಲ್ಲಿನ ಪಥ್ಯಗಳಿರಬೇಕು. ನಿಜ ಜೀವನದ ಸಂಬಂಧವಿರದ ಅವು ನಿಜಕ್ಕೂ ಮೋಹಕವಾಗಿದ್ದವು. ಈಗ ಶ್ರೀಲಂಕಾ, ಬರ್ಮಾ, ಟಿಬೆಟ್‌ಗಳ ಬಗ್ಗೆ ಓದುತ್ತಿದ್ದೇನೆ. ಬೌದ್ಧ ಧರ್ಮದ ಮೂಲ ಶುಭ್ರತೆ ಹೊಸ ಪುಸ್ತಕದ ವಾಸನೆಯಷ್ಟು ಮೋಹಕ. ನಿಜ ಜೀವನದ ಕೊಳಕಿನಿಂದ ಈಗ ಮನಸ್ಸು ವ್ಯಗ್ರವಾಗತೊಡಗಿದೆ. ಬೌದ್ಧ ಪಥ್ಯಗಳಿಂದ, ಆ ಮೋಹಕ ಬೈಂಡ್‌ಗಳಾಚೆಗೆ ಬರಲೇಬಾರದಿತ್ತು! ಬಾಂಬೆಯ ಆ ಪುಸ್ತಕದಂಗಡಿ ಯಲ್ಲಿ ಸದಾ ಸಿಗುತ್ತಿದ್ದ ಆ ಬ್ರಾಹ್ಮಣ ರಾವ್ ನನ್ನ ಪುಸ್ತಕ ವ್ಯಾಮೋಹದ ಬಗ್ಗೆ ಎಷ್ಟೊಂದು ಪ್ರೀತಿಯಿಂದ ಬರೆದಿದ್ದಾನೆ? ಒಮ್ಮೊಮ್ಮೆ ಬ್ರಾಹ್ಮಣರು ಕೂಡಾ ನಂಬಿಕೆಗೆ ಅರ್ಹರು. ನಾನು ಧರ್ಮವೆಂದು ಯಾವುದನ್ನೋ ಹುಡುಕುತ್ತ ಬಂದೆ. ಈಗ ನಿರಾಸೆಯಾಗಿದೆ. ನನ್ನ ವಿಚಾರವಾದಿ ಮನಸ್ಸು ಶ್ರಮಣರ ಶಿಥಿಲತೆ ಕಂಡು ಒದ್ದಾಡಹತ್ತಿದೆ. ನನ್ನ ಗುರುಗಳಾದ ಜಾನ್ ಡ್ಯೂಯಿ ಮತ್ತು ಸೆಲಿಗ್‌ಮನ್ ನೆನಪಾಗುತ್ತಿದ್ದಾರೆ. ವಿಷಾದದ ಗಳಿಗೆಗಳಲ್ಲಿ ಗುರುಸ್ಮರಣೆ ಪ್ರಿಯವಾಗುತ್ತಿದೆ. ಸಂತವಾಣಿಯಿಂದ ಪೋಷಿತವಾದ ಮರಾಠಿ ಭಾಷಾ ಸಂವೇದನೆಯಿಂದ ನಾನು ಹೊರಗೆ ಹೋಗಲಾರದೆ ಹೋದೆನೆ?

ಬೌದ್ಧಧರ್ಮಕ್ಕೆ ಜಾನ್‌ಡ್ಯೂಯಿಯ ವಿಚಾರವಾದದ ಸರಳ ತೀವ್ರತೆ ಸಾಧ್ಯವಾಗಿದ್ದಿದ್ದರೆ? ಧಾರ್ಮಿಕ ಬದುಕಿಗೆ ಈ ಎಲ್ಲ ಕಲ್ಪಕತೆ, ಕಥೆ, ಪುರಾಣ, ಗುಹ್ಯಾನುಭವ, ನಿಗೂಢದ ಹುಡುಕಾಟ ಅನಿವಾರ್ಯವೇನು? ಕೊಲಂಬಿಯಾ ವಿ.ವಿ.ಯ ಕೋಣೆಗಳಲ್ಲಿ ಗುರು ಡ್ಯೂಯಿ ಇವೆಲ್ಲ ಹೇಳಿಕೊಟ್ಟಿರಲಿಲ್ಲ. ಇವೆಲ್ಲ ನನಗೆ ಮಾತ್ರ ಅಪಥ್ಯ ಎಂದುಕೊಂಡಿದ್ದೆ. ಪಕ್ಕದ ಕೋಣೆಯ ನಿವಾಸಿ, ನನ್ನ ಆತ್ಮೀಯ ಶತ್ರು ಆ ಗುಜರಾತಿ ಬನಿಯಾ ಗಾಂಧಿಗೆ ಕೂಡಾ ಈ ಯಾವುದೂ ಆಗುವುದಿಲ್ಲವಂತೆ. ಪ್ರತಿದಿನ ಸಂಜೆ ಆತನ ರೂಮಿಗೆ ಬಂದು ದಾರ್ಶನಿಕ ಚರ್ಚೆಗೆ ತೊಡಗುವ ವಿನೋಬಾ, ತರ್ಕತೀರ್ಥ ಇತ್ಯಾದಿ ಮರಾಠಿ ಬ್ರಾಹ್ಮಣರ ಜತೆಗೆ ಹೀಗೇ ಆ ಮುದುಕ ಜಗಳವಾಡಿ ನಗುತ್ತಿರುತ್ತಾನೆ. ನನಗೂ ಅವನಿಗೂ ವ್ಯತ್ಯಾಸ ಎಂದರೆ, ನಾನು ಉದ್ವಿಗ್ನನಾಗಿ, ಆರ್ತನಾಗಿ ಹೇಳುವುದನ್ನು ಆ ಬನಿಯಾ ಎರಡು ವಾಕ್ಯಗಳಲ್ಲಿ ಸರಳವಾಗಿ ಅಥವಾ ತಮಾಷೆಯಾಗಿ ಜಾರಿಸಿಬಿಡುತ್ತಾನೆ.

ಧರ್ಮದ ಪ್ರಶ್ನೆಗಳು ದಿಕ್ಕುಗೆಡಿಸುತ್ತವೆ. ಮನಸ್ಸು ಉದ್ವಿಗ್ನವಾಗಿ ಸಿಕ್ಕಾಪಟ್ಟೆ ಓಡುತ್ತದೆ. ವಿಷಾದದ ಮಳೆಯಲ್ಲಿ ಮನಸ್ಸು ತೋಯ್ದು ಹೋಗುತ್ತದೆ.

ನಾನು ಸತ್ತ ದಿನವೂ ಹೀಗೇ ಇದ್ದೆ ಎಂದು ನನ್ನ ಕಾರ್ಯದರ್ಶಿ ತನ್ನ ಆತ್ಮಕಥನದಲ್ಲಿ ಬರೆದಿದ್ದಾನೆ. ಅಂದು ಕಾಲರಾಯನಿಗೆ ಗುಣವಿರಲಿಲ್ಲವಂತೆ. ಸಿಕ್ಕಾಪಟ್ಟೆ ಮಳೆ, ಗಾಳಿ. ಅದೂ ದಿಲ್ಲಿಯ ಮಳೆ, ದಿಲ್ಲಿಯ ಗಾಳಿ. ಆಲೀಪುರ ರಸ್ತೆಯಲ್ಲಿನ ಆ ಮನೆಗೆ ನವಿಲುಗಳು ಬರುತ್ತಿದ್ದವು. ಪಕ್ಕದಲ್ಲಿಯೇ ಇದ್ದ ಕಾಡುಕೊರಕಲಿಗೆ ನರಿಗಳು, ತೋಳಗಳು ಬರುತ್ತಿದ್ದವು. ನನ್ನ ಸಾವಿನ ದಿನದ ಚಿತ್ರಣವನ್ನು ಎಷ್ಟೊಂದು ಭಾವುಕವಾಗಿ ಚಿತ್ರಿಸಿದ್ದಾನೆ ನನ್ನ ಶಿಷ್ಯ ! ಆ ದಿನಗಳಲ್ಲಿ ಯಾವುದೋ ವಿಷಾದ ನನ್ನಲ್ಲಿ ಉಕ್ಕುತ್ತಿದ್ದದ್ದಂತೂ ನಿಜ.

ನನಗೆ ಅಡಿಯಿಂದ ಮುಡಿಯತನಕ ವಿಷಾದ ಹಬ್ಬಿದ್ದಾದರೂ ಯಾತಕ್ಕೆ ? ಅದರ ಕಾರಣ ನನಗೇ ಅರ್ಥ ಹೊಳೆದಿತ್ತು. ಅದು ಎದುರಿಗೇ ಮರೆಯುತ್ತಿತ್ತು. ಅದು ನಾನು ಕಟ್ಟಿದ್ದ ಸಂಸ್ಥೆಗಳು ತಲುಪುತ್ತಿದ್ದ ಸ್ಥಿತಿಗಳು. ನನ್ನ ಅನುಯಾಯಿಗಳ ನಡವಳಿಕೆ, ಪರಿವರ್ತನೆ ನನ್ನಲ್ಲಿ ಭೀತಿ ಎಬ್ಬಿಸಿಬಿಟ್ಟಿತ್ತು. ನಾನೇ ಕಟ್ಟಿದ್ದ ಸಂಸ್ಥೆಗಳ ಸದಸ್ಯರ ಮಹಾಧಿವೇಶನಗಳಲ್ಲಿ ಹತಾಶೆ ಯಿಂದ ಅರ್ಭಟಿಸಿದ್ದೆ. ನನ್ನ ಪರಮವಿರೋಧಿ ಇಂಗ್ಲಿಷ್ ಪತ್ರಿಕೆಗಳು ಸಣ್ಣದಾಗಿ ಅವನ್ನು ಪ್ರಕಟಿಸಿದ್ದವು ಕೂಡಾ. ಬುದ್ಧಗುರುವಿನ ಸಂಘ ಒಡೆದು ಚೂರಾಗಲು ಇನ್ನೂರೈವತ್ತು ವರ್ಷ ಬೇಕಾಯಿತು ಎಂದು ರೈಸ್ ಡೇವಿಡ್ ಹೇಳುತ್ತಾರೆ. ಆದರೆ, ನನ್ನ ಕಡೆಗಾಲದಲ್ಲಿ ನನ್ನ ಎದುರಿಗೇ..... ನಮ್ಮವನೇ ಆದ ಕವಿ ನಾಮದೇವ್ ಢಸಾಳ್ ಈ ಬಗ್ಗೆ ಸಿಡಿವ ಕೋಪದಲ್ಲಿ ನನ್ನ ಅನುಯಾಯಿಗಳ ಬಗ್ಗೆ ಒಂದು ಪದ್ಯ ಬರೆದಿದ್ದಾನೆ. ಆದರೆ, ಆ ಪದ್ಯದ ಸಾಲುಗಳನ್ನು ನಾನು ಬಾಯಿಬಿಟ್ಟು ಹೇಳಲಾರೆ. ಅಂಥ ಬೈಗುಳ, ಪದ ಬಳಸಲು ನನ್ನ ನಾಲಿಗೆ ಹಿಡಿಯುತ್ತದೆ.

ಪಕ್ಕದ ಕೋಣೆಯಲ್ಲಿ ಆ ಬನಿಯಾನ ಕಡೆಗಾಲದ ದಿನಗಳ ಬಗ್ಗೆ ಅವನ ಚೇಲಾಗಳು ನಿನ್ನೆ ರಾತ್ರಿ ಚರ್ಚಿಸಿದರು. ಮಧ್ಯರಾತ್ರಿ ಮೀರಿತ್ತು. ಸೆಖೆ, ನಿದ್ರೆ ಬರದ ಕಾರಣಕ್ಕಾಗಿ ಅವರ ಮಾತು ಕೇಳಿದೆ. ಮಾತು ತೇಲಿಬಂದವು, ಗಾಳಿಯ ಕರುಣೆ, ಮಿಸ್ಟರ್ ಗಾಂಧಿಗೆ ಬದುಕುವ ಆಸೆಯೇ ಹೋಗಿಬಿಟ್ಟಿತ್ತಂತೆ. ಬದುಕುವ ಸಂಕಲ್ಪವಿರದ ಜೀವ ಥಟಕ್ಕನೆ ಜಾರಿಹೋಗುವ ಹನಿಯಂತೆ (ಮತ್ತೆ ಸಂತವಾಣಿ!) ಮಿಸ್ಟರ್ ಗಾಂಧಿ ಸಾವನ್ನು ತಾನಾಗಿ ಆಹ್ವಾನಿಸಿದ ಎಂದು ಯಾರೋ 'ಬೆಂಗ್ಲಿಷ್'ನಲ್ಲಿ (ಅಂದರೆ ಬೆಂಗಾಲಿಗಳು ಮಾತನಾಡುವ ಇಂಗ್ಲಿಷ್) ತೀವ್ರವಾಗಿ ಮಾತನಾಡುತ್ತಿದ್ದರು. ಯಾರು ಎಂದು ಇಣುಕಿ ನೋಡಿದೆ.

ಆ ವಿಷಯವನ್ನು ಗಾಂಧಿಗೆ ತಿಳಿಸಲು ಡೆಲ್ಲಿಯಿಂದ ಇದಕ್ಕಾಗಿ ತಾತ್ಕಾಲಿಕವಾಗಿ ಅಧೋಲೋಕಕ್ಕೆ ಬಂದಿದ್ದ ಆಶೀಶ್‌ನಂದಿ ಎಂಬಾತ ಮಾತನಾಡುತ್ತಿದ್ದರು. ನನಗೂ ನಿಜ ಎನ್ನಿಸಿತು. ಅಂದರೆ, ಸಾಯುವಾಗ ಆ ಬನಿಯಾ ಮತ್ತು ನಾನು ಇಬ್ಬರೂ ಒಂದೇ ಭಾವ ಸ್ಥಿತಿಯಲ್ಲಿ ಇದ್ದೆವೆ?

ಐನ್‌ಸ್ಟೀನ್, ಈ ಭಾರತ ಎಂಥೆಂಥವರನ್ನೋ ಒಟ್ಟಿಗೆ ಸೇರಿಸಿ ಸ್ಥಾನ ಕೊಡುತ್ತದೆ. ವಿರುದ್ಧಗಳನ್ನು ಬೆಸೆದು ಜಡುತ್ತದೆ. ಬುದ್ಧನನ್ನು ಕೃಷ್ಣನ ಜತೆ ಸೇರಿಸಿ ಪೂಜಿಸುತ್ತದೆ.

ಇದು ಬ್ರಹ್ಮಚಾರಿ ಶಂಕರಾಚಾರ್ಯನ ಕೈಯಲ್ಲಿ 'ಸೌಂದರ್ಯ ಲಹರಿ'ಯ ಪೋಲಿ ಪದ್ಯಗಳನ್ನು ಬರೆಸುತ್ತದೆ. ಅದರಲ್ಲೂ ದೇವಿಯ ಅಧೋಭಾಗದಲ್ಲಿ ಎಂಥದೋ ಬೆಂಕಿ ಮುಳುಗಿ ಏನೋ ಹೊಗೆಯಂತೆ ತ್ರಿವಳಿಯಲ್ಲಿ ಏಳುವ ಕೂದಲು.... ಛೆ, ಛೆ, ಹಿಂದೂ ಧರ್ಮದ ದಟ್ಟ ಅಶ್ಲೀಲತೆಯ ಬಗ್ಗೆ ನಾನು ಸಾಕಷ್ಟು ದೀರ್ಘವಾಗಿ ಬರೆದಿದ್ದೇನೆ. ಹೀಗೇ ಬೆರೆಯಲಾಗದ, ಹೊಂದಿಕೊಳ್ಳಲಾಗದ ಶಕ್ತಿಗಳನ್ನು ಸಮರಸಗೊಳಿಸು ವುದು ಅಂತಿಮವಾದ ವೈಚಾರಿಕ ಅಶ್ಲೀಲತೆ. ನನಗೂ ಆ ಗುಜರಾತಿ ಬನಿಯಾನಿಗೂ ಸಮಾನವಾದ ಅಂಶಗಳನ್ನು ಹುಡುಕಿ ಜೋಡಿ ಕಟ್ಟುವುದೂ ಅಂಥದೇ ತಾತ್ವಿಕ ಅಶ್ಲೀಲತೆ.

ಆದರೆ, ಇಷ್ಟಂತೂ ನಿಜ. ೧೯೪೭ರಲ್ಲಿ ಸ್ವಾತಂತ್ರ್ಯ ಬಂದಾಗ ಮಿಸ್ಟರ್ ಗಾಂಧಿಗೆ ಅದರ ಬಗ್ಗೆ ಅಂಥ ಉತ್ಸಾಹ ವಿರಲಿಲ್ಲ. ದೇಶ ವಿಭಜನೆಯ ಹತ್ಯಾಕಾಂಡ ಅವನನ್ನು ನಡುಗಿಸಿಬಿಟ್ಟಿತ್ತು. ನನಗೋ ಇನ್ನೊಂದು ಥರದ ಆತಂಕ. ಬ್ರಿಟಿಷರ ಬಗ್ಗೆ ನನಗೆ ಮೋಹವಿಲ್ಲ. ನಿಜ ಹೇಳಬೇಕೆಂದರೆ, ಅವರು ಕರೆದ ರೌಂಡ್‌ಟೇಬಲ್ ಸಭೆಗೆ ಹೋಗಿದ್ದಾಗ ಅಲ್ಲಿ ಗಾಂಧಿ ಮತ್ತಿತರ ಜತೆಗೆ ತೀವ್ರವಾದ ಸಂಘರ್ಷವಾಗಿತ್ತು. ಅವು ನನ್ನ ತೀವ್ರ ಆತ್ಮಶೋಧನೆಯ ದಿನಗಳು. ಭೀಕರವಾದ ಏಕಾಂತದ ದಿನಗಳು. ನನಗೇ ನಾನು ಸ್ಪಷ್ಟವಾಗಲು ಏಕಾಂತ ದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಮತ್ತು ಅಸ್ಪೃಶ್ಯರ ಸಂಬಂಧದ ಬಗ್ಗೆ ಏಕಾಗ್ರತೆಯಿಂದ ಧ್ಯಾನಿಸಿದೆ.

ಆಗಲೇ ಸುಮಾರು ೧೬೫ ಪುಟಗಳಷ್ಟು 'ಅಸ್ಪೃಶ್ಯರು ಮತ್ತು ಪ್ಯಾಕ್ಸ್ ಬ್ರಿಟಾನಿಕಾ' ಎಂಬ ಮಹತ್ವಾಕಾಂಕ್ಷೀ ಕೃತಿ ಬರೆದದ್ದು. ಆದರೆ, ಆಗ ಅದನ್ನು ಪ್ರಕಟಿಸಲಿಲ್ಲ. ಅದು ಬೆಳಕು ಕಂಡದ್ದು ನಾನು ಸತ್ತ ಮೇಲೆ. ಅಲ್ಲಿ ನಾನು ಬ್ರಿಟಿಷರ ಪರಮವಿರೋಧಿ. ನನಗೆ ಬ್ರಿಟಿಷರು ಏನೆಂದು ಗೊತ್ತು. ಆದರೆ, ಕಾಂಗ್ರೆಸ್ಸಿನ ಈ ಮಂದಿಗೆ, ನೆಹರೂ, ಪಟೇಲ್ ಇತ್ಯಾದಿಗಳಿಗೆ ನನ್ನ ಬಗ್ಗೆ ಮಹಾ ಅನುಮಾನ. ಮಿಸ್ಟರ್ ಗಾಂಧಿ ಗೆ ನಾನು ಉದ್ದಕ್ಕೂ ಅಪಮಾನ ಮಾಡಿದ್ದೇನೆ ಎಂದು ಅವರಿಗೆ ಉಗ್ರಕೋಪ. ೧೯೪೭ರಲ್ಲಿ ಗಾಂಧಿ ರಾಷ್ಟ್ರದ ಆದರ್ಶ. ನಾನು ಮುಜುಗರ. ಮಿಸ್ಟರ್ ಗಾಂಧಿ ಆಗ ರಾಷ್ಟ್ರದ ಕೇಂದ್ರ. ನಾನು ಅದರ ಅಂಚು.

ಕಾಂಗ್ರೆಸ್ಸಿಗೂ ನನಗೂ ಹೊಂದಾಣಿಕೆ ಆಗಲೇ ಇಲ್ಲ. ಅದೆಲ್ಲ ಈಗ ಇತಿಹಾಸ. ಅದೆಲ್ಲದರ ಬಗ್ಗೆ ನಾನು ಸಾಕಷ್ಟು ಬರೆದಿದ್ದೇನೆ. ದಲಿತರ ವಿರಾಟ್ ಐಕ್ಯತೆಯನ್ನು ಒಡೆಯಲು ಕಾಂಗ್ರೆಸ್ ಮಾಡಿದ ತಂತ್ರಗಳು ಎಷ್ಟೊಂದು! ದಲಿತರಲ್ಲಿ ಎಷ್ಟೊಂದು ಒಳಜಾತಿ, ಒಳ ಪಂಗಡಗಳ ಕ್ಯಾತೆ ತೆಗೆದರು ಕಾಂಗ್ರೆಸ್‌ನವರು? ಇದು ತಿಳಿಯಲು ಉತ್ತರ ಭಾರತದ ಕಳೆದ ೭೦ ವರ್ಷಗಳ ಇತಿಹಾಸ ಓದಬೇಕು. ಕಾಂಗ್ರೆಸ್ಸಿನ ಜತೆಗೆ ಭಂಗಿಗಳು, ಚಮ್ಮಾರರು ದೊಡ್ಡದಾಗಿಯೇ ಹೋದರು. ಸ್ವತಃ ಮಹಾರಾಷ್ಟ್ರದಲ್ಲಿ ಆ ಕೆಲಸವನ್ನು ಕಾಂಗ್ರೆಸ್‌ನವರು ಮಾಡಿದರು. ಈಗ ಶಿವಸೇನೆಯವರು ಮಾಡುತ್ತಿದ್ದಾರೆ.

ಚಮ್ಮಾರರು ನನ್ನ ಜತೆ ಸೇರದಂತೆ ಒಡೆದರು. ಡೋಹರ ಕಕ್ಕಯ್ಯ ಎಂಬ ಹನ್ನೆರಡನೆಯ ಶತಮಾನದ ವೀರಶೈವ ಅಸ್ಪೃಶ್ಯ ವಚನಕಾರನ ಹೆಸರಿನಲ್ಲಿ ಒಂದು ಸಮಾಜ ಕಟ್ಟಿದರು. ಕಟುಕರು, ಡೋಮರು ಇತ್ಯಾದಿ ಜನರನ್ನು ಸಂಘಟಿಸಿ ಅಂಬೇಡ್ಕರರ ಜತೆಗೆ ಸೇರಬೇಡಿ

ಗಾಂಧಿ ನಿಜವಾಗಿಯೂ ಶುದ್ಧ ಗ್ರಾಮ ಸಮಾಜದ ಗುಗ್ಗು ಎಂದು ಕಾಂಗ್ರೆಸ್, ಜನತಾದಳ, ಕಮ್ಯುನಿಸ್ಟ್ ಬಿಜೆಪಿಗಳಿಗೆ ಈಗ ಅರ್ಥವಾಗಿದೆ. ಮಿಸ್ಟರ್ ಗಾಂಧಿಯನ್ನು ತಾವು ಹೂತು ಹಾಕಿದ್ದೇವೆ ಎಂದು ಸಾರ್ವಜನಿಕವಾಗಿ ಘೋಷಿಸುವ ಧೈರ್ಯ ಅವಕ್ಕೆ ಇಲ್ಲ.

ಎಂದರು. ಆದರೆ, ಅವರಲ್ಲಿ ಪ್ರಜ್ಞಾವಂತ ಮಂದಿ ನನ್ನ ಜತೆಗೇ ಬಂದರು. ಕಾಂಗ್ರೆಸ್‌ನವರು ನನ್ನ ವಿರುದ್ಧ ಬೊಂಬಾಯಿ ಯಲ್ಲಿ ಇನ್ನೊಬ್ಬ ಮಹರೇತರ ಅಸ್ಪೃಶ್ಯನನ್ನು ನಿಲ್ಲಿಸಿ ನನ್ನನ್ನು ಸೋಲಿಸಿದರು.

೧೯೪೭ರಲ್ಲಿ ದೇಶ ಗಾಂಧಿಯನ್ನು ರಾಷ್ಟ್ರದ ಆದರ್ಶ ಎಂಬಂತೆ ನೋಡಿ ನನ್ನನ್ನು ಹಂಗಿಸಿತು. ಆಗ ನಾನು ಒಂದು ಜಾತಿಯ ನಾಯಕ ಮಾತ್ರ ಎಂದರು. ಆದರೆ, ಭಾರತ ಆಧುನೀಕರಣದ ಬಗ್ಗೆ ನನಗಿದ್ದ ಆಶಾವಾದ ಅದಮ್ಯವಾಗಿತ್ತು. ದೇಶ ಪ್ರಗತಿಪಥದ ಕಡೆಗೆ ಹೋಗಬೇಕು ಎಂಬುದೇ ನನ್ನ ಹಠ. ನಾನು ಕೇಂದ್ರದಲ್ಲಿ ಮಂತ್ರಿಯಾಗಿದ್ದಾಗ ನಡೆದ ಒಂದು ಚರ್ಚೆ ನೆನಪಿಗೆ ಬರುತ್ತಿದೆ. ಬಂಗಾಳದಲ್ಲಿ ಒಂದು ವಿರಾಟ್ ಅಣೆಕಟ್ಟು-ವಿದ್ಯುತ್ ಯೋಜನೆ ಪ್ರಾರಂಭಿಸಿದ್ದೆವು. 'ದಾಮೋದರ ವ್ಯಾಲಿ ಪ್ರಾಜೆಕ್ಟ್' ಎಂದು ಪ್ರಸಿದ್ಧವಾದ ಯೋಜನೆ ಅದು. ಇಡೀ ಏಷ್ಯಾದಲ್ಲಿಯೇ ಅತ್ಯಂತ ದೊಡ್ಡ ಯೋಜನೆ ಎಂದು ಪ್ರಚಾರ ಪಡೆದಿತ್ತು ಅದು. ಅನೇಕ ಆದಿವಾಸಿಗಳು ನಿರ್ವಸಿತ ರಾಗುತ್ತಾರೆ ಎಂದು ಗೊತ್ತಿದ್ದರೂ ಪ್ರಗತಿಗೆ ತೆರಬೇಕಾದ ಅನಿವಾರ್ಯ ಬೆಲೆ ಅದು ಎಂದು ಭಾವಿಸಿದ್ದೆವು. ಅದರ ಮೇಲೆ ಚರ್ಚೆ ನಡೆದಾಗ, ನಾನು ಅದನ್ನು ಸಮರ್ಥಿಸಿದಾಗಿನ ಉತ್ಸಾಹ ನೀವು ನೋಡಬೇಕು. ಪ್ರತಿವಾಕ್ಯವೂ ಪ್ರಗತಿಯ ಪ್ರಣಾಳಿಕೆ.

ಈಗ ಆ ಯೋಜನೆಯ ಸ್ಥಿತಿ ಏನಾಗಿದೆ ಎಂದು ಕೇಳ ಬೇಡಿ. ಆ ಇಡೀ ಯೋಜನೆ ಹಂಬಗ್, ಆದಿವಾಸಿಗಳು ಅನಾಥ ರಾದರು. ದಲಿತರಿಗೆ ಇದರಿಂದ ಪ್ರಯೋಜನವಾಗಲಿಲ್ಲ. ಇವೆಲ್ಲ ಇರಲಿ, ಸ್ವತಃ ಬಂಗಾಳಕ್ಕೇ ಅದರಿಂದ ಬಿಡಿಕಾಸಿನ ಪ್ರಯೋಜನವಾಗಲಿಲ್ಲ. ಅದೊಂದು ಭವ್ಯವಾದ ವಿಕಟ ನಾಟಕ. ಸರ್ಕಾರಗಳಿಗೆ ಈ ರೀತಿಯ ಯೋಜನೆಗಳು ಬೇಕು. ಭ್ರಷ್ಟಾಚಾರ ಗಗನಕ್ಕೆ ಮುಟ್ಟಿರುವುದು ಇದೇ ಕಾರಣದಿಂದ.

ನಿನ್ನೆ ಮಧ್ಯಾಹ್ನ ಉರಿಬಿಸಿಲಲ್ಲಿ ಮಿಸ್ಟರ್ ಗಾಂಧಿ ಮೈಗೆಲ್ಲ ಮಣ್ಣು ಮೆತ್ತಿಕೊಂಡು ಮಲಗಿದ್ದಾಗ ಈ ರೀತಿಯ ಯೋಜನೆಗಳ ಬಗ್ಗೆ ಆತನ ಶಿಷ್ಯರು ಚರ್ಚಿಸುತ್ತಿದ್ದರು. ನನ್ನ ಗುರು ಸೆಲಿನ್‌ಮನ್‌ನ ಇನ್ನೊಬ್ಬ ಶಿಷ್ಯ ಕುಮಾರಪ್ಪ ಇಂಥವೆಲ್ಲ ತಪ್ಪು ಎಂದು ಗಾಂಧಿ ಬಳಿ ವಾದಿಸುತ್ತಿದ್ದರು. ಮಿಸ್ಟರ್ ಗಾಂಧಿ ಅದಕ್ಕೆಲ್ಲ ಪೂರ್ಣ ಸಮ್ಮತಿ ಸೂಚಿಸಿದ್ದು ಸ್ಪಷ್ಟವಾಗಿತ್ತು. ಗುರು ಸೆಲಿನ್‌ಮನ್‌ರಿಂದ ಅರ್ಥಶಾಸ್ತ್ರ ನಾನೂ ಕಲಿತೆ, ಕುಮಾರಪ್ಪನೂ ಕಲಿತರು. ಆದರೂ ಇಬ್ಬರು ಎಷ್ಟೊಂದು ಭಿನ್ನ! ಗುರುಗಾಂಧಿ, ಚೇಲಾ ಕುಮಾರಪ್ಪಾ ಇಬ್ಬರೂ ಇಂಡಿಯಾವನ್ನು ಖಂಡಿತ ಪುರಾತನ ಕಾಲದ ಗ್ರಾಮಸಮಾಜಕ್ಕೆ ಕರೆದೊಯ್ಯುವುದು ಖಾತ್ರಿ. ಈ ಗ್ರಾಮ ಸಮಾಜ ಎನ್ನುವುದು ಘೋರಾಂಧಕಾರದ ಕೂಪ. ಪಾತಾಳದ ಬಿಲಕ್ಕೆ ಬಾಗಿಲು. ಈ ಬಗ್ಗೆ ನನ್ನ ವಿಚಾರ ತಿಳಿಯಲು ಬಾಂಬೆ ಶಾಸನ ಸಭೆಯಲ್ಲಿ ನಾನು ಮಾಡಿದ ಭಾಷಣ ಓದಿ.

ಇದೆಲ್ಲ ಸರಿ. ಈಗ ನನಗೆ ಮುಜುಗರವಾಗುತ್ತಿರುವ ಸಂಗತಿ ಎಂದರೆ, ಈ ಐವತ್ತು ವರ್ಷಗಳಲ್ಲಿ ಕಾಂಗ್ರೆಸ್‌ನವರು ನನ್ನನ್ನು ಅಪಹರಿಸಿರುವ ರೀತಿ. ಅಥವಾ ಎಲ್ಲ ಪಕ್ಷಗಳು ನನ್ನನ್ನು ಹೈಜಾಕ್ ಮಾಡಿರುವ ರೀತಿ. ದಾಮೋದರ ವ್ಯಾಲಿ ಇರಲಿ ಅಥವಾ ನರ್ಮದಾ ವ್ಯಾಲಿ ಯೋಜನೆ ಇರಲಿ ಅದಕ್ಕೆ ಬೆಂಬಲ ಗಳಿಸಲು ನನ್ನನ್ನು, ದಲಿತರನ್ನು ಮುಂದೆ ಇಡುತ್ತಾರೆ. ಪರಿಸರ ಚಳವಳಿ ಮತ್ತು ಆದಿವಾಸಿಗಳ ವಿರುದ್ಧವಾಗಿ ದಲಿತರನ್ನು ಬಳಸಿಕೊಳ್ಳುತ್ತಿದ್ದಾರೆ. ಇದೆಲ್ಲದರ ಅರ್ಥವಾದರೂ ಏನು?

ನಾನು ಇದನ್ನು ಊಹಿಸಿರಲಿಲ್ಲ. ಗಾಂಧಿ ನಿಜವಾಗಿಯೂ ಶುದ್ಧ ಗ್ರಾಮ ಸಮಾಜದ ಗುಗ್ಗು ಎಂದು ಕಾಂಗ್ರೆಸ್, ಜನತಾದಳ, ಕಮ್ಯುನಿಸ್ಟ್ ಬಿಜೆಪಿಗಳಿಗೆ ಈಗ ಅರ್ಥವಾಗಿದೆ. ತಮ್ಮ ಆರ್ಥಿಕ ನೀತಿಯ ಅನುಷ್ಠಾನದಲ್ಲಿ ಅವೆಲ್ಲ ಅದನ್ನು ತೋರಿಸಿಯೂ ಇವೆ. ಆದರೆ, ಮೇಲು ಜಾತಿ ಹಿಂದೂಗಳು ಎಲ್ಲ ಕಾಲಕ್ಕೂ ಗೋಸುಂಬೆತನಕ್ಕೆ ಖ್ಯಾತಿ. ಮಿಸ್ಟರ್ ಗಾಂಧಿಯನ್ನು ತಾವು ಹೂತು ಹಾಕಿದ್ದೇವೆ ಎಂದು ಸಾರ್ವಜನಿಕವಾಗಿ ಘೋಷಿಸುವ ಧೈರ್ಯ ಅವಕ್ಕೆ ಇಲ್ಲ.

ಹೀಗಾಗಿ, ನನಗೆ ಕೊಂಚ ಅನುಮಾನ ಬಂದಿದೆ. ನನಗೆ ಮಹಾರಾಷ್ಟ್ರದ ಚರಿತ್ರೆಯ ನೆನಪು. ಏಕೆ ಈ ಗುಜರಾತಿ ಮಿಸ್ಟರ್ ಗಾಂಧಿಯನ್ನು ಹೇಗೆ ಬಲಿಕೊಟ್ಟರು? ಮಹಾರಾಷ್ಟ್ರ ದಲ್ಲಿ ಒಬ್ಬ ಸಂತನನ್ನು ಹೊಡೆದು ಹೊಳೆಗೆ ಹಾಕಿ, ಪುರೋಹಿತರು ಆತ ಜಲಸಮಾಧಿಗೈದ ಎಂದು ಭಜನೆ ಮಾಡಿದರು. ಭಾರತವನ್ನು ಕಗ್ಗತ್ತಲ ಖಂಡದಿಂದ ಆಚೆಗೆ ತರಲು ಮಿಸ್ಟರ್ ಗಾಂಧಿಯನ್ನು ಆಳುವ ವರ್ಗಗಳು ಬಲಿಕೊಟ್ಟದ್ದರೆ, ಅದು ಸರಿ. ಚರಿತ್ರೆಯಲ್ಲಿ ಪ್ರಗತಿಪಥ ಈ ರೀತಿಯ ಆಹುತಿಯನ್ನು ಬೇಡುತ್ತದೆ. ಆದರೆ, ಆದರೆ? ಕಳೆದ ಐವತ್ತು ವರ್ಷಗಳ ಅಂಕಿಸಂಖ್ಯೆಗಳು ಹಾಗೆ ಹೇಳುತ್ತಿಲ್ಲ. ನಾನು ಅಂಕಿಸಂಖ್ಯೆಗಳೇ ಸತ್ಯದ ಪರಮ ಅಭಿವ್ಯಕ್ತಿ ಎಂದು ನಂಬಿರುವ ಸಮಾಜಶಾಸ್ತ್ರಗಳ ನಿಷ್ಠಾವಂತ ವಿದ್ಯಾರ್ಥಿ. ಈ ಕುಲೀನರು ನನಗೂ ಮೋಸ ಮಾಡಿದ್ದಾರೆ. ಹೊರಗೆ ಅಪಾರ ಸದ್ದು ಗದ್ದಲ, ಅಭಿಮಾನಿಗಳ ಮೆರವಣಿಗೆಯ ಮಹಾಘೋಷ. ಸ್ವಾತಂತ್ರ್ಯದ ಐವತ್ತು ವರ್ಷಗಳ ಆಚರಣೆಯಂತೆ. ಇದು ಹಬ್ಬವೆ, ಶೋಕವೆ? ಸಂಭ್ರಮವೆ? ಧಿಕ್ಕಾರವೆ? ಹೊರಗಿನ ಜನಸಾಗರವೂ ಗೊಂದಲಕ್ಕೆ ಬಿದ್ದಿದೆ. ರೌಂಡ್‌ಟೇಬಲ್ ಕಾಲದಲ್ಲಾದಂತೆ ಮತ್ತೆ ನಾನು ಏಕಾಂತದ ಧ್ಯಾನಕ್ಕೆ ಮರಳಬೇಕಾಗಿದೆ. ನಂತರ ಕಂಡ ಸತ್ಯವನ್ನು ಹೊರಗೆ ಹೋಗಿ ಹೇಳಬೇಕಾಗಿದೆ.

- ಬಾಬಾ ಸಾಹೇಬರು ಎದ್ದರು.

ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ

ಆಗಸ್ಟ್ ೧೫, ೧೯೪೭ರ ಸಂಜೆ. ಆಷಾಢ ಶ್ರಾವಣಗಳಲ್ಲಿ ಇಂಥಿಂಥದೇ ತಿನ್ನಬೇಕು ಎಂದು ನಾವು ಹೇಳಿದ್ದನ್ನು ಈ ಜನ ಮರೆತಿದ್ದಾರೆ. ಒಡಲು ಕೆಟ್ಟರೆ, ರಾಜ್ಯವೂ ಕೆಡುತ್ತದೆ ಎಂದು ನಾನು ಬಾಲ್ಯದಲ್ಲೇ ಜೈನಯತಿಗಳಿಂದ ಕಲಿತೆ. ಕೆಡುವೊಡಲು ಕೆಡುವ ರಾಜ್ಯದ ಅಡಿಪಾಯ ಎಂಬುದು ಆಧುನಿಕ ನಾಗರಿಕತೆ ಯಲ್ಲಂತೂ ಆತ್ಯಂತಿಕ ಸತ್ಯ. 'ಹಿಂದ್ ಸ್ವರಾಜ್'ನಲ್ಲಿ ನಾನು ಹೇಳಲು ಪ್ರಯತ್ನಿಸಿದ್ದೂ ಇದನ್ನೆ. ಅಲ್ಲಿ ಆಧುನಿಕ ನಾಗರಿಕತೆ ಯನ್ನು ನಾನು ವರ್ಣಿಸಿದ್ದೇ ಹೀಗೆ : ಆಸೆ ಮತ್ತು ಯಂತ್ರಗಳ ನೂರ್ಮಡಿ ಎಂದು.

ಈಗ ತಾನೆ ಅಂಚೆಯಲ್ಲಿ ಬಂದ ನನ್ನ 'ಹಿಂದ್ ಸ್ವರಾಜ್'ನ ಪರೇಖ್ ಎಂಬಾತನ ಹೊಸ ಇಂಗ್ಲಿಷ್ ಅನುವಾದ ಓದುತ್ತ ಕೂತಿದ್ದೇನೆ. ಏನಿದ್ದರೂ ನನಗೆ ಗುಜರಾತಿ ಮೂಲವೇ ಪ್ರಿಯ. ನನ್ನ ಆ ಬರವಣಿಗೆ ಗುಜರಾತಿ ಗದ್ಯದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿತು ಎನ್ನುತ್ತಾರೆ. ನನ್ನದು ಸರಳ ಶೈಲಿ. ಸಾಮಾನ್ಯರ ಮಾತಿನಂತೆ ನೇರ, ಅಪರೂಪ ಕ್ಕೊಮ್ಮೆ ಅಲ್ಲಲ್ಲಿ ಅಲಂಕಾರ. ನನ್ನ ಪಕ್ಕದ ಕೋಣೆಯ ಧೀಮಂತ ಬಾಬಾ ಸಾಹೇಬ್ 'ಹಿಂದ್ ಸ್ವರಾಜ್' ಬರೆದಿದ್ದರೆ ಹೇಗೆ ಎಂದು ಇಂದು ಬೆಳಗ್ಗೆ ಪ್ರಾರ್ಥನಾ ಸಭೆಯಲ್ಲಿ ಪ್ರಶ್ನೆ ಹಾಕಿದೆ. ಪ್ರಶ್ನೆಯೇ ಅಸಂಬದ್ಧ ಎಂದು ಕುಮಾರಪ್ಪ ಮೆಲ್ಲಗೆ ಗೊಣಗಿದರು. ನಂತರ ನಿಧಾನಕ್ಕೆ ಸೇರಿಸಿದರು : ಪ್ರತಿ ವಾಕ್ಯಕ್ಕೆ ಹತ್ತು ಅಂಕಿ-ಅಂಶ ಕೊಡುತ್ತಿದ್ದರು ಎಂದು!

ಕುಮಾರಪ್ಪನವರಿಗೆ ಸದಾ ಕ್ರೈಸ್ತ ಧರ್ಮೀಯರ ಅರ್ಹತೆ. ಇಂದು ಮತ್ತೆ ನನ್ನನ್ನು ಬೆಳಗ್ಗೆ ಪ್ರಾರ್ಥನಾ ಸಭೆಯಲ್ಲಿ ಕೇಳಿದರು: 'ಬಾಪೂ, ಜವಹರಲಾಲ್‌ಗೇ ನೀವು ಅಧಿಕಾರದ ಕಿರೀಟ ಏಕೆ ಕೊಟ್ಟಿರಿ ?' ಈ ಪ್ರಶ್ನೆಯನ್ನು ಈಚಿನ ವರ್ಷಗಳಲ್ಲಿ ನನ್ನ ಶಿಷ್ಯರು, ಜನ ಮತ್ತೆ ಮತ್ತೆ ಕೇಳುತ್ತಿದ್ದಾರೆ. ನಾನು ಬದುಕಿದ್ದಾಗ ಜನ ಈ ಪ್ರಶ್ನೆಯನ್ನು ನನಗೆ ಹಾಕಲಿಲ್ಲ. ಜವಹರ್ ಬಗ್ಗೆ ಜನಕ್ಕೆ ನನಗಿಂತ ಮಹಾಮೋಹ. ಹೀಗಾಗಿ, ಈಗ ಈ ಪ್ರಶ್ನೆಗೆ ಉತ್ತರ ಏನು ? ಇದಕ್ಕೆ ಉತ್ತರ ನನ್ನ ಮೊಮ್ಮಗ ತತ್ತ್ವಜ್ಞಾನಿ ರಾಮಚಂದ್ರ ಗಾಂಧಿ ದಿಲ್ಲಿಯಲ್ಲಿ ಕೊಟ್ಟನಂತೆ. ನೆಹರೂ ಸೆಕ್ಯುಲರಿಸ್ಟ್, ಜತೆಗೆ ಸಮಾಜವಾದಿ, ಸಮಾಜವಾದ ಎನ್ನುವುದು ಈ ನಾಗರಿಕತೆಯ ಅತ್ಯಂತ ದೊಡ್ಡ ಪ್ರಲೋಭನೆ. ಮನುಕುಲದ ಅತ್ಯಂತ ದೊಡ್ಡ temptation. ಹೀಗಾಗಿ, ನೆಹರೂವನ್ನು ಆಯ್ಕೆ ಮಾಡುವ ಮೂಲಕ ಆ ಪ್ರಲೋಭನೆಗೂ ಒಂದು ಅಧಿಕಾರದ ಅವಕಾಶ ಕೊಟ್ಟನಂತೆ. ದಿಲ್ಲಿಯಲ್ಲೂ ಧೀಮಂತರಿಗೆ ಆಗಾಗ ಸತ್ಯ ಹೊಳೆಯುತ್ತದೆ.

ಕಳೆದ ೫೦ ವರ್ಷಗಳಲ್ಲಿ ನಡೆದದ್ದಕ್ಕೆಲ್ಲ ನಾನು ನೆಹರೂ ವನ್ನು ದೂರಲಾರೆ. ಬದಲಿಗೆ ನನ್ನನ್ನೆ ದೂರುತ್ತೇನೆ. ನಾನು ಯಾವಾಗಲೂ ಹೀಗೆಯೆ ಎಂದು ನನ್ನ ಬಗ್ಗೆ ಬರೆದ ಪಂಡಿತರು ಹೇಳುತ್ತಿರುತ್ತಾರೆ. ಲೋಕ ಬೇರೆ, ನಾನು ಬೇರೆ ಎಂದು ನನಗೆ ಅನ್ನಿಸಿಯೇ ಇಲ್ಲ. ನನ್ನ ಒಡಲ ಕಳವಳಕ್ಕೂ ಸಮಾಜದ ಅಸ್ವಸ್ಥತೆಗೂ ಆಳವಾದ ಸಂಬಂಧವಿದೆ. ನನ್ನ ಕುಡುಕ ಮಗ ಹರಿಲಾಲ್ ಬಗ್ಗೆ ನಾನು ಬರೆದ ಪತ್ರವೊಂದನ್ನು ವಿದ್ವಾಂಸರು ನನಗೇ ಜ್ಞಾಪಿಸುತ್ತಾರೆ. ಅದರ ಮೊದಲ ವಾಕ್ಯ: 'ಹರಿಲಾಲನ ಗ್ಲಾಸು ಯಾವಾಗಲೂ ಕೆಂಪಗೆ.' ಅದು ರೊಮ್ಯಾಂಟಿಕ್ಕರ ಪದ್ಯದ ಹಾಗೆ. ನಂತರ ನನ್ನ ಮಗನ ನೈತಿಕ ಅವನತಿಯ ಬಗ್ಗೆ ಒಂದೆರಡು ಮಾತು. ಅವನು ಯಾಕೆ ಹೀಗಾದ? ಅವನನ್ನು ಹುಟ್ಟಿಸಿದ ದಿನಗಳು ನನಗೆ ಇನ್ನೂ ನೆನಪಿದೆ. ಒಡಲೊಳಗೆ ಕಾಮದ ಪಶು ಧೀಂಕಿಡುತ್ತಿದ್ದ ದಿನಗಳು. ಆ ನನ್ನ ಪಾಪಿಷ್ಠ ಪ್ರವೃತ್ತಿಯ ಫಲ ಹರಿಲಾಲ್. ಅವನ ಭೀಕರ ಅವನತಿ, ಕುಡುಕ-

ರಾಷ್ಟ್ರದ ಪ್ರಗತಿ ಎನ್ನುವುದು ಒಂದು ಆಧುನಿಕ ಕನಸು. ಅದಕ್ಕಾಗಿ ನಾಯಕರು ಏನನ್ನು ಬೇಕಾದರೂ ಬಲಿಕೊಡುತ್ತಾರೆ. ಆ ಆಧುನಿಕ ರಾಷ್ಟ್ರದಲ್ಲಿ ಮುಸ್ಲಿಮರು, ಹರಿಜನರು, ಆದಿವಾಸಿಗಳು, ಗ್ರಾಮಭಾರತದ ದರಿದ್ರ ನಾರಾಯಣರು ಧೂಳೀಪಟವಾಗಿ ಬಿಡುತ್ತಾರೆ.

ಹುಚ್ಚಾಟಗಳ ಮೂಲಕ ನನ್ನನ್ನೆ ನಾನು ಶಿಕ್ಷಿಸಿಕೊಳ್ಳುತ್ತಿದ್ದೇನೆ. ಹರಿಲಾಲನ ಕೆಂಪನೆ ಗ್ಲಾಸಿಗೂ ನನ್ನ ಆತ್ಮಕ್ಕೂ ಸಂಬಂಧವಿದೆ.

ನನ್ನ ಮಟ್ಟಿಗೆ ಜವಹರಲಾಲ್ ಅಧಿಕಾರಕ್ಕೆ ಬಂದ ದಿನಗಳು ಮಹಾಕ್ಷೋಭೆಯ ದಿನಗಳು. ನನ್ನನ್ನು ಪೂರ್ತಿ ಯಾಗಿ ಆವರಿಸಿದ್ದದ್ದು ಒಂದೇ: ಹಿಂದು-ಮುಸ್ಲಿಮರ ರಕ್ತಪಾತ. ಪಶು ಪಕ್ಷಿಗಳು ಕೂಡಾ ಅದನ್ನೆ ಹೇಳುತ್ತಿವೆ ಎನ್ನಿಸಿತ್ತು. ಒಂದು ದಿನ ಹಿಂಸಾತ್ಮಕ ದೊಂಬಿ ಪ್ರದೇಶಗಳಲ್ಲಿ ತಿರುಗಾಡು ತ್ತಿದ್ದಾಗ ಒಂದು ಟಿಬೆಟ್‌ನ ನಾಯಿ ನನ್ನನ್ನು ಒಂದೇ ಸಮನೆ ಬಿಡದೆ ಹಿಂಬಾಲಿಸಿತು. ಆ ಮೂಕಪ್ರಾಣಿ ನನಗೆ ಏನೋ ಹೇಳುತ್ತಿತ್ತು. ವಿಧೇಯನಾಗಿ ನಾಯಿಯನ್ನು ಹಿಂಬಾಲಿಸಿದೆ. ಆದರೆ ಮುಸ್ಲಿಂ ಯಜಮಾನನ ಮನೆಯ ಎಲ್ಲರೂ ನರಮೇಧದಲ್ಲಿ ಸತ್ತು ಬಿದ್ದಿದ್ದರು. ಗಾಂಧಿಯ ಜತೆ ಪಶುಪ್ರಾಣಿಗಳು ಕೂಡಾ ಮಾತನಾಡುತ್ತವೆ ಎಂಬ ಪುಕಾರಿಗೆ ಮತ್ತಷ್ಟು ರೆಕ್ಕೆಪುಕ್ಕ ಹಬ್ಬಿತು.

ಇಂಥ ದಿಗ್ಭ್ರಮೆಯ ದಿನಗಳಲ್ಲಿ ನನಗೆ ಭಾರತವನ್ನು ಒಂದು ರಾಷ್ಟ್ರವನ್ನಾಗಿ ಕಟ್ಟುವ ದಾರಿ ಅಷ್ಟು ಮುಖ್ಯವಾಗಿ ಕಾಣಲಿಲ್ಲ. ನೆಹರೂ ಸಮಾಜವಾದಿಯೋ ಅರೆ ಬಂಡವಾಳ ಶಾಹಿಯೋ ಎಂಬುದರ ಬಗ್ಗೂ ಯೋಚಿಸಲಿಲ್ಲ. ಆಗ ನನಗೆ ಎದುರಿಗಿದ್ದದ್ದು ಒಂದೇ: ಭಾರತ ಒಂದು ಸಮಾಜವಾಗಿ ನೆಮ್ಮದಿಯಿಂದ, ಶಾಂತಿಯಿಂದ ಬಾಳಬೇಕು... ಮುಸಲ್ಮಾನರು, ಹರಿಜನರು ಭಯವಿಲ್ಲದೆ ಬಾಳಬೇಕು. ಇದಕ್ಕೆ ನನಗೆ ಸೂಕ್ತ ಎಂದು ಕಂಡ ವ್ಯಕ್ತಿ ಒಬ್ಬನೇ: ಆತ ಜವಹರಲಾಲ್. ಆತನ ಗ್ಲಾಸು ಕೂಡಾ ಆಗಾಗ ಕೆಂಪಾಗುತ್ತಿತ್ತು ಎನ್ನುವುದನ್ನು ಮರೆತೆ. ಉಳಿದವರು ಪಟೇಲ್, ರಾಜೇಂದ್ರಪ್ರಸಾದ್ - ಇವರು ಮುಸಲ್ಮಾನರ ವಿಚಾರದಲ್ಲಿ ತಳೆದಿದ್ದ ಧೋರಣೆ ಕಂಡು ನಾನು ಹೆದರಿದ್ದೆ. ಅಂಥವರ ಕೈಗೆ ರಾಜ್ಯ ಕೊಡುವುದೆ? ಅಂಥವರ ಕೆಳಗೆ ಮುಸಲ್ಮಾನರು, ಹರಿಜನರು ನೆಮ್ಮದಿಯಿಂದ ಬಾಳಿಯಾರೆ?

ರಾಷ್ಟ್ರದ ಪ್ರಗತಿ ಎನ್ನುವುದು ಒಂದು ಆಧುನಿಕ ಕನಸು. ಅದಕ್ಕಾಗಿ ನಾಯಕರು ಏನನ್ನು ಬೇಕಾದರೂ ಬಲಿಕೊಡು ತ್ತಾರೆ ಎನ್ನುವುದೂ ನನಗೆ ಗೊತ್ತು. ಆ ಬಲಿ ನಾನೇ ಆಗಬಹುದು ಎಂದೂ ನನ್ನ ಆತ್ಮಕ್ಕೆ ಹೊಳೆದಿದೆ. ಆ ಆಧುನಿಕ ರಾಷ್ಟ್ರದಲ್ಲಿ ಮುಸ್ಲಿಮರು, ಹರಿಜನರು, ಆದಿವಾಸಿಗಳು, ಗ್ರಾಮಭಾರತದ ದರಿದ್ರ ನಾರಾಯಣರು ಧೂಳೀಪಟವಾಗಿ ಬಿಡುತ್ತಾರೆ. ಆಸೆ ಮತ್ತು ಯಂತ್ರಗಳ ಚಕ್ರಗಳ ಕೆಳಗೆ ಸಿಕ್ಕು ನುಗ್ಗುನುರಿಯಾಗುತ್ತಾರೆ.

ಹೊರಗೆ ಅಪಾರ ಸದ್ದು ಗದ್ದಲ. ಅದೇ ಮುಸ್ಲಿಮರು, ಹರಿಜನರು, ಆದಿವಾಸಿಗಳು, ಹಳ್ಳಿಗರು ಸೇರಿ ಕಾಯುತ್ತಿದ್ದಾರೆ. ಆ ಜನವೂ ಅಪಾರ ಗೊಂದಲದಲ್ಲಿದ್ದಾರೆ. ಐವತ್ತರ ಸ್ವಾತಂತ್ರ್ಯೋತ್ಸವ ಹಬ್ಬವೊ? ಶೋಕವೊ? ಸಂಭ್ರಮವೊ? ಸಿಟ್ಟೊ? ೧೯೪೭ರಲ್ಲೂ ಆ ಆಚರಣೆಗಳಲ್ಲಿ ನಾನು ಭಾಗವಹಿಸಿದವನಲ್ಲ. ಈಗಲೂ ನನ್ನ ನಿಲುವು ಸ್ಪಷ್ಟವಿದೆ. ೧೯೪೭ರಲ್ಲಿಯೇ ನನ್ನ ಅನುಯಾಯಿಗಳು ನನ್ನ ಸಾವಿಗಾಗಿ ಕಾಯುತ್ತಿದ್ದರು. ಮೇಲುನೋಟಕ್ಕೆ ನಾನು ರಾಷ್ಟ್ರದ ಕೇಂದ್ರ, ಆದರ್ಶ. ಒಳಗೆ ನಾನು ಅವರಿಗೆ ದೊಡ್ಡ ಮುಜುಗರ; ಪಳೆಯುಳಿಕೆ. ರಾಷ್ಟ್ರದ ಹೆದ್ದಾರಿಯಲ್ಲಿ ಕುಂಟುವ ಎತ್ತಿನ ಗಾಡಿ ನಾನು. ಇದು ಶೋಕದ ದಿನ, ಸಿಟ್ಟಿನ ದಿನ ಎಂದು ಕಾಯುತ್ತಿರುವ ಜನಕ್ಕೆ ಹೇಳಬೇಕಾಗಿದೆ.

- ಗಾಂಧಿ ಹೊರಗೆ ಹೊರಟರು.

-ಮುಂದೆ ನಡೆದದ್ದನ್ನು ಬಾಬಾ ಸಾಹೇಬರಾಗಲೀ ಗಾಂಧಿಯಾಗಲೀ ಹೇಳಲಾರರು. ಮುಂದೆ ನಡೆದದ್ದು ಇಷ್ಟೆ ಅದನ್ನು ನಿರ್ಭಾವುಕನಾದ ಚರಿತ್ರಕಾರ ಹೇಳಬೇಕು. ಸ್ವರ್ಗದ ದೊರೆಗೆ ನೆರೆದಿದ್ದ ಜನ ಜಂಗುಳಿ ನೋಡಿ ಭೀತಿ ಉಕ್ಕಿತು. ದೇವರಿಗೆ ಜನವೆಂದರೆ ಭಯ. ಜತೆಗೆ ಅಸಹನೆ. ತುರುಕರು, ದಲಿತರು, ಹಳ್ಳಿಯ ಕೊಳಕರು, ಕಾಡುಮೇಡಿನ ಜನ. ದೇವರಿಗೆ ಶಾಶ್ವತ ತಿಕ್ಕಲು ಎಂದು ಆಸ್ತಿಕರಿಗೆ ಮಾತ್ರ ಗೊತ್ತು. ದೇವರ ಹುಚ್ಚನ್ನು ಶ್ರೀವೈಷ್ಣವರು 'ಲೀಲಾಮೃತ' ಎನ್ನುತ್ತಾರೆ. ಎರಡು ಕೋಣೆಗಳ ಹೊರಗೆ ಸೇರಿದ ಜನ ಏನು ಕೇಳುತ್ತಿದ್ದಾರೆ ಎನ್ನುವುದು, ಗದ್ದಲ ಏಕೆ\ಎಂದು ಸ್ವರ್ಗದ ದೊರೆಗೆ ತಿಳಿಯಲಿಲ್ಲ. ಮಾರುಕಟ್ಟೆಯ ಸ್ವರ್ಗ ಅಬಾಧಿತವಾಗಿ ಬೆಳೆಯಬೇಕಾದ ಆದರ್ಶದ ಮುಂದೆ ಈ ಎಲ್ಲ ಜನ ಜಂಗುಳಿ ಅನಾವಶ್ಯಕ ಕಿತಾಪತಿ, ತರಲೆಗಳಂತೆ ಕಾಣತೊಡಗಿತು. ಸ್ವರ್ಗದ ದೊರೆ ಪೊಲೀಸರಿಗೆ ಹೇಳಿದರು;

'ಆ ಇಬ್ಬರು ತರಲೆಗಳನ್ನು ಜೀಪಿನಲ್ಲಿ ಹಾಕಿಕೊಂಡು ಹೋಗಿ. ಗಾಂಚಲಿ ಮಾಡಿದರೆ ಹಿಂದುಗಡೆಯಿಂದ ದೋಡೋ ಜಾಮೂನ್ ದೇದೊ.' (ಬಿಹಾರದಲ್ಲಿ ನಕ್ಸಲೀ ಯರನ್ನು ಪೊಲೀಸರು ಬೇಟೆಯಾಡುವಾಗ ಹೇಳುವ ಮಾತು ಇದು ಎಂದು ಸಂಶೋಧಕರು ಹೇಳುತ್ತಾರೆ. ನಕ್ಸಲೀಯರನ್ನು ಓಡು ಎಂದು ಹೇಳಿ, ಅವರು ಓಡಿದಾಗ ಹಿಂದುಗಡೆಯಿಂದ ಗುಂಡು ಹಾರಿಸುವುದನ್ನು ಜಾಮೂನ್ ದೇದೋ ಎನ್ನುತ್ತಾರೆ.) ಸ್ವರ್ಗದ ದೊರೆಗೆ ಅವರಿಬ್ಬರೂ ಚಾರಿತ್ರಿಕ ಶತ್ರುಗಳು ಎಂದೂ ಗೊತ್ತಿಲ್ಲ. ಇಬ್ಬರನ್ನೂ ಜೀಪಿನಲ್ಲಿ ಎತ್ತಿ ಹಾಕಿಕೊಂಡು ಹೋಗಲಾಯಿತು.

(ಸೌಜನ್ಯ : ಸಂಸ್ಕೃತಿ ಕಥನ)

ಉಚಲ್ಯಾ ಮತ್ತು ಸಾಂಸ್ಕೃತಿಕ ಸಂಘರ್ಷ

ಪುಸ್ತಕ ವಿಮರ್ಶೆ

ಸ್ಮಶಾನದಲ್ಲಿ ನಿವಾಳಿಸಿ ಬಿಸಾಡಿದ ತೆಂಗಿನಕಾಯಿ ತಿನ್ನುವುದು, ಬೀಸುವ ಕಲ್ಲಿನ ಮೇಲೆ ಉಪ್ಪುಹಾಕಿ ನೆಕ್ಕುವುದು, ಮೇಲುವರ್ಗದ ಸಮಾರಾಧನೆಯಲ್ಲಿ 'ನಮಗೂ ಬಡಿಸ್ರೊ' ಎಂದು ಹಸಿವಿನಿಂದ ಕಿರುಚುವುದು, ಅದೇ ಸಂದರ್ಭದಲ್ಲಿ ಪತ್ರಾವಳಿಗಾಗಿ ನಾಯಿಗಳ ಕಚ್ಚಾಟ, ಪರಸ್ಪರ ಸಮನಾಗಿ ಬಿಂಬಿತವಾಗಿರುವುದು ಆ ಜನರ ದುರ್ಗತಿಯನ್ನು ಧ್ವನಿಸುತ್ತದೆ. ಕೃತಿಯ ಗರ್ಭದಲ್ಲಿ ಹಸಿವಿನ ಯಾತನೆ ವಿಸ್ಮಯಕಾರಿ ರೀತಿಯಲ್ಲಿ ಚಿತ್ರಿತವಾಗಿದೆ. ಸ್ವತಂತ್ರ ಭಾರತದಲ್ಲಿ ಬುಡಕಟ್ಟು ಜನರ ಹೀನಾಯ ಸ್ಥಿತಿಯನ್ನು, ಸಮಾಜದ ಕ್ರೂರ ಮುಖವನ್ನು ಈ ಕೃತಿ ಬೆತ್ತಲೆ ಮಾಡುತ್ತದೆ.

○ ಡಾ|| ಸಣ್ಣರಾಮ

ಜಗತ್ತಿನ ಎಲ್ಲಾ ದೇಶಗಳಲ್ಲಿ ಸಾಹಿತ್ಯ ಕಾಲಕಾಲಕ್ಕೆ ಹೊಸ ಹೊಸ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ಬದ್ಧವ್ಯವಸ್ಥೆಗೆ ಮುಖಾಮುಖಿಯಾಗಿ ನಿಂತು ಬಿಸಿಮುಟ್ಟಿಸುತ್ತಾ ಬಂದಿರುವುದನ್ನು ಇತಿಹಾಸದುದ್ದಕ್ಕೂ ಕಾಣಬಹುದು. ಭಾರತೀಯ ಸಾಹಿತ್ಯಕ ಸಂದರ್ಭದಲ್ಲಿ ಬದ್ಧವ್ಯವಸ್ಥೆಗೆ ಚಾಟಿ ಏಟನ್ನು ಕೊಡುತ್ತ ಬೆಳೆದ ಚಾರ್ವಾಕ ತತ್ವ ಇದೇ ಪಂಕ್ತಿಗೆ ಸೇರಿದೆ. ಅರ್ಥಹೀನ ನಡವಳಿ ಡಾಂಬಿಕ ವಿಚಾರಗಳನ್ನು ಚಾರ್ವಕ ಪಂಥ ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತದೆ. ಬೌದ್ಧ-ಜೈನ ಧರ್ಮಗಳು ಭಾರತದಲ್ಲಿ ವಿಚಾರವಾದ ಬೆಳೆಯಲು ಗಮನಾರ್ಹ ಕಾಣಿಕೆಯನ್ನು ನೀಡಿವೆ. ಭಾರತದಲ್ಲಿ ಬದ್ಧವ್ಯವಸ್ಥೆಯ ಜೊತೆಜೊತೆಯಲ್ಲಿ ಅಷ್ಟೇ ಪ್ರಬುದ್ಧವಾದ ವೈಚಾರಿಕತೆ ಬೆಳೆದು ನಿಲ್ಲಲು ಚಾರ್ವಾಕ ಪಂಥ ಬೌದ್ಧ-ಜೈನ ಧರ್ಮದ ಕೊಡುಗೆ ಮಹತ್ವಪೂರ್ಣವಾದುದು.

ಉಚಲ್ಯಾ
ಲೇ. ಲಕ್ಷ್ಮಣ ಗಾಯಕವಾಡ
ಅನು : ಚಂದ್ರಕಾಂತ ಪೋಕಳೆ
ಪ್ರಕಾಶನ : ನವಕರ್ನಾಟಕ ಪ್ರಕಾಶನ,
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು - ೦೧
ಪುಟ : ೧೩೬, ಬೆಲೆ : ರೂ. ೪೫/-

ಆಧುನಿಕ ಕಾಲದಲ್ಲಿ ಅಂಬೇಡ್ಕರ್ ವಿಚಾರಧಾರೆ ಹೊಸ ಚಿಂತನೆಯ ಅಲೆಯನ್ನು ಹುಟ್ಟುಹಾಕಿತು. ಮನುಷ್ಯನಿಂದ ಮನುಷ್ಯನ ಮೇಲೆ ನಡೆಯುತ್ತಿರುವ ದೌರ್ಜನ್ಯ, ಶೋಷಣೆಯನ್ನು ವಿಶ್ಲೇಷಿಸುವ, ಪ್ರಶ್ನಿಸುವ ಪ್ರವೃತ್ತಿ ಬೆಳೆಯಿತು. ಎಪ್ಪತ್ತರ ದಶಕದಲ್ಲಿ ಅಂಬೇಡ್ಕರ್‌ವಾದ ಭಾರತೀಯ ಸಾಹಿತ್ಯವನ್ನು ಪ್ರವೇಶಿಸಿತು. ಬದ್ಧವ್ಯವಸ್ಥೆಯನ್ನೇ ಪೋಷಿಸಿಕೊಂಡು ಬಂದಿದ್ದ ಭಾರತೀಯ ದೇಶಿ ಭಾಷೆಗಳಲ್ಲಿ ಹೊಸ ಅಲೆಯೊಂದು ಎದ್ದಿತು. ದಲಿತರ ಅನುಭವಗಳು, ನೋವು-ನಲಿವುಗಳು ಸಾಹಿತ್ಯ ಲೋಕವನ್ನು ಪ್ರವೇಶಿಸಿ ವಿಚಾರ ಸಂಘರ್ಷವನ್ನು ಹುಟ್ಟುಹಾಕಿತು. ಇದರಿಂದ ದೇಶೀಯ ಸಾಹಿತ್ಯಕ್ಕೆ ಹೊಸ ದಿಕ್ಕು-ದೆಸೆ ಪ್ರಾಪ್ತವಾಯಿತು.

ಎಪ್ಪತ್ತರ ದಶಕದಲ್ಲಿ ಅಂಬೇಡ್ಕರ್ ಚಿಂತನೆ ಮರಾಠಿ ಸಾಹಿತ್ಯವನ್ನು ಪ್ರವೇಶಿಸಿತು. 'ದಲಿತ ಪ್ಯಾಂಥರ್' ಸಂಘಟನೆಯು ಅಂಬೇಡ್ಕರ್ ಚಿಂತನೆಗೆ ಗಟ್ಟಿಯಾದ ತಳಹದಿಯನ್ನು ಒದಗಿಸಿತು. ದಲಿತ ಬರಹಗಾರರು ಜೀವನ ಚರಿತ್ರೆಯ ಮೂಲಕ ಅಂಬೇಡ್ಕರ್ ಚಿಂತನೆಯನ್ನು ಹರಿಬಿಟ್ಟರು. ಮರಾಠಿ ಸಾಹಿತ್ಯದಲ್ಲಿ ರಚನೆಯಾದ ದಲಿತರ 'ಜೀವನ ಚರಿತ್ರೆ'ಗಳು ಶೋಷಣೆಯ ಅನಂತ ಮುಖಗಳನ್ನು ತೆರೆದಿಟ್ಟವು. ಬದ್ಧಸಾಹಿತ್ಯ ಅದುವರೆಗೂ ಕಟ್ಟಿಕೊಟ್ಟಿದ್ದ ಸುಂದರ ಕನಸಿನ ಗೋಡೆಯನ್ನು ಛಿದ್ರಮಾಡಿ ಹೊಸ ಅನುಭವವನ್ನು ಸಾಹಿತ್ಯವಾಹಿನಿಗೆ ನೀಡಿದವು. ಸೋನಕಾಂಬಳೆಯ 'ಆಠವಣಿಚಪಕ್ಷಿ' ದಯಾಪವಾರರ 'ಬಲೂತ' ಲಕ್ಷ್ಮಣಮಾನೆಯ 'ಉಪರಾ' ಮಲ್ಲಿಕಾಶೇಖ ಅವರ 'ಮೆಲಾಉದ್ವಸ್ತವಯಾಚೆ ಆಹೇ' ಶರಣಕುಮಾರ ಲಿಂಬಾಳೆಯ 'ಅಕ್ಕರಮಾಸಿ' ಇವೇ ಮೊದಲಾದವು ಮರಾಠಿ ಸಾಹಿತ್ಯದಲ್ಲಿ ಹೊಸ ಅಲೆಯನ್ನು ಎಬ್ಬಿಸಿದವು. ಮರಾಠಿ ಜೀವನ ಚರಿತ್ರೆಗಳಲ್ಲಿ ಲಕ್ಷ್ಮಣಗಾಯಕವಾಡರ 'ಉಚಲ್ಯಾ' ಮಹತ್ವದ ಕೃತಿ.

ಜೀವನ ಚರಿತ್ರೆಯನ್ನು ಕುರಿತಂತೆ ಓದುಗ ಕಟ್ಟಿಕೊಂಡ ಮಾದರಿಗಳನ್ನು ಉಚಲ್ಯಾ ಮೊದಲಿಗೆ ಒಡೆದು ಹಾಕುತ್ತದೆ. ಇದೇ ಈ ಕೃತಿಯ ಶಕ್ತಿಯೂ ಹೌದು. ಬದ್ಧ ವ್ಯವಸ್ಥೆಗೆ ಮುಖಾಮುಖಿಯಾಗುತ್ತಲೇ ಅನೇಕ ಪ್ರಶ್ನೆಗಳನ್ನು ನಾಗರಿಕ ಸಮಾಜಕ್ಕೆ ಒಡ್ಡುತ್ತದೆ. ವಸಾಹತುಶಾಹಿ ಸರ್ಕಾರ ಸಮುದಾಯ ಒಂದಕ್ಕೆ ಕಳ್ಳರೆಂದು ಹಣೆಪಟ್ಟಿಹಚ್ಚಿ ಕಳ್ಳರನ್ನಾಗಿ ಮಾಡಿದರೇ, ಸ್ವತಂತ್ರ ಭಾರತದ ನಾಗರಿಕ ಸಮಾಜದಲ್ಲಿಯೂ ಅದೇ ಸ್ಥಿತಿ ಮುಂದುವರೆದಿರುವ ದುರಂತವನ್ನು ಕೃತಿಯು ತೆರೆದಿಡುತ್ತದೆ. 'ಹೊಲಮನೆಯಿಲ್ಲ, ನಿಶ್ಚಿತವಾದ ಒಂದು ಊರಿಲ್ಲ, ಅಷ್ಟೇ ಏಕೆ ಜಾತಿಯೂ ಇಲ್ಲ' - ಎಂಬ ವಾಕ್ಯದಿಂದ ಕೃತಿಯೂ ಪ್ರಾರಂಭವಾಗಿ ಇವು ಯಾವುದು ಇಲ್ಲದ ಸಮುದಾಯ ಒಂದರ ಬದುಕಿನ ಅನಂತನೋವನ್ನು ತೆರೆದಿಡುತ್ತದೆ. ಹೊಲಮನೆಯಿರುವ, ನಿಶ್ಚಿತ ನೆಲೆಯಿರುವ ಇಲ್ಲದಿರುವ, ಜಾತಿ ಇರುವ ಇಲ್ಲದಿರುವ ಸ್ಥಿತಿಯನ್ನು ಮುಖಾಮುಖಿಯಾಗಿಸುತ್ತದೆ. ಈ ಮುಖಾ ಮುಖಿಗಳ ನಡುವೆ ಕೃತಿ ಬೆಳೆಯುವ ರೀತಿ ವಿಸ್ಮಯಕಾರಿಯಾಗಿದೆ.

ಉಚಲ್ಯಾ ಒಂದು ಕಡೆ ವ್ಯವಸ್ಥೆಗೆ ಮುಖಾಮುಖಿಯಾಗುತ್ತಲೇ ಬದುಕಿನ ಹುಡುಕಾಟವನ್ನು ನಡೆಸುತ್ತದೆ. ವ್ಯಕ್ತಿ ಸಮುದಾಯದ ಅಸ್ತಿತ್ವದ ಹುಡುಕಾಟ, ಹಸಿವಿಗೆ ಅನ್ನದ ಹುಡುಕಾಟ, ಬದುಕಿಗೆ ವೃತ್ತಿಯ ಹುಡುಕಾಟ ಈ ಕೃತಿಯ ಮುಖ್ಯ ನೆಲೆಯಾಗಿದೆ. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಶೂದ್ರಾತಿ ಶೂದ್ರರಿಗೆ ಜಾತಿ ಎಂಬುದಿದೆ. ನಿಲ್ಲಲು ನೆಲೆಯಿದೆ. ಆದರೆ ಕ್ರಿಮಿನಲ್ಸ್ ಟ್ರೈಬ್ಸ್ ಎಂದು ಹಣೆಪಟ್ಟಿ ಹೊತ್ತ ಅಲೆಮಾರಿ ಉಚಲ್ಯಾ ಸಮುದಾಯಕ್ಕೆ ನಿಶ್ಚಿತ ನೆಲೆ ವೃತ್ತಿ ಇವ್ಯಾವುದು ಇಲ್ಲದ ದುಃಸ್ಥಿತಿ. ಚೂರು ಪಾರು ಅಕ್ಷರ ಕಲಿತ ಲಕ್ಷ್ಮಣಗಾಯಕವಾಡ ಶಾಲೆಯನ್ನು ಸ್ಥಾಪಿಸುವುದು, ಕತ್ತಿಹತೆಡಾ ಮೋರ್ಚಾ ಕಟ್ಟುವುದು, ಚುನಾವಣೆಯಲ್ಲಿ ಸ್ಪರ್ಧಿಸುವುದು ಅಸ್ತಿತ್ವದ ಹುಡುಕಾಟವೇ ಆಗಿದೆ.

ಹಸಿವಿನ ಯಾತನೆಯನ್ನು ಈ ಕೃತಿ ಅನಾವರಣಗೊಳಿಸಿದಷ್ಟು ಬಹುಶಃ ಕನ್ನಡದ ಇತರ ಯಾವ ಕೃತಿಗಳಲ್ಲಿಯೂ ಕಾಣಸಿಗುವುದಿಲ್ಲ. ಉಚಲ್ಯಾ ಹಸಿವಿನ ತೀವ್ರತೆಯನ್ನು ಎಳೆಎಳೆಯಾಗಿ ಬಿಚ್ಚಿಡುತ್ತದೆ. ಹಸಿದ ಸಮುದಾಯ ಮೇಲುವರ್ಗದ ಹೆಂಗಸರು ಕಕ್ಕಸ್ಸುಮಾಡುವ ಜಾಗದಲ್ಲಿ ಕದ್ದು ತಂದ ಹಂದಿಯನ್ನು ಅರೆಬರೆಸುಟ್ಟು ಮಾಂಸವನ್ನು (ಸರಿಯಾಗಿ ಸುಡುವಷ್ಟು ಹೊತ್ತು ಹಸಿವು ತಡೆಯಲಾಗದೆ) ರಕ್ತವಸರುತ್ತಿದ್ದಂತೆ ತಿನ್ನುವ ದೃಶ್ಯ ಬೀಭತ್ಸ ಎನಿಸಿದರೂ ಅದರ ಹಿಂದಿನ ಯಾತನೆ ಅರಿವಾಗುತ್ತಿದ್ದಂತೆ ಹೃದಯ ಕಿತ್ತುಬರುತ್ತದೆ. ಸ್ಮಶಾನದಲ್ಲಿ ನಿವಾಳಿಸಿ ಬಿಸಾಡಿದ ತೆಂಗಿನಕಾಯಿ ತಿನ್ನುವುದು, ಬೀಸುವ ಕಲ್ಲಿನ ಮೇಲೆ ಉಪ್ಪುಹಾಕಿ ನೆಕ್ಕುವುದು, ಮೇಲುವರ್ಗದ ಸಮಾರಾಧನೆಯಲ್ಲಿ 'ನಮಗೂ ಬಡಿಸ್ರೊ' ಎಂದು ಹಸಿವಿನಿಂದ ಕಿರುಚುವುದು, ಇವರ ಕಿರುಚಾಟ ಅದೇ ಸಂದರ್ಭದಲ್ಲಿ ಪತ್ರಾವಳಿಗಾಗಿ ನಾಯಿಗಳ ಕಚ್ಚಾಟ, ಪರಸ್ಪರ ಸಮನಾಗಿ ಬಿಂಬಿತವಾಗಿರುವುದು ಆ ಜನರ ದುರ್ಗತಿಯನ್ನು ಧ್ವನಿಸುತ್ತದೆ. ಕೃತಿಯ ಗರ್ಭದಲ್ಲಿ ಹಸಿವಿನ ಯಾತನೆ ವಿಸ್ಮಯಕಾರಿ ರೀತಿಯಲ್ಲಿ ಚಿತ್ರಿತವಾಗಿದೆ. ಸ್ವತಂತ್ರ ಭಾರತದಲ್ಲಿ ಬುಡಕಟ್ಟು ಜನರ ಹೀನಾಯ ಸ್ಥಿತಿಯನ್ನು, ಸಮಾಜದ ಕ್ರೂರ ಮುಖವನ್ನು ಬೆತ್ತಲೆ ಮಾಡುತ್ತದೆ.

ಉಚಲ್ಯಾ ಒಂದು ಕಡೆ ಬದ್ಧವ್ಯವಸ್ಥೆಯನ್ನು ಮುಖಾಮುಖಿಯಾಗಿಸಿದರೆ ಮತ್ತೊಂದು ಕಡೆ ಸಾಂಸ್ಕೃತಿಕ ಸಂಘರ್ಷವನ್ನು ಧ್ವನಿಸುತ್ತದೆ. ಅಕ್ಷರ ಸಂಸ್ಕೃತಿ ಮತ್ತು ಅನಕ್ಷರಸ್ಥ ಉಚಲ್ಯಾ ಸಂಸ್ಕೃತಿಯ ನಡುವಿನ ಸಂಘರ್ಷ ಕೃತಿಯ ಮುಖ್ಯ ಆಶಯವಾಗಿದೆ. ಅಕ್ಷರ ಸಂಸ್ಕೃತಿಯು ಉಚಲ್ಯಾ ಸಂಸ್ಕೃತಿಯನ್ನು ಅಕ್ಷರ ಕಲಿಕೆಯಿಂದ ದೂರಿಡಲು ಕುತಂತ್ರ ನಡೆಸುವುದನ್ನು ಕೃತಿಯು ಸೂಕ್ಷ್ಮವಾಗಿ ತೆರೆದಿಡುತ್ತದೆ. ಲಕ್ಷ್ಮಣಗಾಯಕವಾಡ ಶಾಲೆಗೆ ಸೇರಿದಾಗ ಮೇಲುವರ್ಗದ ವಿದ್ಯಾರ್ಥಿಗಳು ಅವನನ್ನು ಅಣುಕಿಸುವುದು, ಕಳ್ಳರನ್ನು ಹುಡುಕಲು ಬಂದ ಪೊಲೀಸರು 'ಹೋಗೋ ಸೂಳೆಮಗ್ನೆ

ನಿಮ್ಮಪ್ಪ ಎಂದಾದರೂ ಶಾಲೆಗೆ 'ಹೋಗ್ಯಾನ' ಎಂದು ತಿರಸ್ಕರಿಸುವುದರ ಅರ್ಥ ಸುಸ್ಪಷ್ಟ. ಅಕ್ಷರ ಸಂಸ್ಕೃತಿಗೆ ಪ್ರತಿಯಾಗಿ ಉಚಲ್ಯಾ ಸಂಸ್ಕೃತಿಯೂ ಶತಶತಮಾನಗಳಿಂದ ವಂಚಿಸುತ್ತಾ ಬಂದ ಅಕ್ಷರ ಸಂಸ್ಕೃತಿಯನ್ನು ತಿರಸ್ಕಾರದಿಂದಲೇ ನೋಡುತ್ತದೆ. ತನ್ನ ಸದಸ್ಯರು ಅಕ್ಷರ ಸಂಸ್ಕೃತಿಗೆ ಹೋಗದಂತೆ ಕಳ್ಳತನದ ತರಬೇತಿ ಕೊಡುವುದು, ಪೊಲೀಸರ ಶಿಕ್ಷೆಯನ್ನು ಸಹಿಸಿಕೊಳ್ಳಲು ಕಠಿಣ ತರಬೇತಿ ಕೊಡುವುದು ಶಾಲೆಗೆ ಸೇರಿದ ಲಕ್ಷ್ಮಣ ಗಾಯಕವಾಡನ ತಂದೆಗೆ 'ಶಾಲೆಯಲ್ಲಿ ಏನಿದೆ ಮಣ್ಣು ಕಳ್ಳತನ ಕಲಿಸು! ಕಳ್ಳತನ' - ಎಂದು ನೆರೆಹೊರೆಯವರು ಹೇಳುವುದು ಅಕ್ಷರ ಸಂಸ್ಕೃತಿಗೆ ತೋರುವ ಪ್ರತಿಭಟನೆಯೇ ಆಗಿದೆ.

ಸಾಂಸ್ಕೃತಿಕ ಸ್ಥಿತ್ಯಂತರವು ಕೃತಿಯ ಒಳಗಡೆ ವಿಶಿಷ್ಟ ಆಯಾಮವನ್ನು ಸೃಷ್ಟಿಸಿ ಕೃತಿಗೆ ಅದ್ಭುತವಾದ ಚಲನಾಶಕ್ತಿಯನ್ನು ಕೊಟ್ಟಿದೆ. ಒಂದು ಅನಕ್ಷರಸ್ಥ ಸಮುದಾಯ ತನ್ನ ಪರಿಧಿಯಿಂದ ಸರಿದು ಅಕ್ಷರಸಂಸ್ಕೃತಿಗೆ ಕಾಲಿಟ್ಟಾಗ ಇಡೀ ಸಮುದಾಯ ಆ ಸಂಕ್ರಮಣಾವಸ್ಥೆಯಲ್ಲಿ ಪಡುವ ತವಕ ತಲ್ಲಣಗಳನ್ನು ಕೃತಿ ಅತ್ಯಂತ ಸಮರ್ಥವಾಗಿ ಕಟ್ಟಿಕೊಟ್ಟಿದೆ. ಲಕ್ಷ್ಮಣಗಾಯಕವಾಡ ಶಾಲೆಯನ್ನು ಸ್ಥಾಪಿಸಿ ತನ್ನ ಸಮುದಾಯಕ್ಕೆ ಅಕ್ಷರ ಕಲಿಸಲು ಪ್ರಯತ್ನಿಸುತ್ತಾನೆ. 'ಕತ್ತಿ ಹತೇಡಾಮೋರ್ಚಾ' ಸಂಘಟನೆ ಯನ್ನು ಕಟ್ಟಿ ತಮ್ಮವರ ಹಿತರಕ್ಷಣೆಗೆ ಹೋರಾಡುತ್ತಾನೆ. ಹತ್ತಿಗಿರಣಿಯಲ್ಲಿ ಕೂಲಿ ಕಾರ್ಮಿಕನಾಗಿ ಸೇರಿಕೊಂಡು ಕಾರ್ಮಿಕ ಮುಖಂಡನಾಗಿ ಆಯ್ಕೆಯಾಗುತ್ತಾನೆ. ಬಂಡವಾಳಶಾಹಿ

ಜೀವನ ಚರಿತ್ರೆಯನ್ನು ಕುರಿತಂತೆ ಓದುಗ ಕಟ್ಟಿಕೊಂಡ ಮಾದರಿಗಳನ್ನು ಉಚಲ್ಯಾ ಒಡೆದು ಹಾಕುತ್ತದೆ. ಇದೇ ಈ ಕೃತಿಯ ಶಕ್ತಿಯೂ ಹೌದು.

ಮುಖಂಡರ ಸರಿಸಮನಾಗಿ ಕುಳಿತು, ಉಣ್ಣುವಾಗ ಅವನಿಗಾಗುವ ಕಸಿವಿಸಿ ಸಾಂಸ್ಕೃತಿಕ ಸ್ಥಿತ್ಯಂತರದ ಸಂಕ್ರಮಣಾವಸ್ಥೆಯನ್ನು ಸೂಚಿಸುತ್ತದೆ. ಮಾರ್ತಾಂಡ ಹೆಸರಿನ ಲಕ್ಷ್ಮಣಗಾಯಕವಾಡನ ಅಪ್ಪ ಹೊಸ ಪರಿಸರದಲ್ಲಿ 'ಮಾರುತಿ'ಯಾಗುತ್ತಾನೆ. ಸ್ಥಿತ್ಯಂತರದ ಕಾಲದಲ್ಲಿ ಒಂದು ಸಮುದಾಯದ ಯಾತನೆ ಸಂತೋಷಗಳು ಕೃತಿಯ ಒಳಗಡೆ ಮೂಡಿ ಒಂದು ರೀತಿ ಸೊಗಸಾಗಿದೆ.

ಉಚಲ್ಯಾ ವ್ಯವಸ್ಥೆಯ ಭ್ರಷ್ಟ ಮುಖವನ್ನು ಅನಾವರಣಗೊಳಿಸುತ್ತದೆ. ಲಾತೂರಿನಲ್ಲಿ ಕಳ್ಳತನವಾಗಿದ್ದಾಗ ಲಕ್ಷ್ಮಣನ ಮನೆಗೆ ನುಗ್ಗಿದ ಪೊಲೀಸರು ಐದುನೂರು ರೂಪಾಯಿ ಲಂಚ ಪಡೆದು ಬಿಟ್ಟುಹೋಗುತ್ತಾರೆ. ಹೊಟ್ಟೆಪಾಡಿಗೆ ಕಳ್ಳತನ ಮಾಡುವ ಉಚಲ್ಯಾ ಜನರನ್ನು ವಕೀಲರು, ಮಾರ್ವಾಡಿಗಳು, ಗ್ರಾಮದ ಮುಖಂಡರು ಸುಲಿದು ದೊಡ್ಡದೊಡ್ಡ ಸೌಧಗಳನ್ನು ಕಟ್ಟಿಕೊಂಡು ಶ್ರೀಮಂತರಾಗಿ ಮೆರೆಯುತ್ತಾರೆ. ಹೊಟ್ಟೆಪಾಡಿಗೆ ಸಣ್ಣಪುಟ್ಟ ಕಳ್ಳತನ ಮಾಡುವ ಈ ಜನರಿಗೆ ನಿಲ್ಲಲ್ಲು ನೆಲೆ, ಬದುಕಿಗೆ ಆಶ್ರಯ ಎಂಬುದಿಲ್ಲ. ಆದರೆ ಇವರನ್ನೇ ಆಶ್ರಯಿಸಿದ ಪರೋಪಜೀವಿಗಳು ಸಮಾಜದಲ್ಲಿ ಗೌರವಾನ್ವಿತರೆನಿಸಿಕೊಳ್ಳುವುದು ವ್ಯವಸ್ಥೆಯ ಕ್ರೂರ ವ್ಯಂಗ್ಯ.

ತನ್ನ ಸಮುದಾಯದ ವಾಸ್ತವವನ್ನು ಹೇಳುವಾಗ ಭಾವುಕರಾಗದೆ, ಅವಮಾನ, ಶೋಷಣೆಗೆ ದುಃಖ-ದುಮ್ಮಾನಗಳಿಗೆ ಸಿಟ್ಟಾಗದೆ ಲೇಖಕರು ಸಮಾಜಕ್ಕೆ ತೆರೆದಿಟ್ಟಿದ್ದಾರೆ. ನಿರ್ಲಿಪ್ತ ಬರವಣಿಗೆಯ ಶಕ್ತಿಯ ಅರಿವು ಉಚಲ್ಯಾದಲ್ಲಾಗುತ್ತದೆ. ಶತಶತಮಾನಗಳಿಂದ ಅವಮಾನಿತರಾಗಿ ಬದುಕು ನೀಗಿದ ಜನರ ಸಂಕಷ್ಟ ನೋವುಗಳನ್ನು ಅತ್ಯಂತ ಸರಳವಾಗಿ ಪ್ರಾಮಾಣಿಕವಾಗಿ ಮರ್ಮಕ್ಕೆ ನಾಟುವಂತೆ ಹೇಳಿರುವ ರೀತಿ ಅನನ್ಯವಾಗಿದೆ. □

ಅವ್ವ ಮತ್ತು ನಾನು



ಅವ್ವಾ ಹೇಳದಿರು
ಸೀತೆ, ಸಾವಿತ್ರಿ
ದ್ರೌಪದಿ, ಅಹಲ್ಯಾ
ಮಂಡೋದರಿಯರ ಕಥೆಗಳನು
ಶೀಲ ಪರೀಕ್ಷೆಗಾಗಿ
ಅಗ್ನಿ ಪರೀಕ್ಷೆ ಗೀಡಾಗುವ
ಸೀತೆಯ ಹೇಡಿತನ ನನ್ನಲ್ಲಿಲ್ಲ
ಸತ್ತ ಗಂಡನ
ಪ್ರಾಣ ತರಲು
ಯಮನನ್ನು ಬೆನ್ನಟ್ಟುವ
ಸಾವಿತ್ರಿಗಿದ್ದಂತೆ ವೇಳೆ ನನಗಿಲ್ಲ

ಪರ ಪುರುಷನೊಬ್ಬ
ನೆರೆದ ಸಭೆಯೆದುರು
ಸೀರೆ ಸೆಳೆದರೂ
ತಲೆ ತಗ್ಗಿಸಿ ಕುಳಿತ
ಷಂಡ ಗಂಡಂದಿರ ಜೊತೆ
ಬಾಳ್ವೆ ಮಾಡಿದ
ದ್ರೌಪದಿಯ ದೌರ್ಬಲ್ಯ ನನ್ನಲ್ಲಿಲ್ಲ.

ಯಾರೋ ಮಾಡಿದ ತಪ್ಪಿಗೆ
ಪತಿಯ ಶಾಪವ ಪಡೆದು
ಕಲ್ಲಾಗಿ ಕುಳಿತುಕೊಳ್ಳಲು
ಅಹಲ್ಯೆಯಷ್ಟು ದಡ್ಡಿ ನಾನಲ್ಲ.

ಪರಸ್ತ್ರೀಯ ವನದಲ್ಲಿಟ್ಟು
ಆಕೆಗಾಗಿ ಪರಿತಪಿಸಿ
ಪ್ರಾಣಬಿಡುವ ಗಂಡನಿಗಾಗಿ
ವ್ರತ ಮಾಡುವ
ಮಂಡೋದರಿಯ ಮೂರ್ಖತನವಂತೂ ನನ್ನಲ್ಲಿಲ್ಲ.

ಆದರ್ಶದ ಆಲದ ಮರಕ್ಕೆ
ಜೋತು ಬಿದ್ದು
ನನ್ನತನಕೆ ನಾ ಉರುಲು ಹಾಕಲಾರೆ.
ನನ್ನವ್ವಾ ಆದರ್ಶದಲ್ಲಿ
ನಿನಗೆ ಸಿಕ್ಕ ಸುಖವಾದರೂ ಎಷ್ಟು?
ಕಪ್ಪನೆಯ ಕಾರ್ಮೋಡದ ಸುತ್ತ
ಗುಳಿಬಿದ್ದ ಕಣ್ಣುಗಳೇ
ಹೇಳುತ್ತಿವೆಯಲ್ಲ ?!
ಆಲಿಸು,
ಅಜ್ಜ ಮುತ್ತಜ್ಜಿಯರ
ಗೋರಿಯಿಂದ
ದುಃಖದ ಬಿಕ್ಕಳಿಕೆ
ಇನ್ನೂ ಕೇಳಿ ಬರುತ್ತಲಿದೆ.
ನಿನ್ನ ಒಳಗುದಿಯ ಕಾವು
ನನ್ನ ಸುಡುತ್ತಲಿದೆ.

ನಿನ್ನೊಳಗೆ ಅವರೊಳಗೆ
ಸತ್ತ ಕನಸುಗಳಿಗೆ
ಜೀವ ತುಂಬಲು ಬಿಡು ನನ್ನ
ಬಿಟ್ಟು ಬಿಡು ನನ್ನ
ಸ್ವತಂತ್ರ ಸ್ವಚ್ಛಂದ
ಹಕ್ಕಿಯಾಗಿ ಹಾರಲು
ನನ್ನ-ನಿನ್ನ
ಅಜ್ಜ ಮುತ್ತಜ್ಜಿಯರು
ಕನಸಿನಲ್ಲಿಯೂ ಕಾಣದ
ನೀನು ಕಂಡರಿಯದ
ಬದುಕಿನ ಭಯದ ನಗುವನ್ನು
ಪಡೆಯುವ ತನಕ
ಹೋರಾಡಲು ಬಿಡು ನನ್ನ

❍ ಡಾ॥ ಶೈಲಜಾ ಹಿರೇಮಠ

ಚಳವಳಿಗಳ ರಾಜಕಾರಣ ಭರವಸೆ ಮೂಡಿಸುವಂಥದ್ದು

ಎಪ್ಪತ್ತರ ದಶಕದಲ್ಲಿ ಆರಂಭಗೊಂಡ ಜನಪರ ಚಳವಳಿಯ ಕವಲುಗಳಾದ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಇತರೇ ಜನಪರ ಚಳವಳಿಗಳು ಹಾಗೂ ವ್ಯಕ್ತಿ-ಶಕ್ತಿಗಳೊಂದಿಗೆ ಜೊತೆಗೂಡಿ ಪರ್ಯಾಯ ರಾಜಕಾರಣವನ್ನು ರೂಪಿಸುವ ಐತಿಹಾಸಿಕ ಪ್ರಯತ್ನವೊಂದಕ್ಕೆ ಮುಂದಾಗಿವೆ. ಸ್ವಾರ್ಥ ಮತ್ತು ಅಧಿಕಾರ ಲಾಲಸೆಯೇ ರಾಜಕಾರಣದ ಜೀವಾಳವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಪರ್ಯಾಯ ರಾಜಕಾರಣದ ಈ ಪ್ರಯತ್ನ ಜನಪರ ವಿಚಾರಧಾರೆಯುಳ್ಳವರಲ್ಲಿ ಹೊಸ ಸಂಚಲನವನ್ನು ಮೂಡಿಸಿದೆ. ಹಿಂದೆ ಜನಪರ ಚಳವಳಿಗಳಲ್ಲಿ ತೊಡಗಿಸಿಕೊಂಡು ಕಾಲಾನಂತರ ವಿವಿಧ ರಾಜಕೀಯ ಪಕ್ಷಗಳಲ್ಲಿ ಸೇರಿಹೋಗಿದ್ದ ವ್ಯಕ್ತಿಗಳೂ ಈ ಪ್ರಯತ್ನದಿಂದಾಗಿ ಖುಷಿಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ 'ಸಂವಾದ' ನಾಡಿನ ಚಿಂತಕರೊಂದಿಗೆ ಚರ್ಚೆ ನಡೆಸಬೇಕೆಂದು ಇಚ್ಛಿಸಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಮುಂದಿನ ಸಂಚಿಕೆಗಳಲ್ಲಿ ಉಳಿದವುಗಳನ್ನು ಪ್ರಕಟಿಸುತ್ತೇವೆ. ಓದುಗರೂ ಈ ಸಂವಾದದಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು

೧. ಜನಪರ ಚಳವಳಿಗಳು (ವಿಶೇಷವಾಗಿ ದಸಂಸ ಮತ್ತು ರೈತಸಂಘ) ಜೊತೆಗೂಡಿ ರೂಪಿಸ ಹೊರಟಿರುವ ಪರ್ಯಾಯ ರಾಜಕಾರಣ ಪ್ರಯತ್ನಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

೨. ಪ್ರಸ್ತುತ ಚಾಲ್ತಿಯಲ್ಲಿರುವ ರಾಜಕಾರಣಕ್ಕೆ ಹೊರತಾದ 'ಪರ್ಯಾಯ ರಾಜಕಾರಣ' ಹೇಗಿರಬೇಕೆಂದು ನೀವು ಬಯಸುತ್ತೀರಿ ?

೩. ಎಂಥ ಶಕ್ತಿಗಳು ಮತ್ತು ವ್ಯಕ್ತಿಗಳು ಒಗ್ಗೂಡಿದರೆ 'ಪರ್ಯಾಯ ರಾಜಕಾರಣ' ರೂಪಿಸಲು ಸಾಧ್ಯ ?

೪. ಜನಪರ ಚಳವಳಿಗಳು - ವ್ಯಕ್ತಿ - ಶಕ್ತಿಗಳು ಒಗ್ಗೂಡಲು ತಾವು ಸೂಚಿಸುವ ಮಾರ್ಗೋಪಾಯಗಳೇನು ?

೫. ಪರ್ಯಾಯ ರಾಜಕೀಯ ಶಕ್ತಿ (ಪಕ್ಷ) ಹೊಂದಬಹುದಾದ ನೀತಿ ಸಂಹಿತೆ ಮತ್ತು ಕಾರ್ಯಸೂಚಿಗಳೇನು ?



○ ಡಾ|| ಜಿ. ರಾಮಕೃಷ್ಣ
ಸಾಹಿತಿಗಳು, ಚಿಂತಕರು

೧. ಪರ್ಯಾಯ ರಾಜಕಾರಣವೆಂಬ ಹೆಸರಿನಲ್ಲಿ ಅನೇಕ ಪಕ್ಷಗಳು ಅಸ್ತಿತ್ವಕ್ಕೆ ಬಂದು, ನಂತರ ಅವುಗಳಿಗೇ ಪರ್ಯಾಯ ಹುಡುಕಬೇಕಾದಷ್ಟು ಹೊಲಸಾಗಿ ಅವು ಕೆಲಸ ಮಾಡಿರುವುದು ಅನುಭವಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಇಂತಹ ಪ್ರಯತ್ನಗಳಿಗೆ ಸಾಮಾನ್ಯವಾಗಿ ಉದಾಸೀನಭಾವ ತಾಳುವುದು ಅಸಂಗತವಲ್ಲ. ಸಂಪೂರ್ಣ ಕ್ರಾಂತಿಯ ಮುಂಚೂಣಿಯಲ್ಲಿದ್ದ ಅನೇಕ ವ್ಯಕ್ತಿಗಳು ಮತ್ತು ಶಕ್ತಿಗಳು ಇದಕ್ಕೆ ನಿದರ್ಶನ. ಅದರಿಂದ ನಮಗೆ ದೊರೆತ ಪರ್ಯಾಯವೆಂದರೆ ಮತೀಯವಾದ ವಿಜೃಂಭಣೆ. ಈಗಿನ ಪರ್ಯಾಯವು ಹಾಗೆ ಕೊನೆಗೊಳ್ಳುವುದಿಲ್ಲವೆಂಬ ಆಶಯಕ್ಕೆ ಕಾರಣ ಇಲ್ಲಿ ಒಟ್ಟಾಗುತ್ತಿರುವವರೆಲ್ಲಾ ಜನಪರ ಚಳವಳಿಗಳ ಮುಖಾಂತರ ಬಂದಿದ್ದಾರೆ ಎಂಬುದು. ಆದ್ದರಿಂದ ಈ ಪ್ರಯತ್ನ ಸ್ವಾಗತಾರ್ಹವಾದದ್ದು ಭರವಸೆ ಮೂಡಿಸುವಂಥದು ಮತ್ತು ಇಡೀ ರಾಜಕೀಯ ಬೆಳವಣಿಗೆಗಳಿಗೆ ತಿರುವು ನೀಡಬಲ್ಲಂಥದು.

೨. ಈಗ ಚಾಲ್ತಿಯಲ್ಲಿರುವ ರಾಜಕಾರಣದ ಬಹ್ವಂಶ ಆಳುವ ವರ್ಗದ ಹಿತವನ್ನು ಪ್ರತಿನಿಧಿಸುವಂಥದು, ಕಾಪಾಡುವಂಥದು. ಈ ವರ್ಗದ ಹುನ್ನಾರವನ್ನು ಉಚ್ಚಾಟಿಸುವುದು ನಿಜವಾದ ಪರ್ಯಾಯ ಮತ್ತು ಅದು ದೀರ್ಘಾವಧಿಯ ಕಾರ್ಯಕ್ರಮ. ಆ ದಿಕ್ಕಿನಲ್ಲಿ ಹೋಗುವಾಗ ಆರ್ಥಿಕ ಮತ್ತು ಸಾಂಸ್ಕೃತಿಕ ನೆಲೆಯನ್ನು ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಿಕೊಳ್ಳಬೇಕು. ಈಗಿನ ಆಳುವ ವರ್ಗದ ಪಕ್ಷಗಳಲ್ಲಿ ನಡೆಯುವಂತಹ ಹೊಂದಾಣಿಕೆಗಳಿಗೆ ಅವಕಾಶವಿಲ್ಲದೆ ಸೈದ್ಧಾಂತಿಕವಾಗಿ ಎಲ್ಲ ದುಡಿಯುವ ಜನರ ಆಕಾಂಕ್ಷೆಗಳನ್ನು ಹಮ್ಮಿಕೊಳ್ಳುವುದು ಪರ್ಯಾಯವೆನಿಸುತ್ತದೆ. ಅದರಲ್ಲಿ ಶಿಕ್ಷಣ, ಆರೋಗ್ಯ, ಆಹಾರ, ವಸತಿ, ಮುಂತಾದುವೆಲ್ಲಾ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಮಾನವಾಗಿ ಲಭ್ಯವಾಗುವಂತಹ ನೀತಿಗಳನ್ನು ಕಾರ್ಯಗತಗೊಳಿಸಬೇಕು.

೩. ಇದು ವ್ಯಕ್ತಿಗಳನ್ನು ಆಧಾರವಾಗಿಟ್ಟುಕೊಂಡು ಮಾಡಬಹುದಾದ ಕೆಲಸವಲ್ಲ. ಉದಾತ್ತ ಮೌಲ್ಯಗಳ ಬಗ್ಗೆ ಉಪನ್ಯಾಸಗಳನ್ನು ನೀಡುತ್ತಾ ಸ್ವಂತಕ್ಕೆ ಲಾಭ ಮಾಡಿಕೊಳ್ಳುವ ಪ್ರವೃತ್ತಿ ನಮ್ಮಲ್ಲಿ ಹೇರಳವಾಗಿದೆ. ಅಧಿಕಾರದ ವಾಸನೆಯೇ ಎಷ್ಟೋ ಧೀಮಂತರನ್ನು ಹಾಳು ಮಾಡಿರುವುದುಂಟು. ಆದ್ದರಿಂದ

(ಮುಂದಿನ ಪುಟಕ್ಕೆ...)

ಪರ್ಯಾಯ ರಾಜಕಾರಣ ಅತ್ಯವಶ್ಯವಾಗಿದೆ

○ ಟಿ.ಎನ್. ಸೀತಾರಾಮ್
ಚಿತ್ರ ನಿರ್ದೇಶಕರು

೧. ಪ್ರಸ್ತುತ ನಾಡಿನಲ್ಲಿ ಕೋಮುವಾದದಿಂದ ಹೊರತಾದ ಹಾಗೂ ಜಾತ್ಯಾತೀತ ಪಕ್ಷಗಳೆಂದು ಹೇಳಿಕೊಳ್ಳುತ್ತಿರುವ ಪಕ್ಷಗಳಿಗೂ ಸಹ ಇಂದು ಯಾವುದೇ ಸೈದ್ಧಾಂತಿಕ ನಿಲುವುಗಳಿಲ್ಲ. ಇವುಗಳು ಪ್ರಕಟಿಸುವ ಕಾರ್ಯಕ್ರಮಗಳೆಲ್ಲ ಹೋಟೆಲ್ ಮೆನುವಿನಲ್ಲಿ ಕಂಡು ಬರುವ ಸಾಮಾನ್ಯ ತಿಂಡಿ ತಿನಿಸುಗಳಂತೆ ಆಗಿಹೋಗಿದೆ. ಈ ಪಕ್ಷಗಳಲ್ಲಿ ಯಾವುದೇ ಮಾನವೀಯ ಕಾಳಜಿಯಾಗಲಿ, ಸೇವಾ ಮನೋಭಾವವಾಗಲಿ ಇಲ್ಲದಿರುವುದರಿಂದ ರಾಜ್ಯದಲ್ಲಿ ಪರ್ಯಾಯ ರಾಜಕಾರಣ ಅತ್ಯವಶ್ಯವಾಗಿದೆ. ಈ ನಿಟ್ಟಿನಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ನಿಜಕ್ಕೂ ಸ್ವಾಗತಾರ್ಹ.

೨. ಪರ್ಯಾಯ ರಾಜಕಾರಣವು ನಿರ್ದಿಷ್ಟವಾದ ಸೈದ್ಧಾಂತಿಕ ಗುರಿಯನ್ನು ಹೊಂದಿದ್ದು ಆರೋಗ್ಯಪೂರ್ಣ ಸಮಾಜವನ್ನು ರೂಪಿಸುವ ದಿಕ್ಕಿನಲ್ಲಿ ಕಾರ್ಯ ನಿರ್ವಹಿಸಬೇಕು.

೩. ನಾಡಿನ ಬಗ್ಗೆ ವಿಶೇಷವಾದ ಕಾಳಜಿ ಇರುವಂತಹ ವ್ಯಕ್ತಿಗಳು, ಜಾಗತೀಕರಣಕ್ಕೆ ವಿರುದ್ಧವಾದ ಶಕ್ತಿಗಳು, ಜನಸಾಮಾನ್ಯರ ಹಿತಾಸಕ್ತಿಯ ಪರವಾಗಿ ಹೋರಾಡುವಂತಹ ಚಳವಳಿಗಳು ಒಂದುಗೂಡಿದರೆ ಪರ್ಯಾಯ ರಾಜಕಾರಣ ಖಂಡಿತ ಸಾಧ್ಯ.

೪. ಅಧಿಕಾರ ಲಾಲಸೆಯಿಂದ ಹೊರತಾಗಿದ್ದರೆ ಎಲ್ಲಾ ಜನಪರ ಚಳವಳಿ-ವ್ಯಕ್ತಿ-ಶಕ್ತಿಗಳು ಖಂಡಿತ ಒಗ್ಗೂಡುತ್ತವೆ.

೫. ಜಾಗತೀಕರಣದ ವಿರುದ್ಧ ಪರಿಣಾಮಕಾರಿ ಹೋರಾಟವನ್ನು ರೂಪಿಸಬೇಕು. ಜಾತಿ ಹಾಗೂ ಅದಕ್ಕಿಂತ ಮಿಗಿಲಾದ ಆರ್ಥಿಕ ಅಸಮಾನತೆಯನ್ನು ತೊಡೆದುಹಾಕಲು ಕಟಿಬದ್ಧರಾಗಬೇಕು. ರಾಜ್ಯದ ಸರ್ವತೋಮುಖ ಏಳಿಗೆಗಾಗಿ ಆದರ ಬಗೆಗೆ ವಿಶೇಷವಾದ ಕಾಳಜಿ, ಪ್ರೀತಿಯನ್ನು ಹೊಂದಿರಬೇಕು. ❑

ಚರ್ಚೆ

ಪರ್ಯಾಯ ರಾಜಕಾರಣ

ಹೊಸ ಪರಿಕಲ್ಪನೆ, ಹುಡುಕಾಟಕ್ಕೆ ಹಾದಿ ತೆರೆದುಕೊಳ್ಳಲಿ

○ಬರಗೂರು ರಾಮಚಂದ್ರಪ್ಪ
ಸಾಹಿತಿಗಳು, ಚಿಂತಕರು

೧. 'ಪರ್ಯಾಯ ರಾಜಕಾರಣ'ದ ಪ್ರಯತ್ನವನ್ನು ನಾನು ಸಕಾರಾತ್ಮಕವಾಗಿ ನೋಡುತ್ತೇನೆ. 'ಪಾರ್ಲಿಮೆಂಟರಿ ಪ್ರಜಾಪ್ರಭುತ್ವ'ದ ಒಳಗೆ ನಡೆಯುವ ರಾಜಕಾರಣದಲ್ಲಿ ವಿವಿಧ ಕಾಲಘಟ್ಟಗಳು ಪರ್ಯಾಯ ರಾಜಕಾರಣವನ್ನು ಯೋಚಿಸುತ್ತಲೇ ಬಂದಿವೆ. ಆದ್ದರಿಂದ ಇಂದಿನ 'ಪರ್ಯಾಯ ರಾಜಕಾರಣ' ದ ತಾತ್ವಿಕ ನೆಲೆ-ನಿಲುವು ಮತ್ತು ಸ್ವರೂಪಗಳನ್ನು ಖಚಿತಪಡಿಸಿಕೊಳ್ಳುವುದು ಬಹುಮುಖ್ಯವಾದುದು.

ಅನೇಕ ವರ್ಷಗಳ ಹಿಂದೆ ದಲಿತ ಸಂಘರ್ಷ ಸಮಿತಿ ಮತ್ತು ರೈತ ಸಂಘಗಳು ಒಂದು ಶಕ್ತಿಯಾಗಿ ರೂಪುಗೊಳ್ಳಬೇಕೆಂಬ ಚರ್ಚೆಗಳು ನಡೆದಿದ್ದವು. ಅಲ್ಲಿಂದ ಇಲ್ಲೀವರೆಗೆ ಅನೇಕ ಘಟನೆಗಳು ಸಂಭವಿಸಿವೆ; ವಿಶಿಷ್ಟ ಅನುಭವಗಳಾಗಿವೆ. ಈ ಎಲ್ಲವನ್ನು ಒಗ್ಗೂಡಿಸಿದ ಚಾರಿತ್ರಿಕ ಪ್ರಜ್ಞೆಯಿಂದ 'ಪರ್ಯಾಯ ರಾಜಕಾರಣ'ವನ್ನು ಗ್ರಹಿಸಿಕೊಳ್ಳಬೇಕಾಗುತ್ತದೆ.

ರೈತಸಂಘ ಮತ್ತು ದಸಂಸಗಳು ಮೂಲತಃ ಜನಪರ ಸಂಘಟನೆಗಳೇ ಆಗಿದ್ದರೂ ಸಾಮಾಜಿಕ-ಆರ್ಥಿಕ ಶ್ರೇಣೀಕರಣದ ನೆಲೆಯಲ್ಲಿ ಅವುಗಳ ಒತ್ತಾಸೆಗಳಲ್ಲಿ ವ್ಯತ್ಯಾಸವಿರುವ ವಾಸ್ತವವನ್ನು ಮರೆಯಲಾಗದು. ಆದರೆ ಇಂದಿನ ಸನ್ನಿವೇಶದಲ್ಲಿ ಪರಸ್ಪರ ಸಮೀಪವಾಗುವ ಮಾನಸಿಕಲೋಕದಿಂದ ಸಾಮಾಜಿಕ ಆರ್ಥಿಕ ಅಂತರಗಳನ್ನು ನಿವಾರಿಸಿಕೊಳ್ಳಬಹುದೆಂಬ ಆಶಾವಾದ ನಮ್ಮೆದುರಿಗಿದೆ. ಆದ್ದರಿಂದ ಈಗ ನನ್ನ ಮುಂದಿರುವ ಮುಖ್ಯ ಪ್ರಶ್ನೆ : ಇದು ಪರ್ಯಾಯ ರಾಜಕಾರಣವೊ ಅಥವಾ ಪರ್ಯಾಯ ರಾಜಕೀಯ ಪಕ್ಷವೊ?

ರಾಜಕೀಯ ಪಕ್ಷವಾಗುವುದಾದರೆ ಜಂಟಿ ಕಾರ್ಯಕ್ರಮಗಳ ಮೂಲಕ ಪಕ್ವವಾಗುತ್ತ ಪರಸ್ಪರ ಹೊಂದಾಣಿಕೆಯ ಪ್ರಣಾಳಿಕೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. 'ಪರ್ಯಾಯ ರಾಜಕಾರಣ'ವಷ್ಟೇ ಆಗಿದ್ದರೆ ಆಂದೋಲನ ಮಾದರಿಯ ಕ್ರಿಯಾಶೀಲತೆಯ ಮೂಲಕ ನಡೆಯುವ ಒಂದು ಶೋಧವಾಗುತ್ತದೆ.

ರಾಜಕೀಯ ಪಕ್ಷವಾಗುವುದಾದರೆ ಜಂಟಿ ಕಾರ್ಯಕ್ರಮಗಳ ಮೂಲಕ ಪಕ್ವವಾಗುತ್ತ ಪರಸ್ಪರ ಹೊಂದಾಣಿಕೆಯ ಪ್ರಣಾಳಿಕೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. 'ಪರ್ಯಾಯ ರಾಜಕಾರಣ'ವಷ್ಟೇ ಆಗಿದ್ದರೆ ಆಂದೋಲನ ಮಾದರಿಯ ಕ್ರಿಯಾಶೀಲತೆಯ ಮೂಲಕ ನಡೆಯುವ ಒಂದು ಶೋಧವಾಗುತ್ತದೆ.

೨. ಈಗ ಅಸ್ತಿತ್ವದಲ್ಲಿರುವ ಜನಪರ ರಾಜಕೀಯ ಸಿದ್ಧಾಂತಗಳೆಲ್ಲವೂ ಕೆಟ್ಟುಹೋಗಿವೆಯೆಂದು ನಾನು ತಿಳಿದಿಲ್ಲ. ಸಿದ್ಧಾಂತಗಳಿಗೆ ಬೇಕಾದ ಸೃಜನಶೀಲತೆಯಿಂದ ವಂಚಿತವಾದ ವಾತಾವರಣವಿದೆ.

ಆದ್ದರಿಂದ ಈಗ ಇರುವ ಜನಪರ ರಾಜಕೀಯ ಸಿದ್ಧಾಂತಗಳನ್ನೆಲ್ಲ ನಿರಾಕರಿಸಿ ಪರ್ಯಾಯ ಸಿದ್ಧಾಂತವೊಂದು ಹುಟ್ಟುತ್ತದೆ ಅಥವಾ ಅದು ಈಗಿಂದೀಗಲೇ ಸಾಧ್ಯವೆಂದು ನಾನು ಭಾವಿಸಿಲ್ಲ. ಪ್ರಾಮಾಣಿಕತೆ, ಸತ್ಯ ನಿಷ್ಠೆ -ಇಂತಹ ಮೌಲ್ಯಗಳನ್ನು ಸರ್ವ ಸಿದ್ಧಾಂತಗಳ ಮತ್ತು ಎಲ್ಲ ಕಾಲಗಳ ಅಪೇಕ್ಷೆಗಳಾಗಿರುತ್ತವೆ. ಅವುಗಳೇ ಸ್ವಯಂಪೂರ್ಣ ಸಿದ್ಧಾಂತಗಳಲ್ಲ.

ಆದ್ದರಿಂದ ಈಗ ಇರುವ ಜನಪರ ಸಿದ್ಧಾಂತಗಳಲ್ಲೇ ಚಾರಿತ್ರಿಕ ಅನಿವಾರ್ಯತೆಯ ಅಂಶಗಳ ಕ್ರೋಢೀಕರಣವನ್ನು ಪರ್ಯಾಯ ರಾಜಕಾರಣ ಮಾಡಬೇಕಾಗಬಹುದು. ಇಂತಹ ವಿಚಾರಗಳಲ್ಲಿ ನಿಂತ ನಿಲುವಿನಲ್ಲೇ ಅಂತಿಮ ಅಭಿಪ್ರಾಯ ಕೊಡಲಾರೆ. ಯಾಕೆಂದರೆ ಸಾರಾಸಾಗಟಾದ, ಸಾಮಾನ್ಯೀಕೃತ, ಸಿದ್ಧ ಪರಿಭಾಷೆಯಲ್ಲಿ ಉತ್ತರ ಕೊಡು ವುದು ನನಗೆ ಕಷ್ಟ

ಪರ್ಯಾಯ ರಾಜಕಾರಣಕ್ಕೆ ಪರ್ಯಾಯ ಪರಿಭಾಷೆಯೊಂದು ದಕ್ಕುವುದಾದರೆ, ಆಗ ಅದು ನಿಜಕ್ಕೂ 'ಪರ್ಯಾಯ' ಎನಿಸಿಕೊಳ್ಳುತ್ತದೆಯೆಂದಷ್ಟೇ ಸದ್ಯಕ್ಕೆ ಹೇಳಬಲ್ಲೆ.

೩. ಪರ್ಯಾಯ ರಾಜಕಾರಣ ಅಥವಾ ಪಕ್ಷದ ನಿಲುವುಗಳು ಖಚಿತಗೊಂಡು, ಅನಂತರ ಅವುಗಳಿಗೆ ಬದ್ಧವಾದ, ಅವುಗಳಲ್ಲಿ ನಂಬಿಕೆಯುಳ್ಳ, ಅವುಗಳನ್ನು ಅಂತಃಶಕ್ತಿಯಾಗಿಸಿಕೊಳ್ಳುವ ವ್ಯಕ್ತಿ-ಶಕ್ತಿಗಳಿಂದ ಸದರಿ ರಾಜಕಾರಣ ಸಾಧ್ಯ.

೪. ಸಮಾನ ಶತ್ರುಗಳನ್ನು ಸೈದ್ಧಾಂತಿಕವಾಗಿ ಗುರುತಿಸಿ ಕೊಂಡು ವ್ಯಕ್ತಿ ವೈಪರೀತ್ಯಗಳನ್ನು ಮೀರಿದ ನೆಲೆಯಲ್ಲಿ ಚಿಂತಿಸುವುದು ಮತ್ತು ಕ್ರಿಯಾಶೀಲವಾಗುವುದು ಇಂದಿನ ಮುಖ್ಯ ಮಾರ್ಗೋಪಾಯ.

೫. ಇದು ಪ್ರಶ್ನೆಗೊಂದು ಉತ್ತರವೆಂಬಂತೆ ನಿರೂಪಿತವಾಗುವ ವಿಷಯವಲ್ಲ. ಈಗ ಅಸ್ತಿತ್ವದಲ್ಲಿರುವ ರಾಜಕೀಯ ಪಕ್ಷ(ಶಕ್ತಿ)ಗಳಿಗೆ ಪರ್ಯಾಯವಾದ ಅಂಶಗಳಾವುವು ಎಂಬುದನ್ನು ಖಚಿತಪಡಿಸಿಕೊಳ್ಳದೆ ನೀತಿ ಸಂಹಿತೆ ಮತ್ತು ಕಾರ್ಯಸೂಚಿಯನ್ನು ರೂಪಿಸಲಾಗದು.

'ಪರ್ಯಾಯ' ಎಂಬ ಪರಿಕಲ್ಪನೆಯೇ ಹೊಸದರ ಹುಡುಕಾಟ. ರಾಜಕಾರಣದ ಹೊಸ ಹುಡುಕಾಟಕ್ಕೆ ಹಾದಿ ತೆರೆದುಕೊಳ್ಳಲಿ; ಯಶಸ್ಸು ಸಿಗಲಿ. ❑

ಚಳವಳಿಗಳ ರಾಜಕಾರಣ ಭರವಸೆ ಮೂಡಿಸುವಂಥದ್ದು

(...ಹಿಂದಿನ ಪುಟದಿಂದ)

ಯಾವ ವ್ಯಕ್ತಿಯೂ ಸದಾ ನೇರ ಸ್ವಭಾವದವರಾಗಿಯೇ ಉಳಿಯದಿರಬಹುದು. ಆದ್ದರಿಂದಲೇ ಇದು ಶಕ್ತಿಯ ಕೆಲಸ, ವರ್ಗದ ಜವಾಬ್ದಾರಿ. ಪರಂಪರೆಯೆಂದರೆ ಯಥಾ ಸ್ಥಿತಿ ಎಂಬ ನಂಬಿಕೆಯನ್ನು ಮೀರಿದ ಶಕ್ತಿಗಳು, ಸಮಾಜದಲ್ಲಿ ದೂರ ದೂಡಲ್ಪಟ್ಟಿರುವವರ ಮಧ್ಯೆ ಕ್ರಿಯಾತ್ಮಕವಾಗಿರುವ ಶಕ್ತಿಗಳು, ಪರ್ಯಾಯ ರಚಿಸಬಲ್ಲವು.

೪. ಒಗ್ಗೂಡುವಿಕೆಯ ಮಾತುಕತೆ, ಸಂಧಾನ, ಸಮಾನ ಆಕಾಂಕ್ಷೆ ಮುಂತಾದುವುಗಳಿಂದ ರೂಪುಗೊಳ್ಳುತ್ತಾವಾದರೂ ಅದು ಚೆನ್ನಾಗಿ ಬೆಸೆಯಲ್ಪಟ್ಟ ಒಕ್ಕೂಟವಾಗಬೇಕಾದರೆ ಮೊದಲಿನಿಂದಲೂ ಜಂಟಿ ಕಾರ್ಯಕ್ರಮಗಳಿಂದ, ಜಂಟಿ ಹೋರಾಟಗಳಿಂದ ಅವು ಜೊತೆಗೂಡುವಂತಿರಬೇಕು. ಬೇರೆಯವರ ಮೇಲಿನ ಅಸಮಾಧಾನವೊಂದೇ ಪರ್ಯಾಯದ ರಚನೆಗೆ ಬುನಾದಿಯಾದರೆ ಅದು ಸ್ಥಿರವಾಗಿರುವುದಿಲ್ಲ, ಬಹುಕಾಲ ಬಾಳುವುದಿಲ್ಲ. ಭೂಮಿ, ನೀರು, ಗೊಬ್ಬರ, ಬೀಜ, ವಿದ್ಯುತ್ತು ಮಾರುಕಟ್ಟೆ ಕೂಲಿ, ವಿದ್ಯಾಭ್ಯಾಸ, ಹೀಗೆ ವಿಷಯಾಧಾರಿತ ಹೋರಾಟಗಳ ಮುಖಾಂತರ ಜನಪರ ಚಳವಳಿಗಳು ಅರ್ಥವತ್ತಾಗುತ್ತವೆ, ಪರ್ಯಾಯಕ್ಕೆ ಹಾದಿ ಮಾಡಿಕೊಡುತ್ತವೆ.

೫. ಮೊದಲಿಗೆ ಎಲ್ಲರಿಗೂ ಒಪ್ಪಿಗೆಯಾಗುವ ದೃಷ್ಟಿ ಮತ್ತು ಕ್ರಿಯೆಗಳು ಅಗತ್ಯ. ಜಾತಿ ಆಧಾರಿತ ಚಿಂತನೆಯ ಜಾಗದಲ್ಲಿ ವರ್ಗಾಧಾರಿತ ಚಿಂತನೆ ರೂಪುಗೊಳ್ಳಬೇಕು. ರೈತ, ದಲಿತ, ಕಾರ್ಮಿಕ, ಮುಂತಾದ ಶಬ್ದಗಳಿಂದ ಸೂಚಿತವಾಗುವ ಬಣಗಳೆಲ್ಲಾ ಏಕರೂಪ ಹೊಂದಿರುವ ಘಟಕಗಳಲ್ಲ. ಅವುಗಳಲ್ಲಿ ನೂರಾರು ಸಾಮ್ಯಗಳಿವೆ. ಆದರೆ ಅವೆಲ್ಲಾ ಒಂದೇ ಅಲ್ಲ. ಆದ್ದರಿಂದ ವ್ಯಕ್ತಿಗಳ ವೈಭವೀಕರಣವನ್ನು ಹೊರತು ಪಡಿಸಿ ನಿರ್ದಾಕ್ಷಿಣ್ಯವಾಗಿ ಜನವಿರೋಧಿ ನಿಲುವನ್ನು ತಾಳುವವರನ್ನು ಸಂಘಟನೆಯಿಂದ ಹೊರಗಿರಿಸಬೇಕು. ಹೋರಾಟಗಳಿಂದ ಐಕ್ಯತೆ ಸಾಧಿಸುವುದು, ಸಹಮನಸ್ಕ ಪಕ್ಷಗಳೊಡನೆ ಬಾಂಧವ್ಯ ಬೆಳೆಸಿ ಜಂಟಿ ಹೋರಾಟ ನಡೆಸುವುದು, ಇವೇ ನೀತಿ ಸಂಹಿತೆ ಮತ್ತು ಕಾರ್ಯಸೂಚಿಯನ್ನು ಕ್ರಮೇಣ ರೂಪಿಸಿಕೊಡುತ್ತವೆ. ❑

ತಾತ್ವಿಕ ನೆಲೆಗಟ್ಟು ಮತ್ತು ಬದ್ಧತೆ ಪರ್ಯಾಯ ರಾಜಕಾರಣದ ಆತ್ಮವಾಗಬೇಕು

❍ ಡಾ॥ ಸಿದ್ದನಗೌಡ ಪಾಟೀಲ
ಪ್ರಧಾನ ಕಾರ್ಯದರ್ಶಿ, ಸಿಪಿಐ

೧. ಜನಪರ ಚಳವಳಿಗಳ ಕರ್ನಾಟಕದ ಪ್ರಮುಖ ಸಂಘಟನೆಗಳಾದ ರೈತ ಹಾಗೂ ದಲಿತ ಸಂಘಟನೆಗಳು ಜೊತೆಗೂಡಿ ರೂಪಿಸಲು ಹೊರಟಿರುವ ಪರ್ಯಾಯ ರಾಜಕಾರಣದ ಪ್ರಯತ್ನ ಸ್ವಾಗತಾರ್ಹ. ಕರ್ನಾಟಕದ ಸಮಜೋ-ರಾಜಕೀಯ ಸಂದರ್ಭದಲ್ಲಿ ಇಂಥ ಶಕ್ತಿಗಳ ರಾಜಕೀಯ ಐಕ್ಯ ಕಾರ್ಯವು ಅತ್ಯವಶ್ಯ.

ಈ ಕೆಲಸ ಅಪರೋಕ್ಷವಾಗಿ ಎಪ್ಪತ್ತರ ದಶಕದಲ್ಲಿ ಆರಂಭಗೊಂಡಿತಾದರೂ ಅಂದು ಅದಕ್ಕೊಂದು ರಾಜಕೀಯ ಕಾರ್ಯಕ್ರಮವಿರಲಿಲ್ಲ. ಎಂಬತ್ತರ ದಶಕದಾರಂಭಕ್ಕೆ ರೈತ ಹಾಗೂ ದಲಿತ ಚಳವಳಿಗಳು ನಮ್ಮ ರಾಜ್ಯದ ಸಂಘಟಿತ ಶಕ್ತಿಗಳಾಗಿ ಹೊರಹೊಮ್ಮಿದವು. ಆದರೆ ರಾಜಕೀಯವಾಗಿ ಕಮ್ಯುನಿಸ್ಟ್ ಚಳವಳಿಯನ್ನು ಹೊರತುಪಡಿಸಿ ಉಳಿದ ಚಳವಳಿಗಳದ್ದು ಪ್ರತಿಕ್ರಿಯೆಯ ರಾಜಕಾರಣವಾಗಿತ್ತೇ ಹೊರತು ಕಾರ್ಯಕ್ರಮಾಧಾರಿತ ರಾಜಕಾರಣವಾಗಿರಲಿಲ್ಲ. ಅದರ ದುರುಪಯೋಗವನ್ನು ಈ ರಾಜ್ಯದ ಜಮೀನ್ದಾರಿ ಹಾಗೂ ಬಂಡವಾಳಶಾಹಿ ರಾಜಕೀಯ ಶಕ್ತಿಗಳು ಮಾಡಿಕೊಂಡವು.

ಈಗ 'ಪರ್ಯಾಯ ರಾಜಕಾರಣ'ದ ಘೋಷಣೆಯೊಂದಿಗೆ ಒಂದಾಗುತ್ತಿರುವ ರೈತಸಂಘ-ದಲಿತ ಸಂಘಗಳು ಒಂದು ಭರವಸೆಯನ್ನು ಮೂಡಿಸಿವೆ. ಆದರೆ ರೈತ ಮತ್ತು ದಲಿತರ ಮಧ್ಯದಲ್ಲಿಯೇ ಒಂದು ವರ್ಗ ವೈರುಧ್ಯ (ಭೂ ಮಾಲಿಕ ಹಾಗೂ ಕೃಷಿ ಕೂಲಿಕಾರ) ಇದೆ ಎಂಬುದನ್ನು ಮರೆಯ ಕೂಡದು. ಈ ವೈರುಧ್ಯಗಳ ಮಧ್ಯೆಯೂ ರೈತರಿಗೂ ಮತ್ತು ದಲಿತರಿಗೂ ಏಕಕಾಲದಲ್ಲಿ ಶತ್ರುವಾಗಿರುವ ಶಕ್ತಿಗಳನ್ನು ಗುರ್ತಿಸಿ ಆ ನಿಟ್ಟಿನಲ್ಲಿ ಐಕ್ಯತೆ ಸಾಧಿಸಿ ಸಾಮಾಜಿಕ ಚಳವಳಿಯ ರಾಜಕೀಯ ವೇದಿಕೆಯನ್ನು ಸಿದ್ಧಪಡಿಸಬೇಕು.

೨. ಪ್ರಸ್ತುತ ಚಾಲ್ತಿಯಲ್ಲಿರುವ ರಾಜಕಾರಣ ಮೇಲ್ಜಾತಿ ಮತ್ತು ಮೇಲ್ವರ್ಗದ ಹಿತಾಸಕ್ತಿ ಹಾಗೂ ಕಳೆದೆರಡು ದಶಕದಿಂದ ನವಸಾಮ್ರಾಜ್ಯಶಾಹಿ ಹಿತಾಸಕ್ತಿಯ ಪರವಾಗಿದೆ. ಇನ್ನೊಂದೆಡೆ ಈ ಹಿತಾಸಕ್ತಿಗಳಿಗೆ ಕೋಮುವಾದದ ಬಣ್ಣ ಬಳಿಯಲಾಗಿದೆ. ಇದಕ್ಕೆ ಪರ್ಯಾಯವಾಗಿ ರೂಪಿಸಬೇಕಾದ ರಾಜಕೀಯ ಚಳವಳಿ ಇದರ ವಿರುದ್ಧ ನೆಲೆಯಿಂದ ರೂಪುಗೊಳ್ಳಬೇಕು. ಈ ರಾಜ್ಯದ ಬಡತನ ರೇಖೆಯ ಕೆಳಗಿರುವ ಪ್ರತಿಶತ ೩೦-೪೦ ರಷ್ಟಿರುವ ಜನವರ್ಗದ ಹಿತಾಸಕ್ತಿಯಿಂದ 'ಪರ್ಯಾಯ ರಾಜಕಾರಣ ಆರಂಭವಾಗಬೇಕು. ಇದಕ್ಕೆ ಜಾತ್ಯಾತೀತವಾದ, ಧರ್ಮಾತೀತವಾದ ಆರ್ಥಿಕ ಹಾಗೂ ಸಾಮಾಜಿಕ ಕಾರ್ಯಕ್ರಮ ಇರಬೇಕು. ಈ ಹಿನ್ನೆಲೆಯ ಕನಿಷ್ಠ ತಾತ್ವಿಕ ನೆಲೆಗಟ್ಟು ಮತ್ತು ಬದ್ಧತೆ 'ಪರ್ಯಾಯ ರಾಜಕಾರಣ'ದ ಆತ್ಮವಾಗಬೇಕು.

೩. ರೈತ ಮತ್ತು ದಲಿತ ಶಕ್ತಿಯ ಜೊತೆ ಕಾರ್ಮಿಕ ಶಕ್ತಿ ಒಂದಾಗಬೇಕು. ಕೂದಲು ಸೀಳುವ ತಾತ್ವಿಕ ಭಿನ್ನತೆಗಳನ್ನು ಬದಿಗಿರಿಸಿ ಜನಪರ ಚಳವಳಿಯ ಎಲ್ಲ ಶಕ್ತಿಗಳೂ ಕಾರ್ಯಕ್ರಮದ ಆಧಾರದ ಮೇಲೆ ಒಂದಾಗಬೇಕು. ಜನಪರ ಚಿಂತಕರು, ಸಾಹಿತಿ, ಕಲಾವಿದ, ಇತರೆ ವ್ಯಕ್ತಿಗತ ನೆಲೆಯಲ್ಲಿ ಸಾಮಾಜಿಕ ಬದಲಾವಣೆಯನ್ನು ಬಯಸುವ ವ್ಯಕ್ತಿಗಳು ಒಂದಾಗಿ 'ಪರ್ಯಾಯ ರಾಜಕಾರಣ'ದ ಕಾರ್ಯಸೂಚಿಯ ಭಾಗವಾಗಬೇಕು. ಸದಾ ಹೊಯ್ದಾಟದಲ್ಲಿರುವ ಮಧ್ಯಮ ವರ್ಗ ಜನಪರ ಚಳವಳಿಯ ರಾಜಕಾರಣದತ್ತ ವಾಲುವಂತಾಗಬೇಕು.

೪. ಕರ್ನಾಟಕದಲ್ಲಿ ರೈತ ಮತ್ತು ದಲಿತ ಚಳವಳಿಗಳು ಒಂದು ರಾಜಕೀಯ ಶಕ್ತಿಯಾಗಿ ರೂಪಗೊಳ್ಳಬೇಕು. ನಂತರ ಈ ದೇಶದ, ರಾಜ್ಯದ ಎಂಥ ದುಸ್ತರ ಸಂದರ್ಭದಲ್ಲಿಯೂ ತಮ್ಮ ಶಕ್ತಿ ಆಧಾರಿತ ಹೋರಾಟ ನಡೆಸಿಕೊಂಡು ಬಂದ ಕಮ್ಯುನಿಷ್ಟ್ ಪಕ್ಷಗಳ ಜೊತೆ ಕಾರ್ಯಕ್ರಮಾಧಾರಿತ ಮೈತ್ರಿ ಹೊಂದಬೇಕು. ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಳವಳಿಗಳಲ್ಲಿ ಗುರ್ತಿಸಿಕೊಂಡ ಸಂಘಟನೆ ಹಾಗೂ ವ್ಯಕ್ತಿಗಳನ್ನು ಈ ಜನಪರ ಚಳವಳಿಗಳ ರಾಜಕೀಯ ಕಾರ್ಯಕ್ರಮದ ವ್ಯಾಪ್ತಿಗೆ ತರಬೇಕು. ಈ ಎಲ್ಲ ಸಂಘಟನೆ, ವ್ಯಕ್ತಿ ಹಾಗೂ ಶಕ್ತಿಗಳು ಸಮಾನ ಅಂಶದ ಕಾರ್ಯಕ್ರಮದಡಿಯಲ್ಲಿ ಕೂಡಬೇಕೇ ಹೊರತು ಕೇವಲ ಐಕ್ಯತೆ ಅಂತಿಮ ಉದ್ದೇಶವಾಗಿರಕೂಡದು.

ಪ್ರಸ್ತುತ ರಾಜಕೀಯ ಶಕ್ತಿಗಳ ನೀತಿಗೆ ಪರ್ಯಾಯವಾದ ಜನಪರ ರಾಜಕೀಯ ಗುರಿ ಈ ಐಕ್ಯ ವೇದಿಕೆ ಒಳಗೊಂಡಿರಬೇಕು. ಇನ್ನೊಂದರ್ಥದಲ್ಲಿ ವೇದಿಕೆ ಮಾಧ್ಯಮವಾಗಬೇಕೇ ಹೊರತು ಅದುವೇ ಗುರಿಯಾಗಿರಬಾರದು. ಈ ಐಕ್ಯತೆ ಚುನಾವಣೆ ಸಂದರ್ಭದ ಅನಿವಾರ್ಯತೆಯಾಗದೇ ನಿತ್ಯ ಜನರ ಸಮಸ್ಯೆಗಳನ್ನಾಧರಿಸಿದ ಚಳವಳಿಗಳಲ್ಲಿ ರೂಪುಗೊಳ್ಳಬೇಕು. ಹೋರಾಟಗಳಲ್ಲಿ ಬೆಸೆಯುವ ಐಕ್ಯತೆ ಸಂಬಂಧಗಳನ್ನೂ ಉದ್ದೇಶಗಳನ್ನೂ ಗಟ್ಟಿಗೊಳಿಸುತ್ತದೆ ಹಾಗೂ ಸ್ಪಷ್ಟತೆ ಮೂಡಿಸುತ್ತದೆ.

೫. ಈಗ ಒಂದುಗೂಡಲು ಉದ್ದೇಶಿಸಿರುವ ದಲಿತ ಹಾಗೂ ರೈತ ಸಂಘಟನೆಗಳ ವೇದಿಕೆ ಸ್ಥೂಲವಾಗಿ ಅಂಬೇಡ್ಕರ್ ಹಾಗೂ ಸಮಾಜವಾದಿ ಸಿದ್ಧಾಂತಗಳ ಹಿನ್ನೆಲೆಯನ್ನು ಹೊಂದಿದೆ. ಕರ್ನಾಟಕದಲ್ಲಿ ಈ ಚಳವಳಿಗಳು ಆರಂಭವಾದಾಗ ಆ ಸೈದ್ಧಾಂತಿಕ ನೆಲೆ ಆ ಚಳವಳಿಗಳಿಗಿತ್ತು. ಆದರೆ ಇವೆರಡಕ್ಕಿಂತ ಭಿನ್ನವಾಗಿ ಈ ರಾಜ್ಯದಲ್ಲಿ ಮಾರ್ಕ್ಸ್‌ವಾದಿ ಚಳವಳಿಯೂ ಬೆಳೆದು ಬಂದಿದೆ.

ಮೂಲದಲ್ಲಿ ಆರ್ಥಿಕ ಹಾಗೂ ಸಾಮಾಜಿಕ ತಾರತಮ್ಯಗಳ ನೆಲೆ ಒಂದೇ ಆದರೂ ಈ ವಿಭಿನ್ನ ಚಳವಳಿಗಳು ಒಂದೊಂದರ ಮೇಲೆ ಹೆಚ್ಚು ಒತ್ತು ಕೊಟ್ಟಿವೆ. ಆದರೆ ಈ ಎಲ್ಲ ಚಳವಳಿಗಳೂ ಈ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಯ ವಾಸ್ತವವನ್ನು ತಳ್ಳಿಹಾಕಿಲ್ಲ. ಇಷ್ಟಕ್ಕೂ ಸಾಮಾಜಿಕ ಅಸಮಾನತೆಯ ಮೂಲ ಆರ್ಥಿಕ ಅಸಮಾನತೆಯೇ ಎಂಬುದು ನಿರ್ವಿವಾದ. ಇಂದು ವರ್ಗ, ವರ್ಣ, ಧರ್ಮ ಹಾಗೂ ಲಿಂಗತಾರತಮ್ಯಗಳು ಒಂದಕ್ಕೊಂದು ಪೂರಕವಾಗಿ ವರ್ತಿಸುತ್ತಿರುವುದರಿಂದ ಈ ಎಲ್ಲ ಚಿಂತನೆಗಳ ಆಶಯ ಮತ್ತು ಗುರಿ ಒಂದೇ ಆಗಬೇಕಾದ ಅವಶ್ಯಕತೆ ಇದೆ.

ಈ ತಾತ್ವಿಕ ನೆಲೆಗಟ್ಟಿನ ವಿಶಾಲ ತಳಹದಿಯ ಮೇಲೆ ಪರ್ಯಾಯ ರಾಜಕಾರಣದ ನೀತಿ ಸಂಹಿತೆ ರೂಪುಗೊಳ್ಳಬೇಕು. ಎಂಬತ್ತರ ದಶಕದ ರೈತ ಮತ್ತು ದಲಿತ ಚಳವಳಿಗಳು ಹೋರಾಟದ ಆಶಯಗಳಿಗೆ ಕೊಟ್ಟಷ್ಟು ಮಹತ್ವವನ್ನು ಸಂಘಟನೆಯ ಸ್ವರೂಪ ಹಾಗೂ ತಾತ್ವಿಕ ನೆಲೆಗಟ್ಟಿಗೆ ಕೊಡಲಿಲ್ಲ. ಆ ಕಾರಣಕ್ಕಾಗಿಯೇ ಆಗ ಸಂಘಟನೆಗಳ ಮೂಲಕ ಬೆಳೆದ ನಾಯಕರಿಗೆ ಹಾಗೂ ಕಾರ್ಯಕರ್ತರಿಗೆ ಪರ್ಯಾಯ ರಾಜಕಾರಣದ ಅವಶ್ಯಕತೆ ಕಾಣಲಿಲ್ಲ.

ಈಗ ರೂಪುಗೊಳ್ಳುತ್ತಿರುವ ರಾಜಕೀಯ ಶಕ್ತಿ (ಪಕ್ಷ) ಕಾರ್ಯಕರ್ತರ ಬದ್ಧತೆಯ ಬುನಾದಿಯ ಮೇಲೆ ರಚನೆಯಾಗಬೇಕು. ತಳಮಟ್ಟದಲ್ಲಿ ಸೈದ್ಧಾಂತಿಕ ಬದ್ಧತೆಯಿಂದ ಸಂಘಟನೆ ರೂಪುಗೊಳ್ಳಬೇಕು. ಹಾಗೂ ಆ ಸಂಘಟನೆಗೆ ನಿರ್ದಿಷ್ಟವಾದ ರಾಜಕೀಯ ಕಾರ್ಯಕ್ರಮ ಬೇಕು.

ಈ ರಾಜಕೀಯ ಕಾರ್ಯಕ್ರಮಕ್ಕೆ ಸೈದ್ಧಾಂತಿಕ ಮುನ್ನೋಟ ಹಾಗೂ ಪ್ರಾಯೋಗಿಕ ರಾಜಕಾರಣ ಆಯಾಮಗಳು ಸ್ಪಷ್ಟವಾಗಿರಬೇಕು. ಅದಕ್ಕಾಗಿ ಸಾಮೂಹಿಕ ತೀರ್ಮಾನದಡಿಯಲ್ಲಿ ಸ್ಪಷ್ಟವಾದ ನೀತಿಸಂಹಿತೆ ರೂಪಿಸಬೇಕು. ಈ ಕಾರ್ಯಕ್ರಮ ದೂರಗಾಮಿ ದೃಷ್ಟಿಕೋನ ಹಾಗೂ ಸಾಂದರ್ಭಿಕ ರಾಜಕೀಯ ತಂತ್ರಗಾರಿಕೆಯನ್ನು ಒಳಗೊಳ್ಳಬೇಕು.

ಈ ಪರ್ಯಾಯ ರಾಜಕೀಯ ಶಕ್ತಿಗೆ (ಪಕ್ಷಕ್ಕೆ) ದಲಿತ, ರೈತ, ಕಾರ್ಮಿಕ ಹಾಗೂ ಜನ ಸಾಮಾನ್ಯರ ಸಮಸ್ಯೆಯಾಧಾರಿತ ಮತ್ತು ಕೃಷಿ, ಕೈಗಾರಿಕೆ, ಉದ್ಯೋಗ, ಶಿಕ್ಷಣ, ಸಾಮಾಜಿಕ, ಸಾಂಸ್ಕೃತಿಕ ವಿಷಯಗಳ ಕುರಿತ ನಿರ್ದಿಷ್ಟವಾದ ಜನಪರ ಕಾರ್ಯಸೂಚಿ ಇರಬೇಕು.

ಮೇಲ್ನೋಟಕ್ಕೆ ಇದು ದಲಿತ-ರೈತ ಜನಸಮೂಹದ ವೇದಿಕೆಯಾದರೂ ಸಮಾಜದ ಮಧ್ಯಮವರ್ಗ, ಮಹಿಳೆ, ನಿರುದ್ಯೋಗಿ ಯುವ ಜನಾಂಗ ಹೀಗೆ ಸಮಾಜದ ವಿವಿಧ ಸ್ತರಗಳಲ್ಲಿರುವ ಶೋಷಿತ ಜನಾಂಗದ ಹಿತಾಸಕ್ತಿ ಇದರ ಕಾರ್ಯಸೂಚಿಯಲ್ಲಿ ಸೇರಬೇಕು.

ಒಟ್ಟಾರೆ ಈಗಿನ ಬಂಡವಾಳಶಾಹಿ, ಊಳಿಗಮಾನ್ಯ ವ್ಯವಸ್ಥೆಯ ಹಿಡಿತದಲ್ಲಿರುವ ರಾಜಕಾರಣ ಹಾಗೂ ಅಧಿಕಾರಶಾಹಿ ಜನಪರ, ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಹಸ್ತಾಂತರವಾಗಬೇಕು. ಇದರ ಜಾರಿಗೆ ವಿಶಾಲ ತಳಹದಿಯ ಕಾರ್ಯಸೂಚಿ ಈ ಹೊಸ ರಾಜಕೀಯ ವೇದಿಕೆ ಹೊಂದಬೇಕು. ಈಗಾಗಲೇ ಇರುವ ಎಡಪಂಥೀಯ ಚಳವಳಿಯ ಮೈತ್ರಿಕೂಟವಾಗಿ ಈ ರಾಜಕೀಯ ಶಕ್ತಿ ರೂಪುಗೊಳ್ಳಬೇಕು.

❑

ಸಮಾಜಮುಖಿ ಆಲೋಚನೆಗಳಿರಲಿ

○ ಡಾ॥ ಕಮಲಾ ಹಂಪನಾ
ಹಿರಿಯ ಸಾಹಿತಿಗಳು



೧. ಜನಪರ ಚಳವಳಿಗಳು, ವಿಶೇಷವಾಗಿ ದಲಿತ ಸಂಘರ್ಷ ಸಮಿತಿ ಹಾಗೂ ರೈತಸಂಘ ಜೊತೆಗೂಡಿ ರೂಪಿಸ ಹೊರಟಿರುವ ಪರ್ಯಾಯ ರಾಜಕಾರಣ ಪ್ರಯತ್ನಕ್ಕೆ ನನ್ನ ಸಂಪೂರ್ಣ ಬೆಂಬಲ ಇದೆ.

ರಾಜ್ಯ ಹಾಗೂ ರಾಷ್ಟ್ರದ ರಾಜಕೀಯ ಇತಿಹಾಸದಲ್ಲಿ ಈಗಾಗಲೇ ಅನೇಕ ಪಕ್ಷಗಳು ಹುಟ್ಟಿವೆ, ಕೆಲವು ಸತ್ತಿವೆ, ಕೆಲವು ಉಸಿರಾಡುತ್ತಿವೆ, ಮತ್ತೆ ಕೆಲವು ಕೊಬ್ಬಿದ ಗೂಳಿಗಳಾಗಿ ಜನತೆಯನ್ನು ಹಿಂಸಿಸುತ್ತಿವೆ. ಇಂದು ಇಡೀ ದೇಶ ಬದುಕುತ್ತಿರುವುದೇ ಇಂಥ ವಾತಾವರಣದ ಧಗೆಯಲ್ಲಿ. ಎಲ್ಲ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು ಭಾರತದ ಅನೇಕ ಪ್ರಜೆಗಳ ಪಾಲಿಗೆ ಮರೀಚಿಕೆಗಳು ಮಾತ್ರ ಆಗಿವೆ. ಅಷ್ಟೇ ಆಗಿದ್ದರೆ ಅನಾಹುತಗಳು ಅತಿಯಾಗುತ್ತಿರಲಿಲ್ಲ. ಆದರೆ ಅವು ಬಹುಸಂಖ್ಯಾತ ಬಡವರನ್ನು ಬಡಬಾಗ್ನಿಯಾಗಿ ದಹಿಸುತ್ತಿವೆ. ದಲಿತ ಸಂಘರ್ಷ ಸಮಿತಿ ಹಾಗೂ ರೈತಸಂಘ, ದಲಿತರ, ಪದ ದಲಿತರ, ಬಡವರ ಪರವಾದ, ಬಡರೈತರ ಪರವಾದ ಪ್ರಗತಿಪರ ಧೋರಣೆ ಇದ್ದು, ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದರೆ ಜ್ವಲಂತ ಸಮಸ್ಯೆಗಳಲ್ಲಿ ಕೆಲವಾದರೂ ಪರಿಹಾರವಾಗಬಹುದು.

೨. ಪರ್ಯಾಯ ರಾಜಕಾರಣ ಹಿಂದಿನ ಅನೇಕ ಪಕ್ಷಗಳಂತೆ ಬಕಾಸುರ, ಭಸ್ಮಾಸುರ ಸಂಸ್ಕೃತಿಯನ್ನು ರೂಢಿಸಿಕೊಳ್ಳಬಾರದು. ಏನು ಮಾಡಬೇಕು ಎನ್ನುವುದು ಎಷ್ಟು ಮುಖ್ಯವೊ, ಏನನ್ನು ದೇಶ-ರಾಷ್ಟ್ರದ ಜನತೆಗೆ ಮಾಡಬಾರದು ಎನ್ನುವುದರ ಕಡೆಗೆ ತೀವ್ರತರ ಗಮನ ಹರಿಸಬೇಕು. ಇತರ ಪಕ್ಷಗಳು ಸಮಾಜಮುಖಿ, ಜನಮುಖಿಯಾಗದೆ ಸೋತಿರುವುದನ್ನು ಅರಿತು ಅವುಗಳು, ಪುನರಾವರ್ತನೆಗೊಳ್ಳದಂತೆ ನೋಡಿಕೊಂಡರೆ ಮುಂದೆ ಅದೆ ಸುಗಮ ರಾಜಕೀಯದ ದಾರಿತೋರಿಸುತ್ತದೆ.

೩. ಈ ಎರಡು ಶಕ್ತಿಗಳ ಜೊತೆಗೆ ಕಾರ್ಮಿಕ ಸಂಘಟನೆಗಳೂ ಸೇರಿದರೆ ಉತ್ತಮ. ಕೋಮುಶಕ್ತಿಗಳನ್ನು ಧ್ವಂಸ ಮಾಡುವ, ಜನಸಂಖ್ಯಾ ಸ್ಫೋಟವನ್ನು (ಧಾರ್ಮಿಕ, ಜಾತಿ-ಆಧಾರದಿಂದ ಕಿತ್ತೊಗೆದು) ನಿಯಂತ್ರಿಸಿ ದೇಶದ ಪ್ರಗತಿಯ ಬಗೆಗೆ ಯೋಚಿಸುವ ಶಕ್ತಿಗಳು ಒಂದಾಗಬೇಕು. ಭ್ರಷ್ಟಾಚಾರಕ್ಕೆ ಒಳಗಾದ ವ್ಯಕ್ತಿಗಳನ್ನು ದೂರಮಾಡಿ, ಪ್ರಾಮಾಣಿಕರನ್ನು ರಾಜಕೀಯಕ್ಕೆ ತರುವ ಜರೂರು ಕೆಲಸವಾಗಬೇಕು.

೪. ಜನಪರ ಚಳವಳಿಗಳು, ವ್ಯಕ್ತಿ ಶಕ್ತಿಗಳು ಒಗ್ಗೂಡುವ ಒಂದು ರಾಷ್ಟ್ರೀಯ ವೇದಿಕೆ ನಿರ್ಮಾಣವಾಗಬೇಕು. ಸಂಘಟನೆ ತುಂಬಾ ಜವಾಬ್ದಾರಿಯುತ ಕೆಲಸ. ನಮ್ಮ- ನಮ್ಮಲ್ಲಿಯೇ ಇರುವ ಭಿನ್ನಾಭಿಪ್ರಾಯವನ್ನು ಮರೆತು, ಎಲ್ಲರೂ ಒಗ್ಗಟ್ಟಿನಿಂದ ಒಂದುಗೂಡಿ ಕೆಲಸ ಮಾಡಬೇಕು. ವೈಯಕ್ತಿಕ ಪ್ರತಿಷ್ಠೆ ಹಾಗೂ ಬೆಳವಣಿಗೆಗಿಂತ ನಾಡು-ದೇಶದ ಜನತೆಯ ಬಗೆಗೆ ಯೋಚಿಸಿ, ಯೋಜಿಸಿ ಅನುಷ್ಠಾನಕ್ಕೆ ತರುವ ವ್ಯಕ್ತಿಗಳು-ಶಕ್ತಿಗಳು ಒಂದಾಗಿ ದುಡಿಯಬೇಕು. ಬದ್ಧತೆಯಿರುವ ಸದಸ್ಯರಿದ್ದಾಗ ಮಾತ್ರ ಸಂಘಟನೆ ಸಮರ್ಥವಾಗಿ ಕೆಲಸ ಮಾಡುತ್ತದೆ. ಎಲ್ಲರಿಗೂ ಪಲ್ಲಕ್ಕಿ ಮೇಲೆ ಕಣ್ಣಿದ್ದರೆ, ಪಲ್ಲಕ್ಕಿ ಹೊರುವವರು ಯಾರು! ಆಳಾಗಿ ದುಡಿದು ಅರಸಾಗಲು ಪ್ರಯತ್ನಿಸುವ ಧ್ಯೇಯ, ವ್ಯಷ್ಟಿ ನೆಲೆಯಲ್ಲಿ ಬಹಳ ಮುಖ್ಯ. ಅಂಥ ವ್ಯಕ್ತಿಗಳಿಂದ ಮಾತ್ರ ಸಮಷ್ಟಿಯ ಬೆಳವಣಿಗೆ ಪಕ್ಷದ ಪ್ರಗತಿ ಸಾಧ್ಯ.

> **ಇತರ ಪಕ್ಷಗಳು ಸಮಾಜಮುಖಿ, ಜನಮುಖಿಯಾಗದೆ ಸೋತಿರುವುದನ್ನು ಅರಿತು ಅವುಗಳು, ಪುನರಾವರ್ತನೆಗೊಳ್ಳದಂತೆ ನೋಡಿಕೊಂಡರೆ ಮುಂದೆ ಅದೆ ಪರ್ಯಾಯ ರಾಜಕಾರಣಕ್ಕೆ ಸುಗಮ ರಾಜಕೀಯದ ದಾರಿತೋರಿಸುತ್ತದೆ.**

೫. ಇಲ್ಲಿಯವರೆಗೂ ನಾನು ಹೇಳಿರುವ ವಿಷಯಗಳೆಲ್ಲವೂ ಪಕ್ಷದ ನೀತಿಸಂಹಿತೆಗೆ ಸಂಬಂಧಪಟ್ಟ ಅಂಶಗಳಾಗಿವೆ. ರಾಷ್ಟ್ರದ ಏಳಿಗೆಗೆ ಏನು ಮಾಡಬೇಕು, ಏನನ್ನು ಮಾಡಬಾರದು -ಈ ಎರಡು ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನೀತಿ ಸಂಹಿತೆಯನ್ನು ರೂಪಿಸಬೇಕಿದೆ. ಈಗಾಗಲೇ ಸೋತಪಕ್ಷಗಳು ಸೋತದ್ದು ಎಲ್ಲಿ? ಹೇಗೆ? ಅದರಿಂದ ಈ ಪರ್ಯಾಯ ಪಕ್ಷ ಕಲಿಯಬೇಕಾದ ಪಾಠವೇನು? ರಾಷ್ಟ್ರವನ್ನು ಮುನ್ನಡೆಸುವ ಸಾಕಷ್ಟು ಕೆಲಸಗಳು ಆಗಿಲ್ಲ ಏಕೆ? ಯಾರ್ಯಾರಿಗೆ ಯಾವ ಯಾವ ಹಂತದಲ್ಲಿ ಹೇಗೇಗೆ ಅನ್ಯಾಯಗಳು ಆಗುತ್ತಿವೆ ಎನ್ನುವುದನ್ನು ತಿಳಿಯುವುದು ಮುಖ್ಯ. ಆಗ ಅನ್ಯಾಯಗಳನ್ನು ಹೋಗಲಾಡಿಸಿ ನ್ಯಾಯ ದೊರಕಿಸಿಕೊಡಲು ಪಕ್ಷಕ್ಕೆ ಸಾಧ್ಯವಾಗುತ್ತದೆ. ಮೇಲಿನ ನನ್ನ ಹೇಳಿಕೆಯನ್ನು ಗಮನದಲ್ಲಿರಿಸಿಕೊಂಡು, ತಜ್ಞರೊಡನೆ ಚರ್ಚಿಸಿ ಇತರರ ಅಭಿಪ್ರಾಯಗಳನ್ನೂ ಪಡೆದು 'ನೀತಿ ಸಂಹಿತೆ' ಹಾಗೂ 'ಕಾರ್ಯಸೂಚಿ'ಯನ್ನು ಸಿದ್ಧಪಡಿಸುವುದು. ❑



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೯೪೩ / ೯೪೪೮೦೪೮೩೦೬

ಓದುಗಲಾಕ

ಸರ್ಕಾರದ ಉನ್ನತ ಅಧಿಕಾರಿಯಾಗಿದ್ದರೂ ಸದಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಗೆಳೆಯ ಮೂಡ್ನಾಕೂಡು ಚಿನ್ನಸ್ವಾಮಿ ಈಚೆಗೆ ವೆನೆಜುಯೇಲಾಗೆ ಹೋಗಿ ಬಂದರು. ಅಲ್ಲಿನ ಆ್ಯಂಡೀಸ್ ವಿಶ್ವವಿದ್ಯಾನಿಲಯದ ಕರೆಯ ಮೇರೆಗೆ ವೆನೆಜುಯೇಲಾದ ರಾಜಧಾನಿ ಕ್ಯಾರಕಾಸ್ ನಗರದ ಸಾಂಸ್ಕೃತಿಕ ಕೇಂದ್ರದಲ್ಲಿ ತಮ್ಮ ಕವಿತೆಗಳನ್ನು ಓದಿದರು. ೨೧೬ ವರ್ಷಗಳಷ್ಟು ಹಳೆಯದಾದ ಆ್ಯಂಡೀಸ್ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ ಮೊದಲ ಭಾರತೀಯ ಲೇಖಕ ಚಿನ್ನಸ್ವಾಮಿಯವರು ಎಂಬುದು ನಾಡಿನ ಹೆಮ್ಮೆಯೇ ಸರಿ. ಚಿನ್ನಸ್ವಾಮಿಯವರು ತಮ್ಮ ಕವನಗಳನ್ನು ಓದುವುದಕ್ಕೆ ಮೊದಲು ಮಾಡಿದ ಪುಟ್ಟ ಭಾಷಣ ಸಂವಾದ ಓದುಗರಿಗಾಗಿ ಇಲ್ಲಿದೆ.

○ ಮೂಡ್ನಾಕೂಡು ಚಿನ್ನಸ್ವಾಮಿ

ನತದೃಷ್ಟ ಜನರ ಅನುಭವಗಳ ಸುತ್ತ...

ಸಾಂಸ್ಕೃತಿಕ ಕೇಂದ್ರದ ಮಹಾನಿರ್ದೇಶಕಿ ಮರಿತ್ಸಾ ಜೆಮೆನೇಜ್ ರವರೆ, ಪ್ರೊ. ರೊವೀನಾ ಹಿಲ್ ಅವರೇ ಇಲ್ಲಿ ನೆರೆದಿರುವ ಆದರಣೀಯ ಲೇಖಕ ಮಿತ್ರರೇ ಮತ್ತು ಕ್ಯಾರಕಾಸ್ ನಗರದ ಸಹೃದಯರೇ,

ಇಂದು ನಿಮ್ಮ ಮುಂದೆ ನಿಂತು ಕವಿತೆಗಳನ್ನು ವಾಚಿಸುವುದು ನನಗೆ ಅತ್ಯಂತ ಸಂತೋಷದಾಯಕ ವಿಷಯವಾಗಿದೆ. ಭಾರತ ಮತ್ತು ವೆನಿಜುಯೇಲಾ ಕೆಲವು ಸಮಾನ ಆಸಕ್ತಿಗಳನ್ನು ಹೊಂದಿವೆ. ಎರಡೂ ದೇಶಗಳ ಪ್ರಕೃತಿಯಲ್ಲಿ ಸಂಪತ್ತು ಮತ್ತು ಸೌಂದರ್ಯ ಸಮೃದ್ಧಿಯಾಗಿವೆ. ಬಡತನವೂ ಇದೆ. ಹಾಗೆಯೇ ಸುಂದರಿಯರು ಸೌಂದರ್ಯ ಸ್ಪರ್ಧೆಗಳಲ್ಲಿ ಕಿರೀಟಗಳನ್ನು ಧರಿಸಿ ಸುದ್ದಿ ಮಾಡುತ್ತಾರೆ. ನಾನು, ೨೧೬ ವರ್ಷಗಳಷ್ಟು ಹಳೆಯದಾದ ಆ್ಯಂಡೀಸ್ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುತ್ತಿರುವ ಮೊದಲ ಭಾರತೀಯ ಲೇಖಕ ಎಂದು ಮೆರಿಡಾ ರಾಜ್ಯ ಮತ್ತು ವಿಶ್ವವಿದ್ಯಾನಿಲಯ ನನ್ನನ್ನು ಗೌರವಿಸಿವೆ. ಇದೊಂದು ಅಪರೂಪದ ಗೌರವ. ನನ್ನ ಕವಿತೆಗಳಲ್ಲಿ ಆಸಕ್ತಿ ತೋರಿಸಿದ ಲ್ಯಾಟೀನ್ ಅಮೇರಿಕಾಕ್ಕೆ ನಾನು ಋಣಿ.


ಮೂಡ್ನಾಕೂಡು ಚಿನ್ನಸ್ವಾಮಿ

ನಾವೀರ್ವರು ಭೂಗೋಳದ ವಿರುದ್ಧ ದಿಕ್ಕಿನಲ್ಲಿ ವಾಸಿಸುತ್ತೇವೆ. ಭಾರತೀಯ ನಾಗರಿಕತೆ ಅತ್ಯಂತ ಹಳೆಯ ನಾಗರಿಕತೆಗಳಲ್ಲೊಂದು. ಇಲ್ಲಿ ಧರ್ಮ ಮತ್ತು ಸಂಸ್ಕೃತಿಗೆ ಆದ್ಯತೆ. ಸಾಮಾಜಿಕತೆ ಮತ್ತು ಆರ್ಥಿಕತೆಯಲ್ಲಿ ಹಿಂದುಳಿದ ಕಾರಣ ಈ ದೇಶವನ್ನು ಆಧ್ಯಾತ್ಮಿಕ ದೇಶವೆಂದು ಬ್ರಾಂಡ್ ಮಾಡಲಾಗಿದೆಯೆಂದು ಕಾಣುತ್ತದೆ. ನಿಜಕ್ಕೂ ಇದು ಸ್ಪಿರಿಚುಅಲ್ ಕಂಟ್ರಿ ಎಂಬುದನ್ನು ನಾನು ಒಪ್ಪುವುದಿಲ್ಲ. ದೇಶದ ಶೇ ೮೫ ರಷ್ಟು ಜನರು ತಮ್ಮ ಪೂಜೆಯನ್ನು ತಾವೇ ಮಾಡದೆ ಬೇರೊಬ್ಬರಿಂದ ಮಾಡಿಸುತ್ತಾರೆ. ಆದ್ದರಿಂದ ನಾನು ಭಾರತವನ್ನು ಬರೀ ರಿಚುಅಲ್ ಕಂಟ್ರಿ ಎಂದು ಕರೆಯುತ್ತೇನೆ.

ಈಗ ಬಹಳ ಬದಲಾವಣೆಯಾಗುತ್ತಿದೆ. ಭಾರತ ಅಣುಶಕ್ತಿಯನ್ನು ಹೊಂದಿದೆ. ತನ್ನದೇ ಆದ ಉಪಗ್ರಹಗಳನ್ನು ಕ್ಷಿತಿಜದಲ್ಲಿ ತೇಲಿ ಬಿಡುತ್ತಿದೆ. ಸದ್ಯದ ಮಟ್ಟಿಗೆ ಜಗತ್ತಿನಲ್ಲಿಯೇ ಅತ್ಯಂತ ಹೆಚ್ಚಿನ ಗಣಕ ತಂತ್ರಾಂಶವನ್ನು ರಫ್ತು ಮಾಡುತ್ತಿದೆ. ಆದರೆ, ನನ್ನಂತಹವರನ್ನು ಯೋಚನೆಗೀಡು ಮಾಡುವುದು ಶ್ರೀಸಾಮಾನ್ಯನ ಬದುಕು. ಬಡವನಾದ ಮತ್ತು ಸಮಾಜದ ಕಟ್ಟಕಡೆಯ ಮನುಷ್ಯ. ಭಾರತದಲ್ಲಿ ಇಷ್ಟೊಂದು ಸಂಪನ್ಮೂಲವಿದ್ದರೂ, ಮಾನವಶಕ್ತಿ ಇದ್ದರೂ ಶೇಕಡ ೩೫ರಷ್ಟು ಜನರು ಅನಕ್ಷರಸ್ಥರು ಎಂದರೆ ನಂಬುತ್ತೀರಾ! ಇಂಡಿಯಾದ ಆತ್ಮವಿರುವುದೇ ಹಳ್ಳಿಯಲ್ಲಿ. ಶೇ ೭೦ ಜನ ಇನ್ನೂ ಹಳ್ಳಿಗಳಲ್ಲಿಯೇ ವಾಸಿಸುತ್ತಿದ್ದಾರೆ. ಶೇ ೪೦ ರಷ್ಟು ಜನ ಬಡತನದ ರೇಖೆಯಿಂದ ಕೆಳಗಿದ್ದಾರೆ.

ಹಳ್ಳಿಗಳೆಂದಮೇಲೆ ಅಲ್ಲಿ ಮೂಲಭೂತ ಸೌಕರ್ಯಗಳು, ರಸ್ತೆಗಳು ಯಾವುವು ಸರಿಯಾಗಿರುವುದಿಲ್ಲವೆಂದು ಹೇಳಬೇಕಾಗಿಲ್ಲ. ಅವರಿನ್ನೂ ತೆರೆದ ಬಾವಿಗಳಲ್ಲಿ ಅಥವಾ ಹತ್ತಿರದ ಕೆರೆಗಳಲ್ಲಿ ನೀರನ್ನು ಪಡೆಯುತ್ತಾರೆ. ಸ್ವಚ್ಚತೆ ಅನ್ನುವುದು ಅಲ್ಲಿ ಅಣಕ. ಆದ್ದರಿಂದ, ನನಗನ್ನಿಸುತ್ತದೆ ಭಾರತ ಏಕಕಾಲದಲ್ಲಿ ಎರಡು ವಿಶ್ವಗಳಲ್ಲಿ ಬದುಕುತ್ತಿದೆ ಎಂದು. ಇಲ್ಲಿ ಹಾವಾಡಿಗರು, ನಾಡಿ ಭವಿಷ್ಯ ಹೇಳುವವರು, ರಸ್ತೆ ಬದಿಗಳಲ್ಲಿ ದಾರಾಳವಾಗಿ ಸಿಗುತ್ತಾರೆ. ಟ್ರಾಫಿಕ್ ಸಿಗ್ನಲ್ ಗಳಲ್ಲಿ ನಿಮ್ಮನ್ನು ನಿಲ್ಲಿಸಿ ಗುಗ್ಗೆ ತೆಗೆದು ಕಿವಿಯನ್ನು ಸ್ವಚ್ಛ ಮಾಡಿ ಒಂದು ಅಥವಾ ಎರಡು ರೂಪಾಯಿಗಳನ್ನು ಇಸಿದುಕೊಳ್ಳುವ ಜನರು ಇದ್ದಾರೆ. ಇದು ಏನು ಹೇಳುತ್ತದೆ ಅಂದರೆ ಶ್ರೀಮಂತ ಮತ್ತು ಬಡವನ ಮಧ್ಯೆ ಕಂದರ ದಿನೇ ದಿನೇ ಹೆಚ್ಚುತ್ತಿದೆ. ಅಷ್ಟೇ ಅಲ್ಲ ಮೇಲ್ಜಾತಿ ಮತ್ತು ಕೆಳಜಾತಿ ನಡುವಣ ಅಂತರ ಹೆಚ್ಚುತ್ತಿದೆ. ಜನರ ನಡುವೆ ಸಂಪತ್ತಿನ ಹಂಚಿಕೆ ಐತಿಹಾಸಿಕ ಕಾರಣಗಳಿಂದ ಅವೈಜ್ಞಾನಿಕವಾಗಿದೆ ಮತ್ತು ವಂಚನೆಯಿಂದ ಕೂಡಿದೆ.

ಜಾತಿ ಪದ್ಧತಿ ಅನ್ನುವುದು ಭಾರತ ಮಾತೆಯ ಮಡಿಲಿಗೆ ಕಟ್ಟಿದ ಕೆಂಡದಂತಿದೆ. ಹೊರಗಿನವರಿಗೆ ಜಾತಿಪದ್ಧತಿ ಎಂಬುದು ಅಷ್ಟು ಸುಲಭವಾಗಿ ಅರ್ಥವಾಗುವ ವಿಷಯವಲ್ಲ. ಮೆರಿಡಾ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳಿಂದ ಈ ವಿಷಯದಲ್ಲಿ ವಿಚಿತ್ರ ಪ್ರಶ್ನೆಗಳನ್ನು ಎದುರಿಸಿದ್ದೇನೆ. ಇದನ್ನು ಅವರು ಬಡತನದೊಂದಿಗೆ ತಳುಕುಹಾಕಲು ನೋಡುತ್ತಾರೆ ಮತ್ತು ಅದು ಎಲ್ಲಾ ಕಡೆಯೂ ಇರುವುದೆಂದು ಭಾವಿಸುತ್ತಾರೆ.

ನಾನು ನಿಮಗೆ ಮನದಟ್ಟು ಮಾಡಲು ಇಷ್ಟ ಪಡುವುದೇನೆಂದರೆ, ಜಾತಿ ಪದ್ಧತಿಯು ಒಂದು ಸಂಪೂರ್ಣ ಭಿನ್ನವಾದ ಸಂಗತಿ (phenomenon) ಎಂದು. ಇದು ಭಾರತವನ್ನು ಬಿಟ್ಟರೆ ಪ್ರಪಂಚದ ಯಾವ ಮೂಲೆಯಲ್ಲಿಯೂ ಕಾಣಲು ಸಿಗುವುದಿಲ್ಲ. ಜಾತಿ ಎನ್ನುವುದು ಹುಟ್ಟಿನೊಂದಿಗೆ ಗುರುತಿಸಿಕೊಳ್ಳುವ ಕುರುಹು, ವಂಶಾನುಗತವಾಗಿ ಪಡೆದುಕೊಳ್ಳುವ ಶ್ರೇಣಿ. ಅದನ್ನು ಸಾಯುವ ವರೆವಿಗೂ ಬದಲಾಯಿಸಲು ಸಾಧ್ಯವಿಲ್ಲ. ಮೇಲು ಕುಲಜರೆನಿಸಿಕೊಂಡವರಿಗೆ ಇದರಿಂದ ಅನಾಯಾಸ ಘನತೆ, ಗೌರವ, ದರ್ಜೆ ಲಭಿಸಿ ಅವುಗಳಿಗೆ ಅರ್ಹರಾಗಿಲ್ಲದಿದ್ದರೂ ಸಂತೋಷಪಡುತ್ತಾರೆ. ಆದ್ದರಿಂದ, ಅದು ಅಮಾನವೀಯವಾದುದೆಂದು ತಿಳಿದಿದ್ದರೂ ಅದನ್ನು ರಕ್ಷಿಸಲು ಹೆಣಗುವ ಪಟ್ಟಭದ್ರ ಹಿತಾಸಕ್ತಿಗಳಾಗಿ ರೂಪುಗೊಳ್ಳುತ್ತಾರೆ. (ಎಲ್ಲದಕ್ಕೂ ಅಪವಾದಗಳಿರುವಂತೆ ಇಲ್ಲಿಯೂ ಮಾನವೀಯವಾಗಿ ಸ್ಪಂದಿಸುವವರಿಗೆ ಕೊರತೆ ಇಲ್ಲ)

ಕೆಳಗಿನ ಶ್ರೇಣಿಗಳಲ್ಲಿರುವ ಜನರನ್ನು ಸ್ವಾಭಾವಿಕವಾಗಿ ಕಡೆಗಣಿಸಲಾಗುತ್ತದೆ. ಅವಮಾನಿಸಲಾಗುತ್ತದೆ. ಹಳ್ಳಿಗಳಲ್ಲಿ ಅಂತರ್ಜಾತಿ ಮದುವೆಗಳಿರಲಿ, ಒಟ್ಟಿಗೆ ಕೂತು ಉಣ್ಣುವುದು ದೂರದ ಮಾತು. ಪರಸ್ಪರ ವಂದನಾಕ್ರಮವು ಕೂಡ ಜಾತಿ ಶ್ರೇಣಿಗೆ ಅನುಗುಣವಾಗಿರುತ್ತದೆ. ಇದು ಮಾನವ ಇತಿಹಾಸದಲ್ಲಿಯೇ ತುಚ್ಛ ಪದ್ಧತಿ. ಏಕೆಂದರೆ, ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನಿಗೆ ತೋರಬಹುದಾದ ಕನಿಷ್ಠ ಪ್ರೀತಿ ಗೌರವಗಳು ಜಾತಿ ಪದ್ಧತಿಯಲ್ಲಿ ಮಾಯವಾಗಿಬಿಡುತ್ತವೆ. ಅಂದರೆ, ಸಮಾನತೆ ಇಲ್ಲಿ ಸಂಪೂರ್ಣವಾಗಿ ಗೈರುಹಾಜರಾಗಿರುತ್ತದೆ.

ಇಂತಹ ವ್ಯವಸ್ಥೆಯನ್ನು ಆತ್ಮಗೌರವವುಳ್ಳ ಸಮಾಜ ಹೇಗೆ ಸಹಜವೆಂದು ಒಪ್ಪಿಕೊಳ್ಳಲು ಸಾಧ್ಯ. ಮೇಲಾಗಿ, ದೇಶದ ಸಂವಿಧಾನ ಸಮಾನತೆಯನ್ನು ಒತ್ತಿ ಹೇಳುತ್ತದೆ. ಆದರೆ ವಾಸ್ತವದಲ್ಲಿ ಅದು ತದ್ವಿರುದ್ಧವಾಗಿದೆ. ಬಡತನ ಭೌತಿಕವಾದುದು, ಆದರೆ ಜಾತಿ ಪದ್ಧತಿ ಭೌತಿಕವಾಗಿ ಮತ್ತು ಮಾನಸಿಕವಾಗಿ ಮನುಷ್ಯನನ್ನು ವಂಚಿಸುತ್ತಿದೆ ಮತ್ತು ಹಿಂಸಿಸುತ್ತಿದೆ. ನಗರೀಕರಣದೊಂದಿಗೆ ಭೌತಿಕ ವ್ಯತ್ಯಾಸಗಳು/ಶೋಷಣೆ ಕಡಿಮೆಯಾಗುತ್ತಿದ್ದರೂ ಮಾನಸಿಕವಾಗಿ ಅದು ಗಟ್ಟಿಗೊಳ್ಳುತ್ತಿದೆ.



ಲೇಖಕರೊಡನೆ ಇರುವವರು ಕವಯತ್ರಿ ಅನುವಾದಕಿ ಪ್ರೊ. ರೊವೀನಾ ಹಿಲ್ ಮತ್ತು ಪ್ರಕಾಶಕ ಮೈಖಲ್

ಊಳಿಗಮಾನ್ಯ ಸಮಾಜವು ಕೆಳಜಾತಿಯ ಮನುಷ್ಯನನ್ನು ಸಮಾನನೆಂದು ಒಪ್ಪಿಕೊಳ್ಳಲು ಇನ್ನೂ ತಯಾರಾಗಿಲ್ಲ.

ಇದರೊಂದಿಗೆ ಅಸ್ಪೃಶ್ಯತೆಯ ಕಳಂಕ ಬೇರೆ ಇದೆ, ದೇವರ ಧಿಕ್ಕಾರವಿರಲಿ, ಈ ಅಮಾನುಷ ಪದ್ಧತಿ ಜಾತಿ ಪದ್ಧತಿಯೊಳಗೆ ಹೇಗೆ ನುಸುಳಿತು ಎಂಬುದಕ್ಕೆ ಅನೇಕ ಕಾರಣಗಳಿವೆ. ಆದರೆ, ಆ ಕನಿಷ್ಠತಮ ಜನರನ್ನು ಹೇಗೆ ನಡೆಸಿಕೊಳ್ಳಲಾಗುತ್ತದೆಂಬುದು ಭಾಷೆಗೆ ನಿಲುಕದ ವಿಷಯ. ಸಾಮಾನ್ಯವಾಗಿ ಬಡವನಾದ ಇವನನ್ನು ಅವಮಾನ ಮತ್ತು ಪರಕೀಯತೆ ಅಘಾತಕಾರಿಯಾದ ದುಃಸ್ಥಿತಿಗೆ ನೂಕಿದೆ. ಭಾರತದ ಜನಸಂಖ್ಯೆಯ ಐದನೇ ಒಂದು ಭಾಗದಷ್ಟಿರುವ ಜನರು ಈ ಅವಮಾನದಿಂದ ನರಳುತ್ತಿದ್ದಾರೆ.

ನಮ್ಮ ಸಮಾಜದ ಒಂದು ಪಕ್ಷಿನೋಟವನ್ನು ಕೊಡುವುದು ಅವಶ್ಯಕವೆಂದು ತಿಳಿದು ಇಷ್ಟು ಮಾತನಾಡಿದ್ದೇನೆ. ಏಕೆಂದರೆ ನನ್ನ ಕವಿತೆಗಳು ಈ ನತದೃಷ್ಟ ಜನರ ಅನುಭವಗಳ ಸುತ್ತ ಗಿರಕಿ ಹೊಡೆಯುತ್ತವೆ. ನಾನು ಆ ಒಳಗಿನವನೇ ಆಗಿ ಅನುಭವಜನ್ಯವಾದ ಕಾವ್ಯವನ್ನು ಕೊಡುತ್ತಿದ್ದೇನೆ ಅನಿಸುತ್ತದೆ. ಪ್ರಪಂಚದ ದೂರ ದೇಶಗಳ ಆಸಕ್ತ ಜನರು ನನ್ನ ಕವಿತೆಗಳತ್ತ ಗಮನಹರಿಸುತ್ತಿರುವುದು ನನಗೆ ಸಂತೋಷವಾಗಿದೆ. ಪ್ರೊ. ರೋಹಿನಾ ಹಿಲ್ ರವರಂತಹ ಮಾನವಂತ ಲೇಖಕರು ಹೆಚ್ಚಾಗಲಿ.

ನಾನೊಂದು ಮರವಾಗಿದ್ದರೆ

ಚಿನ್ನಸ್ವಾಮಿಯವರ ಒಂದು ಕವನ



ನಾನೊಂದು ಮರವಾಗಿದ್ದರೆ
ಹಕ್ಕಿ ಗೂಡು ಕಟ್ಟುವ ಮುನ್ನ
ಕೇಳುತ್ತಿರಲಿಲ್ಲ ನೀನು ಯಾವ ಕುಲ
ಬಿಸಿಲು ನನ್ನ ಅಪ್ಪಿಕೊಂಡಾಗ
ನೆರಳಿಗಾಗುತ್ತಿರಲಿಲ್ಲ ಮೈಲಿಗೆ
ತಂಬೆಲರ ಕೂಡ ಎಲೆಗಳ ಸ್ನೇಹ
ಮಧುರವಾಗಿರುತ್ತಿತ್ತು

ಮಳೆ ಹನಿಗಳು ನಾನು ಶ್ವಪಚನೆಂದು
ಹಿಂದೆ ಸರಿಯುತ್ತಿರಲಿಲ್ಲ. ನಾನು
ಬೇರೂರಿ ಕುಡಿಯಿಡುತ್ತಿರುವಾಗ ಭೂ ದೇವಿ

೨
ಮಡಿ ಮಡಿ ಎಂದು ಓಡುತ್ತಿರಲಿಲ್ಲ
ಪವಿತ್ರ ಗೋವು ನನ್ನ ತೊಗಟೆಗೆ ತನ್ನ ಮೈ ಉಜ್ಜಿ
ತುರಿಕೆ ತೀರಿಸಿಕೊಳ್ಳುವಾಗ ಅದರ ಅಂಗಾಂಗಗಳಲ್ಲಿ
ಅಡರಿಕೊಂಡ ಮುಕ್ಕೋಟಿ ದೇವತೆಗಳು
ನನ್ನನ್ನು ಮುಟ್ಟಿಸಿಕೊಳ್ಳುತ್ತಿದ್ದರು

ಯಾರಿಗೆ ಗೊತ್ತು
ನನ್ನ ಅಂತ್ಯ ಕಾಲದಲ್ಲಿ
ಕಡಿದು ತುಂಡಾದ ಒಣ ಸೀಳೊಂದು
ಹೋಮಾಗ್ನಿಯಲ್ಲಿ ಬೆಂದು
ಪಾವನವಾಗುತ್ತಿತ್ತೇನೊ
ಅಥವಾ
ಸತ್ಪುರುಷನೊಬ್ಬನ ಹೆಣಕ್ಕೆ ಚಟ್ಟವಾಗಿ
ನಾಲ್ಕು ಜನ ಸಜ್ಜನರ ಹೆಗಲೇರಬಹುದಿತ್ತೆ?

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಇನ್ನು ಮುಂದೆ ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ಆಡಳಿತಶಾಹಿ : ಪರೋಪಜೀವಿ ಪಳೆಯುಳಿಕೆ

'ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲ್ಲ' ಎಂಬುದು ಪ್ರಾಯಶಃ ಆಡಳಿತಶಾಹಿಯನ್ನು ನೋಡಿಯೇ ಜನತೆ ಕಟ್ಟಿಕೊಂಡ ಗಾದೆಯಾಗಿರಬೇಕು. ಒಂದು ಪ್ರಜಾಸತ್ತೆಯಲ್ಲಿ ಜನಶಕ್ತಿಯನ್ನು ಹೊರತುಪಡಿಸಿ ದೇವಶಕ್ತಿಯೆಂದು ಜನತೆಯ ಬದುಕನ್ನು ನಿಯಂತ್ರಿಸುವಂತಿರುವುದೇ ಒಂದು ವಿಪರ್ಯಾಸ.

ಈ ದೇವರುಗಳು ಯಾರು? ಭೂಸುರರು ಹಾಗೂ ಆಧುನಿಕ ಭೂಸುರರು. ಜನತೆ ಈಗಲೂ ತಮ್ಮ ನಿತ್ಯ ಜೀವನಕ್ಕೂ ಇವರ ಕೃಪಾಕಟಾಕ್ಷಕ್ಕೆ ಕಾದು ನಿಲ್ಲುವ ಪರಿಸ್ಥಿತಿಯೇ ಜನತಂತ್ರದ ಘೋರ ವೈಫಲ್ಯಕ್ಕೆ ಒಂದು ಜ್ವಲಂತ ನಿದರ್ಶನ. ಅದಿರಲಿ. ಜನತಂತ್ರದಲ್ಲಿ ಇನ್ನು ಜನರನ್ನು ಮೀರಿದ ದೇವರಿರುವುದರಿಂದಲೇ ಪೂಜಾರಿಗಳೂ ಇದ್ದಾರೆ. ವ್ಯತ್ಯಾಸವಿಷ್ಟೆ ಈ ದೇವರೂ ವರ ಕೊಡುವ ದೇವರಲ್ಲ, ಪೂಜಾರಿಯೂ ಅಹವಾಲು ತಲುಪಿಸಲು ಪೂಜಾರಿಯಲ್ಲ, ಇವರಿಬ್ಬರೂ, ಈ ಆಧುನಿಕ ಯುಗದಲ್ಲಿ ಹೊಸ ಸಂಪತ್ತಿನ ಹಾಗೂ ಅದರ ಸೃಷ್ಟಿಕರ್ತರ ಅರ್ಥಾತ್ ಐಟಿ, ಬಿಟಿ ದೊರೆಗಳ ಆರಾಧಕರಾಗಿ, ಅವರ ಕೃಪಾಕಟಾಕ್ಷ ಪಡೆಯಲು ತುದಿಗಾಲಲ್ಲಿ ನಿಂತಿದ್ದಾರೆ. ಕಳೆದೊಂದು ತಿಂಗಳಲ್ಲಿ ಕರ್ನಾಟಕದ ಸರ್ಕಾರ, ಅದರ ರಾಜಕೀಯ ನಾಯಕತ್ವ ಹಾಗೂ ಅದರ ಕಾರ್ಯವಾಹಕ ಆಡಳಿತಶಾಹಿ ನಡೆಸಿರುವ ಎರಡು ಸಭೆಗಳನ್ನು ನೋಡಿದರೆ ಇದು ಇನ್ನಷ್ಟು ಸ್ಪಷ್ಟವಾಗುತ್ತದೆ.



ಮಾಹಿತಿ ತಂತ್ರಜ್ಞಾನ ದಿಗ್ಗಜರುಗಳಿಗೆ ಸರ್ಕಾರ ಮಣಿಯಿತೇ ?

ಕಳೆದ ಆಗಸ್ಟ್ ೧೦ ರಂದು ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಅವರೊಡನೆ ಮುಖ್ಯ ಕಾರ್ಯದರ್ಶಿ, ಹಣಕಾಸು, ಅಭಿವೃದ್ಧಿ ಐಟಿ ಇಲಾಖೆಯ ಪ್ರಿನ್ಸಿಪಲ್ ಕಾರ್ಯದರ್ಶಿಗಳಲ್ಲದೆ ಬಿಡಿಎ ಆಯುಕ್ತರೂ ಹಾಗೂ ಬೆಂಗಳೂರು ಪೊಲೀಸ್ ಕಮಿಷನರ್‌ಗಳು ಎಲ್ಲಾ ಒಟ್ಟು ಸೇರಿ ಪಂಚತಾರಾ ಹೋಟೆಲ್ ಒಂದರಲ್ಲಿ ಮುನಿಸುಗೊಂಡಿದ್ದ ಆಧುನಿಕ ಭೂಸುರರಾದ ಐಟಿ ಕ್ಷೇತ್ರದ ಉದ್ಯಮಪತಿಗಳೊಂದಿಗೆ ಗಂಟೆಗಳ ಕಾಲ ಸಭೆ ನಡೆಸಿದ್ದರು. ತಮ್ಮ ರೈತಪರತೆಯನ್ನು ಸಾಬೀತುಪಡಿಸುವ ಬಿರುಸಿನಲ್ಲಿ, ಉಪಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿ ಸಿದ್ದರಾಮಯ್ಯನವರು 'ಐಟಿ' ಕ್ಷೇತ್ರದ ಬಗ್ಗೆ 'ಮೈಮರೆವಿನಲ್ಲಿ ತೋರಿರುವ' ಉಪೇಕ್ಷೆಯ ಬಗ್ಗೆ ಕರ್ನಾಟಕದ ಅಸಲೀ ದೊರೆಗಳಾಗಿರುವ ಅಜೀಂ ಪ್ರೇಮ್‌ಜಿ, ನಾರಾಯಣ ಮೂರ್ತಿ, ನಂದನ ನೀಲಕೇಣಿಗಳೂ ಮುನಿಸಿಕೊಂಡಿದ್ದರು.

ಸಿದ್ಧರಾಮಯ್ಯನವರ ಈ 'ಬೇಜವಾಬ್ದಾರಿ ಹೇಳಿಕೆ'ಗಳ ಬಗ್ಗೆ ಅಧಿಕಾರಶಾಹಿಗಳೇ ಮುನಿಸಿಕೊಂಡಿದ್ದರು. ಕೂಡಲೇ ಉಪಮುಖ್ಯಮಂತ್ರಿಗಳೊಡನೆ ಸಭೆ ಸೇರಿದ ಈ 'ಪೂಜಾರಿಗಳು' ಇದು ಈ ಅಸಲೀ ಐಟಿ ದೊರೆಗಳಿಗೆ ಮುನಿಸು ತರುತ್ತದೆಂದೂ, ಅವರೆಲ್ಲರೂ ಕರ್ನಾಟಕದಿಂದ ಕಾಲ್ಕಿತ್ತರೆ ಕರ್ನಾಟಕದ ಆರ್ಥಿಕತೆಗೆ ದೊಡ್ಡ ಅನಾಹುತವೇ ಉಂಟಾಗುತ್ತದೆಂದು ಹೆದರಿಸಿದರು. ತಮ್ಮ ಮೈಮರೆವಿನಿಂದ ಆದ ತಪ್ಪನ್ನು ಕೂಡಲೇ ಅರ್ಥ ಮಾಡಿಕೊಂಡ ಈ 'ಪ್ರಗತಿಪರ ಸರ್ಕಾರ' ಆಗಸ್ಟ್ ೧೦ ರಂದು ಅವರೊಂದಿಗೆ ಗಂಟೆಗಟ್ಟಲೆ ರಹಸ್ಯ ಸಭೆ ನಡೆಸಿ, ಐಟಿ ಉದ್ಯಮಕ್ಕೆ ಹಾನಿಕರ ಎಂದು ಈ ಉದ್ಯಮಪತಿಗಳು ಭಾವಿಸುವ ಎಲ್ಲಾ ಕ್ರಮಗಳನ್ನು ಹಿಂತೆಗೆದುಕೊಂಡಿದ್ದಲ್ಲದೆ, ಅವರ ಇತರ ಕೋರಿಕೆಗಳನ್ನೆಲ್ಲಾ ಚಾಚೂ ತಪ್ಪದೆ ಅನುಷ್ಠಾನಕ್ಕೆ ತರುವ ಖಚಿತ ಭರವಸೆ ನೀಡಿದರು. ಅಲ್ಲೇ ಇದ್ದ ಅಧಿಕಾರಿಗಳು ಅದರ ಆಡಳಿತಾತ್ಮಕ ಅನುಷ್ಠಾನಕ್ಕೆ ಬೇಕಾದ ಎಲ್ಲಾ ತಿದ್ದುಪಡಿಗಳೊಂದಿಗೆ ಸಿದ್ಧರಾಗಿಯೇ ಬಂದಿದ್ದರು.

ಹೀಗಾಗಿ ಐಟಿ ಕ್ಷೇತ್ರದ ಬಗ್ಗೆ ಹಾಗೂ ಆರ್ಥಿಕತೆಯ ಬಗ್ಗೆ ಬಜೆಟ್ ಭಾಷಣದಲ್ಲಿ ಸದನದಲ್ಲಿ ಚುನಾಯಿತ ಪ್ರತಿನಿಧಿಗಳ ಮುಂದೆ ಬಹಿರಂಗವಾಗಿ ಮಂಡಿಸಿದ ನೀತಿ ಪಂಚತಾರಾ ಹೋಟೆಲೊಂದರಲ್ಲಿ ಮುಚ್ಚಿದ ಬಾಗಿಲಿನ ಹಿಂದೆ ಏಕಾಏಕಿ ಬದಲಾಗಿಹೋಯಿತು. ಇದು ಈ ದೇಶದ ಪ್ರಜಾಸತ್ತೆ ಬೇರುಗಳು ಎಷ್ಟು ಆಳಕ್ಕಿವೆ ಎಂಬುದರ ಒಂದು ನಿದರ್ಶನ. ಇದರಲ್ಲಿ ಕಾಂಗ್ರೆಸ್-ದಳ ಸರ್ಕಾರದ, ಐಟಿ ಪರತೆ, ಶ್ರೀಮಂತ ಉದ್ಯಮಿಗಳ ಪರತೆಯ ಬಗ್ಗೆ ವಿಶೇಷವಾಗಿ ವಿವರಿಸುವ ಅಗತ್ಯವೇನೂ ಇಲ್ಲ.

ಜಾಗತೀಕರಣದ ನೀತಿಗಳಿಗೆ ದಿಡ್ಡಿ ಬಾಗಿಲು ತೆರೆದು, ಈ ದೇಶದ ಬಡಜನತೆಯಿಂದ ಶ್ರೀಮಂತರೆಡೆಗೆ ಸಂಪನ್ಮೂಲ ಹರಿಯುವಂತೆ ಮಾಡಿದ್ದೇ ಈ ಪಕ್ಷಗಳಾದ್ದರಿಂದ ಹೆಚ್ಚಿನ ವಿವರಣೆಯ ಅಗತ್ಯವಿಲ್ಲ. ಜೊತೆಗೆ ರಹಸ್ಯವಾಗಿ ಐಟಿ ಕ್ಷೇತ್ರದೊಡನೆ ಆಗಿರುವ ಈ ಒಪ್ಪಂದಕ್ಕೆ ವಿರೋಧ ಪಕ್ಷಗಳು ಕನಿಷ್ಠ ಆಕ್ಷೇಪಣೆಯನ್ನು ದಾಖಲಿಸಿಲ್ಲ. ಹೀಗಾಗಿ ಶಾಸಕಾಂಗದ ಮೇಲಿನ ನಿಯಂತ್ರಣವನ್ನು ಯಾವ ವರ್ಗ ಹೊಂದಿದೆ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆಯಷ್ಟೆ.

ಆದರೆ, ಈ ಪ್ರಕರಣದಲ್ಲಿ ಮತ್ತೊಮ್ಮೆ ಸಾಬೀತಾಗುವ ಇನ್ನೊಂದು ಸಂಗತಿಯಿದೆ. ಯಾವುದೇ ಪಕ್ಷ ಅಧಿಕಾರಕ್ಕೆ ಬರಲಿ, ಈ ದೇಶದ ಅಸಲೀ ಆಡಳಿತದ ಚುಕ್ಕಾಣಿ ಹಿಡಿದಿರುವ, ಜನತೆಯಿಂದ ಚುನಾಯಿತರಾಗದ, ಈ ದೇಶದ ಆಡಳಿತಶಾಹಿಯ ವರ್ಗ ಹಿತಾಸಕ್ತಿ ಹಾಗೂ ಮನೋಧರ್ಮ. ಒಂದು ಪ್ರಜಾತಂತ್ರದಲ್ಲಿ ಆಡಳಿತಶಾಹಿಗೆ ಶಾಸಕಾಂಗ ರಾಜಕೀಯ ಮಾರ್ಗದರ್ಶನ ಮಾಡಬೇಕು. ಯಾವ ಪಕ್ಷಕ್ಕೆ ಬಹುಮತ ದಕ್ಕಿದೆಯೋ, ಅದು ತನ್ನ ಪಕ್ಷದ ಆರ್ಥಿಕ-ಸಾಮಾಜಿಕ ನೀತಿಗಳನ್ನು ಜಾರಿಗೆ ತರಲು ಆಡಳಿತಶಾಹಿ ಒಂದು ಅನುಷ್ಠಾನ ಯಂತ್ರಾಂಗವಾಗಿ ಸಹಾಯಕ್ಕೆ ಬರಬೇಕು.

ಆದರೆ, ದುರದೃಷ್ಟವಶಾತ್, ಸಾಮಾಜಿಕ-ಆರ್ಥಿಕ ನೀತಿಗಳ ಪ್ರಶ್ನೆಗೆ ಬರುವುದಾದರೆ ಈ ದೇಶದಲ್ಲಿ ಅಂತಹ ದೊಡ್ಡ ಆಯ್ಕೆಗಳಿಗೆ ಅವಕಾಶವೇ ಇಲ್ಲ. ಅದರಲ್ಲೂ ೧೯೯೧ರ ನಂತರ ಪ್ರತಿಯೊಂದು

ವಾಸ್ತವ

ಜುಲೈ, ೨೪ ರಂದು ನಕ್ಸಲ್ ಸಮಸ್ಯೆಯ ಬಗ್ಗೆ ಹಾಗೂ ಆಗಸ್ಟ್ ೧೦ ರಂದು ಐಟಿ ಸಮಸ್ಯೆಯ ಬಗ್ಗೆ ನಡೆದ ಉನ್ನತಮಟ್ಟದ ಸಭೆಗಳು ಇತರ ಹಲವಾರು ವಿಷಯಗಳೊಂದಿಗೆ, ಈ ದೇಶದ ಅಧಿಕಾರಶಾಹಿಯ ಬಗ್ಗೆ ಕೆಲವು ನಿರ್ದಿಷ್ಟ ತಿಳವಳಿಕೆಯನ್ನು ನೀಡುತ್ತದೆ. 'ಐಟಿ ಉದ್ಯಮಿಗಳೊಂದಿಗೆ ಸಕಾರಾತ್ಮಕ ಮಾತುಕತೆಗೆ ಸರ್ಕಾರ ಯಾವಾಗಲೂ ಸಿದ್ಧವಿದೆ'. ಹಾಗೂ 'ನಕ್ಸಲರೊಂದಿಗೆ ಮಾತುಕತೆ ಎರಡನೇ ವಿಚಾರ. ಮೊದಲನೆಯದು ಅವರನ್ನು ಬೇರು ಬಿಡದಂತೆ ಮಾಡುವುದು - ಹತ್ತಿಕ್ಕುವುದು'. ಎರಡೂ ಹೇಳಿಕೆಗಳ ಹಿಂದೆ ಅಧಿಕಾರ ಶಾಹಿಗಳೇ ರಾಜಕೀಯ ನಾಯಕತ್ವಕ್ಕೆ ನೀಡಿರುವ 'ಮಾರ್ಗದರ್ಶನ' ಸ್ಪಷ್ಟವಾಗಿ ಎದ್ದು ಕಾಣುತ್ತಿದೆ.

❍ ಶಿವಸುಂದರ್

ರಾಜಕೀಯ ಪಕ್ಷವೂ ಈ ದೇಶದ ಸಂವಿಧಾನಕ್ಕಿಂತ ಖಾಸಗೀಕರಣ-ಜಾಗತೀಕರಣ-ಉದಾರೀಕರಣದ ವಿಶ್ವಬ್ಯಾಂಕ್ ಸಂವಿಧಾನಕ್ಕೆ ಹೆಚ್ಚು ಕಟಿಬದ್ಧವಾಗಿವೆ. ಹೀಗಾಗಿ ಈ ಪಕ್ಷಗಳಲ್ಲಿ ಅಂತಹ ವ್ಯತ್ಯಾಸಗಳೇನೂ ಇಲ್ಲ.

ಕೆಲವು ದಶಕಗಳ ಹಿಂದೆ ರಷ್ಯಾ ದೇಶವು ಮಾತ್ರ ಏಕಪಕ್ಷ ಪ್ರಭುತ್ವ ಹೊಂದಿದೆ ಎಂಬ ಚರ್ಚೆ ನಡೆಯುತ್ತಿದ್ದಾಗ, ಬರ್ನಾಡ್ ಷಾರವರು, ಅಮೆರಿಕ ಸಹ ಏಕಪಕ್ಷ ಪ್ರಭುತ್ವವೇ ಆದರೆ ಅಮೆರಿಕದ ಸಂಸ್ಕೃತಿಗೆ ತಕ್ಕಂತೆ ಅಗತ್ಯಕ್ಕಿಂತ ಒಂದನ್ನು ಹೆಚ್ಚಿಗೆ ಇಟ್ಟುಕೊಂಡಿದೆಯಷ್ಟೆ ಎಂದಿದ್ದರಂತೆ. ಭಾರತದಲ್ಲಿ ನಾವು ಅಗತ್ಯಕ್ಕಿಂತ ಒಂದರ ಬದಲು ಹತ್ತಾರನ್ನು ಇಟ್ಟುಕೊಂಡಿದ್ದೇವೆ ಅಷ್ಟೆ.

ಆದರೆ ನಮ್ಮ ದೇಶದ ಅಧಿಕಾರಶಾಹಿ ಒಂದು ರಾಜಕೀಯದಿಂದ, ವರ್ಗಹಿತಾಸಕ್ತಿಗಳಿಂದ ಹೊರತಾದ ಒಂದು ತಟಸ್ಥ ಯಂತ್ರಾಂಗವಾಗಿದೆಯೇ ಎಂಬುದು ಕೇಳಬೇಕಾದ ಪ್ರಶ್ನೆ. ಇದು ಕಳೆದ ಜುಲೈ, ೨೪ ರಂದು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಉನ್ನತಮಟ್ಟದ ಅಧಿಕಾರಿಗಳು ನಡೆಸಿದ ಸಭೆಯಲ್ಲಿ ಇನ್ನು ಸ್ಪಷ್ಟವಾಗಿ ಹೊರಬಂದಿದೆ.

ರಾಜ್ಯದಲ್ಲಿ ನಕ್ಸಲರ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಎಂದು ನಡೆಸಲಾದ ಈ ಸಭೆಗೆ ಮುಖ್ಯಮಂತ್ರಿ ಧರ್ಮಸಿಂಗ್, ಮಾಜಿ ಮಂತ್ರಿ ಚಂದ್ರೇಗೌಡ ಮಾತ್ರವಲ್ಲದೆ ಮುಖ್ಯ ಕಾರ್ಯದರ್ಶಿ ಮಿಶ್ರಾ, ಹಣಕಾಸು ಕಾರ್ಯದರ್ಶಿ ಪಾಂಡೆ, ಅಭಿವೃದ್ಧಿ ಆಯುಕ್ತ ವಿಜಯ್ ಗೋರೆ, ಗೃಹಕಾರ್ಯದರ್ಶಿ ಬ್ರಹ್ಮದತ್ತ, ಆಗಿನ ಡಿಜಿಪಿ ಎಂ.ಡಿ. ಸಿಂಗ್, ಗ್ರಾಮೀಣ ಅಭಿವೃದ್ಧಿ ಕಾರ್ಯದರ್ಶಿ ಬಳಿಗಾರ, ಅರಣ್ಯ ಕಾರ್ಯದರ್ಶಿ ಶಿವಕುಮಾರ್ ಮಾತ್ರವಲ್ಲದೆ ಹಲವಾರು ಸ್ಪೆಷಲ್ ಬ್ರಾಂಚ್ ಅಧಿಕಾರಿಗಳೂ ಹಾಜರಿದ್ದರು.

ನಕ್ಸಲ್ ಚಳವಳಿಯನ್ನು ಒಂದು ಸಾಮಾಜಿಕ-ಆರ್ಥಿಕ ಸಮಾನತೆ ಸಾಧಿಸುವ ಉದ್ದೇಶದಿಂದ ನಡೆಯುತ್ತಿರುವ ರಾಜಕೀಯ ಚಳವಳಿಯೆಂದು ಭಾವಿಸಬೇಕೆ ವಿನಃ ಕಾನೂನು ಸುವ್ಯವಸ್ಥೆಯ ಸಮಸ್ಯೆಯೆಂದು ಭಾವಿಸಿ ದಮನ ಮಾಡಬಾರದೆಂದು ಒತ್ತಾಯಿಸುತ್ತಿದ್ದ 'ಸಿಟಿಜನ್ ಇನಿಷಿಯೆಟೀವ್ ಫಾರ್ ಪೀಸ್'ನ ಸದಸ್ಯರು ಆ ಸಭೆಯಲ್ಲಿ ಭಾಗವಹಿಸಿದ್ದರು. ಕಳೆದ ಜೂನ್ ೧೮ ರಂದು ಪತ್ರಕರ್ತರು ಮಲೆನಾಡಿನ ದಟ್ಟ ಕಾಡಿನಲ್ಲಿ ನಕ್ಸಲರನ್ನು ಭೇಟಿ ಮಾಡಿ ಬಂದು ಅವರ ಉದ್ದೇಶಗಳು, ಅವರು ಹೋರಾಟ ಕಟ್ಟುತ್ತಿರುವ ರೀತಿ, ಸ್ಥಳೀಯರ ಬೆಂಬಲ, ಪ್ರಾಣತ್ಯಾಗ ಮಾಡಲೂ ಸಿದ್ಧರಿರುವ ಅವರ ಬದ್ಧತೆಗಳ ಬಗ್ಗೆ ಸವಿವರ ವರದಿಗಳನ್ನು ಪ್ರಕಟಿಸಿದ ನಂತರ ಕರ್ನಾಟಕದ ಜನತೆಯ ನಡುವೆ ನಕ್ಸಲ್ ಚಳವಳಿ ಬಗ್ಗೆ ಅನುಕಂಪದ ವಾತಾವರಣವೇ ಮೂಡಿದೆ. ಅಲ್ಲದೆ ಕಳೆದ ೨೦೦೩ರ ನವಂಬರ್ ೧೭ ರಂದು ಈದುವಿನಲ್ಲಿ ಪೊಳ್ಳು ಎನ್‌ಕೌಂಟರಿನಲ್ಲಿ ಪಾರ್ವತಿ-ಹಾಜಿಮಾರನ್ನು ಕೊಂದ ಸರ್ಕಾರದ ಬಗ್ಗೆ ಕ್ರೋಧವೇ ವ್ಯಕ್ತವಾಗಿದೆ.

ಈ ಹೊಸ ರಾಜಕೀಯ ವಾತಾವರಣದ ಒತ್ತಡವನ್ನು ಮನಗಂಡೇ, ಮುಖ್ಯಮಂತ್ರಿ ಧರ್ಮಸಿಂಗ್ ತಾನೂ 'ನಕ್ಸಲರ ಜೊತೆಗೆ ಮಾತುಕತೆಗೆ ಸಿದ್ಧವೆಂದೂ', 'ಅವರು ಅಪರಾಧಿಗಳಲ್ಲ-ಮೇಧಾವಿಗಳೆಂದೂ', 'ನಕ್ಸಲ್ ಚಳವಳಿ ಒಂದು ಸಾಮಾಜಿಕ-ಆರ್ಥಿಕ ಚಳವಳಿಯೆಂದೂ' ಹೇಳಲು ಪ್ರಾರಂಭಿಸಿದರು. ಧರ್ಮಸಿಂಗ್‌ರ ತಿಳಿವಳಿಕೆಯಲ್ಲಿನ ಈ 'ಹೊಸತನ'ವನ್ನು ಮನಗಂಡು, ಸಿಟಿಜನ್ಸ್ ಇನಿಷಿಯೆಟೀವ್ ಫಾರ್ ಪೀಸ್‌ನ ಸದಸ್ಯರು ಅವರೊಡನೆ ಕೂಲಂಕುಷ ಮಾತುಕತೆಗೆ ಸಮಯವನ್ನು ನಿರೀಕ್ಷಿಸಿದರು.

ಆದರೆ, ಆ ವೇಳೆಗಾಗಲೇ ಸಂದರ್ಭದ 'ಹೊಸತನದಲ್ಲಿ' ಹಳತಿನ ವಾಸನೆ ಹೊಡೆಯಲಾರಂಭಿಸಿತ್ತು. ಒಂದೆಡೆ ಮುಖ್ಯಮಂತ್ರಿ ನಕ್ಸಲ್ ಚಳವಳಿ ಕಾನೂನು ಸುವ್ಯವಸ್ಥೆಯ ಸಮಸ್ಯೆಯಿಲ್ಲವೆಂದು ಹೇಳುತ್ತಿದ್ದರೆ, ಮತ್ತೊಂದೆಡೆ ಆಗಿನ ಡಿಜಿಪಿ ಮಡಿಯಾಳ್‌ರವರು 'ನಕ್ಸಲೈಟರನ್ನು ಪೊಲೀಸರ ಮೂಲಕ ಹತ್ತಿಕ್ಕಲಾಗುವುದೆಂಬ' ಪರ್ಯಾಯ ಹೇಳಿಕೆ ನೀಡತೊಡಗಿದರು. ಕೊನೆಗೆ, ಈ ಹೇಳಿಕೆ ನೀಡಿದ ಮುಖ್ಯಮಂತ್ರಿಗಳು ವಾರದ ನಂತರ ಕುಕ್ಕೆ ಸುಬ್ರಹ್ಮಣ್ಯಕ್ಕೆ ಬರುವ ವೇಳೆಗೆ, ಅಧಿಕಾರಿಗಳು ನೀಡಿದ ಸರಿಯಾದ ಮಾರ್ಗದರ್ಶನದಿಂದ 'ನಕ್ಸಲ್ ಸಮಸ್ಯೆ ಕಾನೂನು ಸುವ್ಯವಸ್ಥೆಯ ಸಮಸ್ಯೆಯೂ ಆಗಿದೆ' ಎಂದು ಹೇಳಲಾರಂಭಿಸಿದರು. ಸಿಟಿಜನ್ಸ್ ಇನಿಷಿಯೆಟೀವ್ ಫಾರ್ ಪೀಸ್ (CIP) ನ ಸಂಚಾಲಕರಲ್ಲೊಬ್ಬರಾದ ಲಂಕೇಶ್ ಪತ್ರಿಕೆ ಸಂಪಾದಕಿ ಗೌರಿ ಲಂಕೇಶ್‌ರು ಮುಖ್ಯಮಂತ್ರಿಯೊಡನೆ ಈ ವಿಷಯದ ಬಗ್ಗೆ ಮಾತನಾಡಲು ಖಾಸಗಿ ಭೇಟಿಗೆಂದು ಹೋದರೆ, ಇಡೀ ಉನ್ನತ ಪೊಲೀಸ್ ಅಧಿಕಾರಿ ವರ್ಗವೇ ಒಟ್ಟು ಸೇರಿ 'ನಕ್ಸಲ್ ಬೇಟೆ ನಿಲ್ಲಿಸಲಾಗುವುದಿಲ್ಲವೆಂದು' ಮುಖ್ಯಮಂತ್ರಿಗಳ ಸಮ್ಮುಖದಲ್ಲೇ ಘೋಷಿಸಿದರು. ಮುಖ್ಯಮಂತ್ರಿಗಳು ದಿವ್ಯ ಮೌನ ಆಚರಿಸಿದರು.

ನಂತರದ ನಾಗರಿಕ ಸಮಾಜದ ಗಣ್ಯರೆಲ್ಲರೂ, ತಂದ ನೈತಿಕ ಒತ್ತಡದ ಪರಿಣಾಮವಾಗಿ ಮುಖ್ಯಮಂತ್ರಿಗಳು ಜುಲೈ, ೨೪ ರಂದು CIP ಸದಸ್ಯರೊಂದಿಗೆ ಅನಿವಾರ್ಯವಾದ ಮಾತುಕತೆಗೆ ಮುಂದಾದರು. ಆದರೆ ಆ ಸಭೆಯ ವಿರೋಧಾಭಾಸ ಪ್ರಾರಂಭದಿಂದಲೇ ಸ್ಪಷ್ಟವಾಗುವಂತಿತ್ತು.

ಐಟಿ ಕ್ಷೇತ್ರದ ದೊರೆಗಳೊಂದಿಗೆ ಅಧಿಕಾರಶಾಹಿಯ ಸುಮುಖ - ಮೈತ್ರಿ ನಿಲುವು ಎಷ್ಟು ಸಹಜವೋ, ಆದಿವಾಸಿಗಳ ಬಗ್ಗೆ, ಅವರ ಹೋರಾಟದ ಬಗ್ಗೆ ಅಧಿಕಾರಶಾಹಿಯ ವ್ಯತಿರಿಕ್ತ - ಅಸಹನೆಯ ದೃಷ್ಟಿಯೂ ಅಷ್ಟೆ ಸಹಜವಾಗಿದೆ. ಶ್ರೀಮಂತ ಉದ್ಯಮಪತಿಗಳು, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು, ದೊಡ್ಡ ಕಾರ್ಪೋರೇಟ್ ಭೂಮಾಲೀಕರೇ ಈ ದೇಶದ ಅಸಲೀ ಹಕ್ಕುದಾರರು-ದೊರೆಗಳು ಎಂಬ ಅಧಿಕಾರಶಾಹಿ ತಿಳವಳಿಕೆಯೇ ಐಟಿಯೊಂದಿಗಿನ ಮಾತುಕತೆಯ ಬಗ್ಗೆ ಅವರು ತೋರಿರುವ ಅಸಹಜ ಕ್ರಿಯಾಶೀಲತೆಗೆ ಕಾರಣ. ಆದಿವಾಸಿಗಳು - ರೈತರು ಅಭಿವೃದ್ಧಿಗೆ, ಸರ್ಕಾರದ ಯೋಜನೆಗಳಿಗೆ ಅಡ್ಡಗಾಲು ಹಾಕುವ ತೊಂದರೆಕೋರರು, ಹೆಚ್ಚೆಂದರೆ ಅವರಿಗೆ ಒಂದಷ್ಟು 'ಉಪಕಾರ' ವಾಗುವಂತೆ ಮಾಡಬಹುದೇ ವಿನಃ ಅವರ ಹಿತಾಸಕ್ತಿಗೆ ತಕ್ಕಂತೆ ನೀತಿ ಬದಲಾವಣೆ ಮಾಡಲು ಸಾಧ್ಯವಿಲ್ಲವೆಂಬ ಜನತೆಯ ಬಗೆಗಿನ ವಸಾಹತುಶಾಹಿ, ಬ್ರಾಹ್ಮಣೀಯ ಧೋರಣೆಯೇ 'ನಕ್ಸಲ್ ಸಮಸ್ಯೆ'ಯ ಮಾತುಕತೆಯಲ್ಲಿ ವ್ಯಕ್ತವಾಗಿದೆ.

ಒಂದೆಡೆ ಮುಖ್ಯಮಂತ್ರಿಗಳು ತಮ್ಮ ಪ್ರಾರಂಭಿಕ ಭಾಷಣದಲ್ಲಿ 'ನಕ್ಸಲರು ಮೇಧಾವಿಗಳು, ಹೋರಾಟಗಾರರು, ಸಾಮಾಜಿಕ, ಆರ್ಥಿಕ ಸಮಾನತೆ ತರಲು ಬಂದೂಕು ಹಿಡಿದು ಹೋರಾಡುತ್ತಿದ್ದಾರೆ... ಹೊರತು ಅವರು ಸಮಾಜ ಕಂಟಕರಲ್ಲ, ಈ ಸರ್ಕಾರ ಅವರೊಂದಿಗೂ ಮಾತುಕತೆ ಆಡಿ ಶಾಂತಿ ನೆಲೆಸಲು ಪ್ರಯತ್ನಿಸುತ್ತದೆ' ಎಂದು ಹೇಳಿದರೆ, ಅವರ ಸಮ್ಮುಖದಲ್ಲೇ ಮುಖ್ಯ ಕಾರ್ಯದರ್ಶಿ ಮಿಶ್ರಾ 'ನಕ್ಸಲರು ಸಮಾಜ ವಿರೋಧಿಗಳು. ಅವರನ್ನು ಹತ್ತಿಕ್ಕಬೇಕು' ಎಂದರು. ಗೃಹಕಾರ್ಯದರ್ಶಿ ಬ್ರಹ್ಮದತ್ತ 'ನಕ್ಸಲರು ಕಾನೂನು ಬಾಹಿರ ಶಕ್ತಿಗಳು, ಈ ನೆಲದ ಕಾನೂನಿನಂತೆ ಅವರನ್ನು ಹತ್ತಿಕ್ಕಲಾಗುವುದು' ಎಂದರು. ಅಭಿವೃದ್ಧಿ ಆಯುಕ್ತ ಗೋರೆಯವರು 'ನಕ್ಸಲರು ಎತ್ತಿರುವ ಮೂಲ ಸಮಸ್ಯೆಯಾದ ಆದಿವಾಸಿಗಳ ಬಲವಂತದ ಎತ್ತಂಗಡಿಯ ಬಗ್ಗೆ ಅವರನ್ನು ಕಾಡಿನಿಂದ ಹೊರಬರಬೇಡಿ ಎಂದು ಹೇಳಲು ನಕ್ಸಲರು ಯಾರು? ಅವರಿಗೆ ಆದಿವಾಸಿಗಳನ್ನು ಪ್ರತಿನಿಧಿಸುವ ಅಧಿಕಾರ ಕೊಟ್ಟವರ್‍ಯಾರು' ಎಂದು ಅಬ್ಬರಿಸಿದರು. ಅರಣ್ಯ ಕಾರ್ಯದರ್ಶಿ ಶಿವಕುಮಾರ್‌ರವರು 'ಯಾವ ಕಾರಣಕ್ಕೂ ನ್ಯಾಷನಲ್ ಪಾರ್ಕ್ ಯೋಜನೆ ರದ್ದು ಮಾಡಲಾಗುವುದಿಲ್ಲ- ನ್ಯಾಷನಲ್ ಪಾರ್ಕಿನಲ್ಲಿ ಆದಿವಾಸಿಗಳು ವಾಸಿಸುವಂತಿಲ್ಲ' ಎಂದು ತಣ್ಣಗೆ ಘೋಷಿಸಿದರು.

ಇವೆಲ್ಲಕ್ಕೂ CIP ಸದಸ್ಯರು ಆಕ್ಷೇಪಿಸಿ, ಸಂದರ್ಭದ ಹೊಸತನಕ್ಕೆ ಕಾರಣವಾದ ನಕ್ಸಲೈಟ್ ಸಮಸ್ಯೆಯ ಬಗ್ಗೆ ಧರ್ಮಸಿಂಗರ ಹೊಸ ರಾಜಕೀಯ ತಿಳವಳಿಕೆ ಆಡಳಿತಶಾಹಿಗೆ ಮಾರ್ಗದರ್ಶನ ನೀಡಬೇಕೆಂದು ಆಗ್ರಹಿಸಿದರು. ಕೊನೆಗೆ ತಿಪ್ಪೆ ಸಾರಿಸುವ ಭಾಷಣ ಮಾಡಿದ ಮುಖ್ಯಮಂತ್ರಿಗಳು ಆದಿವಾಸಿಗಳ ಸಮಸ್ಯೆಯ ಬಗ್ಗೆ ಸಮಿತಿಯೊಂದನ್ನು, CIP ಯೊಂದಿಗೆ ಅಧಿವೇಶನದ ನಂತರ ವಿಸ್ತೃತ ಸಭೆಯ ಭರವಸೆಯನ್ನು ಕೊಟ್ಟು ಶಾಸ್ತ್ರ ಮುಗಿಸಿದರು. ಇದಾದ ಒಂದು ವಾರದೊಳಗೆ, ಶೃಂಗೇರಿಗೆ ಭೇಟಿ ನೀಡಿದ್ದ ಮುಖ್ಯಮಂತ್ರಿಗಳೂ ಸಹ ನಕ್ಸಲರ ಬಗ್ಗೆ ಅವರು ಎತ್ತಿದ್ದ ಆದಿವಾಸಿ ಎತ್ತಂಗಡಿ ಸಮಸ್ಯೆಯ ಬಗ್ಗೆ ಅಧಿಕಾರಶಾಹಿಗಳ ರೀತಿಯಲ್ಲೇ ವ್ಯತಿರಿಕ್ತವಾದ ಮಾತೇ ಆಡಿದ್ದಾರೆ. ಹಾಗೂ ಆಗಸ್ಟ್ ೧೧ ರಂದು ಪೊಲೀಸ್ ಅಧಿಕಾರಿಗಳ ಪರಿಶೀಲನಾ ಸಭೆಯಲ್ಲಿ ಮಾತನಾಡುತ್ತ ನಕ್ಸಲರನ್ನು ಹತ್ತಿಕ್ಕಬೇಕೆಂದು ಕರೆ ನೀಡಿದ್ದಾರೆ.

ಜುಲೈ, ೨೪ ರಂದು ನಕ್ಸಲ್ ಸಮಸ್ಯೆಯ ಬಗ್ಗೆ ಹಾಗೂ ಆಗಸ್ಟ್ ೧೦ ರಂದು ಐಟಿ ಸಮಸ್ಯೆಯ ಬಗ್ಗೆ ನಡೆದ ಈ ಉನ್ನತಮಟ್ಟದ ಸಭೆಗಳು ಇತರ ಹಲವಾರು ವಿಷಯಗಳೊಂದಿಗೆ, ಈ ದೇಶದ ಅಧಿಕಾರಶಾಹಿಯ ಬಗ್ಗೆ ಕೆಲವು ನಿರ್ದಿಷ್ಟ ತಿಳವಳಿಕೆಯನ್ನು ನೀಡುತ್ತದೆ. ಅದು ಆಗಸ್ಟ್ ೧೧ರ ದಿನಪತ್ರಿಕೆಯಲ್ಲಿ ಪ್ರಕಟವಾದ ಎರಡೂ ಮುಖ ಶೀರ್ಷಿಕೆಗಳಲ್ಲಿ ವ್ಯಕ್ತವಾಗಿದೆ.

'ಐಟಿ ಉದ್ಯಮಿಗಳೊಂದಿಗೆ ಸಕಾರಾತ್ಮಕ ಮಾತುಕತೆಗೆ ಸರ್ಕಾರ ಯಾವಾಗಲೂ ಸಿದ್ಧವಿದೆ'. 'ನಕ್ಸಲರೊಂದಿಗೆ ಮಾತುಕತೆ ಎರಡನೇ ವಿಚಾರ. ಮೊದಲನೆಯದು ಅವರನ್ನು ಬೇರು ಬಿಡದಂತೆ ಮಾಡುವುದು - ಹತ್ತಿಕ್ಕುವುದು'. ಎರಡೂ ಹೇಳಿಕೆಗಳ ಹಿಂದೆ ಅಧಿಕಾರಶಾಹಿಗಳೇ ರಾಜಕೀಯ ನಾಯಕತ್ವಕ್ಕೆ ನೀಡಿರುವ 'ಮಾರ್ಗದರ್ಶನ' ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ಇದರರ್ಥ ರಾಜಕೀಯ ನಾಯಕತ್ವಕ್ಕೆ ಇದಕ್ಕೆ ವ್ಯತಿರೇಕವಾದ ಅಭಿಪ್ರಾಯವಿತ್ತೆಂದಲ್ಲ. ಅಧಿಕಾರಶಾಹಿಗೆ ನಿರ್ದಿಷ್ಟ ರಾಜಕೀಯ ನಿಲುವುಗಳೂ, ಆರ್ಥಿಕ ಹಿತಾಸಕ್ತಿಗಳು

...ತ್ತವೆ. ಆದ್ದರಿಂದ ನಿರ್ದಿಷ್ಟ-ತಟಸ್ಥ ಯಂತ್ರಾಂಗವಲ್ಲವೆಂದು ಈ ಎರಡೂ ಸಭೆಗಳು ಸಾರಿ ಹೇಳುತ್ತಿವೆ.

ಐಟಿ ಕ್ಷೇತ್ರದ ದೊರೆಗಳೊಂದಿಗೆ ಅಧಿಕಾರಶಾಹಿಯ ಸುಮುಖಿ - ಮೈತ್ರಿ ನಿಲುವು ಎಷ್ಟು ಸಹಜವೋ, ಆದಿವಾಸಿಗಳ ಬಗ್ಗೆ, ಅವರ ಹೋರಾಟದ ಬಗ್ಗೆ ಅಧಿಕಾರಶಾಹಿಯ ವ್ಯತಿರಿಕ್ತ-ಅಸಹನೆಯ ದೃಷ್ಟಿಯೂ ಅಷ್ಟೇ ಸಹಜವಾಗಿದೆ. ಶ್ರೀಮಂತ ಉದ್ಯಮಪತಿಗಳು, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು, ದೊಡ್ಡ ಕಾರ್ಪೋರೇಟ್ ಭೂಮಾಲೀಕರೇ ಈ ದೇಶದ ಅಸಲೀ ಹಕ್ಕುದಾರರು-ದೊರೆಗಳು ಎಂಬ ಅಧಿಕಾರಶಾಹಿ ತಿಳವಳಿಕೆಯೇ ಐಟಿಯೊಂದಿಗಿನ ಮಾತುಕತೆಯ ಬಗ್ಗೆ ಅವರು ತೋರಿರುವ ಅಸಹಜ ಕ್ರಿಯಾಶೀಲತೆಗೆ ಕಾರಣ.

ಆದಿವಾಸಿಗಳು - ರೈತರು ಅಭಿವೃದ್ಧಿಗೆ, ಸರ್ಕಾರದ ಯೋಜನೆಗಳಿಗೆ ಅಡ್ಡಗಾಲು ಹಾಕುವ ತೊಂದರೆಕೋರರು, ಹೆಚ್ಚೆಂದರೆ ಅವರಿಗೆ ಒಂದಷ್ಟು 'ಉಪಕಾರ' ವಾಗುವಂತೆ ಮಾಡಬಹುದೇ ವಿನಃ ಅವರ ಹಿತಾಸಕ್ತಿಗೆ ತಕ್ಕಂತೆ ನೀತಿ ಬದಲಾವಣೆ ಮಾಡಲು ಸಾಧ್ಯವಿಲ್ಲವೆಂಬ ಜನತೆಯ ಬಗೆಗಿನ ವಸಾಹತುಶಾಹಿ, ಬ್ರಾಹ್ಮಣೀಯ ಧೋರಣೆಯೇ 'ನಕ್ಸಲ್ ಸಮಸ್ಯೆ'ಯ ಮಾತುಕತೆಯಲ್ಲಿ ವ್ಯಕ್ತವಾಗಿದೆ. ಅಂದರೆ ಪ್ರಜಾಪ್ರಭುತ್ವದಲ್ಲಿ ಪ್ರಭುಗಳು ಯಾರು? ಎಂಬ ಮೂಲಭೂತ ಪ್ರಶ್ನೆ ಪರಿಹಾರವಾಗದಿರುವುದೇ ಅಧಿಕಾರಶಾಹಿಯ ವಸಾಹತುಶಾಹಿ ಧೋರಣೆಯ ಮುಂದುವರಿಕೆಯಲ್ಲಿ ಅಭಿವ್ಯಕ್ತಗೊಂಡಿದೆ.

ಪ್ರಜಾಸತ್ತೆಯ ನೀತಿ-ನಿರೂಪಣೆಗಳಲ್ಲಿ ಅಧಿಕಾರಶಾಹಿಯ ಕಾಗದದ ಲೆಕ್ಕಾಚಾರಕ್ಕಿಂತ, ಜನತೆಯೊಂದಿಗಿನ ಸಮಾಲೋಚನೆ, ಅವರ ಹಿತಾಸಕ್ತಿಗಳಿಗೆ ತಕ್ಕಂತೆ ನೀತಿ ನಿರೂಪಣೆಯಾಗಬೇಕು. ಒಂದು ರಾಜಕೀಯ ವ್ಯವಸ್ಥೆಯಲ್ಲಿ ರಾಜವ್ಯವಸ್ಥೆಯ ಮೂಲಾಧಾರಗಳಾದ ಭೂಮಾಲೀಕ ಹಾಗೂ ವರ್ತಕ ವರ್ಗದ ಹಿತಾಸಕ್ತಿಗೆ ಅನುಗುಣವಾಗಿ ರಾಜಾದೇಶವಾಗುತ್ತದೆ. ಅದಕ್ಕೆ ವ್ಯತಿರಿಕ್ತವಾಗಿರುವ ಜನತೆಯ ಮನವಿಗಳೆಲ್ಲಾ ಅಪರಾಧಗಳೇ ಆಗುತ್ತವೆ. ಒಂದು ವಸಾಹತುಶಾಹಿ ವ್ಯವಸ್ಥೆಯಲ್ಲಿ ಈ ದೇಶದ ಲೂಟಿಗೆ ಅಡ್ಡಿಬರುವ ದೇಶದ ಜನರೆಲ್ಲಾ ಅಪರಾಧಿಗಳಂತೇ ಕಾಣುತ್ತಾರೆ.

ಆಯಾ ವ್ಯವಸ್ಥೆಯ ಅಧಿಕಾರಶಾಹಿಗಳು, ಆಯಾ ವ್ಯವಸ್ಥೆಯ ರಾಜ ಧರ್ಮದ ಪಾಲಕರಾಗಿರುತ್ತಾರೆ. ಆ ಮೂಲಕ ತಾವೂ ಪೋಷಣೆ ಪಡೆಯುತ್ತಾರೆ. ಆದರೆ ಪ್ರಜಾಪ್ರಭುತ್ವದಲ್ಲಿ ಹಾಗಾಗಬಾರದಲ್ಲ, ಅಧಿಕಾರಶಾಹಿ ಸಾರ್ವಜನಿಕ ಸೇವಕ ನಾಗಬೇಕೆಂಬುದು ಆಶಯ. ಜನತೆ ತಮ್ಮ ಆಶೋತ್ತರಗಳಾಗಿ ರೂಪಿಸಿಕೊಂಡಿರುವ ಸಂವಿಧಾನಕ್ಕೆ ಅಧಿಕಾರಶಾಹಿಯ ಅಂತಿಮ ಬದ್ಧತೆ ಇರಬೇಕೇ ವಿನಃ ಯಾವುದೇ ನಿರ್ದಿಷ್ಟ ವರ್ಗಗಳಿಗಲ್ಲ. ಆದರೆ ಸ್ವತಂತ್ರ ಭಾರತದ ಅಧಿಕಾರಶಾಹಿಯ ಸ್ವರೂಪ ಎಂತಹುದು? ಇದರ ವಿಶ್ಲೇಷಣೆಗೆ ಮುನ್ನ ಭಾರತದಲ್ಲಿ ಅಧಿಕಾರಶಾಹಿಯ ಚರಿತ್ರೆಯತ್ತ ಒಂದಷ್ಟು ಗಮನ ಹರಿಸೋಣ.

ಭಾರತದಲ್ಲಿ ಪ್ರತ್ಯೇಕ ಆಡಳಿತ ವರ್ಗದ ಹುಟ್ಟೊಂದನ್ನು ಮೌರ್ಯರ ಕಾಲಘಟ್ಟದಲ್ಲಿ ಗುರುತಿಸಬಹುದು. ಊಳಿಗಮಾನ್ಯ ವ್ಯವಸ್ಥೆ ಬೇರುಬಿಡುತ್ತಿದ್ದ ಈ ಸಂದರ್ಭದಲ್ಲಿ ಭೂಮಾಲೀಕ ವ್ಯವಸ್ಥೆ ನೆಲೆಗೊಳಿಸುವುದು, ಪ್ರತಿ ಗ್ರಾಮಗಳಲ್ಲೂ ಬಲವಂತವಾಗಿ ಸೇನೆಗೆ ದೂಡಲಾದ 'ದಸ್ಯುಗಳ' ಮೇಲ್ವಿಚಾರಣೆಗೆ, ವ್ಯಾಪಾರ ವಹಿವಾಟುಗಳ ಉತ್ತೇಜನ, ಕಬ್ಬಿಣ ಮತ್ತು ವಜ್ರಗಳ ಗಣಿಗಾರಿಕೆಗೆ ಬಲವಂತದಿಂದ ಕಾರ್ಮಿಕರ ಹೂಡಿಕೆ ಹಾಗೂ ಅವರ ಬಂಡಾಯದ ಹತ್ತಿಕ್ಕುವಿಕೆ, ಅರಣ್ಯ ನಾಶ ಮಾಡಿ ಕೃಷಿಗೆ ಸಿದ್ಧಪಡಿಸುವುದು ಆಗಿನ ಅಧಿಕಾರಶಾಹಿಯ ಕರ್ತವ್ಯವಾಗಿತ್ತು. ಅದಕ್ಕೆ ತಕ್ಕಂತೆ, ಚಾಣಕ್ಯನ ಅರ್ಥಶಾಸ್ತ್ರ ಪನ್ಯಾಧ್ಯಕ್ಷ, ಸೀತಾಧ್ಯಕ್ಷ, ರಥಾಧ್ಯಕ್ಷ ಸ್ವರ್ಣಾಧ್ಯಕ್ಷ ವನಾಧ್ಯಕ್ಷ ಸೂತ್ರಾಧ್ಯಕ್ಷನೆಂಬ ಹುದ್ದೆಗಳ ಸೃಷ್ಟಿಗೆ ಸಲಹೆ ಮಾಡಿದ್ದ. ಯಾವ ಕಾರಣಕ್ಕೂ ದುಡಿಯುವ ಜನರನ್ನು ವಿಶ್ವಾಸದಿಂದ ನೋಡಲಾರರು ಹಾಗೂ ಅವರು ಪ್ರಭುತ್ವಕ್ಕೆ ದ್ರೋಹ ಬಗೆಯುವವರನ್ನಾಗಿಯೇ ನೋಡಬೇಕೆಂಬುದು ಅಧಿಕಾರಶಾಹಿಯ ಮೌಲ್ಯವಾಗಿತ್ತು. ಅದಕ್ಕೆ ತಕ್ಕಂತೆ ರಾಜನಿಗೆ ಪ್ರಶ್ನಾತೀತ ಬದ್ಧತೆ ಹಾಗೂ ಪ್ರಾಮಾಣಿಕತೆ ತೋರಿಸುವವರನ್ನು ಮಾತ್ರ ಅಧಿಕಾರಶಾಹಿ ಯಂತ್ರಾಂಗದಲ್ಲಿ ಸೇರಿಸಿಕೊಳ್ಳಬೇಕೆಂಬುದು ಚಾಣಕ್ಯನ ಅಧಿಕಾರಶಾಹಿ ನೀತಿ ಸಂಹಿತೆಯ ಸೂತ್ರವಾಗಿತ್ತು.

ಜನತೆ, ಈ ಶೋಷಣೆಯನ್ನು ಚಾಚೂ ತಪ್ಪದಂತೆ ಒಪ್ಪಿಕೊಳ್ಳುವಂತೆ ಮಾಡಬೇಕೆಂದರೆ ಜನತೆಯಲ್ಲಿ 'ತಾವೇ ಪಾಪಿ'ಗಳೆಂಬ ಭಾವನೆ ಬಿತ್ತು ಬ್ರಾಹ್ಮಣತ್ವ ವಾದಕ್ಕೆ ವಿಸ್ತೃತವಾದ ಪ್ರಚಾರ ನೀಡಲಾಯಿತು. ಅದೇ ರೀತಿ ಜನತೆಯ ಬಗ್ಗೆ ಅಧಿಕಾರಶಾಹಿಯ ಮನೋಭಾವವು 'ನೀಚರು ಮತ್ತೆ ಪಾಪಿಗಳು' ಎಂಬ ಮನೋಧರ್ಮವನ್ನೇ ಪ್ರೋತ್ಸಾಹಿಸಲಾಗಿತ್ತು.

ಕ್ರಿ.ಶ. ೧೦೦೦ ದಿಂದ ೧೮೫೭ ರಲ್ಲಿ ಬ್ರಿಟೀಷ್ ವಸಾಹತುಶಾಹಿಗಳು ಈ ದೇಶವನ್ನು ಸಂಪೂರ್ಣ ಲೂಟಿಗೆ ಒಳ ಪಡಿಸುವವರೆಗೆ ಮೊಗಲರು ಪರಿಚಯಿಸಿದ ಪ್ರಭುತ್ವ ಪದ್ಧತಿಯೇ ಆಚರಣೆಯಲ್ಲಿತ್ತು. ತೆರಿಗೆ ವಸೂಲಿಗಾಗಿ ದೇಶಾದ್ಯಂತ ಹರಡಿರುವ ವಿಸ್ತೃತ ವಾದ ಅಧಿಕಾರಶಾಹಿ ಪದ್ಧತಿಯನ್ನು ರಚಿಸಲಾಯಿತು. ಇಲ್ಲಿ ರೈತರು ರಾಜನಿಗೆ ತೆರಿಗೆ ನೀಡುವ ತೆರಿಗೆದಾರರು. ಅಧಿಕಾರಶಾಹಿಯ ಮೂಲ ಕರ್ತವ್ಯ ರಾಜನ ಆದೇಶ, ಪ್ರಭುತ್ವದ ತಿಜೋರಿ ಭರ್ತಿ ಮಾಡುವುದು ಮಾತ್ರ. ಹೀಗಾಗಿಯೇ ಅಧಿಕಾರಶಾಹಿಯ ಮೂಲಗುಣ ರಾಜನಿಷ್ಠೆ ಜನತೆಯ ಬಗೆಗೆ ಕ್ರೌರ್ಯ, ರಾಜನೆಡೆಗೆ ಪ್ರಾಮಾಣಿಕತೆ ಆ ಅಧಿಕಾರಶಾಹಿಯ ಮೌಲ್ಯಗಳು.

ಈಗ ನಾವು ಅನುಸರಿಸುತ್ತಿರುವ ಅಧಿಕಾರಶಾಹಿ ಪದ್ಧತಿ, ಆಚರಣೆಗೆ ಬಂದಿದ್ದು ಬ್ರಿಟೀಷರ ವಸಾಹತುಶಾಹಿ ಆಳ್ವಿಕೆಯಲ್ಲಿ. ಮತ್ತೊಂದು ದೇಶವನ್ನು ಸುಲಿಗೆ ಮಾಡಲು ಬಂದ ಪರದೇಶಿ ಪ್ರಭುತ್ವಕ್ಕೆ ತಮ್ಮ ಸುಲಿಗೆಯನ್ನು ವಿರೋಧಿಸುವ ಈ ದೇಶದ ಜನರೆಲ್ಲಾ ಸಂಭವನೀಯ ಅಪರಾಧಿಗಳಂತೆಯೇ ಕಂಡರು.

> **ಪ್ರಜೆಗಳೇ ಪ್ರಭುಗಳೆಂಬ ಪ್ರಜಾಪ್ರಭುತ್ವ ವ್ಯವಸ್ಥೆಗೆ, ಪ್ರಜೆಗಳು ಪಾಪಿಗಳು, ಅಪರಾಧಿಗಳು ಎಂಬ ಆಡಳಿತಶಾಹಿ ಹೇಗೆ ಹೊಂದಿಕೊಳ್ಳುತ್ತದೆ? ಆದರೂ ಇದೇ ಬಗೆಯ ಆಡಳಿತಶಾಹಿ ಕಳೆದ ೫೮ ವರ್ಷದಿಂದ ತಮ್ಮನ್ನು ಆಳುತ್ತಿದೆ. ಕಾರಣ ಈ ದೇಶದ ಪ್ರಜಾಪ್ರಭುತ್ವ ಅಸಲು ಪ್ರಜಾಪ್ರಭುತ್ವವೇ ಆಗಿಲ್ಲವೆಂಬುದು! ಆದ್ದರಿಂದಲೇ ಈ ವ್ಯವಸ್ಥೆಯ ಮೂಲಭೂತ ಬದಲಾವಣೆ ಕ್ರಾಂತಿಯಾಗಬೇಕೆಂಬುದು, ಅದಕ್ಕಾಗಿಯೇ ಈ ಪ್ರಭುತ್ವವನ್ನು ಕೊನೆಗಾಣಿಸಿ ಜನತೆಯ ನೈಜ ಪ್ರಭುತ್ವವನ್ನು ನೆಲೆಯಾಗಿಸಬೇಕೆಂದು ಶಸ್ತ್ರಾಸ್ತ್ರ ಹಿಡಿದಿದ್ದೇವೆಂದು ನಕ್ಸಲೀಯರು ಹೇಳುತ್ತಾರೆ.**

ಈ ದೇಶದ ಜನರನ್ನು ಹಾಗೆಯೇ ಕಾಣುವ ವ್ಯಕ್ತಿಗಳನ್ನು, ವರ್ಗಗಳನ್ನು ಮಾತ್ರ ಆಡಳಿತಶಾಹಿಗೆ ಭರ್ತಿ ಮಾಡಿಕೊಳ್ಳಲಾಯಿತು. ಈ ದೇಶದ ಜನರನ್ನು ಪಾಪಿಗಳೆಂದು ಕಾಣುತ್ತಿದ್ದ ಬ್ರಾಹ್ಮಣೀಯ - ಭೂ ಮಾಲೀಕ, ವರ್ತಕ ವರ್ಗಗಳಲ್ಲಿ ಭಾರತದಲ್ಲಿ ಬ್ರಿಟೀಷ್ ಆಡಳಿತದ ಸ್ತಂಭಗಳೂ ಆದ್ದರಿಂದ ಈ ವರ್ಗದ ವ್ಯಕ್ತಿಗಳೇ ಬ್ರಿಟೀಷ್ ಆಡಳಿತಶಾಹಿಯ ಸಿಬ್ಬಂದಿಗಳೂ ಆದರು. ಈ ದೇಶ ದುಡಿಯುವ ಜನ 'ಪಾಪಿಗಳೊಂದಿಗೆ- ಸಂಭವನೀಯ ಅಪರಾಧಿಗಳೂ' ಆಗಿಬಿಟ್ಟರು.

ಮೂಲಭೂತವಾಗಿ ವಸಾಹತುಶಾಹಿ ಪ್ರಭುತ್ವ ಒಂದು ಪೊಲೀಸ್ ಪ್ರಭುತ್ವವಾಗಿತ್ತು. ದಮನವೇ-ಸುಲಿಗೆಯೇ ವಸಾಹತುಶಾಹಿ ಆಡಳಿತಶಾಹಿಯ ಮೂಲಭೂತ ಕರ್ತವ್ಯವಾಗಿತ್ತು. ಆಡಳಿತಶಾಹಿಯ ಸಿಬ್ಬಂದಿಗಳೂ ಸಹ ಅದೇ ವರ್ಗಕ್ಕೆ ಸೇರಿದವರೇ ಆಗಿದ್ದರು.

'ಇಂಡಿಯಾಸ್ ಪೊಲಿಟಿಕಲ್ ಅಡ್ಮಿನಿಸ್ಟ್ರೇಟರ್ಸ್' ಎಂಬ ಪುಸ್ತಕದಲ್ಲಿ ಡೇವಿಡ್ ಸಿ. ಪಾಟರ್ ಬರೆಯುವಂತೆ ಆಗಿನ ಐಸಿಎಸ್ ಸೇವೆಗೆ ಸೇರಿದ ವ್ಯಕ್ತಿಗಳೆಲ್ಲಾ ಹೆಚ್ಚು ಕಡಿಮೆ ಒಂದೇ ಶಾಲೆ - ವಿಶ್ವವಿದ್ಯಾಲಯಗಳಿಗೆ ಸೇರಿದವರಾಗಿದ್ದರು ಮತ್ತು ಇಂಗ್ಲೆಂಡಿನಲ್ಲಿ ಮೇಲ್ಮಧ್ಯಮ ವರ್ಗದ ಜೀವನ ಶೈಲಿಯೇ ಯಥಾವತ್ ಅನುಕರಿಸುತ್ತಿದ್ದವು. ಆ ಕಾಲಘಟ್ಟದ ಬ್ರಿಟೀಷ್ ಆಡಳಿತಶಾಹಿಯ ಅಧ್ಯಯನ ಮಾಡಿದ ಮತ್ತೊಬ್ಬ ವಿದ್ವಾಂಸೆ ಸೊಸಾನ್ ಬೈಲಿ ಬರೆಯುವಂತೆ ಆಗಿನ ಆಡಳಿತಶಾಹಿಯ ಮನೋಧರ್ಮ ವಸಾಹತುಶಾಹಿ ಹಿತಾಸಕ್ತಿಗಳನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡಿತ್ತು ಹಾಗೂ ಈ ದೇಶದ ಜನಗಳನ್ನು ಸಹ ಒಂದು ವಸಾಹತು ದೃಷ್ಟಿಯಿಂದಲೇ ಅರ್ಥ ಮಾಡಿಕೊಳ್ಳಲಾಗುತ್ತಿತ್ತು. ಅದರಲ್ಲಿ ಈ ದೇಶದ ಜನ ಅನಾಗರಿಕರು, ಅಜ್ಞಾನಿಗಳು ಹೀಗಾಗಿ ತಾವು ಕೈಗೊಳ್ಳುವ ಎಲ್ಲಾ ಕ್ರಮಗಳೂ (ಸುಲಿಗೆಯೂ ಸಹ) ಜನರ ಉದ್ಧಾರಕ್ಕೆ ಎಂಬ ದುರಹಂಕಾರಿ, ಪಿತೃರೂಪಿ ಸ್ವಭಾವವೇ ಇರುತ್ತಿತ್ತು.

ಹೀಗಾಗಿ ಪ್ರಭುತ್ವದ ಹಿಂದಿನ ವಸಾಹತುಶಾಹಿ ಹಿತಾಸಕ್ತಿಯ ವಿರುದ್ಧ ನಡೆಯುವ ಯಾವುದೇ ಹೋರಾಟವನ್ನು ಹೀನಾಯ ಅಪರಾಧವೆಂದೇ ಪರಿಗಣಿಸಲಾಗುತ್ತಿತ್ತು. ಹೀಗಾಗಿ ತಾವು ಎಂದೂ ಈ ದೇಶದ ಅನಾಗರಿಕ ಜನರಿಗಿಂತ ಮೇಲ್ಪಟ್ಟದವರೆಂದು ತೋರಿಸಿಕೊಳ್ಳುವುದು ಆಡಳಿತಶಾಹಿಯ ಜೀವನ ವಿಧಾನದಲ್ಲೇ ಅಧಿಕೃತವಾಗಿಯೇ ಸೇರಿಕೊಂಡಿತ್ತು.

೧೯೪೨ರ ಆಗಸ್ಟ್ ೧೪ರ 'ದಿ ಸ್ಪೇಕ್ಟೇಟರ್' ಎಂಬ ಪತ್ರಿಕೆಯಲ್ಲಿ ವರದಿಯೊಂದರಂತೆ ಮೊದಲ ಬಾರಿಗೆ ಭಾರತಕ್ಕೆ ಬರುವ ಅಧಿಕಾರಿಗಳು ಯಾವ ಒಳ ಉಡುಪುಗಳನ್ನು ಧರಿಸಬೇಕೆಂಬುದರ ಬಗ್ಗೆಯೂ ನಿರ್ದಿಷ್ಟ ಸಲಹೆಗಳನ್ನು ನೀಡಲಾಗುತ್ತಿತ್ತು. ಹಾಗೂ ೧೯೧೧ ರಲ್ಲಿ ಹೊಸ ನಾಗರಿಕ ಸೇವಾ ಮಸೂದೆ ಜಾರಿಗೆ ಬಂದ ನಂತರ, ಸಮಾಜದಲ್ಲಿರುವಂತೆ ಅಧಿಕಾರಶಾಹಿಯಲ್ಲೂ ಒಂದು ಶ್ರೇಣೀಕರಣವನ್ನು ಉದ್ದೇಶಪೂರ್ವಕವಾಗಿ ರಚಿಸಲಾಯಿತು. ಈ ಬಗೆಯ ವಸಾಹತುಶಾಹಿ ಪ್ರಭುತ್ವ ಈ ದೇಶದ ಜನತೆಯ ಬಗ್ಗೆ ಇಟ್ಟುಕೊಂಡ ದೃಷ್ಟಿಕೋನವೇನು? 'ಈ ದೇಶದ ಜನ ಅಜ್ಞಾನಿಗಳು, ಪ್ರಭುತ್ವದ ನೀತಿಗೆ ವಿರುದ್ಧವಾದ ಚಟುವಟಿಕೆಗಳೆಲ್ಲಾ

ಕಾನೂನು ಬಾಹಿರ ಕ್ರಮಗಳು. ಜನತೆಗೆ ಯಾವುದು ಒಳಿತೆಂದು ತೀರ್ಮಾನ ಮಾಡುವ ಅಧಿಕಾರ ಪ್ರಭುತ್ವದ್ದೇ ವಿನಃ ಜನರದಲ್ಲ'. ಇದು ದುಡಿಯುವ ಜನರೆಲ್ಲಾ, ಶೂದ್ರರೆಲ್ಲಾ 'ಪಾಪಿಗಳು' ಎಂಬ ಈ ಹಿಂದಿನ ಬ್ರಾಹ್ಮಣೀಯ ಮೌಲ್ಯದೊಂದಿಗೆ ಹದವಾಗಿ ಬೆರೆತುಕೊಂಡು ಒಂದು ಅತ್ಯಂತ ಜನವಿರೋಧಿ 'ಅಧಿಕಾರಶಾಹಿ ನೀತಿ ಸಂಹಿತೆ' ಯನ್ನು ಜಾರಿಗೆ ತಂದಿತು.

೧೯೪೭ರ ಆಗಸ್ಟ್ ೧೫ರ ನಂತರ, ಇದರಲ್ಲಿ ಏನೇನು ಮಾರ್ಪಾಡಾಯಿತು. ಈ ದೇಶದ ಸ್ವಾತಂತ್ರ್ಯ ದತ್ತವಾದದ್ದೇ ಬ್ರಿಟೀಷ್ ಪಾರ್ಲಿಮೆಂಟಿನಲ್ಲಿ ಆದ ನಿರ್ಣಯದ ಅನುಸಾರ! ಆ ನಂತರ ಈ ದೇಶದ ಆಡಳಿತ ರಚನೆಯಲ್ಲಿ ೧೯೩೫ರ ಬ್ರಿಟೀಷ್ ಇಂಡಿಯಾ ಆಕ್ಟ್‌ನ ೧೦೦ ರ ೮೦ ಭಾಗ ಕಲಮುಗಳನ್ನೆಲ್ಲಾ ಯಥಾವತ್ತಾಗಿ ಹಾಗೆಯೇ ಉಳಿಸಿಕೊಳ್ಳಲಾಯಿತು. ಸ್ವತಂತ್ರ ಭಾರತದ ಪೊಲೀಸ್ ಇಲಾಖೆ ಈಗಲೂ ತನ್ನ ಹುಟ್ಟನ್ನು ೧೮೬೧ರ ಇಂಡಿಯನ್ ಪೊಲೀಸ್ ಆಕ್ಟ್‌ನಲ್ಲಿ ಗುರುತಿಸಿಕೊಳ್ಳುತ್ತದೆ. ಸ್ವಾತಂತ್ರ ಭಾರತದ ನಾಗರಿಕ ಸೇವೆಯ ಹುಟ್ಟೂ ೧೯೧೧ರ ಬ್ರಿಟೀಷ್ ಮಸೂದೆಯಲ್ಲಿ ಗುರುತಿಸಲಾಗುತ್ತದೆ. ಅಸಲು ವಿಚಾರವೆಂದರೆ, ೧೯೪೭ರ ನಂತರದ ಕಳೆದ ೫೭ ವರ್ಷಗಳಲ್ಲಿ ಹಲವಾರು ತಿದ್ದುಪಡಿಗಳಾದರೂ, ಅದರ ಮೂಲ ಉದ್ದೇಶ ಹಾಗೂ ರಚನೆಗಳಲ್ಲಿ ಯಾವ ಮೂಲಭೂತ ಬದಲಾವಣೆಗಳೂ ಬರಲಿಲ್ಲ.

ಯಾವ ವರ್ಗ ಬ್ರಿಟೀಷ್ ಕಾಲದಲ್ಲಿ ಆಡಳಿತ ಸೇವೆಗಳಿಗೆ ಸೇರಿಕೊಳ್ಳುತ್ತಿತ್ತೋ ಅದೇ ವರ್ಗಗಳೇ ಈಗಲೂ ಆಡಳಿತ ಸೇವೆಗೆ ಭರ್ತಿಯಾಗುತ್ತಿವೆ. ೧೯೮೦ರಲ್ಲಿ ನಡೆದ ಒಂದು ಅಧ್ಯಯನ ತಿಳಿಸುವಂತೆ ಭಾರತ ಆಡಳಿತ ಸೇವೆಯ ಶೇ ೫೦ ರಷ್ಟು ಅಧಿಕಾರಿಗಳೂ, ಭಾರತ ಸೇವೆಯಲ್ಲಿ ಅಧಿಕಾರಿಗಳಾಗಿಯೇ ಇದ್ದರು. ಈಗಲೂ ದಲಿತರ, ಮಹಿಳೆಯರ, ಆದಿವಾಸಿಗಳ, ಮುಸ್ಲಿಮರ ಪ್ರಾತಿನಿಧ್ಯ ಭಾರತ ಆಡಳಿತ ಸೇವೆಯಲ್ಲಿ ನಗಣ್ಯವೆನ್ನುವಷ್ಟು ಕಡಿಮೆ. ಮೇಲ್ಜಾತಿ, ಮೇಲ್ವರ್ಗಗಳ ಪ್ರಾತಿನಿಧ್ಯ ಹಾಗೂ ಅವರ ದೃಷ್ಟಿಕೋನವೇ ಮುಂದುವರೆದಿದೆ.

ಹೀಗಾಗಿಯೇ ೧೯೫೦ರ ದಶಕದಲ್ಲಿ ಭಾರತದ ಆಡಳಿತ ಸೇವೆಯನ್ನು ಹೇಗೆ ಉತ್ತಮಪಡಿಸುವುದು ಎಂಬ ಚರ್ಚೆಯಲ್ಲಿ ಆಗಿನ ಪ್ರಮುಖ ಅಧಿಕಾರಿ ಮುಜುಮ್‌ದಾರ್ ರವರು 'ಬ್ರಿಟಿಷ್ ಹಿಂದಿನ ವರ್ಣಾಶ್ರಮ ಪದ್ಧತಿಯನ್ನು ಆಧರಿಸಿದ ಶ್ರೇಣೀಕೃತ ಪದ್ಧತಿ ಜಾರಿಗೆ ಬರಬೇಕೆಂದು' ಪ್ರತಿಪಾದಿಸಿದ್ದರು. ಆಡಳಿತ ಸುಧಾರಣೆ ಪ್ರತಿಪಾದಿಸಿದ ಗೋರ್‍ವಾಲ ಸಮಿತಿ' ಕೌಟಿಲ್ಯನ ಅರ್ಥಶಾಸ್ತ್ರದಿಂದ ಸಾಕಷ್ಟು ಕಲಿಯುವುದಿದೆ' ಎಂದು ಪ್ರತಿಪಾದಿಸಿದ್ದರು.

ಹೀಗೆ ಮೇಲ್ನೋಟಕ್ಕೆ ಕಾಣುವಂತೆ, ಸ್ವತಂತ್ರ ಭಾರತದ ಆಡಳಿತ ಪದ್ಧತಿ ಬ್ರಿಟೀಷ್ ಹಿಂದಿನ ವರ್ಣಾಶ್ರಮ ಪದ್ಧತಿ ಆಧರಿತ ಆಡಳಿತ ವ್ಯವಸ್ಥೆ ಹಾಗೂ ಬ್ರಿಟೀಷ್ ವಸಾಹತುಶಾಹಿಯ ದಮನಕಾರಿ ಪದ್ಧತಿಗಳು ಸಮ್ಮಿಶ್ರಣವಾಗಿತ್ತು. ದುಡಿಯುವ ಶೂದ್ರರು 'ಪಾಪಿ'ಗಳೆಂಬ ಬ್ರಾಹ್ಮಣಶಾಹಿ ಮನೋಭಾವ, ಈ ದೇಶದ ಜನರು 'ಅಪರಾಧಿ'ಗಳೆಂಬ ವಸಾಹತುಶಾಹಿ ಧೋರಣೆಗಳೇ ೧೯೪೭ರ ನಂತರದ ಆಡಳಿತಶಾಹಿಯಲ್ಲಿ ಮುಂದುವರೆದದ್ದು ಸಹಜವೇ ಅಲ್ಲವೇ!

ಪ್ರಜೆಗಳೇ ಪ್ರಭುಗಳೆಂಬ ಪ್ರಜಾಪ್ರಭುತ್ವ ವ್ಯವಸ್ಥೆಗೆ, ಪ್ರಜೆಗಳು ಪಾಪಿಗಳು, ಅಪರಾಧಿಗಳು ಎಂಬ ಆಡಳಿತಶಾಹಿ ಹೇಗೆ ಹೊಂದಿಕೊಳ್ಳುತ್ತದೆ? ಆದರೂ ಇದೇ ಬಗೆಯ ಆಡಳಿತಶಾಹಿ ಕಳೆದ ೫೭ ವರ್ಷದಿಂದ ತಮ್ಮನ್ನು ಆಳುತ್ತಿದೆ. ಕಾರಣ ಈ ದೇಶದ ಪ್ರಜಾಪ್ರಭುತ್ವ ಅಸಲು ಪ್ರಜಾಪ್ರಭುತ್ವವೇ ಆಗಿಲ್ಲವೆಂಬುದು! ಆದ್ದರಿಂದಲೇ ಈ ವ್ಯವಸ್ಥೆಯ ಮೂಲಭೂತ ಬದಲಾವಣೆ ಕ್ರಾಂತಿಯಾಗಬೇಕೆಂಬುದು, ಅದಕ್ಕಾಗಿಯೇ ಈ ಪ್ರಭುತ್ವವನ್ನು ಕೊನೆಗಾಣಿಸಿ ಜನತೆಯ ನೈಜ ಪ್ರಭುತ್ವವನ್ನು ನೆಲೆಯಾಗಿಸಬೇಕೆಂದು ಶಸ್ತ್ರಾಸ್ತ್ರ ಹಿಡಿದಿದ್ದೇವೆಂದು ನಕ್ಸಲೀಯರು ಹೇಳುತ್ತಾರೆ. ಸಮಾಜದ ಪ್ರಜಾತಾಂತ್ರೀಕರಣವಾಗದೇ, ಪ್ರಜಾಸತ್ತಾತ್ಮಕ ಪ್ರಭುತ್ವ ಉತ್ತರದಾಯಿತ್ವವುಳ್ಳ ಆಡಳಿತಶಾಹಿ ಸೃಷ್ಟಿಯಾಗುವುದಿಲ್ಲ.

ಕೊನೆಗೊಂದು ಮಾತು. ಜುಲೈ ೨೪ರ ಸಭೆಯ ನಂತರ ಅಭಿವೃದ್ಧಿ ಆಯುಕ್ತ ಗೋರೆಯವರನ್ನು ಕುದುರೆಮುಖದ ನೊಂದ ಆದಿವಾಸಿಗಳು ಭೇಟಿ ಮಾಡಿ ನ್ಯಾಷನಲ್ ಪಾರ್ಕ್ ಯೋಜನೆಯನ್ನು ಜಾರಿಗೆ ತರಬೇಡಿ ಎಂದು ಮನವಿ ಮಾಡಿಕೊಂಡರು. ಅದಕ್ಕೆ ಉತ್ತರ ನೀಡುತ್ತಾ ಆಯುಕ್ತರು 'ಅದನ್ನು ಜಾರಿಗೆ ತರದಿದ್ದರೆ ನಮ್ಮನ್ನು ಜೈಲಿಗೆ ಹಾಕುತ್ತಾರೆ. ನಿಮಗಾಗಿ ನಾವು ಜೈಲಿಗೆ ಹೋಗಲು ಸಿದ್ಧರಿಲ್ಲ' ಎಂದರಂತೆ. ಮತ್ತೊಂದು ಕಡೆ ನಕ್ಸಲೈಟ್ ಪಾರ್ವತಿ-ಹಾಜಿಮಾ ನ್ಯಾಷನಲ್ ಪಾರ್ಕ್‌ನಿಂದ ಆದಿವಾಸಿಗಳನ್ನು ಎತ್ತಂಗಡಿ ಮಾಡಬಾರದೆಂಬ ಹೋರಾಟದಲ್ಲಿ ಪ್ರಾಣವನ್ನೇ ಕೊಟ್ಟಿದ್ದಾರೆ.

ಜನತೆಗಾಗಿ ಜೈಲಿಗೆ ಹೋಗಲು ಸಿದ್ಧರಿಲ್ಲದ ಅಧಿಕಾರಿಗಳು – ಜನತೆಗಾಗಿ ಪ್ರಾಣವನ್ನೇ ನೀಡುವ ನಕ್ಸಲೈಟರು. ಜನತೆ ಯಾರನ್ನು ನಂಬಬೇಕು? □

ಬದುಕು ಧರ್ಮ



ಹುಟ್ಟಿ ಬೆಳೆದು, ಬೆಳೆದಾಗಿನಿಂದಲು
ಹೂವು ಕಾಯಿ ಹಣ್ಣು ಬೀಜಕೆ ಮಾತ್ರ
ನನ್ನ ನಾನು ಸೀಮಿತಗೊಳಿಸಲಿಲ್ಲ

ಬಿಸಿಲಲ್ಲಿ ನಿಂತವರ ಬಳಿ ಕರೆದು
ನೆರಳಿನಾಶ್ರಯ ನೀಡಲು
ಜೀವಭೇದದ ಶಬ್ದ ಕೂಡ
ಕನಸಮನಸಿಗೂ ಸುಳಿಯಲಿಲ್ಲ

ಅಳಿಲು ಗುಬ್ಬಿ ಗೂಗೆ ಕಾಗೆ ಕೋಗಿಲೆ
ಬೆಳ್ಳಕ್ಕಿ ನವಿಲೆಂಬ
ಭಿನ್ನ ರೂಪದ ಹೆಸರನಿಘಂಟು ಕಟ್ಟಿದವ
ನೀನು ನಾನಲ್ಲ

ಬೊಡ್ಡೆಯಿಂದ ತುದಿ ತುದಿಯವರೆಗೆ
ಮನಬಂದಂತೆ ಹರಿದಾಡುವ
ಸರೀಸೃಪಕೆ ಕೇರೆ ಕಾಳಿಂಗ ನಾಗ ಎಂಬ
ಹೆಸರಿಟ್ಟು ಕರೆದವನು ನೀನು ನಾನಲ್ಲ

ನಾಳೆಯ ದಿನಗಳಲ್ಲಿ
ಮುಪ್ಪು ಮೈ ಬಿರಿದು ಬಿದ್ದು
ಜೀವ ಹಾನಿಯಾದೀತೆಂಬ
ಸಂದೇಹವೊಂದನು ಬಿಟ್ಟರೆ
ಬೇರಾವ ಕೊರಗು ಕಾಡಲಿಲ್ಲ
ಈ ಪರಿತಾಪ ಅರಿತ ಬಡಿಗನೋರ್ವ
ಸಂಸ್ಕಾರ ನೀಡಲೆನಗೆ
ಸದ್ವಿನಿಯೋಗ ನಿನಗಾಗಲೆಂದ

ಬದುಕು ಧರ್ಮದ ಅರ್ಥ
ಆತ ಅರಿಯದವನೇನಲ್ಲ

ಬೂದಿಯಾಗಿ ಈ ಭೂಮಿಯ
ಋಣತೀರಿಸುವ ಹಂಬಲದಿ
ದೇಹದ ತುಕಡಿ ಪುರುಲಿಮ ಬೆಂಕಿಯಲಿ
ಕಲರವದ ಈ ಜೀವ ಸಂಕುಲ ಬೇಯಿಸಿ

ಕೇರೆ ಕಾಳಿಂಗ ನಾಗ ನಾಡಕಾಡಿಗಿಳಿಸಿ
ಎನ್ನ ಮೈ ಕರಕುಶಲ ವೈವಿಧ್ಯದ
ವರ್ಣರಂಜಿತ ಮೆತ್ತನೆಯ ಆಸನದಿ ಕೂತು
ತಾನೇ ಸರೀಸೃಪನಾಗುವುದು ನೀನು ನಾನಲ್ಲ.

○ ಅರ್ಜುನ ಕೋರಟಕರ

ಮೀಸಲಾತಿ: ಖಾಸಗಿ ವಲಯದ ಮಿಥ್ಯೆಗಳು

ದಲಿತ್ ಡೈರಿ

ಸಂಯುಕ್ತ ಪ್ರಗತಿಪರ ಮೈತ್ರಿಕೂಟವು 'ಖಾಸಗಿ ವಲಯದ ಉದ್ಯೋಗ ಮೀಸಲಾತಿ' ಕನಸನ್ನು ಹರಾಜಿಗಿಡುವುದರ ಮೂಲಕ ಮತ್ತೊಮ್ಮೆ ದಲಿತರು ಸರ್ಕಾರಿ ಹುದ್ದೆಗಳಿಂದ ಆಚೆ ಹೋಗದಂತೆ ತಡೆಯುತ್ತಿದೆ. ಇದು ಮಾರುಕಟ್ಟೆ ಆಧಾರಿತ ಆರ್ಥಿಕತೆಯಲ್ಲಿ ಸಹಭಾಗಿತ್ವವನ್ನು ತಿರಸ್ಕರಿಸಿದಂತಾಗಿದೆ. ಆರ್ಥಿಕವಾಗಿ ಶಕ್ತಿಯುತರಾದ ದಲಿತ ಸಮುದಾಯವು ಮುಖ್ಯವಾಹಿನಿಯ ರಾಜಕಾರಣಕ್ಕೆ ತಲೆನೋವಾಗುತ್ತದೆಂಬುದನ್ನು ದಲಿತರಿಗಿಂತಲೂ ಹೆಚ್ಚಾಗಿ ಅವರು ಅರಿತಿದ್ದಾರೆ. ಚುನಾವಣೆಗೆ ಮುಂಚೆ ಕಾಂಗ್ರೆಸ್ ನೀಡಿದ್ದ ಭರವಸೆಯನ್ನು ಮರೆತಿದೆ.

○ ಚಂದ್ರಭಾನ್ ಪ್ರಸಾದ್
ಅನು : ಡಿ. ಡೊಮಿನಿಕ್

ಖಾಸಗಿ ವಲಯದಲ್ಲಿ ಉದ್ಯೋಗ ಮೀಸಲಾತಿಯ ಬಗೆಗಿನ ಕಾಂಗ್ರೆಸ್ಸಿನ 'ರಾಷ್ಟ್ರಮಟ್ಟದ ಸಂವಾದ' ಎಂಬ ಘೋಷಣೆ ಹಾಗೂ ಮಹಾರಾಷ್ಟ್ರ ಸರ್ಕಾರದ ಶಾಸನವು ನಿರುದ್ಯೋಗಿ ದಲಿತ ಯುವಕರಲ್ಲಿ ಹೊಸ ಹುರುಪು ಮತ್ತು ಭರವಸೆಯನ್ನು ತುಂಬಿದೆ. ದಲಿತ ಸಮುದಾಯದ ಅನೇಕ ಹಿರಿಯ ನಾಗರಿಕರು ಇದರಿಂದ ಉತ್ಸಾಹಿತರಾಗಿದ್ದಾರೆ. ಏಕಾಗಬಾರದು? ಮೀಸಲಾತಿ ಬಗೆಗಿನ ದಲಿತರ ಕಾನೂನುಬದ್ಧ ಹಕ್ಕು ಸರ್ಕಾರೀ ವಲಯವನ್ನು ಮೀರಿ ಹೋಗುತ್ತಿದೆ. ನ್ಯಾಯಯುತ ದಾರಿಯಲ್ಲಿ ಭಾರತೀಯ ಸಮಾಜವು ಪುನರ್‌ರೂಪಿತವಾಗಲು ಒತ್ತಾಯಿಸುತ್ತಿರುವ ಖಾಸಗಿ ವಲಯವು ಭಾರತ ಗಣರಾಜ್ಯದ ಉದ್ದೇಶಗಳನ್ನು ಪಾಲಿಸದೆ ತನ್ನ ಅಸ್ತಿತ್ವವನ್ನು ಹೇಗೆ ಸಮರ್ಥಿಸಿಕೊಳ್ಳುತ್ತದೆ? ಇಂದಿನ ಭಾರತದ ಬೂರ್ಜ್ವಾಗಳು ಗಣರಾಜ್ಯದ ಉದ್ದೇಶಗಳನ್ನು ಪಾಲಿಸಲು ಪ್ರೇರೇಪಿಸಿದರೆ ಭಾರತದ ಅರ್ಧದಷ್ಟು ಸಾಮಾಜಿಕ ಟೆನ್ಶನ್ ಕಡಿಮೆಯಾಗುತ್ತದೆ.

ಹೀಗಿದ್ದಾಗ್ಯೂ 'ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ' ಎನ್ನೋ ಘೋಷಣೆಯಲ್ಲಿ ಕಾಣದೇ ಇರುವ ಸಂಗತಿಯೆಂದರೆ ಈ ಉದ್ಯೋಗಗಳು ಎಷ್ಟರ ಮಟ್ಟಿಗೆ ವಿಮೋಚನಾ ಪಾತ್ರವನ್ನು ವಹಿಸಬಲ್ಲವು. ಕೇಂದ್ರ ಕಾರ್ಮಿಕ ಸಚಿವಾಲಯ (೧೯೯೯) ದ ಪ್ರಕಾರ ಸಂಘಟಿತ ವಲಯದಲ್ಲಿನ ಖಾಸಗೀ ಕ್ಷೇತ್ರದ ಶ್ರಮಶಕ್ತಿಯು ೮೬.೯೮ ಅಥವಾ ೯ ಮಿಲಿಯ ಇತ್ತು. ಆದರೆ ಭಾರತದಲ್ಲಿನ ಖಾಸಗೀ ವಲಯದಲ್ಲಿರುವ ಕಮ್ಮಿ ಕೌಶಲ್ಯವುಳ್ಳ, ಅರೆ ಸಂಘಟಿತ ಮತ್ತು ಕೌಶಲ್ಯರಹಿತ ಕಾರ್ಮಿಕ ಶಕ್ತಿಯೇ ೩/೪ ರಷ್ಟಿದೆ. ಅಂದರೆ ಈ ವಲಯದಲ್ಲಿ ದಲಿತರೇ ಅಧಿಕ ಸಂಖ್ಯೆಯಲ್ಲಿದ್ದಾರೆಂಬುದು ಅವರ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿದೆ. ಆದ್ದರಿಂದ

ಚಂದ್ರಭಾನ್ ಪ್ರಸಾದ್
ದಲಿತ್ ಡೈರಿ

ಬಿಳಿಪಟ್ಟಿಯ ದಲಿತ ಕಾರ್ಮಿಕರು ಎರಡು ಮಿಲಿಯದಷ್ಟಾಗಬೇಕೆಂದು ಅವರ ಬೇಡಿಕೆ ನಿಜವಾಗಿಯೂ ಮೀಸಲಾತಿಯ ಮೂಲಕ ೫ ಲಕ್ಷಗಳಷ್ಟಾಗಬಹುದು.

ಅಂದರೆ ಈ ಉದ್ಯೋಗಗಳು (ಸೂಪರ್‌ವೈಸರ್, ಗುಮಾಸ್ತರು, ವೃತ್ತಿಪರರು ಮತ್ತು ಮ್ಯಾನೇಜರ್‌ಗಳು) ಅಂತಹ ಮಹತ್ವದ ಸ್ಥಾನವನ್ನೇನು ದಲಿತರಿಗೆ ನೀಡುವುದಿಲ್ಲವಾದ್ದರಿಂದ ಅದರ ಬಗ್ಗೆ ಬರೆಯಲು ಏನೂ ಇಲ್ಲ. ವರ್ತಮಾನದಲ್ಲಿ ಆ ಐದು ಲಕ್ಷ ಉದ್ಯೋಗಗಳಿಗೆ ಸಂಬಂಧಿಸಿದಂತೆ ದಲಿತೇತರರು ಅವನ್ನು ತೆಗೆದುಕೊಂಡಿದ್ದಾರಷ್ಟೆ. ಮೀಸಲಾತಿ ನೀತಿಯನ್ನು ಅನುಸರಿಸಿದ್ದೇ ಆದಲ್ಲಿ, ಖಾಸಗಿ ವಲಯ ಬ್ಯಾಕ್‌ಲಾಗ್ ಹುದ್ದೆಗಳನ್ನು ಲೆಕ್ಕಾಚಾರ ಮಾಡಿ ತುಂಬಿಸಿಕೊಳ್ಳುವುದೇ ?

ಆದರೆ ಕೇಂದ್ರೀಯ ಶಾಲೆಗಳಲ್ಲಿನ ಪ್ರಾಥಮಿಕ ತರಗತಿ ಟೀಚರ್ ಬ್ಯಾಕ್‌ಲಾಗ್ ಹುದ್ದೆಗಳನ್ನೇ ಭಾರತೀಯ ಸರ್ಕಾರ ಲೆಕ್ಕಾಚಾರ ಮಾಡಿಲ್ಲ. ಹೀಗಿರುವಾಗ ಖಾಸಗೀ ವಲಯ ದಲಿತ ಮೀಸಲಾತಿಯನ್ನು ತುಂಬುವುದೆಂದರೆ ದೂರದ ಮಾತೇ ಸರಿ! ಆದರೂ ಖಾಸಗೀ ವಲಯ ಇನ್ನು ಮುಂದೆ ಹೊಸ ನೇಮಕಾತಿ ಮಾಡುವಾಗ ದಲಿತರ ಪಾಲನ್ನು ಕಡೆಗಣಿಸಬಾರದೆಂದು ನಿರೀಕ್ಷಿಸಬಹುದಾಗಿದೆ.

ಇಂಥ ಖಾಲಿ ಹುದ್ದೆಗಳು ಕೆಲವು ಸಾವಿರಗಳಷ್ಟು ಆಗಬಹುದೆಂಬುದರಲ್ಲಿ ಸಂದೇಹವಿಲ್ಲ. ಈಗಾಗಲೇ ನಾವು ವಾದಿಸುತ್ತಿರುವಂತೆ ವಾಣಿಜ್ಯಕ್ಷೇತ್ರವನ್ನು ಪರಿಶೀಲಿಸಿದಲ್ಲಿ ಭಿನ್ನ ದೃಶ್ಯವೊಂದು ಕಾಣಿಸುತ್ತದೆ. ಇದಕ್ಕೆ ನಾಟಕೀಯ ರೀತಿಯಲ್ಲಿ ಕಾಂಗ್ರೆಸ್ ಸಂಯುಕ್ತ ಸರ್ಕಾರವು ಮುಟ್ಟುಗೋಲು ಹಾಕಿದೆ.

ಮಹಾರಾಷ್ಟ್ರದಲ್ಲಿ ೪,೫೦೦ ಪರವಾನಿಗೆ ಪಡೆದ ಮದ್ಯದಂಗಡಿಗಳು ಸೆಪ್ಟೆಂಬರ್ ೨೦೦೩ರಲ್ಲಿದ್ದರು. ಸುಶೀಲ್ ಕುಮಾರ್ ಶಿಂಧೆ ಸರ್ಕಾರವು ದಲಿತರನ್ನು ನಿಜವಾಗಿಯೂ ಸಶಕ್ತರನ್ನಾಗಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಪಟ್ಟಲ್ಲಿ, ಅದು ೨೨.೫% ಪರವಾನಿಗೆಯನ್ನು ದಲಿತರಿಗೆ ಒದಗಿಸಬಹುದಾಗಿದೆ. ಇದು ೧,೦೦೦ ದಷ್ಟಾಗಬಹುದು. ಈ ೧,೦೦೦ ದಲಿತರು ತಮ್ಮ ಮದ್ಯದಂಗಡಿಗಳಿಂದ ಅದೇ ಸಂಖ್ಯೆಯ ಐಎಎಸ್ ಅಧಿಕಾರಿಗಳಿಗಿಂತ ಹೆಚ್ಚಿಗೆ ಗಳಿಸಬಹುದಾಗಿದೆ. ಇದರೊಡನೆ ಪ್ರತಿಯೊಬ್ಬ ದಲಿತ ಮದ್ಯ ದಂಗಡಿಯ ಮಾಲೀಕರು ಸಹ ಮತ್ತೆ ಐವರನ್ನು ತನ್ನ ವ್ಯವಹಾರ ನಿಭಾಯಿಸಲು ನೇಮಿಸಿಕೊಳ್ಳಬಹುದಾಗಿದೆ. ಆಂಧ್ರಪ್ರದೇಶವು ೬೫,೦೦೦ ಪರವಾನಿಗೆ ಪಡೆದ ಮದ್ಯದಂಗಡಿಗಳನ್ನು ಹೊಂದಿದೆ. ಈಗಿನ ರೆಡ್ಡಿ ಸರ್ಕಾರವು ದಲಿತ ಸಂಗತಿಗಳ ಬಗ್ಗೆ ಗಂಭೀರವಾಗಿದೆಯಾದರೆ ಆಂಧ್ರದ ದಲಿತರಿಗೆ ಅದು ೧೬೦೦ ಮದ್ಯದಂಗಡಿಗಳನ್ನು ಮೀಸಲಿಡಬಹುದು.

ಹಾಗೆಯೇ ಸಾರ್ವಜನಿಕ ಕಾಮಗಾರಿ ಇಲಾಖೆಯು ಬೇಸಾಯ ಮತ್ತು ಮುನಿಸಿಪಾಲಿಟಿ ಇಲಾಖೆಗಳು ಮಿಲಿಯಗಟ್ಟಲೆ ವೆಚ್ಚದ ಕಾಮಗಾರಿ ಯೋಜನೆಗಳನ್ನು ಖಾಸಗಿ ಗುತ್ತಿಗೆದಾರರಿಗೆ ನೀಡುತ್ತಿದೆ. ಹೀಗಿರುವಲ್ಲಿ ಸಣ್ಣ ಪ್ರಮಾಣದ ಗುತ್ತಿಗೆಗಳನ್ನು ಕೆಲವೇ ಲಕ್ಷರೂಪಾಯಿಗಳಾದರೂ ಸರಿ, ದಲಿತ ಗುತ್ತಿಗೆದಾರರಿಗೆ ಮೀಸಲಿಟ್ಟಲ್ಲಿ ಪ್ರತಿಯೊಂದು ರಾಜ್ಯದಲ್ಲಿ ದಲಿತರು ಆರ್ಥಿಕವಾಗಿ ಬಲಶಾಲಿಗಳಾಗಬಹುದು.

ಹಾಗೆಯೇ, ಆರೋಗ್ಯ ಇಲಾಖೆ ಯಿಂದಲೂ ಮಾಡಬಹುದಾಗಿದೆ. ಈ ಇಲಾಖೆಯ ಮೂಲಕ ಆಸ್ಪತ್ರೆಗಳು ಅನೇಕ ಕೋಟಿ ಬೆಲೆಯ ಔಷಧಿಗಳನ್ನು ಪ್ರತೀವರ್ಷವೂ ಖರೀದಿಸುತ್ತಿದೆ. ಅಂಥ ಖರೀದಿಯಲ್ಲಿ ಅಲ್ಪಪ್ರಮಾಣದಷ್ಟನ್ನು ದಲಿತ ರಾಸಾಯನ ಶಾಸ್ತ್ರಜ್ಞರಿಗೆ ಮೀಸಲಿಟ್ಟಲ್ಲಿ ಪ್ರತಿಯೊಂದು ರಾಜ್ಯದ ನೂರಾರು ದಲಿತರು ದೊಡ್ಡ ಮೊತ್ತವನ್ನು ಗಳಿಸಬಹುದಾಗಿದೆ.

ಆಗ್ರಾದ ದಲಿತರು ತಯಾರಿಕಾ ಘಟಕದಲ್ಲಿ ಪ್ರಪ್ರಥಮವಾಗಿ ಪ್ರವೇಶಿಸಿದ್ದರಿಂದ ದೊಡ್ಡ ಮೊತ್ತವನ್ನು ಗಳಿಸಲು ಸಾಧ್ಯವಾಯಿತು. ಎರಡನೇ ಮಹಾಯುದ್ಧದಲ್ಲಿ ಬ್ರಿಟಿಷ್ ಸೈನ್ಯಕ್ಕೆ ಬೂಟುಗಳು ಮತ್ತು ಬೆಲ್ಟ್‌ಗಳನ್ನು ಸರಬರಾಜು ಮಾಡಿ ಮಿಲಿಯಾಧೀಶರಾದರು. ಅದು ಸ್ವಾತಂತ್ರ್ಯೋತ್ತರದಲ್ಲೂ ಮುಂದುವರಿಯಿತು. ಉತ್ತರಭಾರತದಲ್ಲಿ ದಲಿತ ಚಳವಳಿಗೆ ಆಗ್ರಾ ಪ್ರಮುಖ ಕೇಂದ್ರವಾಯಿತು. ೧೯೬೦ರ ಸುಮಾರಿಗೆ ದಲಿತೇತರ ವ್ಯಾಪಾರಿಗಳು ಈ ಕ್ಷೇತ್ರವನ್ನು ಪ್ರವೇಶಿಸುತ್ತಾರೆ. ಅವರು ಸೈನ್ಯದಿಂದ ಟೆಂಡರುಗಳನ್ನು ಪಡೆದುಕೊಂಡು ದಲಿತ ತಯಾರಕರಿಂದ ದೊಡ್ಡ ಗಾತ್ರದಲ್ಲಿ ಖರೀದಿಸಲಾರಂಭಿಸಿದರು. ನಿಧಾನವಾಗಿ ಅವರೂ ಸಹ ತಯಾರಕರಾಗಿ ದಲಿತರನ್ನು ಹಿಂದಕ್ಕೆ ಸರಿಸಿದರು.

ಇಂದು ದಲಿತರು ದಲಿತೇತರರ ತಯಾರಿಕಾ ಘಟಕಗಳಿಗೆ ಕಚ್ಚಾ ವಸ್ತುವನ್ನು ಸರಬರಾಜು ಮಾಡುತ್ತಿದ್ದಾರೆ. ಮನಮೋಹನ್‌ಸಿಂಗ್ ಸರ್ಕಾರವೇಕೆ ಈ ಹಿಂದಿನ ನೀತಿಯನ್ನು ಮತ್ತೊಮ್ಮೆ ಜಾರಿಯಾಗಿಸಿ ಸೈನ್ಯದ ಆಗತ್ಯದಲ್ಲಿ ಒಂದಷ್ಟನ್ನು ದಲಿತರಿಗೆ ಮೀಸಲಿಡಬಾರದು? ಪ್ರತೀ ವರ್ಷವೂ ಒಂದು ಮಿಲಿಯನ್ ಸಶಕ್ತ ಭಾರತೀಯ ಪಡೆ ಹಾಗೂ ಅರಸೈನ್ಯ ಹಾಗೂ ಪೊಲೀಸರಿಗೆ ಅನೇಕ ಸಾವಿರ ಕೋಟಿಗಳಷ್ಟು ಬೆಲೆಯ ಬೂಟುಗಳನ್ನು ಮತ್ತು ಬೆಲ್ಟ್‌ಗಳನ್ನು ಖರೀದಿಸಲಾಗುತ್ತದೆ. ಈ ಮೇಲಿನ ಎಲ್ಲ ಕ್ರಮಗಳು ಖಜಾನೆಗೆ ಹಣಕಾಸಿನ ಒತ್ತಡವೇನನ್ನೂ ಹೇರುವುದಿಲ್ಲ

ಅಥವಾ ಅದಕ್ಕೆ ಯಾವುದೇ ಶಾಸಕಾಂಗದ ಕ್ರಮವೂ ಬೇಕಾಗಿಲ್ಲ. ಸಾರ್ವಜನಿಕ ಕ್ಷೇತ್ರದ ಎಣ್ಣೆ ಕಂಪೆನಿಗಳು ತಮ್ಮ ೨೨೦೫% ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಮತ್ತು ಎಲ್‌ಪಿಜಿ ಅನಿಲದ ಡೀಲರ್ ಶಿಪ್ ಅನ್ನು ದಲಿತರಿಗೆ ಮೀಸಲಿಡಬಾರದು. ಎಲ್ಲ ೯ ಸಾರ್ವಜನಿಕ ವಲಯದ ಘಟಕಗಳು ಸಹ ಲಕ್ಷಗಟ್ಟಲೆ ದಲಿತರಿಗೆ ಸಪ್ಲೈಯರ್ - ಡೀಲರ್‌ಶಿಪ್ ಡೈವರ್ಸಿಟಿಯನ್ನು ದಲಿತರಿಗೆ ಪರಿಚಯ ಮಾಡುವ ಮೂಲಕ ಕಚೇರಿ ಸಾಮಗ್ರಿ, ವಿದ್ಯುನ್ಮಾನ ಯಂತ್ರಗಳು ಹಾಗೂ ಪೀಠೋಪಕರಣ ಕ್ಷೇತ್ರಗಳಲ್ಲಿ ಉದ್ಯೋಗವನ್ನು ಪ್ರಚೋದಿಸಬಹುದಾಗಿದೆ.

ದುರಂತವೆಂದರೆ ಕಾಂಗ್ರೆಸ್ ಸರ್ಕಾರವು ತನ್ನ ಹಿಂದಿನ ನಾಲ್ಕೂವರೆ ದಶಕಗಳಲ್ಲಿ ಈ ಸಮುದಾಯಗಳಲ್ಲಿನ ವ್ಯಾಪಾರಸ್ಥರ ಶಕ್ತಿಯನ್ನು ಹೆಚ್ಚಿಸುವ ಯಾವುದೇ ಮುನ್ನೋಟವನ್ನು ಸಹ ಹಾಕಿಕೊಳ್ಳಲಿಲ್ಲ. ಇದೀಗ ಅವಕಾಶ ಬಂದಾಗ ಅದು ಕ್ರೂರ ರೀತಿಯಲ್ಲಿ ದಲಿತರಿಗೆ ದ್ರೋಹವೆಸಗಿದೆ.

ಈಗ ಪಕ್ಷದ ನಾಯಕತ್ವವು 'ಖಾಸಗಿ ವಲಯದ ಉದ್ಯೋಗ ಮೀಸಲಾತಿ' ಕನಸನ್ನು ಹರಾಜಿಗಿಡುವುದರ ಮೂಲಕ ಮತ್ತೊಮ್ಮೆ ದಲಿತರು ಸರ್ಕಾರಿ ಹುದ್ದೆಗಳಿಂದ ಆಚೆ ಹೋಗದಂತೆ ತಡೆಯುತ್ತಿದೆ. ಇದು ಮಾರುಕಟ್ಟೆ ಆಧಾರಿತ ಆರ್ಥಿಕತೆಯಲ್ಲಿ ಸಹಭಾಗಿತ್ವವನ್ನು ತಿರಸ್ಕರಿಸಿದಂತಾಗಿದೆ. ಆರ್ಥಿಕವಾಗಿ ಶಕ್ತಿಯುತರಾದ ದಲಿತ ಸಮುದಾಯವು ಮುಖ್ಯವಾಹಿನಿಯ ರಾಜಕಾರಣಕ್ಕೆ ತಲೆನೋವಾಗುತ್ತದೆಂಬುದನ್ನು ದಲಿತರಿಗಿಂತಲೂ ಹೆಚ್ಚಾಗಿ ಅವರು ಅರಿತಿದ್ದಾರೆ.

'ನಾಗರಿಕತೆ' - ಪ್ರವೃತ್ತಿಯ ದುರಹಂಕಾರಿ ಖಾಸಗಿ ವಲಯ

ಕೆಲವೊಂದು ವಿಶೇಷ ಬಹುರೂಪಿ ಸಾಮರ್ಥ್ಯಗಳು ಮಾನವ ಜೀವಿಗಳಲ್ಲಿದ್ದು ಅವೆಲ್ಲ ಒಂದಕ್ಕೊಂದು ಪೂರಕವಾಗಿದ್ದರೂ, ಅನೇಕ ಬಾರಿ ಭಿನ್ನ ಉದ್ದೇಶಗಳಿಗೆ ಕಾರ್ಯ ನಿರ್ವಹಿಸುತ್ತವೆ. ಇದರೊಡನೆ ಇರುವಂತಹ ವಿಶೇಷ ಲಕ್ಷಣವೇ ದುರಹಂಕಾರ. ಇದೊಂದು ಮಾನಸಿಕ ಮನೋಭಾವವನ್ನು ಹೊಂದಿದ್ದು ಒಬ್ಬರ ಮೌಲ್ಯಗಳ ಬಗ್ಗೆ ಸಂಶಯ ಪ್ರವೃತ್ತಿಯನ್ನು ಹುಟ್ಟುಹಾಕುವುದರಲ್ಲಿ ಅಡಗಿರುತ್ತದೆ.

ಅದು ಸಾರ್ವತ್ರಿಕವಾಗಿ ಒಪ್ಪಿತ ವಿದ್ಯಮಾನವಾದರೂ, ಅದು ವರ್ಗ ಮತ್ತು ಜಾತಿ ಐಡೆಂಟಿಟಿಯನ್ನು ಪಡೆದಾಗ ಅದು ಸರ್ವನಾಶಕವಾಗಿ ಮಾರ್ಪಡುತ್ತದೆ. ಇದು ಸಮಾಜದಲ್ಲಿ ಜನರನ್ನು ಮತ್ತು ಪಂಗಡಗಳನ್ನು ಸರಣಿಯೋಪಾದಿಯಲ್ಲಿ ಬಿಕ್ಕಟ್ಟುಗಳು ಮತ್ತು ಆಂತರಿಕ ಗಲಭೆಗಳಿಗೆ ದೂಡುತ್ತದೆ. ಅಂತಿಮವಾಗಿ ಎಲ್ಲರೂ ನರಳುವಂತಾಗುತ್ತದೆ. ಮಧ್ಯಯುಗೀನ ಕಾಲದಲ್ಲಿ ದುರಹಂಕಾರವು ಅನೇಕ ಸಮಾಜಗಳನ್ನು ಪತನಕ್ಕೆ ತಳ್ಳಿತು. ಅನೇಕ ಸಮಾಜಗಳು ವರ್ಗ ಆಧಾರಿತ ಕಾಲ ಆರಂಭವಾಗುತ್ತಿದ್ದಂತೆ ಅದನ್ನು ತಿರಸ್ಕರಿಸಿದವು. ಆದರೆ ಭಾರತ ಸಮಾಜವು ೨೧ನೇ ಶತಮಾನ ಬಂದರೂ ಆಧುನಿಕತೆ ಮತ್ತು ಪ್ರಜಾಪ್ರಭುತ್ವದ ಫಲಗಳನ್ನು ಅನುಭವಿಸುವುದರ ವಿರುದ್ಧ ಕೂಗು ಹಾಕುತ್ತಿದೆ. ಈ ವಿದ್ಯಮಾನ ಜಾತಿಯದ್ದಾಗಿದ್ದು, ಪರಿಕಲ್ಪಿತ ಚಾರಿತ್ರಿಕ ವೈಭವದ ಆತ್ಮರತಿಯಲ್ಲಿ ಅದರ ಬೇರು ಕಂಡುಬರುತ್ತದೆ.

ಇದು ಮತ್ತೊಂದು ವಿದ್ಯಮಾನಕ್ಕೆ ಮುಂದುವರೆಯುತ್ತದೆ. ಇಲ್ಲಿ ಮಾನವ ಮನಸ್ಸು ವಿವೇಕ ಮತ್ತು ಮೌಢ್ಯದ ನಡುವೆ ವ್ಯತ್ಯಾಸ ಕಾಣದಷ್ಟು ಮಟ್ಟಿಗೆ ಅಧಃಕ್ಷವಾಗುತ್ತದೆ. ಇಂಥ ಭಯಂಕರ ಸಾಮಾಜಿಕ ಸಂದರ್ಭದಲ್ಲಿ ಸಾಮುದಾಯಿಕ ಪ್ರಜ್ಞೆ ಸಮಾಜದಲ್ಲಿ ದುರಂಹಕಾರಿಯಾಗಿ ಪರಿಣಮಿಸುತ್ತದೆ. ದುರಹಂಕಾರವು ಅಸ್ತಿತ್ವದಲ್ಲಿರಲು ಕೊನೆಗೆ ಅದೇ

ಭಾರತೀಯ ಕೈಗಾರಿಕೋದ್ಯಮಿಗಳ ಪ್ರಜ್ವಲವಾದ ಕಣ್ಣುಗಳಲ್ಲಿ ೨೫೦ ಮಿಲಿಯನ್‌ಗಿಂತಲೂ ಸ್ವಲ್ಪ ಹೆಚ್ಚಾಗಿರುವ ದಲಿತರು ವಂಶವಾಹಿನಿ ಸಮಸ್ಯೆಯಿಂದ ಹುಟ್ಟಿದ್ದು, ಸಹಜ ವಾಗಿಯೇ ಅದಕ್ಷರಾಗಿದ್ದಾರೆ. ಒಂದು ಕಾರ್ಪೋರೇಟ್ ಕಛೇರಿಯಲ್ಲಿ ದಲಿತನೊಬ್ಬನ ನೆರಳು ಕಂಡಂತೆಯೇ ಖಾಸಗೀ ಕೈಗಾರಿಕೆಯು ಬಹುರಾಷ್ಟ್ರೀಯ ಕಂಪನಿಗಳೊಡನೆ ತನ್ನ 'ದಕ್ಷತೆಯ ಅನುಕೂಲತೆ'ಯನ್ನು ಕಳೆದುಕೊಳ್ಳುತ್ತದೆ. ಈ ಸಂಗತಿಯನ್ನು ಹೆಚ್ಚೆಚ್ಚು ಪ್ರಚಾರ ಮಾಡುತ್ತಿರುವವರು ನೀಡುತ್ತಿರುವ ಅಭಿಪ್ರಾಯವೆಂದರೆ ದಲಿತರ 'ಮೈಲಿಗೆ' ಇಲ್ಲದೆ ಭಾರತೀಯ ಕೈಗಾರಿಕೆಗಳು ಜಾಗತಿಕವಾಗಿ ವಾಣಿಜ್ಯದಲ್ಲಿ ಅದ್ಭುತ ಸಾಧನೆಯನ್ನು ಮಾಡುತ್ತಿದ್ದು, ಬ.ರಾ.ಕಂ.ಗಳು ಅವುಗಳ ನಿದ್ದೆಗೆಡಿಸಿವೆಯೆಂದು ಕಾಣುತ್ತದೆ.

ತರ್ಕವಾಗಿ ಪರಿಣಮಿಸುತ್ತದೆ. ಉದಾಹರಣೆಗೆ ಅನೇಕ ಭಾರತೀಯರಿಗೆ ತಮ್ಮ ಪೂರ್ವಜರು ಶೂನ್ಯ/ಸೊನ್ನೆಯನ್ನು ಸಂಶೋಧಿಸಿದ ಮಹಾಸಾಧಕರಾಗಿಬಿಡುತ್ತಾರೆ. ಹಾಗೆಯೇ ೫ನೇ ಶತಮಾನದಲ್ಲಿ (ಕ್ರಿ.ಶ) ದಶಾಂಶ ಕಂಡುಹಿಡಿದರೆಂದೂ ಹೇಳಲಾಗುತ್ತದೆ. ಆದರಿದನ್ನು ಕ್ರಿಸ್ತಪೂರ್ವ ೧೩ನೇ ಶತಮಾನದಲ್ಲೇ ಚೈನಾದವರು ಮಾಡಿದ್ದರೆಂದೂ, ದಲಿತ್ ಡೈರಿ ನೆನಪಿಸಿ, ಸೊನ್ನೆಯನ್ನು ಕ್ರಿಸ್ತಪೂರ್ವ ೪ನೇ ಶತಮಾನದಲ್ಲೇ ಕಂಡುಕೊಂಡಿದ್ದರೆಂದು ಹೇಳಿದರೆ, ಇಂದು 'ಖಾಸಗಿ ವಲಯದಲ್ಲಿ ಉದ್ಯೋಗ ಮೀಸಲಾತಿ'ಯ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಸಂವಾದ ನಡೆಯಬೇಕೆಂದು ಸಂಯುಕ್ತ ಸರ್ಕಾರ ಹೇಳಿದರೆ ಉದ್ಯಮಪತಿಗಳು ಪ್ರತಿಕ್ರಿಯೆ ನೀಡಿದಂತೆಯೇ ಆಗುತ್ತದೆ.

ಹೀಗಿದ್ದಾಗ್ಯೂ ಕಾಂಗ್ರೆಸ್ ಪಕ್ಷ ತನ್ನ ಅಜೆಂಡಾದಲ್ಲಿ ಈ ಪ್ರಶ್ನೆಯನ್ನು ಎತ್ತಿರುವುದರಲ್ಲಿ ಎಂಥ ದುರುದ್ದೇಶವಿದ್ದರೂ ಸಹ ಭಾರತೀಯ ಉದ್ಯಮ ಬದುಕಿಗೆ ನಾಗರಿಕ ಉಸಿರನ್ನು ಹೊಮ್ಮಿಸಿ, ಸಾಮಾಜಿಕ ಕ್ಷಮಾಧಾನದ ಹೊಸ ಯುಗಕ್ಕೆ ನಾಂದಿಯಾಗುತ್ತದೆ. ಒಬ್ಬ ಪ್ರಸಿದ್ಧ ಕೈಗಾರಿಕೋದ್ಯಮಿ ಹೀಗೆಂದು ಚೀರಿದ್ದ. 'ಈ ಗೊತ್ತುವಳಿ ವಾಸ್ತವವಾದಲ್ಲಿ ಕಂಪನಿಗಳು ತಮ್ಮ ಸ್ಪರ್ಧಾತ್ಮಕತೆಯನ್ನು ಕಳೆದುಕೊಳ್ಳುತ್ತವೆ.' ಮತ್ತೊಬ್ಬ ಹೇಳಿದ, 'ಖಾಸಗೀ ವಲಯದ ಉತ್ಪಾದನೆಯು ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಾತ್ಮಕ ಅನುಕೂಲವನ್ನು ಕಳೆದುಕೊಳ್ಳಬೇಕಾಗುತ್ತದೆ.'

ವಿಡಿಯೋಕಾನ್ ಗುಂಪನ್ನು ಹೊರತುಪಡಿಸಿದರೆ ಅನೇಕ ಕೈಗಾರಿಕಾ ಪತಿಗಳು ಮೇಲಿನ ರೀತಿಯಲ್ಲೇ ಉಲ್ಲೇಖಿಸುತ್ತಾರೆ. ಭಾರತೀಯ ಕೈಗಾರಿಕೋದ್ಯಮಿಗಳ ಪ್ರಜ್ವಲವಾದ ಕಣ್ಣುಗಳಲ್ಲಿ ೨೫೦ ಮಿಲಿಯನ್‌ಗಿಂತಲೂ ಸ್ವಲ್ಪ ಹೆಚ್ಚಾಗಿರುವ ದಲಿತರು ವಂಶವಾಹಿನಿ ಸಮಸ್ಯೆಯಿಂದ ಹುಟ್ಟಿದ್ದು, ಸಹಜವಾಗಿಯೇ ಅದಕ್ಷರಾಗಿದ್ದಾರೆ. ಒಂದು ಕಾರ್ಪೋರೇಟ್ ಕಛೇರಿಯಲ್ಲಿ ದಲಿತನೊಬ್ಬನ ನೆರಳು ಕಂಡಂತೆಯೇ ಖಾಸಗೀ ಕೈಗಾರಿಕೆಯು ಬಹುರಾಷ್ಟ್ರೀಯ ಕಂಪನಿಗಳೊಡನೆ ತನ್ನ 'ದಕ್ಷತೆಯ ಅನುಕೂಲತೆ'ಯನ್ನು ಕಳೆದುಕೊಳ್ಳುತ್ತದೆ. ಈ ಸಂಗತಿಯನ್ನು ಹೆಚ್ಚೆಚ್ಚು ಪ್ರಚಾರ ಮಾಡುತ್ತಿರುವವರು ನೀಡುತ್ತಿರುವ ಅಭಿಪ್ರಾಯವೆಂದರೆ ದಲಿತರ 'ಮೈಲಿಗೆ' ಇಲ್ಲದೆ ಭಾರತೀಯ ಕೈಗಾರಿಕೆಗಳು ಜಾಗತಿಕವಾಗಿ ವಾಣಿಜ್ಯದಲ್ಲಿ ಅದ್ಭುತ ಸಾಧನೆಯನ್ನು ಮಾಡುತ್ತಿದ್ದು, ಬ.ರಾ.ಕಂ.ಗಳು ಅವುಗಳ ನಿದ್ದೆಗೆಡಿಸಿವೆಯೆಂದು ಕಾಣುತ್ತದೆ.

ಇಂದಿನವರೆಗೆ ಒಬ್ಬ ದಲಿತನೂ ಸಹ ಪ್ರಧಾನ ಮಂತ್ರಿಯವರ ಕಛೇರಿಯನ್ನು ನಿರ್ವಹಿಸಿದ್ದಿಲ್ಲ. ಹಣಕಾಸು ಸಚಿವಾಲಯ, ವಾಣಿಜ್ಯ ಮತ್ತು ಕೈಗಾರಿಕೆಯ ಮಂತ್ರಿಯಾಗಿ ಅಥವಾ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಿಲ್ಲ. ಹೀಗಿರುವಲ್ಲಿ ಜಾಗತಿಕ ಮಟ್ಟದ ವಾಣಿಜ್ಯದಲ್ಲಿ ಭಾರತೀಯ ಕೈಗಾರಿಕೆಯ ಪಾಲು ಶೇ. ೧ಕ್ಕಿಂತ ಕಡಿಮೆಯಿರುವುದು ನಾಗರಿಕತೆಯ ನಾಚಿಕೆಗೇಡು ಪ್ರಸಂಗವಲ್ಲವೇ? ಸತ್ಯ ಸಂಗತಿಯೆಂದರೆ ಭಾರತವು ೨೦೦೬-೦೭ರ ವೇಳೆಗಷ್ಟೆ ಜಾಗತಿಕ ವಾಣಿಜ್ಯದಲ್ಲಿ ಶೇ ೧ ರಷ್ಟನ್ನು ಮುಟ್ಟಬಹುದು. ಆದರೆ ಕೊನೆಯಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಪ್ರವೇಶಿಸಿರುವ ಚೈನಾ ದೇಶವು ಈಗಾಗಲೇ ಜಾಗತಿಕ ವಾಣಿಜ್ಯದಲ್ಲಿ ಶೇ ೫ ರಷ್ಟನ್ನು ಚಾಚಿಕೊಂಡಿದೆ. ಭಾರತೀಯ ಕೈಗಾರಿಕೋದ್ಯಮಿಗಳು ಆಲದ ಮರದಲ್ಲಿ ಸಿಂತೆಟಿಕ್ ಹಗ್ಗದಿಂದ ನೇಣು ಹಾಕಿಕೊಳ್ಳುವುದಕ್ಕೆ ಈ ಒಂದು ಸತ್ಯವೇ ಸಾಕು.

ಇದರಂತೆಯೇ ಸಮನಾದ ಮತ್ತೊಂದು ಸಂಗತಿಯೆಂದರೆ ಜಾಗತಿಕ ಐಟಿ ಕ್ಷೇತ್ರದಲ್ಲಿ ಭಾರತವು ಸೂಪರ್ ಪವರ್ ಎಂದು ಬೀಗುತ್ತಿರುವುದು ಖಾಸಗೀ ವಲಯವು ನಾವಿದನ್ನು ನಂಬಬೇಕೆಂದು ಬಯಸುತ್ತದೆ. ಸತ್ಯವೇನೆಂದರೆ ಜಾಗತಿಕ ಐಟಿ ಕ್ಷೇತ್ರದಲ್ಲಿ ಭಾರತೀಯ ಪಾಲು ಶೇ ೨ ರಷ್ಟು ಮಾತ್ರ. ಅದರ ಎಲ್ಲಾ ವಿದೇಶಿ ಗಳಿಕೆಯೆಲ್ಲವೂ ರತ್ನ ಮತ್ತು ಆಭರಣಗಳಿಂದ ಪಡೆದಷ್ಟೇ ಇದೆ. ಈ ಕೊನೆಯಲ್ಲಿ ಪ್ರಸ್ತಾಪಿಸಿದ ವಲಯವು ಕುಶಲಕರ್ಮಿಗಳ ದೀನ ದುಡಿವ ಸಂಸ್ಕೃತಿ ಮತ್ತು ಕೌಶಲ್ಯದಿಂದಷ್ಟೇ ಬೆಳೆಯುತ್ತಿರುವುದು. ಈ ಶ್ರಮಶಕ್ತಿಯಲ್ಲಿ ದಲಿತರ ಪಾಲು ಅತೀ ದೊಡ್ಡದು. ಅಮೇರಿಕಾದಲ್ಲಿ ಭಾರತೀಯ ವೃತ್ತಿಪರ ಐಟಿ ವ್ಯಕ್ತಿಗಳು ಬ್ಲೂ ಕಾಲರ್ ಕಾರ್ಮಿಕರೆಂದು ಪರಿಗಣಿತರಾಗಿರುವುದು ದುರಾದೃಷ್ಟವಶಾತ್ ನಮ್ಮ ಕೂಲಿ ಜನರೆಂದಷ್ಟೇ ಹೇಳಬೇಕು. ಕೆಲವೊಮ್ಮೆ ಭಾರತೀಯ ಐಟಿ ಕಂಪನಿಗಳನ್ನು 'ಜಾಗತಿಕ ತಿರುಗು ವ್ಯಾಪಾರಿ'ಗಳೆಂದು ವಿವರಿಸಲಾಗುತ್ತದೆ. ಆದ್ದರಿಂದ ಭಾರತೀಯ ಕೈಗಾರಿಕೋದ್ಯಮಿಗಳ 'ಸ್ಪರ್ಧಾತ್ಮಕ ಅನುಕೂಲ' ಎನ್ನುವುದೊಂದು ಮಹತ್ತ್ವದ ಸಂಗತಿಯೆಂದು ಪರಿಗಣಿಸುವುದರಲ್ಲಿ ಅಂಥ ಮಹತ್ತ್ವವೇನಿದೆ ಎಂದು ಪ್ರಶ್ನಿಸಲಾಗುತ್ತಿದೆ.

ಭಾರತದಿಂದ ರಫ್ತಾಗುವ ಚೀಲಗಳನ್ನೊಮ್ಮೆ ಪರೀಕ್ಷಿಸಿ ನೋಡಿ. ಉನ್ನತ ತಂತ್ರಜ್ಞಾನ ಮತ್ತು ತರಬೇತಿಯನ್ನು ಹೊಂದಿರುವಂಥ ಇಂಜಿನಿಯರಿಂಗ್ ವಸ್ತುಗಳು ಶೇ ೧೧.೬೨ರಷ್ಟು ಮಾತ್ರ ಗಳಿಕೆಯನ್ನು ತರುತ್ತಿದೆ. ಆದರೆ ಕ್ಯಾಥೊಲಿಕ್ ಪಂಥದ ಶಿಕ್ಷಣವನ್ನು ಹೊಂದಿರುವ ರತ್ನಗಳು ಮತ್ತು ಆಭರಣಗಳು (ಶೇ ೧೭.೫೧), ಸಮುದ್ರ ಆಹಾರ ಪದಾರ್ಥಗಳು (ಶೇ ೩.೩೨), ಕರಕುಶಲ ವಸ್ತುಗಳು (ಶೇ ೨) ಹಾಗೂ ಚರ್ಮ ಪದಾರ್ಥಗಳು (ಶೇ ೩.೭೧), ಭಾರತೀಯ ಒಟ್ಟಾರೆ ರಫ್ತಿನಲ್ಲಿ ಶೇ ೨೬.೫೪ ರಷ್ಟು ಗಳಿಕೆಯನ್ನು ಗಳಿಸಿ ಮಹತ್ತರ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದೆ. ಆದ್ದರಿಂದ ಭಾರತದ ಪ್ರದರ್ಶನದಲ್ಲಿ ಸ್ಪಷ್ಟವಾಗಿ ಗೋಚರಿಸುವ ಸಂಗತಿಯೆಂದರೆ

ಕೈಗಾರಿಕಾ ಸಾಮರ್ಥ್ಯವೆನ್ನುವುದು ಬೂಟಾಟಿಕೆಯ ಸಂಗತಿಯನ್ನು ಸಹ ನಾಚಿಕೆಗೀಡು ಮಾಡುತ್ತದೆ. ಅದು ಈ ದೇಶದಲ್ಲಿ ಸ್ವಾಭಾವಿಕ ಸಂಪನ್ಮೂಲಗಳು ಹೇರಳವಾಗಿದ್ದು ಒಂದು ಮಿಲಿಯನ್ ಆತ್ಮಗಳಿದ್ದಾಗ್ಯೂ ಕೊಚ್ಚಿಕೊಳ್ಳುವುದು ಏನೂ ಇಲ್ಲ. ಹೀಗೆ ನಾಗರಿಕತೆಯೊಡನೆ ಅತೀ ದೂರದ ಕೊಂಡಿಯೆಂಬಂತೆ ಈ ವಾದಗಳನ್ನು ಮಂಡಿಸಬಹುದಷ್ಟೇ.

ಇದೊಂದು ವ್ಯಂಗ್ಯವೇ ಸರಿ. ಒಬ್ಬ ವ್ಯಕ್ತಿಯು ಕೇವಲ ಗುಮಾಸ್ತ ಹುದ್ದೆಯನ್ನು ಸರ್ಕಾರದಲ್ಲಿ ಪಡೆಯಬೇಕಾದರೆ ಕಠಿಣ ಸ್ಪರ್ಧೆಯನ್ನು ಈಸಬೇಕಾಗುತ್ತದೆ. ಆದರೆ ಖಾಸಗಿ ವಲಯದಲ್ಲಿ ನೇಮಕಾತಿಯು ತುಂಬಾ ವಿರಳವಾಗಿ ಪಾರದರ್ಶಕವಾಗಿರುತ್ತದೆಯಷ್ಟೇ. ಭಾರತೀಯ ಖಾಸಗಿ ಕೈಗಾರಿಕೆಯ ಮನೋಭಾವವು ಕೇವಲ ನಾಗರಿಕತೆಯ ಸೋಗಷ್ಟೇ. ಈ ಸೋಗೇ ದಲಿತರ ವಿರುದ್ಧದ ಪೂರ್ವಾಗ್ರಹವು ಹೌದು. ಖಾಸಗಿ ವಲಯದ ಈ ವಾದಗಳಲ್ಲಿ ಮರೆಯಾಗಿರುವ ಸಂಗತಿಯೆಂದರೆ 'ಮೆರಿಟ್'. ಎಂಥ ವಿಪರ್ಯಾಸ!

ಖಾಸಗಿ ವಲಯವು 'ಮೆರಿಟನ್ನು' ದೂಷಿಸುತ್ತಿದೆಯೇ?

ನಾವು ಒಪ್ಪುತ್ತೇವೋ ಇಲ್ಲವೋ ವಿಶ್ವವು ತನ್ನದೇ ಆದ ತರ್ಕವನ್ನು ಹೊಂದಿದೆ. ಅದರ ನಿಯಮಗಳನ್ವಯ ಮೂರು ರೀತಿಯ ಜನರು ಅಂತಿಮವಾಗಿ ಕಾಣಸಿಗುತ್ತಾರೆ. ಮೊದಲ ಗುಂಪಿನವರು ಏನನ್ನಾದರೂ ಯಾರನ್ನಾದರೂ ಪ್ರೀತಿಸುತ್ತಾರೆ. ಅಥವಾ ಅವನ್ನು ತೀವ್ರವಾಗಿ ದ್ವೇಷಿಸಲಾರಂಭಿಸುತ್ತಾರೆ. ಎರಡನೇ ಗುಂಪಿನವರು ಒಂದು ನಿರ್ದಿಷ್ಟ ಸಂಗತಿ ಅಥವಾ ವ್ಯಕ್ತಿಗಳ ಬಗ್ಗೆ ನಿರ್ಲಿಪ್ತರಾಗಿರಲು ನಿರ್ಧರಿಸಿ, ನಿರಂತರವಾಗಿ ಹಾಗೆಯೇ ಇದ್ದುಬಿಡುತ್ತಾರೆ. ಕೊನೆಯದಾಗಿ, ಕೆಲವರು ಕೆಲವೊಂದು ಸಂಗತಿ/ಜನರ ಬಗ್ಗೆ ಅಣಕದ ನಗು ಸೂಸುತ್ತಿರುತ್ತಾರೆ ಮತ್ತು ಅಂಥ ಸಂಗತಿ/ವ್ಯಕ್ತಿಗಳ ಬಗ್ಗೆ ಕೇಳಿದಾಕ್ಷಣ ನಗಲಾರಂಭಿಸುತ್ತಾರೆ.

ಈ ಮೂರನೇ ವರ್ಗದಲ್ಲಿ ಸ್ಥಾನ ಗಿಟ್ಟಿಸಲು ಭಾರತೀಯ ಖಾಸಗೀ ವಲಯವು ಅರ್ಹತೆಯನ್ನು ಗಳಿಸಿಕೊಂಡಿದೆ. ಖಾಸಗಿ ವಲಯವನ್ನು ದಲಿತ ಧೈರಿಯು ದ್ವೇಷಿಸಲು ಹೆಣಗಬೇಕಾಗುತ್ತದೆ. ಆದರೆ ಅದನ್ನು ಪ್ರೀತಿಸುವ ಪ್ರಶ್ನೆಯೇ ಇಲ್ಲ. ಖಾಸಗೀ ಕ್ಷೇತ್ರದ ಶ್ರಮಶಕ್ತಿಯಲ್ಲಿ ದಲಿತರು ಪಾಲ್ಗೊಳ್ಳುವುದನ್ನು ವಿರೋಧಿಸುವ ಭಾರತೀಯ ಸಂಜಾತರು ಪ್ರತಿಪಾದಿಸುತ್ತಿರುವ ಸಂಗತಿಯೆಂದರೆ 'ಜಾಗತಿಕ ಮಾರುಕಟ್ಟೆಯಲ್ಲಿ ಭಾರತೀಯ ಕೈಗಾರಿಕೆಗಳು, ಸ್ಪರ್ಧಾತ್ಮಕ ಅನುಕೂಲವನ್ನು ಕಳೆದುಕೊಳ್ಳುತ್ತಾರೆ'. ಇಲ್ಲಿರುವ ತರ್ಕವೆಂದರೆ ದಲಿತರು ಸಹ ಭಾರತೀಯರಾಗಿದ್ದಾರೆ.

ಆದ್ದರಿಂದ ತಮ್ಮ 'ಮೈಲಿಗೆಯ ಅಸ್ತಿತ್ವದಿಂದಾಗಿ ಭಾರತೀಯ ಕೈಗಾರಿಕೆಯು ನಷ್ಟ ಹೊಂದುವುದನ್ನು ಅವರು ಇಷ್ಟಪಡುವುದಿಲ್ಲ. ಹೀಗಿರುವಲ್ಲಿ ಒಂದು ಸರಳ ವಿವರಣೆಯನ್ನು ದಲಿತರು ತಿಳಿಯಬಯಸುತ್ತಾರೆ: ನಾವು ಮಾತನ್ನಾಡುತ್ತಿರುವುದು ಎಂಥ ಸ್ಪರ್ಧೆಯ ಬಗ್ಗೆ, ಭಾರತೀಯ ಕೈಗಾರಿಕೆಯು ಸ್ಪರ್ಧಿಸುತ್ತಿರುವುದು ಅಥವಾ ಸ್ಪರ್ಧಿಸಲು ಇಷ್ಟಪಡುವುದು ಯಾರೊಡನೆ, ನಮ್ಮ ಖಾಸಗಿ ಕೈಗಾರಿಕೆಯು ಅಮೇರಿಕಾ ಮೂಲದ ಅತೀ ದೊಡ್ಡ ಗಾತ್ರದ ಪ್ರಯಾಣಿಕರನ್ನು ಹೊತ್ತೊಯ್ಯುವ ವಿಮಾನ ಜಂಬೋಜೆಟ್ ಬೋಯಿಂಗ್‌ನೊಡನೆ ಸ್ಪರ್ಧಿಸುವುದೇ!

ಕಳೆದ ಮೂವತ್ತೈದು ವರ್ಷಗಳಲ್ಲಿ ೧೨೦೦ ಬೋಯಿಂಗ್ ವಿಮಾನಗಳು ೨೦೨೫ ಬಿಲಿಯನ್ ಪ್ರಯಾಣಿಕರನ್ನು ಹೊತ್ತು ಹಾರಾಟ ನಡೆಸಿದೆ. ಅಂದರೆ ಶೇ ೪೦ ರಷ್ಟು ಜಗತ್ತಿನ ಜನರನ್ನು ಹೊತ್ತೊಯ್ದಿದೆ. ಈ ಕಂಪನಿಯು ಆಫ್ರಿಕಾ, ಅಮೇರಿಕದವರನ್ನಲ್ಲದೆ ಇತರ ಅಲ್ಪಸಂಖ್ಯಾತರು ಸೇರಿದಂತೆ ಶೇ ೧೮ ರಷ್ಟು ಉದ್ಯೋಗಸ್ಥರನ್ನು ತನ್ನ ಕಂಪನಿಯ ಒಟ್ಟಾರೆ ೨.೨೫ ಲಕ್ಷ ಉದ್ಯೋಗಿಗಳಲ್ಲಿ ಹೊಂದಿದ್ದಾರೆ. ಈ ಕಂಪನಿಯು ಡೈವರ್ಸಿಟಿ ಇಲಾಖೆಯನ್ನು ಹೊಂದಿದ್ದು ಆಫ್ರಿಕಾ, ಅಮೇರಿಕಾದವರನ್ನಲ್ಲದೆ ಇತರರನ್ನು ನೇಮಕ ಮಾಡಲು ವಿಶೇಷ ಪ್ರಯತ್ನ ನಡೆಸಲಾಗುತ್ತದೆ.

ಜಾಗತಿಕ ಜಗತ್ತಿನಲ್ಲಿ ಅತಿದೊಡ್ಡ ರೆವಿನ್ಯೂ ೨೧೦.೩೯ ಬಿಲಿಯನ್ ಡಾಲರ್ ಗಳಿಕೆಯನ್ನು ಮಾಡುತ್ತಿರುವ ಎಕ್ಸಾನ್ ಮೊಬೈಲ್ ಕಂಪನಿಯೊಡನೆ ಭಾರತದ ಕಂಪನಿಗಳು ಸ್ಪರ್ಧಿಸಲು ಸಾಧ್ಯವೇ? ಭಾರತದ ಅತಿ ದೊಡ್ಡ ಕಂಪನಿಯಾದ ರಿಲಯನ್ಸ್ ೨೨.೬ ಬಿಲಿಯನ್ ಡಾಲರ್ ಮೌಲ್ಯದಷ್ಟೇ ಆಸ್ತಿಯಲ್ಲಿ ೭೩೭ ಸ್ಥಾನವನ್ನು ಹೊಂದಿದೆ. ಈ ಎಕ್ಸಾನ್ ಮೊಬೈಲ್ ಕಂಪನಿಯ ಉದ್ಯೋಗಿಗಳಲ್ಲಿ ಆಫ್ರಿಕಾ, ಅಮೇರಿಕನ್ನರು ಅಥವಾ ಇತರರು ೨೮.೭೦ ಗಿಂತಲೂ ಹೆಚ್ಚಾಗಿದ್ದು ಅದರಲ್ಲಿ ಶೇ ೧೬.೯೦ ಯಷ್ಟೇ ದಲಿತರು ಮ್ಯಾನೇಜ್‌ಮೆಂಟ್ ಉದ್ಯೋಗದಲ್ಲಿದ್ದಾರೆ. ಅಥವಾ ೧೮೩.೬೩ ಸಂಪತ್ತನ್ನು ಹೊಂದಿರುವ ಮೋಟೆಕ್ಸ್ ಕಂಪನಿಯೊಡನೆ ಭಾರತೀಯ ಕಂಪೆನಿಗಳು ಸ್ಪರ್ಧಿಸುತ್ತವೆಯೇ! ಈ ಕಂಪನಿಯ ಒಟ್ಟಾರೆ ಶ್ರಮಶಕ್ತಿಯಲ್ಲಿ ಶೇ ೨೩ ರಷ್ಟು ಆಫ್ರಿಕಾ; ಅಮೇರಿಕನ್ನರಗಳು ಇದ್ದು ಶೇ ೧೯.೨೦ ರಷ್ಟು ಉನ್ನತ ಹಂತದಲ್ಲಿದ್ದಾರೆ.

ಅಮೇರಿಕಾದಲ್ಲಿ ಅಲ್ ಪಾರ್ಚೂನ್ ಐನೂರು ಕಂಪನಿಗಳು ಡೈವರ್ಸಿಟಿ ಪ್ರಯೋಜನವನ್ನು ಆಫ್ರಿಕಾ, ಅಮೇರಿಕನ್ನರಿಗೆ ಹಾಗೂ ಇತರ ದಮನಿತ ವರ್ಗಗಳಿಗೆ ನೀಡುತ್ತಿವೆ. ಎಲ್ಲ ಕಂಪನಿಗಳು ಡೈವರ್ಸಿಟಿ ಇಲಾಖೆಗಳನ್ನು ಹೊಂದಿದ್ದು ಅವೆಲ್ಲವೂ ಸಹ ತಮ್ಮ ಪಾತ್ರವನ್ನು ವೆಬ್‌ಸೈಟ್‌ಗಳಲ್ಲಿ ಪ್ರದರ್ಶಿಸುತ್ತಿವೆ. ಹಾಗೆಯೇ ಈ ಡೈವರ್ಸಿಟಿಯ ಸರಬರಾಜು ಡೀಲರ್‌ಶಿಪ್‌ಗಳಿಗೂ ವಿಸ್ತರಿಸಲಾಗಿದೆ. ಉದಾಹರಣೆಗೆ ೧೯೯೫ರಲ್ಲಿ ಜನರಲ್ ಮೋಟಾರ್ಸ್ ಕಂಪನಿಯು ಹಿಂದುಳಿದ ಸಮುದಾಯಗಳಿಂದ ಸು. ೨.೨೦ ಬಿಲಿಯನ್ ಡಾಲರ್ ಮೌಲ್ಯದ ಸರಕು ಮತ್ತು ಸೇವೆಗಳನ್ನು ಖರೀದಿಸಿತ್ತು. ಚಾರಿತ್ರಿಕವಾಗಿ ಹಿಂದುಳಿದ ಈ ವರ್ಗಗಳಿಗೆ ಅದು ೩.೨೦ ಡೀಲರ್‌ಶಿಪ್‌ಗಳನ್ನು ಮೀಸಲಿಟ್ಟಿತ್ತು.

ಭಾರತೀಯ ಪರಿಭಾಷೆಯಲ್ಲಿ ಹೇಳುವುದಾದರೆ ನಮ್ಮಲ್ಲನೇಕರು ಮುಸುರೆ ತೊಳೆಯಲು, ಮನೆ ಸ್ವಚ್ಛವಾಗಿಡಲು ಅಥವಾ ಅಡಿಗೆ ಮಾಡಲು ಮನೆ ಕೆಲಸದವರನ್ನು ತೆಗೆದುಕೊಳ್ಳುತ್ತೇವೆ. ಅಂದರೆ ಈ ಕೆಲಸಗಳಿಗೆ ನಾವು ಯೋಗ್ಯರಲ್ಲವೆಂದು ಅರ್ಥವೇ? ಅಥವಾ ಮನೆ ಕೆಲಸದ ಮಹಿಳೆಯರು ತಮ್ಮ ಮಾಲೀಕರೊಂದಿಗೆ ಸ್ಪರ್ಧೆಗಿಳಿದಿದ್ದೇವೆಂದು ಹೇಳಿಕೊಳ್ಳುತ್ತಾ ತಮ್ಮ ಮನೆಗಳಿಗೆ ಹಿಂತಿರುಗುವರೇ? ನಾವ್ಯಾರು ಪಾತ್ರೆ ತೊಳೆಯುವುದಿಲ್ಲ, ಮನೆ ಸ್ವಚ್ಛ ಮಾಡುವುದಿಲ್ಲ ಮತ್ತು ಅಡಿಗೆ ಮಾಡಲು ಇಚ್ಛಿಸುವುದಿಲ್ಲ. ಏಕೆಂದರೆ ಈ ಕೆಲಸಗಳು ನಮಗೆ ಇಷ್ಟವಾಗುವುದಿಲ್ಲ. ನಾವು ನಮ್ಮ ಸೌಲಭ್ಯಗಳಲ್ಲಿ ಖುಷಿ ಪಡುತ್ತೇವೆ. ಅದಕ್ಕಾಗಿ ಅನೇಕ ಕೆಲಸಗಳನ್ನು ಮಾಡುತ್ತೇವೆ.

ಅಮೇರಿಕಾದಲ್ಲಿನ ಖಾಸಗೀ ವಲಯದ ಉದ್ಯೋಗ ನೇಮಕಾತಿಯಲ್ಲಿ ಡೈವರ್ಸಿಟಿ ಪಾತ್ರವು ಎದ್ದು ಕಾಣುತ್ತಿದೆ. ೧೯೯೮ರ ವೇಳೆಗೆ ಅಮೇರಿಕಾದ ಸಂಘಟಿತ ಖಾಸಗೀ ವಲಯದಲ್ಲಿ ಆಫ್ರಿಕಾ-ಅಮೇರಿಕನ್ನರು, ಶೇ ೨೭.೩೭ ರಷ್ಟು ಇದ್ದು ಅವರ ಜನಸಂಖ್ಯೆಗನುಗುಣವಾಗಿಯೇ ಆ ಶ್ರಮಶಕ್ತಿಯೂ ಇತ್ತು. ಮ್ಯಾನೇಜ್‌ಮೆಂಟ್ ಮತ್ತು ಕಛೇರಿ ಹಂತದಲ್ಲೂ ಅವರ ಪಾಲು ಶೇ ೧೨.೯೫ ರಷ್ಟಿತ್ತು. ಅಲ್ಲದೆ ವೃತ್ತಿಪರ ವರ್ಗದಲ್ಲಿ ಶೇ ೧೭.೪೦ ಯಷ್ಟಿತ್ತು. ಅಮೇರಿಕಾದ ಮಾಧ್ಯಮಗಳು ಮತ್ತು ಹಾಲಿವುಡ್ ಸಹ ಡೈವರ್ಸಿಟಿಯನ್ನು ಅನುಸರಿಸುತ್ತಿವೆಯೆಂದರೆ ಅಚ್ಚರಿಯೇನು ಇಲ್ಲ. ಭಾರತೀಯ ಕಂಪನಿಗಳು ಮುಚ್ಚಿಡುವ ಸಂಗತಿಯೇನೆಂದರೆ ಹಾಗೂ ನಮಗೆಲ್ಲಾ ತಿಳಿದಿರುವ ಸಂಗತಿಯೆಂದರೆ ಭಾರತೀಯ ಕಂಪನಿಗಳು ತಮಗೊಂದು ಜಾಗಕ್ಕಾಗಿ ಅಷ್ಟೇ ಕಾತರಿಸುತ್ತಿರುವುದು.

ತುಂಬಾ ಸರಳವಾದ ಸತ್ಯ, ಸತ್ಯದಂತೆಯೇ ಸರಳವೂ ಹೌದು. ಭಾರತೀಯ ಪರಿಭಾಷೆಯಲ್ಲಿ ಹೇಳುವುದಾದರೆ ನಮ್ಮಲ್ಲನೇಕರು ಮುಸುರೆ ತೊಳೆಯಲು, ಮನೆ ಸ್ವಚ್ಛವಾಗಿಡಲು ಅಥವಾ ಅಡಿಗೆ ಮಾಡಲು ಮನೆ ಕೆಲಸದವರನ್ನು ತೆಗೆದುಕೊಳ್ಳುತ್ತೇವೆ. ಅಂದರೆ ಈ ಕೆಲಸಗಳಿಗೆ ನಾವು ಯೋಗ್ಯರಲ್ಲವೆಂದು ಅರ್ಥವೇ? ಅಥವಾ ಮನೆ ಕೆಲಸದ ಮಹಿಳೆಯರು ತಮ್ಮ ಮಾಲೀಕರೊಂದಿಗೆ ಸ್ಪರ್ಧೆಗಿಳಿದಿದ್ದೇವೆಂದು ಹೇಳಿಕೊಳ್ಳುತ್ತಾ ತಮ್ಮ ಮನೆಗಳಿಗೆ ಹಿಂತಿರುಗುವರೇ? ನಾವ್ಯಾರು ಪಾತ್ರೆ ತೊಳೆಯುವುದಿಲ್ಲ, ಮನೆ ಸ್ವಚ್ಛ ಮಾಡುವುದಿಲ್ಲ ಮತ್ತು ಅಡಿಗೆ ಮಾಡಲು ಇಚ್ಛಿಸುವುದಿಲ್ಲ. ಏಕೆಂದರೆ ಈ ಕೆಲಸಗಳು ನಮಗೆ ಇಷ್ಟವಾಗುವುದಿಲ್ಲ. ನಾವು ನಮ್ಮ ಸೌಲಭ್ಯಗಳಲ್ಲಿ ಖುಷಿ ಪಡುತ್ತೇವೆ. ಅದಕ್ಕಾಗಿ ಅನೇಕ ಕೆಲಸಗಳನ್ನು ಮಾಡುತ್ತೇವೆ.

ಈಗ, ಸ್ವ ಆತ್ಮರತಿಯಲ್ಲಿ ತೊಡಗಿರುವ ನಮ್ಮ ಖಾಸಗಿ ವಲಯದ ಮಾಲೀಕರು ನಾವು ನಮ್ಮ ಕೆಲಸದಾಳುಗಳಿಗೆ ನೀಡುವ ಮರ್ಯಾದೆಯನ್ನಷ್ಟೇ ಪಡೆಯಲರ್ಹರಿದ್ದಾರೆ. ನಾವು ಹೇಗೆ ಅವರಿಗೆ ಕಮ್ಮಿ ವೇತನ ನೀಡುತ್ತೇವೋ ಹಾಗೆಯೇ ಅಮೇರಿಕಾ ಮತ್ತು ಪಾಶ್ಚಾತ್ಯ ಕಂಪನಿಗಳು ಭಾರತೀಯ ಕಂಪನಿಗಳ ಪ್ರವೇಶಕ್ಕೆ ದುರಹಂಕಾರಿಗಳಾಗಿ ವರ್ತಿಸುತ್ತವೆ. ನಮ್ಮ ಬದುಕಿನಲ್ಲಿ ಮನೆ ಕೆಲಸದವರು ಇದ್ದಂತೆ ಭಾರತೀಯ ಮತ್ತು ಚೈನಾ ಕೈಗಾರಿಕೆಗಳು ಜಾಗತಿಕ ಮಟ್ಟದಲ್ಲಿ ಪಾತ್ರ ವಹಿಸುತ್ತಿವೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅಮೇರಿಕಾದವರು ಅಂತರಿಕ್ಷಾ ವಾಹನವನ್ನು ಸಿದ್ಧಗೊಳಿಸುವಾಗ, ಭಾರತೀಯ ಕಂಪನಿಗಳು ಅದಕ್ಕೆ ನೆಟ್ಟು-ಬೋಲ್ಟ್‌ಗಳನ್ನು ಸರಬರಾಜು ಮಾಡಲು ಕೇಳಿಕೊಳ್ಳುತ್ತಾರೆ. ಅಲ್ಲೂ ಅವುಗಳ ವಿನ್ಯಾಸ ಮತ್ತು ಪದಾರ್ಥ ಆ ಕಂಪನಿಗಳವರೇ ನೀಡುತ್ತಾರೆ. ಭಾರತೀಯ ಕಂಪನಿಗಳು ತಮ್ಮ ಶ್ರಮಶಕ್ತಿಯನ್ನಷ್ಟೇ ಖರ್ಚು ಮಾಡಬೇಕಾಗಿದೆ. ಏಕೆಂದರೆ ಅವರ ಬುದ್ಧಿಮತ್ತೆ ಅಷ್ಟೆಯೆಂದು ಭಾವಿಸಲಾಗುತ್ತದೆ.

ಒಳ್ಳೆಯ ಯಂತ್ರ ಚಾಲಕರ ರಾಷ್ಟ್ರವೆಂದು ಒಟ್ಟಾರೆಯಾಗಿ ಭಾರತೀಯರನ್ನು ಕಾಣಲಾಗುತ್ತದೆ. ಜಾಸ್ತಿಯೆಂದರೆ ವಿದೇಶದಿಂದ ಸರಬರಾಜಾದ ನಿರ್ದಿಷ್ಟ ವಸ್ತುಗಳನ್ನು ತಯಾರಿಸಲಷ್ಟೆ ಭಾರತೀಯರನ್ನು ನಂಬಿರುವುದು. ಯಂತ್ರಗಳನ್ನು

ತಯಾರಿಸುವ ಯಂತ್ರಗಳ ಉತ್ಪಾದನೆಯನ್ನು ಭಾರತೀಯ ಕೈಗಾರಿಕೆ ತಯಾರಿಸುತ್ತದೆಯೆಂದು ನಂಬಲಾಗುವುದಿಲ್ಲ. ಈ ದಿಸೆಯಲ್ಲಿ ಒಬ್ಬ ಐಐಟಿ ಪದವೀಧರ ಅಥವಾ ಯಾವುದೇ ಮೂರನೇ ದರ್ಜೆಯ ಪಾಲಿಟೆಕ್‌ಗಳಿಂದ ಹೊರಬಂದ ಡಿಪ್ಲೊಮಾ ಪಡೆದವನೂ ಸಹ ಅದೇ ಪಾತ್ರವನ್ನಷ್ಟೆ ಮಾಡಬಲ್ಲ. ಆದ್ದರಿಂದ ಒಬ್ಬ ದಲಿತ ಐಐಟಿ ವ್ಯಕ್ತಿ ಮತ್ತು ಬ್ರಾಹ್ಮಣ ಡಿಪ್ಲೊಮಾ ಹೊಂದಿದವ, ಅಥವಾ ಒಬ್ಬ ಬ್ರಾಹ್ಮಣ ಐಐಟಿ ಮತ್ತು ದಲಿತ ಡಿಪ್ಲೊಮಾ ಹೊಂದಿದವ ಇಬ್ಬರೂ ಅದೇ ಕೆಳದರ್ಜೆಯ ಸ್ಥಾನವನ್ನಷ್ಟೆ ಪಡೆಯಲರ್ಹರು.

ಅಂದರೆ 'ಮೆರಿಟ್' ಎನ್ನುವ ಪರಿಕಲ್ಪನೆ ಕೇವಲ ಯಂತ್ರ ನಡೆಸುವ ಸ್ಥಾನಕ್ಕಷ್ಟೆ ಹೊರತು ಬೇರೇನಕ್ಕೂ ಅಲ್ಲ. ಸತ್ಯ ಅದರದ್ದೇ ಆದ ಮೌಲ್ಯವನ್ನು ಹೊಂದಿದೆ. ಸತ್ಯವಂತರಾಗಿರುವುದರಿಂದ ಸುಳ್ಳಿನ ಅಪ್ರಮಾಣಿಕ ಬದುಕನ್ನು ತಪ್ಪಿಸಬಹುದು. ಏಕೆಂದರೆ ಸುಳ್ಳುಗಾರರಿಗೆ ಎಂದೂ ನಿರಾಶೆ ಕಟ್ಟಿಟ್ಟದ್ದು. ಭಾರತೀಯ ಖಾಸಗೀ ವಲಯ ತೆರದ ಮನಸ್ಸಿನಿಂದ ಹೇಳಬೇಕು, 'ನಾವು ಹೊಂದಿರುವ ಸಂಪತ್ತು ನಾವು ಸೃಷ್ಟಿಸಿದ್ದಲ್ಲ ಅದು ವಂಶಪಾರಂಪರ್ಯದಿಂದ ಬಂದಿದ್ದು ನಾವದನ್ನು ನಮ್ಮ ಮಕ್ಕಳಿಗಾಗಿ ಶೇ ೧೦೦ ರಷ್ಟು ಮೀಸಲಿಡುತ್ತೇವೆ' ಇಲ್ಲವಾದಲ್ಲಿ ಸುಳ್ಳಿನ ಕಂತೆ ಉಳಿದು ಹಾಸ್ಯಾಸ್ಪದವಾಗುವುದು ಏಕೆ?

'ಮೆರಿಟ್' ಅಳೆಯುವುದು ಮತ್ತು ಅದರ ಪ್ರತಿಪಾದಕರು :

ಉದ್ಯೋಗ ಮೀಸಲಾತಿಗೆ ಖಾಸಗೀ ವಲಯದ ಮನೋಭಾವವನ್ನು ಯಾರೂ ಒಪ್ಪಲು ಸಾಧ್ಯವಿಲ್ಲ ಏಕೆ? ಯಾವುದೇ ಪಕ್ಷ ವಹಿಸದೆ ವಿಶ್ಲೇಷಿಸಿದಲ್ಲಿ ದಲಿತರು ಕಂಪನಿಗಳೊಳಗೆ ಬಂದರೆ 'ಸ್ಪರ್ಧಾತ್ಮಕ ಅನುಕೂಲ' ಎನ್ನುವುದನ್ನು ಖಾಸಗಿ ವಲಯ ಕಳೆದುಕೊಳ್ಳುತ್ತದೆ ಎನ್ನುವ ದೃಷ್ಟಿ ಹುಚ್ಚಿನ ಪರಮಾವಧಿಯಷ್ಟೆ ಕಾಣುತ್ತದೆ. ನಮಗೆ ಗೊತ್ತಿರುವಂತೆ ಜಾಗತಿಕ ಮಾರುಕಟ್ಟೆಯಲ್ಲಿ ಶೇ ೧ ರಷ್ಟು ಪಾಲಿರುವಾಗ ಭಾರತವು 'ಅನುಕೂಲ'ವನ್ನು ಕಳೆದುಕೊಳ್ಳುತ್ತದೆ ಎನ್ನುವುದಕ್ಕೆ ಯಾವುದೇ ಆಧಾರ ದೊರೆಯದು. ಇದರಲ್ಲೇನು ವೈಭವವಿಲ್ಲ, ಬದಲು ನಾಚಿಕೆಯಷ್ಟೆ ಖಾಸಗೀ ವಲಯ ತನ್ನ ಶಿಲುಬೆಯನ್ನು ಹೊರಲೇಬೇಕಾಗುತ್ತದೆ.

ಸಾರ್ವಜನಿಕ ವಲಯದ ಎ ದರ್ಜೆ ಉದ್ಯೋಗದಲ್ಲಿ ದಲಿತರು ಶೇ ೧೨ ರಷ್ಟಿದ್ದಾರೆಂಬುದು ನಮಗೆ ಗೊತ್ತಿದೆ. ಹೀಗಿರುವಲ್ಲಿ ಸರ್ಕಾರದ ಸಾರ್ವಜನಿಕ ವಲಯ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂದರೆ ದೂರುವುದು ಯಾರನ್ನು? ಶೇ ೧೨ ರಷ್ಟಿರುವ ದಲಿತರನ್ನೇ ಅಥವಾ 'ಜ್ಯೇಷ್ಠತೆಯ' ಬೆನ್ನೇರಿರುವ ಶೇ ೮೮ ರಷ್ಟಿರುವವರನ್ನೇ? ದಲಿತರು ಒಳ್ಳೆಯ ಕೆಲಸ ಮಾಡುವುದಿಲ್ಲ ಎನ್ನುವುದಕ್ಕೆ ಯಾವುದೇ ರೀತಿಯ ಅಂಕಿ-ಅಂಶಗಳಾಗಲೀ ಅಥವಾ ವೈಜ್ಞಾನಿಕ ಅಧ್ಯಯನಗಳಾಗಲಿ ಇಲ್ಲ. ಆದರೂ 'ಉದ್ಯೋಗ ಮೀಸಲಾತಿ ಉತ್ಪಾದಕತೆಯನ್ನು ತಗ್ಗಿಸುತ್ತದೆ' ಎಂದು ಭಾರತೀಯ ಕೈಗಾರಿಕೆ ಕೂಗುತ್ತಿದೆ.

ಭಾರತೀಯ ಉದ್ಯಮಪತಿಗಳು ಹೇಳುವ ಮಾತಿನಲ್ಲಿ ಒಂದು ಅಂಶದ ಬಗ್ಗೆ ನನ್ನ ಸಮ್ಮತಿ ಇದೆ. ಅಂದರೆ ದಲಿತರು ಪ್ರತಿಭಾವಂತರೇನು ಅಲ್ಲ ಎಂಬ ಅವರ ದೃಢವಾದ ನಿಲುವು. ಅದರ ತರ್ಕ ಹೀಗಿರುತ್ತದೆ. 'ದಲಿತ ವಿದ್ಯಾರ್ಥಿಯೊರ್ವನನ್ನು ದಲಿತೇತರ ವಿದ್ಯಾರ್ಥಿಯೊಡನೆ ಹೋಲಿಸಿದಲ್ಲಿ ಶಾಲಾ-ಕಾಲೇಜು-ವಿಶ್ವವಿದ್ಯಾಲಯದವರೆಗೂ ಅಂಕ ಗಳಿಸಿರುವುದು ಕಮ್ಮಿಯೇ'. ಅಂದರೆ ಅಂಕಪಟ್ಟಿ ಅಭ್ಯರ್ಥಿಯ ಪ್ರತಿಭಾವಂತಿಕೆಯನ್ನು ತೋರಿಸಿಬಿಡುತ್ತದೆ. ಸಾಮಾಜಿಕ ಪ್ರಜ್ಞೆಯಿರುವ ಯಾರೇ ಆಗಲಿ ಮೇಲಿನ ತರ್ಕವಾದ ಅಂಕಪಟ್ಟಿ ಬುದ್ಧಿವಂತಿಕೆಯನ್ನು ತಿರಸ್ಕರಿಸಲಾಗದು. ಏಕೆಂದರೆ ಸಾಮಾನ್ಯವಾಗಿ ದಲಿತರು ಅನೇಕ ಬಾರಿ ಕಮ್ಮಿ ಅಂಕವನ್ನು ಪಡೆಯುತ್ತಾರೆ. ಹೀಗಿರುವಾಗ ದಲಿತ ಡೈರಿ ಒಂದು ಸಣ್ಣ ಸವಾಲನ್ನು ಭಾರತೀಯ ಕೈಗಾರಿಕೆಗೆ ಒಡ್ಡಲು ಬಯಸುತ್ತದೆ. ಈ ಕೆಳಗಿನದ್ದನ್ನು ಅರ್ಥೈಸಲು ಮತ್ತು ಯೋಚಿಸಲು ಪ್ರಯತ್ನಿಸಿ :

ಸ್ವ ಆತ್ಮರತಿಯಲ್ಲಿ ತೊಡಗಿರುವ ನಮ್ಮ ಖಾಸಗಿ ವಲಯದ ಮಾಲೀಕರು ನಾವು ನಮ್ಮ ಕೆಲಸದಾಳುಗಳಿಗೆ ನೀಡುವ ಮರ್ಯಾದೆಯನ್ನಷ್ಟೇ ಪಡೆಯಲರ್ಹರಿದ್ದಾರೆ. ನಾವು ಹೇಗೆ ಅವರಿಗೆ ಕಮ್ಮಿ ವೇತನ ನೀಡುತ್ತೇವೋ ಹಾಗೆಯೇ ಅಮೇರಿಕಾ ಮತ್ತು ಪಾಶ್ಚಾತ್ಯ ಕಂಪನಿಗಳು ಭಾರತೀಯ ಕಂಪನಿಗಳ ಪ್ರವೇಶಕ್ಕೆ ದುರಹಂಕಾರಿಗಳಾಗಿ ವರ್ತಿಸುತ್ತವೆ. ನಮ್ಮ ಬದುಕಿನಲ್ಲಿ ಮನೆ ಕೆಲಸದವರು ಇದ್ದಂತೆ ಭಾರತೀಯ ಮತ್ತು ಚೈನಾ ಕೈಗಾರಿಕೆಗಳು ಜಾಗತಿಕ ಮಟ್ಟದಲ್ಲಿ ಪಾತ್ರ ವಹಿಸುತ್ತಿವೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅಮೇರಿಕಾದವರು ಅಂತರಿಕ್ಷಾ ವಾಹನವನ್ನು ಸಿದ್ಧಗೊಳಿಸು ವಾಗ, ಭಾರತೀಯ ಕಂಪನಿಗಳು ಅದಕ್ಕೆ ನೆಟ್ಟು-ಬೋಲ್ಟ್‌ಗಳನ್ನು ಸರಬರಾಜು ಮಾಡಲು ಕೇಳಿಕೊಳ್ಳುತ್ತಾರೆ. ಅಲ್ಲೂ ಅವುಗಳ ವಿನ್ಯಾಸ ಮತ್ತು ಪದಾರ್ಥ ಆ ಕಂಪನಿಗಳವರೇ ನೀಡುತ್ತಾರೆ. ಭಾರತೀಯ ಕಂಪನಿಗಳು ತಮ್ಮ ಶ್ರಮಶಕ್ತಿಯನ್ನಷ್ಟೇ ಖರ್ಚು ಮಾಡಬೇಕಾಗಿದೆ. ಏಕೆಂದರೆ ಅವರ ಬುದ್ಧಿಮತ್ತೆ ಅಷ್ಟೆಯೆಂದು ಭಾವಿಸಲಾಗುತ್ತದೆ.

ಭಾರತೀಯ ಕೈಗಾರಿಕೆಗೆ ದಲಿತ ಡೈರಿಯ ಸವಾಲು

ಎ. ಒಂದು ಸಾವಿರ ಸ್ನಾತಕೋತ್ತರ ಪದವೀಧರರ ಪಟ್ಟಿಯನ್ನು ತಯಾರಿಸಿ. ಅದರಲ್ಲಿ ೫೦೦ ದಲಿತರು ಉಳಿದವರು ದಲಿತೇರರು. ಇವರೆಲ್ಲಾ ಭಿನ್ನ ಶಿಸ್ತುಗಳಿಂದ ಬಂದವರಾಗಿರಲಿ. ಐಐಟಿ, ಎಐಐಎಂಎಸ್‌ಗಳವರು ಇರಲಿ. ಈ ಎಲ್ಲಾ ಕೇಸುಗಳಲ್ಲಿ ದಲಿತರು ಶೇ ೬೫ ರಷ್ಟು ಗಳಿಸಿದರೆ ಉಳಿದವರು ಶೇ ೭೫ ರಷ್ಟನ್ನು ಪಡೆದಿರುತ್ತಾರೆ. ಹಾಗೆಯೇ ಪದವಿ ಹಂತಕ್ಕೆ ಬನ್ನಿ. ದಲಿತೇತರರು ಶೇ ೮೦ ರಷ್ಟನ್ನು ಗಳಿಸಿದರೆ ದಲಿತರು ಶೇ ೬೦ ಅನ್ನು ಪಡೆದಿರುತ್ತಾರೆ. ಹಾಗೆಯೇ ಪಿಯುಸಿ ಹಂತದಲ್ಲಿ ನಾವೇನನ್ನು ಕಾಣುತ್ತೇವೆ?

ದಲಿತೇತರರು ಶೇ ೮೫ ರಷ್ಟು ಅಂಕ ಪಡೆದರೆ ದಲಿತರು ಕೇವಲ ಶೇ ೫೫ ರಷ್ಟನ್ನು ಪಡೆದು ತೀರ ಹಿಂದೆ ಬೀಳುತ್ತಾರೆ. ಹಾಗೆಯೇ ಪ್ರೌಢಶಾಲಾ ಶಿಕ್ಷಣಕ್ಕೆ ಬಂದರೂ ದಲಿತೇತರರು ಶೇ ೯೦ ರಷ್ಟು ಅಂಕ ಪಡೆದರೆ ದಲಿತರು ಶೇ ೫೦ಕ್ಕೆ ನಿಲ್ಲುತ್ತಾರೆ.

ಬಿ. ಪ್ರಮೇಯ : ಈ ಮೇಲಿನ ಸಂಗತಿಗಳು ಕೆಲವು ಆಸಕ್ತಿದಾಯಕ ಫಲಿತಾಂಶಗಳನ್ನು ಹೇಳುತ್ತಿವೆ. ಶೇ ೪೦ರಷ್ಟು ಅಂಕಗಳ ವ್ಯತ್ಯಾಸವು ದಲಿತರು ಮತ್ತು ದಲಿತೇತರ ನಡುವೆ ಪ್ರೌಢಶಾಲಾ ಹಂತದಲ್ಲಿ ಕಾಣುತ್ತದೆ. ಆದರೆ ಸ್ನಾತಕೋತ್ತರ ಪದವಿ ಹಂತಕ್ಕೆ ಬರುವಾಗ ಅದು ಶೇ ೧೦ ರಲ್ಲಿ ನಿಲ್ಲುತ್ತದೆ. ಸೂಪರ್ ಸ್ನಾತಕೋತ್ತರ ಹಂತವೇನಾದರೂ ಇದ್ದಲ್ಲಿ ಅದು ಶೇ ೫ ಕ್ಕೆ ನಿಲ್ಲಬಹುದು.

ಇಲ್ಲಿರುವ ಪ್ರಮೇಯವೆಂದರೆ ಉದ್ಯೋಗ ನೇಮಕಾತಿಯ ನಂತರ ದಲಿತರು ಹೇಗೆ ಕೆಲಸ ನಿಭಾಯಿಸುತ್ತಿದ್ದಾರೆಂದು ಪರೀಕ್ಷೆಯಿಟ್ಟಲ್ಲಿ ಅವರು ಶೇ ೯೦ ರಿಂದ ಆರಂಭಿಸಬಹುದು ಮತ್ತು ದಲಿತೇತರರು ಶೇ ೫೦ ರಿಂದ ಆರಂಭಿಸಬಹುದು. ದಲಿತರು ಹೆಚ್ಚೆಚ್ಚು ಸುಧಾರಿಸುತ್ತಾ ಸಾಗಿದರೆ, ದಲಿತೇತರರು ಕೆಳ ಹಂತದತ್ತ ಸಾಗುತ್ತಿರುತ್ತಾರೆ. ಅಂದರೆ ದಲಿತರು ವರ್ಷ ಕಳೆದಂತೆ ಪಕ್ವತೆಯನ್ನು ಗಳಿಸಿಕೊಂಡು ದಲಿತೇತರರನ್ನು ಮೀರಿಸಿ ನಿಲ್ಲುತ್ತಾರೆ. ಆದರೆ ದಲಿತೇತರರು ಒಂದು ಮಟ್ಟದಲ್ಲಿ ತಟಸ್ಥರಾಗಿಬಿಡುತ್ತಾರೆ.

ಸಿ. ಸಿದ್ಧಾಂತ : ದಲಿತೇತರರು ವಯಸ್ಸಾದಂತೆ ತಟಸ್ಥ ಪ್ರವೃತ್ತಿ ಕಾಯಿಲೆಗೆ ಸಿಲುಕುತ್ತಾರೆ. ಸಹಜವಾಗಿ ಬರುವಂತಹ ಬೇಡಿಕೆಗಳಿಗೆ ಅವರ ಮೆದುಳು ಸ್ಪಂದಿಸಲು ತಿರಸ್ಕರಿಸುತ್ತದೆ. ಆದ್ದರಿಂದ ಅವರ್‍ಯಾರು ಉತ್ಪಾದನೆ ಮತ್ತು ಸಂಪತ್ತನ್ನು ಸೃಷ್ಟಿಸುವ ಪ್ರಕ್ರಿಯೆಯಲ್ಲಿ ಸಕ್ರಿಯರಾಗಲು ಸಾಧ್ಯವಾಗದು. ಆದರೆ ದಲಿತರು ತಮ್ಮ ಪ್ರವೃತ್ತಿಯಿಂದಲೇ ಆಧುನಿಕ ತಂತ್ರಜ್ಞಾನ ಮತ್ತು ವಿಜ್ಞಾನದ ಬೇಡಿಕೆಗಳಿಗೆ ಸ್ಪಂದಿಸುತ್ತಾ, ಸವಾಲುಗಳಿಗೆ ದಿಟ್ಟ ಉತ್ತರ ನೀಡುತ್ತಾರೆ.

ಡಿ. ಸತ್ಯ : ದಲಿತ ಡೈರಿಯು ತರ್ಕ, ವೈಜ್ಞಾನಿಕ ವಿಶ್ಲೇಷಣೆಯಲ್ಲಿ ಬೇರೂರಿರುವುದರಿಂದ ಅತಾರ್ಕಿಕ, ಅವೈಜ್ಞಾನಿಕ ಚಿಂತನೆಗೆ ಅವಕಾಶ ಇಲ್ಲ. ಆದ್ದರಿಂದ ದಲಿತ ಡೈರಿಯು, ಅಂಕಪಟ್ಟಿಯೇ ಪ್ರತಿಭೆ, ಪ್ರಾವಿಣ್ಯತೆ ಮತ್ತು ಸಾಮರ್ಥ್ಯವನ್ನು ಅಳೆಯುತ್ತದೆಯೆಂದು ನಂಬುವುದಿಲ್ಲ. ದಲಿತೇತರರು ವಯಸ್ಸಾದಂತೆ ದಡ್ಡರಾಗುವುದನ್ನು ಒಪ್ಪಿಕೊಳ್ಳಲಾಗದು. ಹಾಗೆಯೇ ದಲಿತರು ವಯಸ್ಸಾದಂತೆ ಚುರುಕಾಗುತ್ತಾರೆ ಎನ್ನುವುದನ್ನು ಒಪ್ಪಿಕೊಳ್ಳಲಾಗದು. ಈ ಮೇಲಿನದ್ದನ್ನು ಏನಾದರೂ ಮಾನವರಿಗೆ—ಅನ್ವಯಿಸುವುದಾದರೆ ದಲಿತರು – ದಲಿತೇತರರಿಬ್ಬರಿಗೂ ಅನ್ವಯಿಸಬೇಕಾಗುತ್ತದೆ.

ಇ. ವಾಸ್ತವ : ದಲಿತರು ಬೆಳೆಯುತ್ತಿರುವ ವ್ಯತಿರಿಕ್ತ ಸಾಮಾಜಿಕ ಪರಿಸರವನ್ನು ಕ್ಷಣ ಮರೆತುಬಿಡಿ. ದಲಿತ ಪೋಷಕರ ಶಿಕ್ಷಣ, ಮನೆಯಲ್ಲಿನ ಅನುಕೂಲ, ಶಾಲೆಯ ಗುಣಮಟ್ಟ ಇವುಗಳನ್ನು ಮಾತ್ರ ನೆನಸಿಕೊಳ್ಳಿ. ಶಾಲೆ ಅಥವಾ ಕಾಲೇಜುಗಳಲ್ಲಿ ನೀಡುವ ಅಂಕಪಟ್ಟಿ ಕೇವಲ ಕೃತಕವಾದ ಬುದ್ಧಿಯನ್ನು ಟ್ಯೂಷನ್, ಸಾಹಿತ್ಯ ಮತ್ತು ಪೋಷಕರ ಹಾರೈಕೆಯಲ್ಲಿ ಉತ್ಪಾದಿಸುವ ವಸ್ತು ಅಷ್ಟೆ. ಈ ಪರಿಸ್ಥಿತಿಯನ್ನು ದಲಿತರ ವಿರೋಧ ಬಳಸುವುದು, ಆಟಗಾರರು ಉದ್ದೀಪನಗಳನ್ನು ಸೇವಿಸಿದಂತೆ ಅಷ್ಟೆ

ಎಫ್. ಮುಕ್ತಾಯ : ನಗರ ಕೇಂದ್ರಗಳು, ಹಾಸ್ಟೆಲ್‌ಗಳು ಮತ್ತು ಅನುಕೂಲಕರ ಶಿಕ್ಷಣ ಪರಿಸರಗಳಿಗೆ ದಲಿತ ವಿದ್ಯಾರ್ಥಿಗಳು ಬಂದರೆ ಅವರ ಸಾಮರ್ಥ್ಯ ವೃದ್ಧಿಸುತ್ತದೆ. ಅಲ್ಲಿ ಅವರ ಪ್ರತಿಭೆಗೆ ಭೌತಿಕ ಆಯಾಮ ದೊರೆಯುತ್ತದೆ ಮತ್ತು ಹಾಗೆಯೇ ಸಾಧಿಸುತ್ತಾರೆ. ನೇಮಕಾತಿಯಾದಾಗ ಅವರು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಾರೆ. ಅವಕಾಶ ನೀಡಿದಲ್ಲಿ ದಲಿತೇತರರಿಗಿಂತ ಉತ್ತಮ ಸಾಧನೆ ತೋರುತ್ತಾರೆ. 'ಮೆರಿಟ್' ಪ್ರತಿಪಾದಕರು ಇದನ್ನು ಅರ್ಥೈಸಬೇಕಷ್ಟೆ ❑

ಹೊಸ ಪುಸ್ತಕ

ಕರಗದ ಬೆಣ್ಣೆ

ಲೇ. ಶಿವಣ್ಣ ಇಜೇರಿ

ಬೆಲೆ: ರೂ. ೬೦/-

ಕರಗದ ಬೆಣ್ಣೆ ಕವನ ಸಂಕಲನದಲ್ಲಿಯ ಬಹಳಷ್ಟು ಕವಿತೆಗಳು, ಶರಣರ ಚರಿತ್ರೆ ಹಾಗೂ ಕಾಯಕದ ಕುರಿತವುಗಳಾಗಿವೆ.

ಶರಣರ ಸರಳ ಜೀವನ, ಅವರು ರಚಿಸಿದ ವಚನಗಳು ಕವಿಯ ಮೇಲೆ ಗಾಢವಾದ ಪ್ರಭಾವ ಬೀರಿವೆ. ಶಿವಣ್ಣನವರ ಕಾವ್ಯ ಪ್ರತಿಭೆಯ ಹಿಂದೆ ಪ್ರಬಲವಾದ ಚಿಂತನೆಯೇ ಇಲ್ಲಿಯ ಕವನಗಳಲ್ಲಿ ಅಭಿವ್ಯಕ್ತಗೊಂಡಿದೆ.

ಬಡತನ, ದಾರಿದ್ರ್ಯ, ಧರ್ಮ, ಸ್ತ್ರೀ ಸಮಾನತೆ ಹಾಗೂ ಇನ್ನಿತರ ಸಾಮಾಜಿಕ ಸಮಸ್ಯೆಗಳ ಕುರಿತಂತೆ ಕಾವ್ಯ ಭಾಷೆಯಲ್ಲಿ ತೀಕ್ಷ್ಣವಾಗಿ ಚಿತ್ರಿಸಿದ್ದಾರೆ. ಇಲ್ಲಿನ ಕವಿತೆಗಳು ಸಹೃದಯನ ಚಿಂತನೆಗೆ ಗ್ರಾಸ ಒದಗಿಸುತ್ತದೆ.

ಪ್ರಕಾಶಕರು : ರಂಗ ಪರಿಕರ ಪ್ರಕಾಶನ, ಶಹಾಪುರ, ಕಲಬುರ್ಗಿ.

ಸೂರ್ಯ ಮತ್ತು ನಾನು

ಲೇ. ಈ. ಚಂದ್ರ ತಾಳೀಕಟ್ಟೆ

ಬೆಲೆ: ರೂ. ೫೦/-

ಹಸಿವೆ ಹಾಗೂ ಪ್ರೇಮ ಎಲ್ಲ ಸಾಹಿತ್ಯ ಪ್ರಕಾರಗಳ ಮೂಲದ್ರವ್ಯಗಳು. ಯೌವನ ಕನಸೆಂದು ತಿಳಿದವರಿಗೆ ಹಾಗೂ ಪ್ರೀತಿ ಕನಸಿನ ಸರಕೆಂದು ಬಗೆದವರಿಗೆ ಈ. ಚಂದ್ರರ ಪ್ರಸ್ತುತ ಕವನ ಸಂಕಲನದಲ್ಲಿ ಅಂಥ ಮೈಮನದ ಎಲ್ಲ ಐಹಿಕ ಸುಖಗಳಿವೆ.

'ಕನಸುಗಳು' ಕವನದಲ್ಲಿಯ 'ಬಣ್ಣದ ಕನಸುಗಳು ಬಿಚ್ಚಿಕೊಳ್ಳುತ್ತವೆ ನಿಜ, ಆದರೆ ನಾನು ದಾರಿ ಸವೆಸುತ್ತ ನಡೆಯುವಾಗ ಒಂದೊಂದೇ ಬಿಡಿ ಬಿಡಿಯಾಗಿ ಸಾಯುತ್ತವೆ' ಎನ್ನುವ ಸಾಲುಗಳು ಪ್ರೇಮದ ಮುಖಾಂತರ ಬದುಕಿನ ನಿರಾಶೆ, ನಿಜ ಅರ್ಥಗಳನ್ನು ಹುಡುಕುವ ಮೂಲಕ ಮನಸ್ಸಿಗೆ ಹತ್ತಿರವಾಗುತ್ತದೆ.

ಪ್ರಕಾಶಕರು : ಕ್ರಾಂತಿಸಿರಿ ಪ್ರಕಾಶನ, ವಿಜಯನಗರ, ಬೆಂಗಳೂರು.



ಗದಗ ತೋಂಟದಾರ್ಯ ಮಠದ ಹಸಪ್ರತಿ ಸೂಚಿ

ಸಂ. ಡಾ. ಪಿ.ಕೆ. ರಾಠೋಡ

ಬೆಲೆ: ರೂ. ೨೦೦/-

ನಮ್ಮ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ತಿಳಿದುಕೊಳ್ಳುವಲ್ಲಿ ಪ್ರಾಚೀನ ಹಸಪ್ರತಿಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳನ್ನು ಸಂಗ್ರಹಿಸಿ ನಾಡಿನ ಜನತೆಗೆ ಅರ್ಪಿಸಿರುವ ಸಂಪಾದಕರು ಅಭಿನಂದನಾರ್ಹರಾಗಿದ್ದಾರೆ.

ಪ್ರಸ್ತುತ ಸೂಚಿಯು ಡಂಬಳ-ಗದಗ ಶ್ರೀ ತೋಂಟದಾರ್ಯ ಮಠದಲ್ಲಿ ಸಂಗ್ರಹವಾಗಿರುವ ಅಪರೂಪದ ಸುಮಾರು ೬೦೦ ಗ್ರಂಥಗಳ ಸಂಪೂರ್ಣ ಮಾಹಿತಿಯನ್ನೊಳಗೊಂಡ ಹೊತ್ತಿಗೆಯಾಗಿದೆ.

ಪ್ರಕಾಶಕರು : ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.





ಬೆಳಕು ಹಂಚಿದ ಬಾಲಕ ನಾನು ಗಾಂಧಿ ಆಗ್ತೇನೆ

ಲೇ. ಡಾ|| ಆರ್.ವಿ. ಭಂಡಾರಿ

ಬೆಲೆ: ರೂ. ೨೫/-

ಈಗಾಗಲೇ ಮಕ್ಕಳ ರಂಗಭೂಮಿಗೆ ಹಲವು ನಾಟಕಗಳನ್ನು ನೀಡಿರುವ ಡಾ|| ಆರ್.ವಿ.ಭಂಡಾರಿಯವರು ಇದೀಗ ಅಂಬೇಡ್ಕರ್ ಹಾಗೂ ಗಾಂಧೀಜಿಯವರ ಬಾಲ್ಯ ಜೀವನದ ಕುರಿತಾದ ಕ್ರಮವಾಗಿ 'ಬೆಳಕು ಹಂಚಿದ ಬಾಲಕ' ಮತ್ತು 'ನಾನು ಗಾಂಧಿ ಆಗ್ತೇನೆ' ಎಂಬ ಎರಡು ನಾಟಕಗಳನ್ನು ರಚಿಸಿದ್ದಾರೆ.

ಬದುಕನ್ನು ಬಾಳುವೆಯನ್ನಾಗಿ ರೂಪಿಸಿದ ಎರಡು ಮಹಾನ್ ವ್ಯಕ್ತಿತ್ವಗಳ ಪಾತ್ರ ಪರಿಚಯವನ್ನು ನಾಟಕ ರೂಪದಲ್ಲಿ ಮಕ್ಕಳಿಗಿತ್ತಿರುವ ಲೇಖಕರು ಅಭಿನಂದನಾರ್ಹರು.

ಪ್ರಕಾಶಕರು : ಬಂಡಾಯ ಪ್ರಕಾಶನ, ಅರೆ ಅಂಗಡಿ, ಹೊನ್ನಾವರ.

ಆದಿಮ ಕನ್ಯೆ

ಲೇ . ಎ.ಕೆ. ಹಂಪಣ್ಣ

ಬೆಲೆ: ರೂ. ೬೦/-

ಆದಿಮ ಜನಾಂಗ, ಆದಿಮ ಸಂಸ್ಕೃತಿ, ಆದಿಮ ಪರಿಕಲ್ಪನೆಗಳ ಕುರಿತಂತೆ ಸಂಶೋಧನೆ, ಅಧ್ಯಯನ ನಡೆದಿದೆ ಯಾದರೂ ಅದು ಬಹಳ ವಿರಳ.

ಇಲ್ಲಿ ಲೇಖಕರು ಆದಿಮ ಜನರ ಮನಸ್ಸಿನ ಮೂಲೆ ಮೂಲೆಗಳನ್ನು ಹೊಕ್ಕು ಅವರ ಮೂಲದ ಬದುಕನ್ನು ಬೇರೆ ಬೇರೆ ಸಂದರ್ಭ ಸನ್ನಿವೇಶಗಳಲ್ಲಿ ಕವನಗಳ ಮೂಲಕ ಚಿತ್ರಿಸಿದ್ದಾರೆ. ಕವನಗಳಲ್ಲಿ ಎಳೆ ಎಳೆಯಾಗಿ ಅದು ಗೋಚರಿಸಿರುವುದನ್ನು ಕಾಣಬಹುದು.

ಪ್ರಕಾಶಕರು : ಶಾಂತಮ್ಮ ಪ್ರಕಾಶನ, ಚಿತ್ರದುರ್ಗ.

ಕೃಷಿ ಘೋಷಣಾ ಪತ್ರ

ಲೇ. ಡಾ|| ಬ್ರಹ್ಮದೇವ ಶರ್ಮಾ

ಬೆಲೆ: ರೂ. ೧೨/-

ಭಾರತ ಜನಾಂದೋಳನದ ಸಂಸ್ಥಾಪಕರಾದ ಡಾ|| ಬ್ರಹ್ಮದೇವ ಶರ್ಮಾ ಅಸಮಾನತೆ, ದುಷ್ಟವ್ಯವಸ್ಥೆಯನ್ನು ಎದುರಿಸಲು ಜನರ ಬದುಕಿನಲ್ಲಿ ಹಂತ ಹಂತವಾಗಿ ಪರಿವರ್ತನೆ ಮಾಡಲು ಪಣತೊಟ್ಟವರು.

ಈ ನಿಟ್ಟಿನಲ್ಲಿ ಇಂದಿನ ಪರಿಸ್ಥಿತಿಯಲ್ಲಿ ಕಂಡು ಬರುತ್ತಿರುವ ಮೂಲಭೂತ ವೈರುಧ್ಯಗಳನ್ನು ಗ್ರಹಿಸಿ, ಮುಂದಿರುವ ಸವಾಲುಗಳನ್ನು ಎದುರಿಸಲು ಮಾಡಬೇಕಾದ ಹೋರಾಟಗಳನ್ನು ಕುರಿತು ಈ ಪುಸ್ತಕದಲ್ಲಿ ತಿಳಿಸಿದ್ದಾರೆ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಬೆಂಗಳೂರು.



ಝೆನ್

ಅವಲೋಕನ
ಕಥಾ ಪ್ರಸಂಗ
ಸಂವಾದ
ಒಗಟು
ಮುಂಡಿಗೆಗಳು

ಂಕೆ.ವಿ. ಸುಬ್ಬಣ್ಣ



ಸಾವು ಸ್ವಸ್ತಿ



ಒಬ್ಬ ಶ್ರೀಮಂತ ವರ್ತಕ, ಗುರು ಸೆಂಗಯಿಯ ಹತ್ತಿರ ಬಂದ, ತನ್ನ ಕುಟುಂಬದ ಯೋಗಕ್ಷೇಮಗಳು ಇತೋಪ್ಯತಿಶಯ ವೃದ್ಧಿಯಾಗುವುದಕ್ಕಾಗಿ ಸ್ವಸ್ತಿವಾಚನಮಾಡಿ- ಎಂದು ಪ್ರಾರ್ಥಿಸಿಕೊಂಡ. ಗುರು, ಕುಂಚ ಮತ್ತು ಮಸಿಯನ್ನೆತ್ತಿಕೊಂಡು ಹೀಗೆ ಲೇಖಿಸಿದ-

'ಅಜ್ಜ ಮೃತನಾಗಿ
ಅಪ್ಪ ಮೃತನಾಗಿ
ಮಗ ಮೃತನಾಗಿ
ಸಾಗಲಿ ಕುಟುಂಬ, ಸ್ವಸ್ತಿ'

ಇದನ್ನು ಕೇಳಿ ವರ್ತಕ ಕ್ರುದ್ರನಾದ. 'ಇದೇನಿದು? ನಾನು ಸ್ವಸ್ತಿವಾಚನ ಬೇಡಿದರೆ ನೀವು ಸಾವಿನ ಅಮಂಗಳ ಲೇಖಿಸಿದ್ದೀರಿ' ಎಂದು, ಆತಂಕದಿಂದ ಕೂಗಾಡಿದ.

ಸೆಂಗಯಿ ಹೀಗೆ ಹೇಳಿದ-

'ಇದು ಅಮಂಗಳವಲ್ಲಪ್ಪ. ನಾನು ನಿನಗೆ ಸಮಸ್ತ ಸೌಭಾಗ್ಯವನ್ನೇ ಹಾರೈಸಿದ್ದೇನೆ. ನಿನ್ನ ಕುಟುಂಬದ ಪ್ರತಿಯೊಬ್ಬನೂ ಮೊಮ್ಮಗನನ್ನು ಕಂಡು ಅಜ್ಜನೆಂದು ಕರೆಸಿಕೊಳ್ಳುವ ತನಕವೂ ಬದುಕಲಿ ಎಂದು ಹಾರೈಸಿದ್ದೇನೆ. ಯಾವ ಮಗನೂ ತನ್ನ ತಂದೆಗಿಂತ ಮೊದಲು ಸಾಯದಿರಲಿ ಎಂದು ಹಾರೈಸಿದ್ದೇನೆ. ಯಾವುದೇ ಕುಟುಂಬದಲ್ಲಾದರೂ ಜೀವನದಲ್ಲಾಗಲೀ ಮರಣದಲ್ಲಾಗಲೀ ಇದಕ್ಕಿಂತ ಹೆಚ್ಚಿನ ಭಾಗ್ಯ ಒದಗೀತೆ ?'

ಸತ್ತ ಒಗಟು



ಕೇವಲ ಪ್ರಾಪಂಚಿಕನಾಗಿ ಬದುಕುತ್ತಿದ್ದ ಮಮಿಯ ಎಂಬಾತ, ತಾನೂ ಝೆನ್ ಅಧ್ಯಯನ ಮಾಡಬೇಕು ಎಂದುಕೊಂಡ. ಒಬ್ಬ ಪ್ರಸಿದ್ಧನಾದ ಗುರುವಿನ ಹತ್ತಿರ ಹೋದ. ಗುರು, ಆತನಿಗೆ ಸುಪ್ರಸಿದ್ಧವಾದ ಒಂದು ಒಗಟನ್ನು ಕೊಟ್ಟು ಅದರ ಬಗ್ಗೆ ಚಿಂತಿಸಲು ಹೇಳಿದ. ಒಗಟು ಇದು- 'ಒಂದೇ ಕೈ ಚಪ್ಪಾಳೆಯ ಸದ್ದು ಯಾವುದು ?'

ಮಮಿಯ, ಒಂದು ವಾರ ಕಳೆದು ಪುನಃ ಗುರುವಿನ ಹತ್ತಿರ ಬಂದ. ಒಗಟನ್ನು ಒಡೆಯುವುದು ಆತನಿಗೆ ಸಾಧ್ಯವಾಗಿರಲಿಲ್ಲ. ಗುರುವಿನ ಎದುರು ನಿಂತು ತಲೆಯಾಡಿಸಿದ.

ಗುರು ಅಬ್ಬರಿಸಿದ- 'ತೊಲಗು ಇಲ್ಲಿಂದ, ನೀನು ಶ್ರಮಪಟ್ಟು ಪ್ರಯತ್ನಿಸಲೇ ಇಲ್ಲ ನಿನ್ನ ಯೋಚನೆ ಇರುವುದೆಲ್ಲ ಹಣ, ಅನ್ನ ಮತ್ತು ಸುಖಲೋಲುಪ್ತಿಗಳಲ್ಲಿ. ನೀನು ಸತ್ತರೆ ಒಳ್ಳೆಯದು. ಆಗಲಾದರೂ ನಿನಗೆ ಉತ್ತರ ಸಿಗಬಹುದೋ ಏನೋ.'

ಮಾರನೆಯ ವಾರ, ಮಮಿಯ ಮತ್ತೆ ಗುರುವಿನ ಹತ್ತಿರ ಬಂದು ನಿಂತ. ಗುರು ಕೇಳಿದ- 'ಒಳ್ಳೆಯದು. ಒಂದು ಕೈ ಚಪ್ಪಾಳೆ ಸದ್ದು ಯಾವುದು ?'

ಮಮಿಯ, ಕೈಗಳಿಂದ ಎದೆಯನ್ನು ಬಲವಾಗಿ ಕಿವಿಚಿಕೊಂಡ; ನರಳಿದ; ನೆಲಕ್ಕೆ ಸತ್ತು ಉರುಳಿದ.

ಗುರು ಮತ್ತೆ ಕೇಳಿದ- 'ಸರಿ, ನೀನು ನನ್ನ ಆಣತಿಯನ್ನು ಪಾಲಿಸಿ ಸತ್ತಿದ್ದೀಯೆ, ಒಳ್ಳೆಯದು. ಆದರೆ, ಈಗಲಾದರೂ ಹೇಳು, ಒಂದು ಕೈ ಚಪ್ಪಾಳೆಯ ಸದ್ದು ಯಾವುದು?'

ಮಮಿಯ, ಮೆಲ್ಲನೆ ಒಂದೇ ಕಣ್ಣು ತೆರೆದು ಉತ್ತರಿಸಿದ- 'ಇನ್ನೂ ಆ ಒಗಟನ್ನು ಒಡೆಯಲಿಕ್ಕಾಗಲಿಲ್ಲ.'

ಈಗ ಗುರು ಅಬ್ಬರಿಸಿದ-

'ಸತ್ತವರು ಮಾತಾಡುವುದಿಲ್ಲ, ಎಲ್ಲಿ ಏಳು ಮೇಲಕ್ಕೆ, ತೊಲಗು ಇಲ್ಲಿಂದ.'

ಶೂನ್ಯದಲ್ಲಿ ಮಳೆ

ಬುದ್ಧದೇವನ ಶಿಷ್ಯನಾದ ಸುಭೂತಿಗೆ ಜ್ಞಾನೋದಯವಾಯ್ತು; ಅವಿನಾಶಿಯಾದ ಸತ್ಯವೂ ವಿನಾಶಿಯಾದ ಮಿಥ್ಯವೂ ಏಕತ್ರ ಅನುಭೂತವಾಗುವ ಮಹಾಶೂನ್ಯದ ದರ್ಶನವಾಗಿತ್ತು. ಆತ, ಮಹಾವೃಕ್ಷದ ಅಡಿಯಲ್ಲಿ ಕೂತುಕೊಂಡಿದ್ದ. ಮೇಲಿನಿಂದ ಹೂಮಳೆಗರೆಯುತ್ತಿತ್ತು. 'ಮಹಾಶೂನ್ಯವನ್ನು ಕುರಿತ ನಿನ್ನ ಅಮೋಘ ವಾಚಾಲುತ್ವವನ್ನು ಆಹೋ, ಪ್ರಶಂಸಿಸುತ್ತಿದ್ದೇವೆ' ಎಂಬ, ಕೇಳಿಯೂ ಕೇಳದಂಥ ಅತಿಮಂದ್ರ ಮಧುರ ದೇವವಾಣಿ ಮೊಳಗತೊಡಗಿತು.

'ಮಹಾಶೂನ್ಯವನ್ನು ಕುರಿತು ನಾನು ಮಾತೇ ಆಡಿಲ್ಲವಲ್ಲ' ಎಂದು ಆಶ್ಚರ್ಯ ಪಟ್ಟ ಸುಭೂತಿ. ಮತ್ತೆ ವಾಣಿ ಮೊಳಗಿತು-

'ನೀನು ಮಾತಾಡಿದ್ದೂ ಇಲ್ಲ; ನಾವು ಕೇಳಿದ್ದೂ ಇಲ್ಲ. ಅದೇ ನಿಜವಾದ ಮಹಾಶೂನ್ಯವೆಂಬುದು'

ಮತ್ತೆ ಹೂಮಳೆಗರೆಯಿತು.

ಧೂಪದ ಬುದ್ಧ

ಒಬ್ಬ ಭಿಕ್ಷುಣಿ, ಜ್ಞಾನೋದಯ ಪಡೆಯಬೇಕೆಂಬ ಹಂಬಲದಿಂದ ದೇವಾಲಯದಿಂದ ದೇವಾಲಯಕ್ಕೆ ತಿರುಗತೊಡಗಿದ್ದಳು. ಆಕೆ, ತನ್ನ ಹತ್ತಿರ ಬುದ್ಧ ದೇವನ ಚಿಕ್ಕ ಪ್ರತಿಮೆಯೊಂದನ್ನು ಇಟ್ಟುಕೊಂಡಿದ್ದಳು. ಅದು, ಆಕೆ ತಾನೇ ಮರದಲ್ಲಿ ಕೊರೆದು ಮಾಡಿಕೊಂಡಿದ್ದು, ಮುದ್ದಾದ ಪ್ರತಿಮೆ, ಅದಕ್ಕೆ ಒಂದು ಸ್ವರ್ಣಪತ್ರವನ್ನೂ ಸಿಕ್ಕಿಸಿದ್ದಳು.



ಒಮ್ಮೆ ಆಕೆ, ಒಂದು ದೇವಾಲಯಕ್ಕೆ ಬಂದಳು. ಅಲ್ಲಿ ಅನೇಕ ಭಿಕ್ಷುಗಳು ವಾಸಮಾಡಿಕೊಂಡಿದ್ದರು; ಅನೇಕ ಬುದ್ಧ ಪ್ರತಿಮೆಗಳಿದ್ದವು. ಒಂದು ಮೂಲೆಯಲ್ಲಿ ಆಕೆ, ತನ್ನ ಬುದ್ಧ ಪ್ರತಿಮೆಯನ್ನಿಟ್ಟುಕೊಂಡಳು. ದಿನವಿಡೀ ಭಕ್ತಿಭಾವದಿಂದ ಅದಕ್ಕೆ ಧೂಪ ಹಚ್ಚಿಟ್ಟು ಪ್ರಾರ್ಥನೆ ಸಲ್ಲಿಸುತ್ತಿದ್ದಳು. ಆದರೆ, ತನ್ನ ಬುದ್ಧನ ಪ್ರತಿಮೆಗೆ ಆಕೆ ಹಚ್ಚಿದ ಧೂಪದ ಹೊಗೆ, ಸುತ್ತ ಹರಡಿ ಉಳಿದ ಬುದ್ಧಪ್ರತಿಮೆಗಳ ಬಳಿಯೂ ಸುತ್ತ ತೊಡಗುತ್ತಿತ್ತು. ಇದರಿಂದ ಆಕೆ ಅಸಮಾಧಾನಗೊಂಡಳು. ಒಂದು ಉಪಾಯ ಯೋಚಿಸಿದಳು. ಒಂದು ಲಾಲಿಕೆ ಮಾಡಿಸಿ ತಂದು, ಅದನ್ನು ತಾನು ಹಚ್ಚಿದ ಧೂಪದ ಮೇಲೆ ಕವುಚಿ, ಆ ಹೊಗೆ ತನ್ನ ಬುದ್ಧಪ್ರತಿಮೆಗೆ ಮಾತ್ರವೇ ಕವಿದುಕೊಳ್ಳುವಂತೆ ಮಾಡಿದಳು.

ಒಂದು ವಾರ ಕಳೆಯುವಾಗ, ಎಲ್ಲರೂ ಆಕೆಯ ಬುದ್ಧನ ಕಡೆ ನೋಡಿ ಮುಸಿಮುಸಿ ನಗತೊಡಗಿದರು. ಮುದ್ದಾದ ಆ ಪ್ರತಿಮೆ ಫಳಫಳ ಹೊಳೆಯುತ್ತಿದ್ದ ಬಂಗಾರದ ಎಲೆ- ಎಲ್ಲವೂ ಈಗ ಮಸಿಯ ಮುದ್ದೆಯಾಗಿ ಕೂತಿತ್ತು.

ಜಾಗೃತಿ

ಜಾಗತೀಕರಣ ನಮ್ಮ ಮನೆ ಬಾಗಿಲಿಗೇ ಬಂದಿದೆ. 'ಪ್ರಗತಿಯ ಬಸಿರೆಂದು' ಬಲಿಷ್ಠ ರಾಷ್ಟ್ರಗಳು ಬಣ್ಣಿಸುತ್ತಿರುವ ಜಾಗತೀಕರಣದಿಂದ ಭಾರತದ ಅಲಕ್ಷಿತ ಜನಸಮುದಾಯ ತತ್ತರಿಸಿ ಹೋಗುತ್ತಿದ್ದು, ಮುಂಬರುವ ದಿನಗಳು ಕರಾಳವಾಗಲಿವೆ ಎಂಬುದು ಭಾರತದಲ್ಲಿ ದಲಿತ ಮಾನವ ಹಕ್ಕುಗಳ ರಾಷ್ಟ್ರೀಯಾಂದೋಲನ ಶೋಧಿಸಿ ಪ್ರಕಟಿಸಿರುವ ಮಾಹಿತಿಯಿಂದ ತಿಳಿದುಬಂದಿದೆ. ಜಾಗತೀಕರಣದ ಬಗೆಗಿನ ಎಲ್ಲಾ ಭರವಸೆಗಳು ಎಂಥ ಹಸಿ ಸುಳ್ಳು ಎಂಬುದು ಈ ಮಾಹಿತಿಯಿಂದ ತಿಳಿದುಬರುತ್ತದೆ. ಈ ಮಾಹಿತಿಯನ್ನಾಧರಿಸಿದ ಸಂಶೋಧನಾ ಲೇಖನಮಾಲೆಯ ನಾಲ್ಕನೇ ಕಂತು ಇದು.

❍ ಅನು: ಡಿ. ಡೊಮಿನಿಕ್

ಶೈಕ್ಷಣಿಕ ಹಕ್ಕಿನ ಮೇಲೆ ಜಾಗತೀಕರಣದ ಪರಿಣಾಮಗಳು: 'ಭಾರತದಲ್ಲಿ ಎಲ್ಲಾ ನಾಗರಿಕರಿಗಾಗಿ ಪ್ರಾಥಮಿಕ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿ ಗುರುತಿಸಲಾಗಿದೆ. ಸಮಾಜದಲ್ಲಿನ ಅಜ್ಞಾನ ಮತ್ತು ಅಸಮಾನತೆಯನ್ನು ಹೋಗಲಾಡಿಸಲು ಶಿಕ್ಷಣ ಬಹುಮುಖ್ಯ ಸಾಧನವೆಂದು ಎಲ್ಲರೂ ಗುರುತಿಸಿದ್ದಾರೆ. ಬಯಸಿದ ಜೀವನ ಮಟ್ಟವನ್ನು ಪಡೆಯುವ ಪ್ರಕ್ರಿಯೆಯಲ್ಲಿ ಜ್ಞಾನ ಕೌಶಲ್ಯಗಳು ಮೌಲ್ಯಗಳು ಮತ್ತು ನಡಾವಳಿಗಳನ್ನು ರೂಢಿಸಿಕೊಳ್ಳುತ್ತೇವೆ. ಆದ್ದರಿಂದ ಎಲ್ಲರಿಗೂ ಜ್ಞಾನವೆಂಬುದು ಸಿಗುವಂತೆ ಮಾಡತಕ್ಕದ್ದು. ಈ ಸಂಕೀರ್ಣ ಬದುಕಿನಲ್ಲಿ ಪತನಗೊಳ್ಳುವುದು ಸುಲಭ. ಹೀಗಿರುವಲ್ಲಿ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳದೇ ಮಾರ್ಗವನ್ನು ಕಂಡುಕೊಳ್ಳಬೇಕಾಗುತ್ತದೆ. ಈ ಸನ್ನಿವೇಶದಲ್ಲಿ ಬೌದ್ಧಿಕ ದಿವಾಳಿತನ ಬಿಟ್ಟು ಸ್ವಾತಂತ್ರ್ಯವನ್ನು ಬುದ್ಧಿಯ ವಿಕಾಸಕ್ಕಾಗಿ ಬಳಸಿಕೊಳ್ಳಬೇಕಾಗುತ್ತದೆ. ಜ್ಞಾನದ ನಿರಾಕರಣೆಯು, ಮಹತ್ತರ ಧ್ಯೇಯೋದ್ದೇಶಗಳಿಗಾಗಿ ಸ್ವಾತಂತ್ರ್ಯವನ್ನು ಬಳಸುವ ಶಕ್ತಿಯನ್ನು ಇಲ್ಲವಾಗಿಸುತ್ತದೆ. ಅಜ್ಞಾನಿಯು ಸ್ವತಂತ್ರ ವ್ಯಕ್ತಿಯಾಗಿರಬಹುದು. ಆದರೆ ಆಕೆ/ಆತ ತನಗೆ ಸುಖ ನೀಡಲು ತನ್ನ ಸ್ವಾತಂತ್ರ್ಯವನ್ನು ಬಳಸಿಕೊಳ್ಳಲಾಗುವುದಿಲ್ಲ.'

ಪ್ರಾಥಮಿಕ ಶಿಕ್ಷಣ

ಜಾಗತೀಕರಣ ಪ್ರಕ್ರಿಯೆಯು ಭಾರತ ಸರ್ಕಾರದ ನೀತಿಗಳನ್ನು ಪ್ರಭಾವಿಸುವ ಡಾ। ಬಿ.ಆರ್. ಅಂಬೇಡ್ಕರ್ ಎರಡು ದಶಕಗಳ ಹಿಂದೆ ಅಂದರೆ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯು ೬-೧೧ ವರ್ಷ ವಯಸ್ಸಿನ ಎಲ್ಲಾ ದಲಿತ ಮಕ್ಕಳನ್ನು ಶಾಲೆಗೆ ಸೇರಿಸುವ ಮತ್ತು ೧೧-೧೪ ವಯಸ್ಸಿನ ಗುಂಪಿನಲ್ಲಿ ಶೇ ೭೫ ರಷ್ಟು ದಾಖಲಾತಿಯನ್ನು ಕಾಣುವ ಗುರಿಯನ್ನು ಹೊಂದಿತ್ತು. ೧೯೯೨ ರಲ್ಲಿ ಇದೇ ಉದ್ದೇಶವನ್ನು ವ್ಯಕ್ತಪಡಿಸಲಾಯಿತು. ಹಾಗೆಯೇ ಮತ್ತೊಮ್ಮೆ ದಲಿತರಿಗಾಗಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಿಸಲು 'ಸರ್ವಶಿಕ್ಷ ಅಭಿಯಾನ ೨೦೦೦'ದ ಮೂಲಕ ಶಾಲಾ ಸಮಿತಿಗಳಲ್ಲಿ ದಲಿತ ಸಮುದಾಯಗಳ ಭಾಗಿದಾರಿಕೆಯನ್ನು ಪ್ರೇರೇಪಿಸಿ, ಪರ್ಯಾಯ ಶಾಲಾ ವ್ಯವಸ್ಥೆ ಮತ್ತು ಇತರೆ ತಂತ್ರಗಳನ್ನು ಸ್ಥಾಪಿಸುವ ಪ್ರಯತ್ನ ನಡೆಸಲಾಯಿತು.

'ಶಿಕ್ಷಣ ಹಿಂಬದಿಗೆ ಸರಿಸಿ ನೂರು ಕಾರುಗಳನ್ನು ಕೊಳ್ಳಲು ಹಣವನ್ನು ಬಳಸಲಾಗುತ್ತದೆ'

'ಕಪ್ಪು ಹಲಗೆ, ಪುಸ್ತಕಗಳು ಮತ್ತು ಶಿಕ್ಷಕರಿಗೆ ವೇತನ ನೀಡಲು ಹಣ ವಿನಿಯೋಗ ಮಾಡುವುದರ ಬದಲು ರಾಜ್ಯಸರ್ಕಾರದ ಕೈಗೊಂಬೆಗಳಾದ ಅಧಿಕಾರಿಗಳು ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಯಾಗಿಸಲು ೧೦೦ ಕಾರುಗಳನ್ನು ಕೊಂಡುಕೊಳ್ಳುತ್ತಾರೆ.' (ವಿಕಾಸ್ ಭಾರ್ಗವ, ಲಕ್ನೋ, ದಿ ಪಯೋನೀಯರ್, ೬. ೩. ೧೯೯೯) ಎನ್‌ಸಿಇಆರ್‌ಟಿ ನ ಪ್ರಕಾರ ರಾಷ್ಟ್ರ ಮಟ್ಟದಲ್ಲಿ ಎದ್ದು ಕಾಣುವ ವಾಸ್ತವ ಸಂಗತಿಯೆಂದರೆ:

- ★ ಫ್ರೀ ಪಠ್ಯ ಪುಸ್ತಕ ಯೋಜನೆಯಡಿ ಶೇ ೫೪.೬ ರಷ್ಟು ಶಾಲೆಗಳನ್ನು ಮತ್ತು ಶೇ ೧೦ ರಷ್ಟು ದಲಿತರನ್ನು ಮಾತ್ರ ತಲುಪಲು ಸಾಧ್ಯವಾಗಿದೆ.
- ★ ಫ್ರೀ ಸಮವಸ್ತ್ರ ಯೋಜನೆಯಲ್ಲಿ ಶೇ ೨೯.೩ ಶಾಲೆಗಳನ್ನು ಮತ್ತು ಶೇ ೪.೬ ದಲಿತ ವಿದ್ಯಾರ್ಥಿಗಳನ್ನಷ್ಟೆ ತಲುಪಲು ಸಾಧ್ಯವಾಗಿದೆ.
- ★ ಮಧ್ಯಾಹ್ನ ಊಟದ ಯೋಜನೆಯಡಿ ಶೇ ೧೩.೯ ಶಾಲೆಗಳನ್ನು ಮತ್ತು ಶೇ ೩.೯ ರಷ್ಟು ದಲಿತರನ್ನು ಮಾತ್ರ ಒಳಗೊಳ್ಳಲಾಗಿದೆ.

ಹೀಗೆ ವರ್ತಿಸುವ ಸರ್ಕಾರದ ಪರಿಣಾಮವೆಂದರೆ ದಲಿತ ಮಕ್ಕಳು ಮತ್ತು ದಲಿತೇತರ ಮಕ್ಕಳ ನಡುವೆ ಸಾಕಷ್ಟು ವ್ಯತ್ಯಾಸ ಎದ್ದು ಕಾಣುತ್ತದೆ.

ಶತಮಾನಗಳಿಂದ ಬಡತನ ಮತ್ತು ಜಾತಿ ತಾರತಮ್ಯದಿಂದಾಗಿ ದಲಿತರಿಗೆ ಶಿಕ್ಷಣವನ್ನು ನಿರಾಕರಿಸಲಾಗಿದೆ. ಆದ್ದರಿಂದ ವರ್ತಮಾನದಲ್ಲಿ ದಲಿತರು ಮತ್ತು ದಲಿತೇತರರ ನಡುವೆ ಶೈಕ್ಷಣಿಕ ವ್ಯತ್ಯಾಸ ಎದ್ದು ಕಾಣುತ್ತದೆ.

ಖಾಸಗೀಕರಣದ ಹೊಸ ನೀತಿಯೊಡನೆ ಪರಿಸ್ಥಿತಿ ಮತ್ತಷ್ಟು ಶೋಚನೀಯವಾಗಿದೆ. ದಲಿತ ಮಕ್ಕಳಿಗೆ ನೀಡುತ್ತಿದ್ದ ಶಿಷ್ಯವೇತನ, ಹಾಗೂ ದಲಿತರಿಗೆ ಪ್ರಾಥಮಿಕ ಶಿಕ್ಷಣ ನೀಡುವ ನಿಟ್ಟಿನಲ್ಲಿ ಸರ್ಕಾರ ಬಜೆಟ್‌ನಲ್ಲಿ ಒದಗಿಸುತ್ತಿದ್ದ ಹಣವನ್ನು ಕಡಿತಗೊಳಿಸುವುದರಿಂದ ದಲಿತರ ಶಿಕ್ಷಣ ಗಂಭೀರ ಸ್ಥಿತಿಯನ್ನು ತಲುಪಿದೆ.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ

ಉನ್ನತ ಶಿಕ್ಷಣ : ಪ್ರಾಥಮಿಕ ಶಿಕ್ಷಣದಂತೆಯೇ ಉನ್ನತ ಶಿಕ್ಷಣದ

ಮಾನವ ಹಕ್ಕಿನ ಮೇಲೆ ಕರಿನೆರಳು

ಹೀಗಿದ್ದಾಗಿಯೂ ವಾಸ್ತವದಲ್ಲಿ ನೀತಿಗಳನ್ನು ಜಾರಿಯಾಗಿಸುವಲ್ಲಿ ಸಫಲತೆಯನ್ನು ಕಾಣಲಾಗಿಲ್ಲ. ೬ನೇ ಪಂಚವಾರ್ಷಿಕ ಯೋಜನೆವರೆಗೂ ದಲಿತರ ಅಭಿವೃದ್ಧಿಗಾಗಿ ವಿಶೇಷ ಕೇಂದ್ರೀಯ ನೆರವು ಎಂಬ ಯೋಜನೆಯಡಿ ಶೇ ೦.೫೨ ರಷ್ಟನ್ನು ಮಾತ್ರ ಒದಗಿಸಲಾಗಿತ್ತು. ಇದನ್ನು ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಶೇಷ ಘಟಕ ಯೋಜನೆಯಡಿ ಶೇ ೧೨.೩ ರಷ್ಟಕ್ಕೆ ಏರಿಸಲಾಯಿತು. ೧೯೯೯ರಲ್ಲಿ ೫,೯೮,೦೦೦ ಪ್ರಾಥಮಿಕ ಮತ್ತು ೧,೭೭,೦೦೦ ಹಿರಿಯ ಪ್ರಾಥಮಿಕ ಶಾಲೆಗಳಿದ್ದಾಗ್ಯೂ ಸಂಕಷ್ಟಕ್ಕೀಡಾಗಬಹುದಾದ ದಲಿತರಿಗೆ ಅವು ಎಟುಕಲಾರದಷ್ಟು ದೂರದಲ್ಲಿಯೇ ಇವೆ.

ಪುಸ್ತಕಗಳು, ಯೂನಿಫಾರ್ಮ್ ಬಟ್ಟೆಗಳು... ಮುಂತಾದ ಶಾಲಾ ಖರ್ಚು-ವೆಚ್ಚಗಳಿಂದಾಗಿ ದಲಿತ ಕುಟುಂಬಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲಾಗುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ನೇರ ಶಾಲಾ ವೆಚ್ಚವನ್ನು ತಗ್ಗಿಸಲು ದಲಿತ ಮಕ್ಕಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉಚಿತ ಶಿಕ್ಷಣ ನೀತಿಯನ್ನು ಗಂಭೀರವಾಗಿ ಜಾರಿಯಾಗಿಸಬೇಕಲ್ಲವೇ?



ಹಣೆಬರಹವೂ ಇದೇ. ಇತ್ತೀಚೆಗಿನ ಶಿಕ್ಷಣ ನೀತಿಗಳು ದಲಿತರನ್ನು ಉನ್ನತ ಶಿಕ್ಷಣದಿಂದ ದೂರವಿಟ್ಟಿವೆ. ಇಂಥ ನೀತಿಗಳ ಹಿಂದಿರುವ ಶಕ್ತಿಯಾದರೂ ಯಾವುದು?

ವಿಶ್ವವಾಣಿಜ್ಯ ಸಂಸ್ಥೆ (WTO)ಯ ಸೇವೆಗಳ ವ್ಯಾಪಾರದ ಸಾಮಾನ್ಯ ಒಪ್ಪಂದದಡಿ (ಗ್ಯಾಟ್) ಸರ್ಕಾರವು ವಾಣಿಜ್ಯೇತರ ಸೇವೆಗಳಾದ ಶಿಕ್ಷಣ ಮತ್ತು ಆರೋಗ್ಯವನ್ನು ಸಹ ಆರ್ಥಿಕ ಉದಾರೀಕರಣದಡಿ ತಂದಿತು. ಖಾಸಗೀ ಶಿಕ್ಷಣ ಸಂಸ್ಥೆಗಳು ಪ್ರಾಯೋಜಿತ ಶಿಕ್ಷಣವನ್ನು ಪ್ರಚಾರ ಮಾಡಲು ಭಾರತದಲ್ಲಿ ಸರ್ಕಾರ ಅನುದಾನಿತ ಶಿಕ್ಷಣ ವ್ಯವಸ್ಥೆ ದೊಡ್ಡ ಅಡ್ಡಿಯಾಗಿತ್ತು. ಆದ್ದರಿಂದ ಉನ್ನತ ಶಿಕ್ಷಣದಲ್ಲಿ ಸರ್ಕಾರಿ ಹಣ ಹೂಡುವುದನ್ನು ಆದಷ್ಟು ಕಮ್ಮಿಗೊಳಿಸಿ, ವಿದೇಶಿ ಯೂನಿವರ್ಸಿಟಿ ಸಂಸ್ಥೆಗಳಿಗೆ ಅವಕಾಶವನ್ನು ಹೆಚ್ಚೆಚ್ಚು ಕಲ್ಪಿಸಿಕೊಡಲಾಗುತ್ತಿದೆ. ಈ ವಿದೇಶಿ ಯೂನಿವರ್ಸಿಟಿಗಳು ಖಾಸಗೀ ವಿಧಾನಗಳ ಮೂಲಕ ಶಿಕ್ಷಣವನ್ನು ವ್ಯಾಪರೀಕರಣ ಮಾಡುವ ದಂಧೆಯಲ್ಲಿ ತೊಡಗುತ್ತವೆ. ಶೈಕ್ಷಣಿಕ ಸಂಸ್ಥೆಗಳಲ್ಲಿ ಹಣ ಹೂಡುವಿಕೆಯನ್ನು ಪರೋಕ್ಷವಾಗಿ ಈ ಕೆಳಕಂಡಂತೆ ಕಡಿತಗೊಳಿಸಲಾಗುತ್ತಿದೆ.

★ ಹೊಸ ಶಿಸ್ತುಗಳ ಆರಂಭವನ್ನು ರದ್ದುಗೊಳಿಸುವುದು.
★ ಹೊಸ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆಯನ್ನು ರದ್ದುಗೊಳಿಸುವುದು.
★ ಈಗಾಗಲೇ ಇರುವ ಸಂಸ್ಥೆಗಳಲ್ಲಿರುವ ವಿದ್ಯಾರ್ಥಿಗಳ ಮೇಲೆ ಮಿತಿ ಏರುವುದು.
★ ಅನಿರೀಕ್ಷಿತವಾಗಿ ಸಿಬ್ಬಂದಿಯಲ್ಲಿ ಕಡಿತ ಮಾಡುವುದು.
★ ಹೊಸ ಶಿಸ್ತು ಮತ್ತು ಇತರೆ ಶುಲ್ಕವನ್ನು ಹೆಚ್ಚಿಸುವುದು.
★ ಖಾಸಗೀ ಸಂಸ್ಥೆಗಳ ನಿರ್ವಹಣೆಯಲ್ಲಿ ಸರ್ಕಾರ ನಿಯಂತ್ರಣವನ್ನು ತೆಗೆಯುವುದು.
★ ಅನುದಾನವನ್ನು ಸಂಸ್ಥೆಗಳ ಮೌಲ್ಯಮಾಪನ ಮತ್ತು ಅರ್ಹತಾ ಕ್ರಮಗಳೊಡನೆ ಸೇರಿಸುವುದು.
★ ಹಿಂದಿನ ಶುಲ್ಕ ಮುಕ್ತ ಶಿಕ್ಷಣ ಮತ್ತು ಇತರೆ ಸವಲತ್ತುಗಳ ಜಾಗದಲ್ಲಿ ವಿದ್ಯಾರ್ಥಿ ಸಾಲ ಯೋಜನೆಯನ್ನು ಜಾರಿಯಾಗಿಸುವುದು.

ಈ ಮೇಲಿನ ಕ್ರಮಗಳ ಮೂಲಕ ಹೂಡಿಕೆಯನ್ನು ಕಡಿತಗೊಳಿಸುತ್ತಾ, ಅದೇ ವೇಳೆ ಸರ್ಕಾರ ಉನ್ನತ ಶಿಕ್ಷಣವನ್ನು ಖಾಸಗೀಕರಿಸಲು ಕೆಂಪು ಹಾಸಿಗೆಯ ಸ್ವಾಗತವನ್ನು ಉದ್ಯಮಪತಿಗಳಿಗೆ ನೀಡುತ್ತಿದೆ. ಕೇಂದ್ರದಲ್ಲಿ 'ಮಾನವ ಸಂಪನ್ಮೂಲ ಸಚಿವಾಲಯ'ವನ್ನು ಬದಿಗೊತ್ತಿ ಕುಮಾರ ಮಂಗಳಂ ಮತ್ತು ಅಂಬಾನಿಯವರು 'ಶೈಕ್ಷಣಿಕ ನೀತಿ'ಯನ್ನು ವ್ಯಾಪಾರೀಕರಣಕ್ಕೆ ಪೂರಕವಾಗಿರುವಂತೆ ಪ್ರಧಾನ ಮಂತ್ರಿಯವರಿಗೆ ರವಾನಿಸುತ್ತಾರೆ. ಅವರ ಸಲಹೆಗಳ ಮೇರೆಗೆ ರಾಜ್ಯ ಸರ್ಕಾರಗಳು ತಮ್ಮ ಶಿಕ್ಷಣ ನೀತಿಯನ್ನು ಬದಲಾಯಿಸಲಾರಂಭಿಸಿದವು.

ಈ ನಿಟ್ಟಿನಲ್ಲಿ ಆಂಧ್ರಾ ಮತ್ತು ಕರ್ನಾಟಕ ರಾಜ್ಯಗಳು ಪ್ರಪ್ರಥಮರಾಗಿ ಇಂಜಿನಿಯರಿಂಗ್, ಮೆಡಿಕಲ್, ಔಷಧ ಮುಂತಾದ ಖಾಸಗೀ ಸಂಸ್ಥೆಗಳು ತಮ್ಮ ಕಾಲೇಜ್‌ಗಳನ್ನು ತೆರೆಯಲು ಸಮ್ಮತಿಸಿದವು. ಇದೇ ಮಾರ್ಗದಲ್ಲಿ ಮಹಾರಾಷ್ಟ್ರವು ಆಂಧ್ರಾ ಮತ್ತು ಕರ್ನಾಟಕ ರಾಜ್ಯಗಳನ್ನು ಅನುಸರಿಸಲಾರಂಭಿಸಿದೆ. ಈ ಎಲ್ಲಾ ಖಾಸಗೀ ಸಂಸ್ಥೆಗಳ ಮಾಲೀಕರು ಬಹಳಷ್ಟು ರಾಜಕೀಯ ಶಕ್ತಿಯನ್ನು ಹೊಂದಿದ್ದು ರಾಜ್ಯ ಸರ್ಕಾರದೊಡನೆ ಕೈಯಾಡಿಸುವವರಾಗಿದ್ದಾರೆ.

'ಮಹಾರಾಷ್ಟ್ರದಲ್ಲಿರುವ ೧೩೧ ಖಾಸಗೀ ಸಂಯುಕ್ತ ಕಾಲೇಜುಗಳಲ್ಲಿ ೧೦೦ ಕಾಲೇಜುಗಳು ರಾಜಕಾರಣಿಗಳ ಮತ್ತು ಕೇಂದ್ರ ಸಚಿವರ ಒಡೆತನದಲ್ಲಿವೆ.'

ತನ್ನ ಶೈಕ್ಷಣಿಕ ಸಂಸ್ಥೆಗಳಿಗೆ ಹಣ ಕಡಿತ ಮಾಡುವ ಸರ್ಕಾರ, ಖಾಸಗೀ ಶಿಕ್ಷಣ ಉದ್ಯಮಿಗಳಿಗೆ ಈ ಕೆಳಗಿನ ಸವಲತ್ತುಗಳನ್ನು ಬೆಂಬಲವಾಗಿ ನೀಡುತ್ತಿದೆ:
★ ಕಡಿಮೆ ಬೆಲೆಯಲ್ಲಿ ಭೂಮಿ ಒದಗಿಸುವುದು.
★ ಸರ್ಕಾರಿ ಟೀಚರ್ಸ್ ಖಾಸಗೀ ಸಂಸ್ಥೆಗಳಲ್ಲಿ ಅಧಿಕ ಸಮಯ ದುಡಿಯುವಂತೆ ಮಾಡುವುದು.
★ ಖಾಸಗೀ ಸಂಸ್ಥೆಯೊಂದರ ಸ್ಥಾಪನೆಯ ನಿಗದಿತ ಅವಧಿಯನ್ನು ಸಡಿಲಗೊಳಿಸುವುದು.
★ ಖಾಸಗೀ ಸಂಸ್ಥೆಗಳಲ್ಲಿ ಕನಿಷ್ಟ ವ್ಯವಸ್ಥೆಯನ್ನು ಕಾಯ್ದುಕೊಳ್ಳುವಲ್ಲಿ ವಿಶ್ವವಿದ್ಯಾಲಯದ ಪಾತ್ರವನ್ನು ತಡೆಯುವುದು.
★ ಅನಿವಾಸಿ ಭಾರತೀಯರ, ಕೋಟ (ಪ್ರವೇಶ) ವನ್ನು ಹೆಚ್ಚಿಸುವುದು.
★ ಮ್ಯಾನೇಜ್‌ಮೆಂಟ್ ಕೋಟವನ್ನು ಹೆಚ್ಚಿಸುವುದು.
★ ಶುಲ್ಕ ಹೆಚ್ಚಳದ ಮೇಲಿನ ನಿಯಮಗಳನ್ನು ಸಡಿಲಗೊಳಿಸುವುದು.

ಜಾಗತೀಕರಣದ ಪ್ರತಿಫಲ ಕಸದ ಬುಟ್ಟಿಯಲ್ಲಿ!

ಪುಸ್ತಕಗಳು, ಯೂನಿಫಾರ್ಮ್ ಬಟ್ಟೆಗಳು... ಮುಂತಾದ ಶಾಲಾ ಖರ್ಚು-ವೆಚ್ಚಗಳಿಂದಾಗಿ ದಲಿತ ಕುಟುಂಬಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲಾಗುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ನೇರ ಶಾಲಾ ವೆಚ್ಚವನ್ನು ತಗ್ಗಿಸಲು ದಲಿತ ಮಕ್ಕಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉಚಿತ ಶಿಕ್ಷಣ ನೀತಿಯನ್ನು ಗಂಭೀರವಾಗಿ ಜಾರಿಯಾಗಿಸಬೇಕಾಗಿದೆ. ಅಲ್ಲದೆ 'ಕಪ್ಪು ಹಲಗೆ, ಪುಸ್ತಕಗಳು ಮತ್ತು ಶಿಕ್ಷಕರಿಗೆ ವೇತನ ನೀಡಲು ಹಣ ವಿನಿಯೋಗ ಮಾಡುವುದರ ಬದಲು ರಾಜ್ಯಸರ್ಕಾರದ ಕೈಗೊಂಬೆಗಳಾದ ಅಧಿಕಾರಿಗಳು ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಯಾಗಿಸಲು ೧೦೦ ಕಾರುಗಳನ್ನು ಕೊಂಡುಕೊಳ್ಳುತ್ತಾರೆ.

ಈ ಎಲ್ಲಾ ಅನುಕೂಲಗಳಿಂದಾಗಿ ಆಂಧ್ರ ಪ್ರದೇಶ, ಬಿಹಾರ, ಗುಜರಾತ್, ಕರ್ನಾಟಕ, ತಮಿಳುನಾಡು ಮತ್ತು ಉತ್ತರ ಪ್ರದೇಶಗಳಲ್ಲಿ ಖಾಸಗೀ ಶಿಕ್ಷಣ ಸಂಸ್ಥೆಗಳು ನಾಯಿಕೊಡೆಗಳಂತೆ ಎದ್ದು ಶಿಕ್ಷಣವನ್ನು ಹರಾಜಿಗಿಟ್ಟಿವೆ.

ಈ ಖಾಸಗೀ ಉದ್ಯಮಿಗಳನ್ನು ಮೆಚ್ಚಿಸಲು ಮತ್ತು ಆರ್ಥಿಕವಾಗಿ ಸಬಲರಾಗುವಂತೆ ಶುಲ್ಕ ಹೆಚ್ಚಿಸಲು ಸರ್ಕಾರ ಅನುಮೋದನೆ ನೀಡುತ್ತಿದೆ. ವಾರ್ಷಿಕವಾಗಿ ಈ ಸಂಸ್ಥೆಗಳು ರೂ. ೧೪,೦೦೦/- ಶುಲ್ಕವನ್ನು ಹೆಚ್ಚಿಸಿದರೆ, ಅನಿವಾಸಿ ಭಾರತೀಯರಿಂದ ೪,೦೦೦ ಡಾಲರ್‌ಗಳನ್ನು ಸಂಗ್ರಹಿಸಲು ಒಪ್ಪಿಗೆಯನ್ನು ಪಡೆಯಲಾಗಿದೆ. ಈ ಖಾಸಗೀ ಸಂಸ್ಥೆಗಳು ವಿದ್ಯಾರ್ಥಿಯೊಬ್ಬನಿ/ಳಿಗೆ ರೂ. ೧೦ ಸಾವಿರದಿಂದ ೧೨ ಸಾವಿರದವರೆಗೆ ಖರ್ಚುಮಾಡಿ, ಉಳಿದಿದ್ದನ್ನು ತಮ್ಮ ಜೇಬಿಗೆ ಇಳಿಸುತ್ತವೆ. ಆದ್ದರಿಂದ ಸರ್ಕಾರಿ ಸಂಸ್ಥೆಗಳು ಕಮ್ಮಿಯಾಗುತ್ತಿದ್ದಂತೆ, ಉನ್ನತ ಶಿಕ್ಷಣ ದುಬಾರಿಯಾಗಿ ದಲಿತರು ಹಾಗೂ ಆದಿವಾಸಿಗಳು ಅದರಿಂದ ದೂರ ಉಳಿದುಬಿಡುತ್ತಾರೆ.

ರಾಷ್ಟ್ರೀಯ ದಿನಪತ್ರಿಕೆಯೊಂದರ ವರದಿಯ ಮೇರೆಗೆ ಜಾಗತಿಕ ಶಿಕ್ಷಣ ಪಟ್ಟಿಯಲ್ಲಿರುವ ದೇಶಗಳಲ್ಲಿ ಭಾರತವು ೧೪೧ನೇ ಸ್ಥಾನದಲ್ಲಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುತ್ತಿರುವವರ ಸಂಖ್ಯೆ ಶೇ ೮೦.೭ ರಿಂದ ಶೇ ೪೨.೧ ರಷ್ಟಿದ್ದರೆ ೧೯೯೭ ರಲ್ಲಿ ಭಾರತದ ಉನ್ನತ ಶಿಕ್ಷಣದ ಸಾಧನೆ ಶೇ ೭.೨ ರಷ್ಟು ಮಾತ್ರ. ಇಂಥ ಸಂದರ್ಭದಲ್ಲಿ ಬದಲಾಗುತ್ತಿರುವ ಶಿಕ್ಷಣ ನೀತಿಯನ್ನು ವಿಮರ್ಶಾದೃಷ್ಟಿಯಿಂದ ನೋಡಬೇಕಾಗಿದೆ. ಅವು ಹೇಗೆ ದಲಿತರನ್ನು ಮತ್ತು ಆದಿವಾಸಿಗಳನ್ನು ಉನ್ನತ ಶಿಕ್ಷಣದಿಂದ ದೂರವಿಡುತ್ತಿವೆ ಎಂಬುದನ್ನು ಅರಿಯಬೇಕಾಗುತ್ತದೆ.

ಗಂಭೀರ ಪ್ರಶ್ನೆಗಳು

★ ಸರ್ವಶಿಕ್ಷಣ ಅಭಿಯಾನ ೨೦೦೦ ದಂತಹ ನೀತಿಗಳು ಮತ್ತು ಯೋಜನೆಗಳ ಶಾಲಾ ಸಮಿತಿಗಳಲ್ಲಿ ದಲಿತರಿಗೆ ಹೆಚ್ಚಿನ ಜವಾಬ್ದಾರಿಗಳನ್ನು ನೀಡುವಾಗ, ಇಂಥ ನೀತಿಗಳನ್ನು ಸರ್ಕಾರವೇಕೆ ನಿಧಾನಗತಿಯಲ್ಲಿ ಜಾರಿಯಾಗಿಸುತ್ತಿದೆ? ಅಂದರೆ ಆ ನೀತಿಗಳು ಮತ್ತು ಯೋಜನೆಗಳು ಕಾಟಾಚಾರಕ್ಕೆ ಮಾತ್ರವೇ ? ಅವು ದಲಿತರ ಶತಮಾನಗಳ ವಂಚನೆಯ ಸಿಟ್ಟನ್ನು ಉಪಶಮನಗೊಳಿಸುವ ತಂತ್ರವಾಗಿವೆಯೇ?
★ ಉನ್ನತ ಶಿಕ್ಷಣದಲ್ಲಿ ಸರ್ಕಾರದ ಹೂಡಿಕೆಯನ್ನು ಕಮ್ಮಿಗೊಳಿಸುತ್ತಲೇ ಇನ್ನೊಂದೆಡೆ ಖಾಸಗೀ ಶಿಕ್ಷಣಕ್ಕೆ ಸದಾವಕಾಶಗಳನ್ನು ನೀಡುವುದರ ಹಿಂದಿನ ತರ್ಕವೇನು ?
★ ಸರ್ಕಾರಿ ಅನುದಾನಿತ ಶಿಕ್ಷಣ ಸಂಸ್ಥೆಗಳನ್ನು ತೀವ್ರವಾಗಿ ಕಮ್ಮಿ ಮಾಡುತ್ತಿರುವ ಸರ್ಕಾರ ಮತ್ತು ನಾಯಿಕೊಡೆಗಳಂತೆ ಬೆಳೆಯುತ್ತಿರುವ ಖಾಸಗೀ ಸಂಸ್ಥೆಗಳು ಕೇವಲ ಮೆರಿಟ್ ಮತ್ತು ಹಣವನ್ನೇ ಪ್ರವೇಶವೆಂದು ಭಾವಿಸುವ ಸಂದರ್ಭದಲ್ಲಿ ಬಡ ದಲಿತರು ಸಮಾಜದಲ್ಲಿ ಮೇಲೇರಲು ಏನಾದರೂ ಉಳಿದಿದೆಯೇ?
★ ಆದ್ಯತೆಯ ಮೇರೆಗೆ ದಲಿತರಿಗೆ ಶಿಕ್ಷಣ ನೀಡುವ ಪ್ರಕ್ರಿಯೆಯಲ್ಲಿ ನಿಧಾನವಾಗಿರುವ ಸರ್ಕಾರದ ಹಿಂದಿನ ಉದ್ದೇಶವಾದರೂ ಏನು?
★ ಅಸಹ್ಯವಾದ ಮತ್ತು ಅನ್ಯಾಯದಿಂದ ಕೂಡಿರುವ ಜಾತಿ ವ್ಯವಸ್ಥೆಯನ್ನು ಮೇಲ್ಜಾತಿ ಶಕ್ತಿಗಳು ಮುಂದುವರಿಸಲು ಇಚ್ಛಿಸುತ್ತಿವೆಯೇ ? ಹೀಗೆ ಅನಕ್ಷರಸ್ಥ ದಲಿತರನ್ನು ಮುಂದಿನ ಶತಮಾನಕ್ಕೂ ಬಿಟ್ಟಿ ಚಾಕರಿಯ ಕೆಲಸಕ್ಕೆ ಉಳಿಸಿಕೊಳ್ಳುವ ತಂತ್ರವೇ?
★ ಅಂದರೆ ದಲಿತರಿಗೆ ಶಿಕ್ಷಣ ದೊರೆತಲ್ಲಿ ಈ ಶೋಷಣಾ ಶಕ್ತಿಗಳು ಅಂತಿಮವಾಗಿ ತಮ್ಮ ಅಧಿಕಾರ-ಸ್ಥಾನಮಾನಗಳನ್ನು ಕಳೆದುಕೊಳ್ಳುತ್ತಾರೆಂಬ ಭಯವಿದೆಯಲ್ಲವೇ?
★ ದಲಿತೇತರ ಮೇಲ್ಜಾತಿಗಳು ಜ್ಞಾನ-ಉಳ್ಳವರಾಗಿ, ದಲಿತರು ಜ್ಞಾನ-ಇಲ್ಲದವರಾಗಿ ಇರುವ ವ್ಯವಸ್ಥೆಯನ್ನು ಹಾಗೆಯೇ ಮುಂದುವರಿಸಬೇಕೆಂಬುದನ್ನು ಈ ದಬ್ಬಾಳಿಕಾ ಗುಂಪುಗಳು ಇಚ್ಛಿಸುತ್ತವೆಯಲ್ಲವೇ ? ದಲಿತರ ಮುಂದುವರಿದ ಯಾತನೆಯನ್ನು ನೋಡಿ ಖುಷಿ ಪಡಬೇಕೆಂದು ಇವರು ಆಶಿಸುತ್ತಾರೆಯೇ?
★ ಇದನ್ನು ಯಾರೇ ಆಗಲಿ ಮುಂದುವರಿಯಲು ಬಿಟ್ಟು, ದಲಿತರು ಮತ್ತು ನಾಗರಿಕ ಸಮಾಜ ಪ್ರತಿಭಟನೆ ಮಾಡದಿರಲು ಸಾಧ್ಯವೇ?

ಆರೋಗ್ಯ ಹಕ್ಕಿನ ಮೇಲೆ ಜಾಗತೀಕರಣದ ಕರಿನೆರಳು

'ಕಲ್ಯಾಣ ರಾಜ್ಯದಲ್ಲಿ ಆರೋಗ್ಯ ಮತ್ತು ಶಿಕ್ಷಣಗಳೆರಡರಲ್ಲಿ ಸರ್ಕಾರದ ಪಾತ್ರ ಬಹು ಮುಖ್ಯವಾಗುತ್ತದೆ. ಭಾರತೀಯ ಸಂವಿಧಾನದಲ್ಲಿ ಇದನ್ನು ಒಳಗೊಳ್ಳಲಾಗಿದೆ. ಆದರೆ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಈ ಯುಗದಲ್ಲಿ ಜನರ ಮೂಲಭೂತ ಆರೋಗ್ಯದ ಅಗತ್ಯಗಳ ಪೂರೈಕೆಯ ಜವಾಬ್ದಾರಿಯಿಂದ ಸರ್ಕಾರ ಹಿಂದೆ ಸರಿಯುತ್ತಿರುವುದು ಮತ್ತು ಸಾರ್ವಜನಿಕ ಆರೋಗ್ಯಕ್ಕೆ ವ್ಯಯಿಸುತ್ತಿದ್ದ ಹಣದಲ್ಲಿ ಕಡಿತಮಾಡುತ್ತಿರುವುದು ಭಾರತದಲ್ಲಿನ ಆರ್ಥಿಕ ಸುಧಾರಣೆಗಳ ನೇರ ಪರಿಣಾಮವೇ ಆಗಿದೆ.'

ಅಡ್ವೊಕೆಟ್ ಇಂಟರ್‌ನೆಟ್ www.neasindia.org

ಜಾಗತೀಕರಣ ಮತ್ತು ಆರೋಗ್ಯದ ಮೇಲೆ ಅದರ ಪ್ರಭಾವ

ಆರೋಗ್ಯ ಸೇವಾಲಯಗಳಲ್ಲಿ ಹೆಚ್ಚುತ್ತಿರುವ ಅಸಮಾನತೆಯು ಜಾಗತೀಕರಣದ ಮುಖ್ಯವಾದ ಪ್ರಭಾವ. ಆರೋಗ್ಯ ರಕ್ಷಣೆಯ ಬೇಡಿಕೆ ಹೆಚ್ಚುತ್ತಿದ್ದರೂ ಕೂಡ, ಸಾರ್ವಜನಿಕ ಮತ್ತು ಖಾಸಗಿ ಆರೋಗ್ಯ ಸೇವೆಗಳು ಹೆಚ್ಚುತ್ತಿರುವ ಅಸಮಾನತೆಯ ಬಗ್ಗೆ ಸರ್ಕಾರಗಳು ಕಣ್ಣು ಮುಚ್ಚಿ ಸುಮ್ಮನೆ ಕುಳಿತಿರುವುವು. ಇದರಿಂದ ಶ್ರೀಮಂತ ಮತ್ತು ಬಡವರ ಅಂತರ ಮತ್ತಷ್ಟು ಹೆಚ್ಚಾದಂತಾಗಿದೆ. ಉದಾಹರಣೆಗೆ ಕೇರಳದಲ್ಲಿ ೧೦ ವರ್ಷದೊಳಗೆ (೧೯೮೭-೧೯೯೬) ಸರ್ಕಾರಿ ಆಸ್ಪತ್ರೆಗಳಲ್ಲಿ ಆಸ್ಪತ್ರೆ ಹಾಸಿಗೆಗಳು ಶೇ ೫.೫ ರಷ್ಟು ಹೆಚ್ಚಾಗಿದೆ. ಅಂದರೆ ೩೬,೦೦೦ ದಿಂದ ೩೮,೦೦೦. ಆದರೆ ಖಾಸಗಿ ವಲಯದಲ್ಲಿ ಶೇ ೪೦ ಹೆಚ್ಚಾಗಿದೆ. ಅಂದರೆ ೪೯,೦೦೦ ದಿಂದ ೬೭,೫೦೦ ಹಾಸಿಗೆಗಳು. ಇದಲ್ಲದೆ ಆರ್ಥಿಕ ನಿರ್ಬಂಧಗಳಿಂದ ಆರೋಗ್ಯ ಸೇವೆ, ಔಷಧಿಗಳ ಸರಬರಾಜುಗಳ ಮೇಲೆ ಪ್ರಭಾವ ಬೀರಿದೆ. ಇದರಿಂದ ಸಾರ್ವಜನಿಕ ಆರೋಗ್ಯ ವಲಯದ ಗುಣಮಟ್ಟ ಕಡಿಮೆ ಆಗಿದೆ. ನಿಯಂತ್ರಣವಿಲ್ಲದ ಖಾಸಗಿ ವಲಯವು ಈ ಸ್ಥಿತಿಯ ಪ್ರಯೋಜನ ಪಡೆದು ಅತ್ಯಾಧುನಿಕ ಯಂತ್ರಗಳನ್ನೊಳಗೊಂಡ ಅನೇಕ ಆಸ್ಪತ್ರೆಗಳನ್ನು ತೆಗೆದಿದ್ದಾರೆ. ಇದರೊಂದಿಗೆ ಆರೋಗ್ಯ ರಕ್ಷಣೆಯ ಖರ್ಚನ್ನು ಹೆಚ್ಚು ಮಾಡಲಾಗಿದೆ.

'ಆರೋಗ್ಯದ ಖಾಸಗೀಕರಣವು ನ್ಯೂನ ಆರೋಗ್ಯ ರಕ್ಷಣೆಗೆ ದಾರಿಮಾಡಿಕೊಟ್ಟಿದೆ. ಇದು ದ್ವಿಶ್ರೇಣಿ ಪದ್ಧತಿಯನ್ನು ಸೃಷ್ಟಿ ಮಾಡಿದೆ. ಮತ್ತು ಶೇ ೫೫. ರಷ್ಟು ಜನರು ಕನಿಷ್ಠ ಆರೋಗ್ಯ ರಕ್ಷಣೆಯನ್ನೂ ಪಡೆಯದಂತಾಗಿದೆ. (ಹರ್ಷ ವಾಲಿಯ, ಎಸ್‌ಜೆಸಿ ಸ್ವಯಂ ಸೇವಕ, ಭಾರತದಲ್ಲಿ ಜಾಗತೀಕರಣ, ವಿಶ್ವಬ್ಯಾಂಕ್ ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ಪ್ರಭಾವ)

ಆರೋಗ್ಯ ರಕ್ಷಣೆ ಪದ್ಧತಿಯ ಮೇಲೆ ವಿಶ್ವಬ್ಯಾಂಕಿನ ಪ್ರಭಾವ

ಭಾರತದ ಆರೋಗ್ಯ ರಕ್ಷಣೆಯ ಪದ್ಧತಿಯ ಮೇಲಿನ ವಿಶ್ವಬ್ಯಾಂಕಿನ ಮಧ್ಯಸ್ಥಿಕೆಯಿಂದ ಪ್ರಾಥಮಿಕ ಆರೋಗ್ಯ ರಕ್ಷಣೆ ಕೇಂದ್ರಗಳನ್ನು ಆಯ್ದ ಆರೋಗ್ಯ ವಲಯಗಳಾಗಿ ಪರಿವರ್ತಿಸುವಂತಾಗಿದೆ. ಇದು ಸಾಮಾನ್ಯ ಜನರು ಆರೋಗ್ಯ ರಕ್ಷಣೆಯನ್ನು ಬಹಳಷ್ಟು ಮಟ್ಟಿಗೆ ಅನುಭವಿಸದಂತೆ ಮಾಡಿದೆ. ಮೇಲಾಗಿ, ದ್ವಿತೀಯ ಹಂತದ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಉಪಯೋಗಿಸುವವರು ವೆಚ್ಚ ಹೊರುವಂತಹ ಜನವಿರೋಧಿ ನೀತಿಯು ಬಡಜನರ ಆರೋಗ್ಯ ರಕ್ಷಣೆಯ ಸ್ಥಿತಿಯನ್ನು ಇನ್ನಷ್ಟು ಕೆಡಿಸಿದೆ. ಸಾರ್ವಜನಿಕ ಆರೋಗ್ಯ ಸೌಲಭ್ಯಗಳಿಗೆ ತಮ್ಮ ಜೇಬಿನಿಂದ ಹಣ ಖರ್ಚು ಮಾಡುವುದರಿಂದ ಅವರು ಮತ್ತಷ್ಟು ಬಡತನ ಅನುಭವಿಸುವಂತೆ ಮಾಡಿದೆ. ಹತ್ತು ವರ್ಷ (೧೯೮೭-೧೯೯೬) ಕಾಲದಲ್ಲಿ ಕುಟುಂಬದ ಆರೋಗ್ಯ ವೆಚ್ಚ ಐದು ಪಟ್ಟಿನಷ್ಟು ಹೆಚ್ಚಾಗಿದೆ. ಈ ಹೆಚ್ಚಳಿಕೆಯು ಶ್ರೀಮಂತರಿಗಿಂತ ಬಡಜನರಲ್ಲಿ ಹೆಚ್ಚಿನದಾಗಿ ಕಾಣಬಹುದು. ಇದಕ್ಕೆ ಮುಖ್ಯ ಕಾರಣ ಆರೋಗ್ಯ ರಕ್ಷಣೆಯ ತೀವ್ರ ಖಾಸಗೀಕರಣ, ಹೆಚ್ಚುತ್ತಿರುವ ಮತ್ತು ಆಗಾಗ್ಗೆ ಅವಶ್ಯವಿಲ್ಲದೆ ಉಪಯೋಗಿಸುತ್ತಿರುವ ತಂತ್ರಜ್ಞಾನ ಮತ್ತು ಔಷಧಿಗಳ ಬೆಲೆಗಳ ಏರಿಕೆ.

ಉದಾ : ವಿಶ್ವಬ್ಯಾಂಕ್ ಮತ್ತು ಸರ್ಕಾರಗಳು ಹೇಳುವುದಕ್ಕೆ ವಿರುದ್ಧವಾಗಿ ಹೇಳುವಂತಹ ಅನೇಕ ಸಂಶೋಧನೆಗಳು ಆರೋಗ್ಯ ಮತ್ತು ಅಭಿವೃದ್ಧಿ ಸೂಚಕಗಳು ಕಳೆದ ದಶಕದಲ್ಲಿ ಯಾವುದೇ ಅಭಿವೃದ್ಧಿಯಾಗಿಲ್ಲ ಎಂದು ಹೇಳುತ್ತವೆ. ದೇಶದಲ್ಲಿ ದಲಿತರು ಮತ್ತು ಆದಿವಾಸಿಗಳು ಇನ್ನೂ ಪೌಷ್ಠಿಕಾಂಶ ಆಹಾರದ ಕೊರತೆಯಿಂದ ನರಳುತ್ತಿದ್ದಾರೆ. ಬೇರೆ ಸಾರ್ವಜನಿಕ ಗುಂಪುಗಳಿಗೆ ಹೋಲಿಸಿದರೆ ಇವರಲ್ಲಿ ಅಶಿಸ್ತು ಮತ್ತು ಮಕ್ಕಳ ಮರಣ ಹೆಚ್ಚಾಗಿರುವುದನ್ನು ಕಾಣಬಹುದು. ಹಿಂದೆ ಕಡಿಮೆ ಮಾಡಿದಂತಹ ಹರಡುವಂತಹ ರೋಗಗಳು ಈಗ ಮತ್ತೆ ಹೆಚ್ಚಾಗುತ್ತಿದೆ. ಸಾಮಾನ್ಯವಾಗಿ ಈ ಸುಧಾರಣೆಗಳಿಂದ ಯಾರಿಗೆ ಲಾಭವಾಗಿದೆ ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ಸರ್ಕಾರವು ಬಹಳಷ್ಟು ಉಪಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಅಸ್ತಿತ್ವದಲ್ಲಿರುವ ಅಭಿವೃದ್ಧಿ ಪಡಿಸಿರುವ ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಪ್ರದೇಶ ಆಸ್ಪತ್ರೆಗಳನ್ನು ಪ್ರಾರಂಭಿಸಿದೆ. ಆದರೂ ಹಳ್ಳಿಗಳಿಂದ ಇರುವ ಅಂತರ ಮತ್ತು ಆಸ್ಪತ್ರೆ ಸಂಸ್ಥೆಗಳು ಹಳ್ಳಿಗಳಿಗೆ ಭೇಟಿ ಕೊಡುವುದರಲ್ಲಿರುವ ಅಲಕ್ಷತೆ ಅನೇಕ ದಲಿತ ಮತ್ತು ಆದಿವಾಸಿ ಹಳ್ಳಿಗಳು ಈ ಸೌಕರ್ಯಗಳನ್ನು ಪಡೆಯದಂತೆ ಮಾಡಿದೆ.

ಹಡೆದ ಕಂದನಿಗೆ ಹಾಲು ಎಲ್ಲಿ ತರಲಿ ?

ದೇಶದಲ್ಲಿ ದಲಿತರು ಮತ್ತು ಆದಿವಾಸಿಗಳು ಇನ್ನೂ ಪೌಷ್ಠಿಕಾಂಶ ಆಹಾರದ ಕೊರತೆಯಿಂದ ನರಳುತ್ತಿದ್ದಾರೆ. ಬೇರೆ ಸಾರ್ವಜನಿಕ ಗುಂಪುಗಳಿಗೆ ಹೋಲಿಸಿದರೆ ಇವರಲ್ಲಿ ಅಶಿಸ್ತು ಮತ್ತು ಮಕ್ಕಳ ಮರಣ ಹೆಚ್ಚಾಗಿರುವುದನ್ನು ಕಾಣಬಹುದು. ಹಿಂದೆ ಕಡಿಮೆ ಮಾಡಿದಂತಹ ಹರಡುವಂತಹ ರೋಗಗಳು ಈಗ ಮತ್ತೆ ಹೆಚ್ಚಾಗುತ್ತಿದೆ. ಈ ಸುಧಾರಣೆಗಳಿಂದ ಯಾರಿಗೆ ಲಾಭವಾಗಿದೆ ?

ಆರೋಗ್ಯದ ಮೇಲೆ ಬಹುರಾಷ್ಟ್ರೀಯ ಕಂಪೆನಿಗಳ ಪ್ರಭಾವ

ಭೂಪಾಲ್ ಅನಿಲ ದುರಂತದ ಪ್ರಕರಣ : ಮಧ್ಯಪ್ರದೇಶದ ಭೂಪಾಲ್ ನಗರದಲ್ಲಿ ಡಿಸೆಂಬರ್ ೨, ೧೯೮೪ರ ಮಧ್ಯರಾತ್ರಿ ೪೦ ಟನ್‌ನಷ್ಟು ವಿಷಭರಿತ, ಮಿಥೆಲ್ ಐಸೋಸೈನೇಡ್, ಹೈಡ್ರೋಜನ್ ಸೈನೆಡ್ ಮತ್ತು ಇತರೆ ಅನಿಲಗಳು ಯೂನಿಯನ್ ಕಾರ್ಬೈಡ್ ಎಂಬ ಅಮೆರಿಕಾದ ಬಹುರಾಷ್ಟ್ರೀಯ ಕಂಪನಿಯು ನಿರ್ಮಿಸಲ್ಪಟ್ಟ ಕೀಟನಾಶಕ ಕಾರ್ಖಾನೆಯಿಂದ ಸೋರಿತು. ೫ ಲಕ್ಷ ಪುರುಷರು, ಮಹಿಳೆಯರು, ಮಕ್ಕಳು ಈ ವಿಷಾನಿಲಕ್ಕೆ ಸಿಲುಕಿದರು ಮತ್ತು ದುರಂತದ ಮೊದಲನೇ ವಾರದಲ್ಲೇ ಕನಿಷ್ಠ ಆರು ಸಾವಿರ ಜನರು ಸತ್ತರು. ಅಂತಿಮವಾಗಿ ಸತ್ತವರ ಸಂಖ್ಯೆ ೧೬ ಸಾವಿರಕ್ಕೆ ಏರಿತು. ಬದುಕುಳಿದಂತಹ ಸಾವಿರಾರು ಜನರಲ್ಲಿ ನೂರಾರು ಜನರು ಇಂದಿಗೂ ಅನೇಕ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಯೂನಿಯನ್ ಕಾರ್ಬೈಡ್ ಬದುಕುಳಿದವರಿಗೆ ಶುಶ್ರೂಷೆ ನೀಡಲು ಸರಿಯಾದ ಚಿಕಿತ್ಸಾಕ್ರಮ, ಪರಿಶೋಧನೆಗೆ ಸರಿಯಾದ ವೈದ್ಯಕೀಯ ಮಾಹಿತಿ ಕೊಡದೆ ತಡೆಹಿಡಿದಿದೆ.

ಮಹಾರಾಷ್ಟ್ರದ ಎನ್ರಾನ್ ಪ್ರಕರಣ : ೩ ಜೂನ್ ೧೯೯೭ರಲ್ಲಿ ಪಶ್ಚಿಮ ಭಾರತದ ವೆಲ್ಡುಕ್ ಎಂಬ ಹಳ್ಳಿಯ ಹೆಂಗಸು ಮೀನುಗಾರರ ಮನೆಗಳಿಗೆ ಪೊಲೀಸರು ಬಲವಂತವಾಗಿ ನುಗ್ಗಿ ಅವರನ್ನು ಬಲವಂತವಾಗಿ ಎಳೆದು ಕೋಲುಗಳಿಂದ ಒಡೆಯುತ ಪೊಲೀಸ್ ವ್ಯಾನ್‌ಗಳಿಗೆ ಎಳೆದುಕೊಂಡು ಹೋದರು. ಈ ಹೆಂಗಸರು ಮಾಡಿದ ಅಪರಾಧವೇನೆಂದರೆ ಎನ್ರಾನ್ ಎಂಬ ಅಮೆರಿಕಾದ ಬಹುರಾಷ್ಟ್ರೀಯ ಕಂಪನಿ ನಿರ್ಮಿಸುತ್ತಿದ್ದ ದೊಡ್ಡ ಹೊಸ ನೈಸರ್ಗಿಕ ಅನಿಲ ಕಾರ್ಖಾನೆಯ ವಿರುದ್ಧ ಶಾಂತಿಯುತ ಪ್ರತಿಭಟನೆ ಮಾಡಿದ್ದು.

ಈ ಎನ್ರಾನ್ ಯೋಜನೆಯ ವಿವಾದಕ್ಕೆ ಅನೇಕ ಕಾರಣಗಳಿವೆ. ಈ ಯೋಜನೆಗೆ ಸ್ಪರ್ಧಾತ್ಮಕ ಹರಾಜು ಇರಲಿಲ್ಲ. ಯೋಜನಾ ವೆಚ್ಚ ಮತ್ತು ವಿದ್ಯುತ್ ಸುಂಕ ಬೇರೆ ಯೋಜನೆಗಳಿಗೆ ಹೋಲಿಸಿದರೆ ಎನ್ರಾನ್‌ನದು ಹೆಚ್ಚಾಗಿತ್ತು. ಬೇರೆಡೆ ಕಡಿಮೆ ಬೆಲೆಗೆ ವಿದ್ಯುತ್ ಸಿಕ್ಕರೂ ಮಹಾರಾಷ್ಟ್ರ ವಿದ್ಯುತ್‌ಚ್ಛಕ್ತಿ ಮಂಡಳಿಯು ಎನ್ರಾನ್ ಉತ್ಪಾದಿಸುವ ಎಲ್ಲಾ ಹೆಚ್ಚು ಬೆಲೆಯಿರುವ ವಿದ್ಯುತ್‌ಚ್ಛಕ್ತಿಯನ್ನು ಖರೀದಿಸುವುದಾಗಿ ಘೋಷಿಸಿತು. ಪರಿಸರದ ಮೇಲಿನ ಪ್ರಭಾವದ ಬಗ್ಗೆ ಯಾವುದೇ ಪರಿಶೀಲನೆ ಮಾಡಲಿಲ್ಲ. ನೈಸರ್ಗಿಕ ಅನಿಲ ಶೇ೯೦ ರಷ್ಟು ಮಿಥೇಲ್ ಒಳಗೊಂಡಿದೆ. ಜಾಗತಿಕ ವಾತಾವರಣದ ಮೇಲೆ ಇಂಗಾಲದ ಡೈಆಕ್ಸೈಡ್‌ನಿಂದ ಆಗುವಂತಹ ತೊಂದರೆಗಿಂತ ೨೦ ರಷ್ಟು ಹೆಚ್ಚು ಇದರಿಂದಾಗುತ್ತದೆ. ಪ್ರತಿ ಒಂದು ಕೊಲವು ಸಾವಿರಾರು ಟನ್ನುಗಳಷ್ಟು ಆರ್ಸೆನಿಕ್, ಸೀಸ ಮತ್ತು ರೇಡಿಯಂಗಳನ್ನು ಒಳಗೊಂಡ ವಿಷಕೊರೆ ಮಣ್ಣನ್ನು ಉತ್ಪಾದಿಸುತ್ತದೆ. ಇದು ಜನರ ಆರೋಗ್ಯದ ಮೇಲೆ ಬಹಳಷ್ಟು ಪ್ರಭಾವ ಬೀರುತ್ತದೆ.

ಡೀ - ಬೀರ್ಸ್‌ನ ಪ್ರಕರಣ : ರಾಜಸ್ಥಾನದ ಜೈಪುರ್ ಮತ್ತು ಗುಜರಾತ್ ಸೂರತ್ನಲ್ಲಿ ಆರು ವರ್ಷದ ಮಕ್ಕಳು ಅಪಾಯಕಾರಿ ವಜ್ರಕ್ಕೆ ಮೆರಗು ಕೊಡುವ ಚಕ್ರಗಳ ನಡುವೆ

ಕೆಲಸ ಮಾಡುತ್ತಾರೆ. ಜನರು ತಾವು ಕೆಲಸ ಮಾಡುವ ಸ್ಥಳಗಳಲ್ಲಿ ಜೀವನ ಮಾಡುತ್ತಾರೆ, ಮಲಗುತ್ತಾರೆ, ಕಸ, ಮಲಮೂತ್ರ ಮತ್ತು ಕಾರ್ಖಾನೆಗಳ ತ್ಯಾಜ್ಯ ವಸ್ತುಗಳು ವಜ್ರ ಕಾರ್ಯಾಗಾರಗಳ ನಡುವೆ ಹರಿಯುವ ಮೋರಿಗಳಲ್ಲಿ ಕಟ್ಟಿಕೊಂಡಿರುತ್ತವೆ. ವಜ್ರಗಳನ್ನು ಉಜ್ಜಿ ಮೆರಗು ಕೊಡುವ ಸಮಯದಲ್ಲಿ ದೂಳು ಶ್ವಾಸಕೋಶಕ್ಕೆ ಸೇರಿ ಶ್ವಾಸಕೋಶವನ್ನು ಹಾಳುಮಾಡುತ್ತದೆ. ವಜ್ರ ಕೊರೆಯುವ ಕೆಲಸ ೧೦ ಅಪಾಯಕಾರಿ ಕೆಲಸಗಳಲ್ಲಿ ಪ್ರಥಮವಾದದ್ದು. ೧೪ ವರ್ಷದೊಳಗಿನ ಮಕ್ಕಳು ಈ ಕೆಲಸ ಮಾಡುವುದನ್ನು ನಿಷೇಧಿಸಲಾಗಿದೆ. ಆದರೆ ಈ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ. ೧೯೮೦ರ ಅಂತ್ಯದಲ್ಲಿ ವಜ್ರ ಕೊರೆಯುವ ಕೆಲಸ ಮಾಡುವುದರಲ್ಲಿ ಶೇ ೧೧ ರಷ್ಟು ಅನುಮೋದಿಸಿದ ವಯಸ್ಸಿಗಿಂತ ಕಡಿಮೆ ಇದ್ದವರು ಇದ್ದರು. ೧೯೯೫ರಷ್ಟಿಗೆ ಇದು ಶೇ ೧೬ ಅಥವಾ ೬೫ ಸಾವಿರ ಮಕ್ಕಳಿಗೆ ಏರಿತು. ಭಾರತವು ಬಾಲಕಾರ್ಮಿಕರ ವಿರುದ್ಧ ಅನೇಕ ಕಾನೂನುಗಳನ್ನು ಮಾಡಿದ್ದರೂ, ಭಾರತ ದೇಶದ ಒಟ್ಟು ರಾಷ್ಟ್ರೀಯ ಉತ್ಪಾದನೆಯಲ್ಲಿ ಶೇ ೨೦ ಬಾಲಕಾರ್ಮಿಕರ ಕೊಡುಗೆಯಿದೆ. ಇದರಲ್ಲಿ ಹೆಚ್ಚು ಬಾಲ ಕಾರ್ಮಿಕರು ದಲಿತರು.

ಆರೋಗ್ಯ ರಕ್ಷಣೆ ಮತ್ತು ದಲಿತರು : ನಿಜಾಂಶಗಳು ಏನು?

೧೯೯೮-೯೯ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಮಾಹಿತಿಯು ದಲಿತರು ಮತ್ತು ಇತರರ ಆರೋಗ್ಯ ರಕ್ಷಣೆಯ ಸ್ಥಿತಿ ಮತ್ತು ಅವರಿಗೆ ಸಿಗುತ್ತಿರುವ ಆರೋಗ್ಯ ಸೇವೆಗಳ ನಡುವೆ ಬಹಳಷ್ಟು ವ್ಯತ್ಯಾಸವನ್ನು ಬಯಲು ಮಾಡಿದೆ.

★ ಶಿಶು ಮರಣ (೮೩%) ಮತ್ತು ಮಗು ಮರಣ (೩೯%) ಪಜಾ/ಪಪಂ/ಹಿಂ.ಜಾ. ಸ್ಥಳೇತರಗಳಿಗೆ ಹೋಲಿಸಿದರೆ ೬೧% ಮತ್ತು ೨೨% ಅನುಕ್ರಮವಾಗಿ ದಲಿತರಲ್ಲಿ ಹೆಚ್ಚಾಗಿದೆ.

★ ೧೯೯೮-೯೯ರಲ್ಲಿ ಕನಿಷ್ಠ ಶೇ ೫೬ ರಷ್ಟು ಮಹಿಳೆಯರು ರಕ್ತಹೀನತೆಯಿಂದ ನರಳಿದರು.

★ ಬರೀ ೨/೩ ರಷ್ಟು ದಲಿತ ಮಹಿಳೆಯರು antenatal checkup ಮಾಡಿಸಿಕೊಳ್ಳುತ್ತಾರೆ.

★ ಶೇ ೭೦ ಕ್ಕಿಂತ ಹೆಚ್ಚು ದಲಿತ ಮಹಿಳೆಯರು ಮನೆಯಲ್ಲೆ ಪ್ರಸವಿಸಿದರು. ಬರೀ ಶೇ ೨೦ ರಷ್ಟು ಮಾತ್ರ ಸಾರ್ವಜನಿಕ ಆರೋಗ್ಯ ರಕ್ಷಣೆ ಸಂಸ್ಥೆಗಳಲ್ಲಿ ಪ್ರಸವಿಸಿದರು.

★ ಶೇ ೪೦ಕ್ಕಿಂತ ಹೆಚ್ಚು ಪ್ರಸೂತಿಯನ್ನು TAB ಗಳಿಂದ ಮಾಡಲಾಗಿದೆ.

★ ಸಣ್ಣ ಪ್ರಮಾಣದಲ್ಲಿ (ಶೇ ೧೭) ದಲಿತ ಮಹಿಳೆಯರು ಮಾತ್ರ Post pastun ಪರೀಕ್ಷೆಯ ಪ್ರಸೂತಿಯ ಎರಡು ತಿಂಗಳೊಳಗೆ ಮಾಡಿಸಿಕೊಂಡರು.

★ ದಲಿತ ಮತ್ತು ಇತರ ಮಹಿಳೆಯರ Facility ಯ ಅಂತರ ಒಂದು ವರ್ಷಕ್ಕಿಂತ ಹೆಚ್ಚು

★ ದಲಿತ ಮಹಿಳೆಯರು ಕುಟುಂಬ ಯೋಜನೆ ಪದ್ಧತಿಗಳನ್ನು ಉಪಯೋಗಿಸುವುದು ಮತ್ತು ಕುಟುಂಬ ಯೋಜನೆ ವಿಷಯ ಅಥವಾ ಮಾಧ್ಯಮಗಳ ಮುಖಾಂತರ ತಿಳಿದುಕೊಳ್ಳುವುದು ಬಹಳಷ್ಟು ಕಡಿಮೆ.

★ ಮಕ್ಕಳಲ್ಲಿ ರೋಗ ವ್ಯಾಪನೆಯ ಘಟನೆಗಳು ಹೆಚ್ಚು, ಶೇ ೭೫ಕ್ಕಿಂತ ಹೆಚ್ಚು ದಲಿತ ಮಕ್ಕಳು ರಕ್ತ ಹೀನರು. ಶೇ ೨೦ ರಿಂದ ಶೇ ೩೦ ರಷ್ಟು ಜ್ವರದಿಂದ ನರಳುತ್ತಾರೆ. ಮತ್ತು ಇತರೆ ಶೇ ೨೫ ರಷ್ಟು ARI (Achte Resplratory Injection) and deasshoea ಯಿಂದ ನರಳುತ್ತಾರೆ.

ಪೌಷ್ಠಿಕಾಂಶದ ಕೊರತೆ ಮತ್ತು ಕಡಿಮೆ ಪೌಷ್ಠಿಕ ಆಹಾರವು ದಲಿತ ಮಕ್ಕಳಲ್ಲಿ ಹೆಚ್ಚು. ಅರ್ಧಕ್ಕಿಂತ ಹೆಚ್ಚು ಮಕ್ಕಳು ಇದರಿಂದ ನರಳುತ್ತಿದ್ದಾರೆ.

ದಲಿತರಲ್ಲಿರುವ ಹೆಚ್ಚು ರೋಗವ್ಯಾಪನೆ ಮತ್ತು ಮಕ್ಕಳ ಮರಣಕ್ಕೆ ಅವರಲ್ಲಿರುವ ಬಡತನ ಮತ್ತು ಕಡಿಮೆ ವಿದ್ಯಾಭ್ಯಾಸವೇ ಕಾರಣ. ಮತ್ತು ಆರೋಗ್ಯ ಸೇವೆಗಳ ವಂಚನೆಗೂ ಸಂಬಂಧವಿದೆ.

ಹೆಚ್ಚು ಅನಕ್ಷರತೆ, ಬಡತನ ಮತ್ತು ತಾರತಮ್ಯವು ದಲಿತರು ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಪಡೆಯದಂತೆ ಮಾಡಿದೆ. (ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ೧೯೯೮-೯೯)

ಹಳ್ಳಿಗಳಲ್ಲಿ ಕೆಲಸ ಮಾಡುವ ಆರೋಗ್ಯ ಕಾರ್ಮಿಕರು ಅಸ್ಪೃಶ್ಯತೆಯನ್ನು ಆಚರಿಸುತ್ತಿರುವುದನ್ನು ಕಾಣಬಹುದು. ಆಂಧ್ರಪ್ರದೇಶದಲ್ಲಿ ಬೆಚ್ಚಿ ಬೀಳುವಂತೆ ಶೇ ೬೧.೨ ರಷ್ಟಿರುವುದನ್ನು ಕಾಣಬಹುದು. ಉದಾ : ಇದೇ ರಾಜ್ಯದಲ್ಲಿ ಶೇ ೧೮.೬ ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ಕೂಡ ಅಸ್ಪೃಶ್ಯತೆಯನ್ನು ಆಚರಿಸುತ್ತಿರುವುದನ್ನು ಕಾಣಬಹುದು. (ಆಂಧ್ರಪ್ರದೇಶದಲ್ಲಿನ ಅಸ್ಪೃಶ್ಯತೆಯ ಸ್ಥಿತಿ, ಸಾಕ್ಷಿ ೨೦೦೨)

ಜಲಹಕ್ಕಿನ ಮೇಲಿನ ಪ್ರಭಾವ

'ನಾವು ಬರೀ ನೀರು ಕುಡಿಯಲೆಂದು ಚವಡಾರ್ ಕೆರೆಗೆ ಹೋಗುತ್ತಿಲ್ಲಾ. ನಾವು ಕೆರೆಗೆ ಹೋಗುತ್ತಿರುವುದು ನಾವೂ ಕೂಡ ಮನುಷ್ಯರೆಂದು ತಿಳಿಸುವುದಕ್ಕೆ. ಈ ಸಭೆಯು ಸಮಾನತೆಗೆ ಮಾದರಿ ಎಂಬುವುದು ಸ್ಪಷ್ಟವಾಗಿರಬೇಕು... ಇತರರು ಇದನ್ನು ಮಾಡಲಾರರು'.

ಡಾ|| ಬಿ.ಆರ್. ಅಂಬೇಡ್ಕರ್

ನೀರು ಆರ್ಥಿಕ ಮತ್ತು ಸಾಮಾಜಿಕ ಕರ್ತವ್ಯವನ್ನು ನಿರ್ವಹಿಸುತ್ತದೆ. ಮುಖ್ಯವಾಗಿ ವ್ಯವಸಾಯಾಧಾರಿತ ಪರಿಸ್ಥಿತಿಯಲ್ಲಿ ಅದರಲ್ಲೂ ಭಾರತದ ಹಳ್ಳಿಗಳಲ್ಲಿ ಇಲ್ಲಿ ಲಕ್ಷಾಂತರ ರೈತರು ನೀರಾವರಿಯ ಮೇಲೆ ಅವಲಂಬಿತವಾಗಿರುತ್ತಾರೆ. ಏಕೆಂದರೆ ಇದೇ ಲಕ್ಷಾಂತರ ಜನರಿಗೆ ಆಹಾರದ ಮೂಲವಾಗಿದೆ.

ಆದರೆ ಭಾರತದಲ್ಲಿನ ೧೬ ಕೋಟಿ ದಲಿತರು ನೀರಿನಿಂದ ವಂಚಿತರಾಗಿದ್ದಾರೆ. ನೀರು ಪಡೆಯುವ ಕ್ರಿಯೆಯಲ್ಲಿ ಪ್ರತಿನಿತ್ಯ ಅವರು ತಾರತಮ್ಯ, ಅವಮಾನ ಮತ್ತು ಪರಾಜಯವನ್ನು ಅನುಭವಿಸಬೇಕಾಗಿದೆ. ಇದು ಮಾತಿನ ಜಗಳದಿಂದ ಹಿಡಿದು ಲೆಕ್ಕವಿಲ್ಲದಷ್ಟು ದೈಹಿಕ ಜಗಳಕ್ಕೆ ಕಾರಣವಾಗಿದೆ. ಇದಕ್ಕಿಂತ ಅತ್ಯಂತ ಬೇಸರ ತರುವಂತಹ ಹಿಂಸೆ, ಸಾಮಾಜಿಕ-ಆರ್ಥಿಕ ಬಹಿಷ್ಕಾರಗಳನ್ನು ಅನುಭವಿಸಬೇಕಾಗಿದೆ. ಭಾರತದಲ್ಲಿ ದಲಿತರಿಗೆ ನೀರಿನ ಹಕ್ಕನ್ನು ಧಾರ್ಮಿಕ ಮತ್ತು ಸಾಮಾಜಿಕ ಅನುಮತಿಯ ಉಲ್ಲಂಘನೆಯಾಗಿದೆ.

ಭಾರತದಲ್ಲಿನ ೧೬ ಕೋಟಿ ದಲಿತರು ನೀರಿನಿಂದ ವಂಚಿತರಾಗಿದ್ದಾರೆ. ನೀರು ಪಡೆಯುವ ಕ್ರಿಯೆಯಲ್ಲಿ ಪ್ರತಿನಿತ್ಯ ಅವರು ತಾರತಮ್ಯ, ಅವಮಾನ ಮತ್ತು ಪರಾಜಯವನ್ನು ಅನುಭವಿಸಬೇಕಾಗಿದೆ. ಇದು ಮಾತಿನ ಜಗಳದಿಂದ ಹಿಡಿದು ಲೆಕ್ಕವಿಲ್ಲದಷ್ಟು ದೈಹಿಕ ಜಗಳಕ್ಕೆ ಕಾರಣವಾಗಿದೆ. ಇದಕ್ಕಿಂತ ಅತ್ಯಂತ ಬೇಸರ ತರುವಂತಹ ಹಿಂಸೆ, ಸಾಮಾಜಿಕ-ಆರ್ಥಿಕ ಬಹಿಷ್ಕಾರಗಳನ್ನು ಅನುಭವಿಸಬೇಕಾಗಿದೆ.

ಸರ್ಕಾರದ ಪಕ್ಷಪಾತ ನೀತಿಗಳು

ಭಾರತದಲ್ಲಿ ಕುಡಿಯುವ ನೀರು ರಾಜ್ಯಕ್ಕೆ ಸಂಬಂಧಪಟ್ಟಿದೆ. (ವಿಷಯ: ಎಲ್ಲಾ ಪ್ರಜೆಗಳಿಗೂ ನೀರು ಒದಗಿಸುವುದು ಮತ್ತು ಎಲ್ಲರಿಗೂ ಶುದ್ಧ ನೀರು ದೊರಕುವಂತೆ ಮಾಡುವುದು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಜವಾಬ್ದಾರಿಯಾಗಿದೆ. ಆದರೆ ನಿರ್ಲಕ್ಷ್ಯವಲ್ಲದಿದ್ದರೂ ರಾಜ್ಯ ಸರ್ಕಾರಗಳ ಮತ್ತು ಮುನ್ಸಿಪಾಲಿಟಿಗಳ ಮನಸ್ಸಿಲ್ಲದಿರುವಿಕೆ, ಪ್ರಜೆಗಳಿಗೆ ಕುಡಿಯುವ ನೀರು ಸೂಕ್ತ ಪ್ರಮಾಣದಲ್ಲಿ ಸಿಗದಂತೆ ಮಾಡಿದೆ.

೧೯೯೫ರಲ್ಲಿ ಭಾರತದ ೨೨ ಕೈಗಾರಿಕಾ ವಲಯಗಳಲ್ಲಿ ೧೩೮ ಮಾದರಿ ಸ್ಥಳಗಳಲ್ಲಿ ಕೈಗೊಂಡ ಅಂತರ್ಜಲದ ಗುಣಮಟ್ಟ ಪರೀಕ್ಷೆಯಲ್ಲಿ ೨೨ ವಲಯಗಳಲ್ಲಿನ ನೀರು ಕುಡಿಯಲಿಕ್ಕೆ ಯೋಗ್ಯವಲ್ಲವೆಂದು ತಿಳಿಯಿತು. ಕಾರಣ ಅದರಲ್ಲಿ ಕ್ರಿಮಿಕೀಟಗಳು ಹೆಚ್ಚಿನ ಪ್ರಮಾಣದಲ್ಲಿದ್ದವು. ಹಾಗೂ ಜಡ ಧಾತುಗಳಿದ್ದವು. (ಸಿಪಿಸಿಆರ್ ಅನೇಕ ವರ್ಷಗಳಿಂದ) ಕೈಗಾರಿಕಾ ಯೋಜನೆ ಮತ್ತು ಪರಿಸರ ಮಾಲಿನ್ಯದ ನಿಯಂತ್ರಣದ ಕಾನೂನುಗಳಿದ್ದರೂ ಕಣ್ಣು ಕುಕ್ಕುವಂತಹ ಆರೋಗ್ಯ ತೊಂದರೆಗಳು ಸರ್ಕಾರದ ಗಮನ ಮತ್ತು ಶಿಕ್ಷೆಯ ಗಮನದಿಂದ ದೂರುಳಿದಿದೆ.

ಭಾರತದಲ್ಲಿ ಇನ್ನೂ ಶಾಲೆಗೆ ಹೋಗದಿರುವ ೧೫ ಲಕ್ಷ ಮಕ್ಕಳು ಅತಿ ಭೇದಿಯಿಂದ ಮರಣ ಹೊಂದಿದ್ದಾರೆ ಮತ್ತು ನಗರದ ಶೇ ೬೦ ರಷ್ಟು ಸಾವು ಕಾಲರ, ಭೇದಿ ಮತ್ತು ಹೊಟ್ಟೆನೋವಿನಿಂದ ಸಾಯುತ್ತಿದ್ದಾರೆ ಎಂದು ಅಂದಾಜು ಮಾಡಲಾಗಿದೆ. (ಶಿವರಾಮಕೃಷ್ಣನ್ ೧೯೯೩) ೧೯೯೦ರಲ್ಲಿ ಸುಮಾರು ೧ ಕೋಟಿ ಭೇದಿ ಪ್ರಕರಣಗಳು, ೧೮ ಲಕ್ಷ ಮಲೇರಿಯಾ ಮತ್ತು ೩,೭೦೦ ಕಾಲರ ಪ್ರಕರಣಗಳು ದಾಖಲಾಗಿವೆ. (ಎಂಎಚ್‌ಎಫ್‌ಡಬ್ಲ್ಯೂ, ೧೯೯೨) ಈ ಮಾಹಿತಿಯು ದಲಿತರಿಗೆ ಸಂಬಂಧಪಟ್ಟಿದೆ. ಯಾಕೆಂದರೆ ಭಾರತದಲ್ಲಿ ಬಡತನ ಮತ್ತು ಅನಾರೋಗ್ಯಕರ ವಾತಾವರಣದಲ್ಲಿ ವಾಸಿಸುವ ಜನರಲ್ಲಿ ಹೆಚ್ಚಿನವರು ಇವರೇ.

ಜಾಗತೀಕರಣ ಮತ್ತು ನೀರಿನ ಲಭ್ಯತೆ ಮತ್ತು ಗುಣಮಟ್ಟ

ವಿಶ್ವ ವ್ಯಾಪಾರ ಸಂಸ್ಥೆ / ಗ್ಯಾಟ್ಸ್, ವಿಶ್ವಬ್ಯಾಂಕ್, ಐಎಮ್‌ಎಫ್, ಏಷ್ಯಾ ಅಭಿವೃದ್ಧಿ ಬ್ಯಾಂಕ್ ಮತ್ತು ಇತರೆ ಅಂತರರಾಷ್ಟ್ರೀಯ ಸಾಲ ನೀಡುವ ಸಂಸ್ಥೆಗಳು ಭಾರತದಲ್ಲಿ ನೀರನ್ನು ಖಾಸಗೀಕರಣಕ್ಕೆ ತಳ್ಳಿದೆ. ಸಣ್ಣ ರೈತರು ಮತ್ತು ಮೀನುಗಾರರಿಗೆ ಜೀವನಾಧಾರವಾಗಿರುವಂತಹ ಮುಖ್ಯನದಿಗಳು ಮತ್ತು ಇತರೆ ನೀರಾವರಿ ಮೂಲಗಳನ್ನು ಸ್ಥಳೀಯ ಜನಾಂಗದ ಪಾಲ್ಗೊಳ್ಳುವಿಕೆ ಇಲ್ಲದೆ ಖಾಸಗೀ ಸಂಸ್ಥೆಗಳಿಗೆ ವರ್ಗಾಯಿಸಲಾಗುತ್ತಿದೆ. ಇದರಿಂದ ಸ್ಥಳೀಯ ಜನಾಂಗಕ್ಕೆ ಆದಾಯವಿಲ್ಲದಂತಾಗಿದೆ. ಖಾಸಗೀ ಸಂಸ್ಥೆಗಳು ನೀರನ್ನು ಹೆಚ್ಚು ಹಣ ಕೊಡುವಂತಹ ದೊಡ್ಡ ಕೈಗಾರಿಕಾ ವಲಯ ಮತ್ತು ನಗರ ಪ್ರದೇಶಗಳಿಗೆ ಸರಬರಾಜು ಮಾಡುತ್ತದೆ.

ವಿಶ್ವಸಂಸ್ಥೆ ಮತ್ತು ಐಎಮ್‌ಎಫ್ ಗಳು ನೀರಿನ ಖಾಸಗೀಕರಣದ ಷರತ್ತಿನೊಂದಿಗೆ ಸಾಲ ನೀಡುತ್ತಿದ್ದಾರೆ. ಇದರ ಪರಿಣಾಮ ಬಂಡವಾಳ ಹಾಕಿರುವ ಸಂಸ್ಥೆಗಳಿಗೆ ಹೆಚ್ಚಿನ ಲಾಭ. ಅವು ನೀರಿನ ಮೇಲಿನ ಸಹಾಯಧನವನ್ನು ಕಡಿತಗೊಳಿಸುವ ಮುಖಾಂತರ ಅಥವಾ ನೀರಿನ ಬೆಲೆಯನ್ನು ಹೆಚ್ಚಿಸುವ ಮುಖಾಂತರ ಭಾರತದ ಬಡಜನರಿಗೆ ನೀರು ಸಿಗದಂತೆ ಮಾಡುತ್ತಿವೆ. □

ವಿವೇಕಾನಂದರ ವಿಚಾರಗಳು

ನಮ್ಮ ಜನಾಂಗದ ಒಂದು ಮಹಾಪಾತಕವೇ ಜನಸಾಮಾನ್ಯರನ್ನು ನಿರ್ಲಕ್ಷಿಸಿದ್ದು. ಇದೇ ನಮ್ಮ ಅವನತಿಗೆ ಕಾರಣ. ಜನಸಾಮಾನ್ಯರು ವಿದ್ಯಾವಂತರಾಗಿ ಅವರಿಗೆ ಊಟಕ್ಕೆ ಬಟ್ಟೆಗೆ ಸಾಕಷ್ಟು ಸಿಕ್ಕುವವರೆಗೆ ಯಾವ ರಾಜಕೀಯದಿಂದಲೂ ಏನೂ ಪ್ರಯೋಜನವಿಲ್ಲ. ಅವರು ನಮ್ಮ ವಿದ್ಯಾಭ್ಯಾಸಕ್ಕೆ ತೆರಿಗೆ ತೆರುತ್ತಿರುವರು, ದೇವಸ್ಥಾನಗಳನ್ನು ಕಟ್ಟುವರು. ಅದಕ್ಕೆ ಬರಲು ಅವರಿಗೆ ಸಿಗುವುದು ನಿಂದೆ, ನಿಜವಾಗಿ ಅವರು ಗುಲಾಮರಾಗಿರುವರು. ನಾವು ಭರತಖಂಡವನ್ನು ಉದ್ಧಾರ ಮಾಡಬೇಕಾದರೆ ಅವರಿಗಾಗಿ ಕೆಲಸ ಮಾಡಬೇಕು.

ಸಂಗ್ರಹ:
ಜ.ಹೊ. ನಾರಾಯಣಸ್ವಾಮಿ

ಹಿಂದೂಧರ್ಮ: ದುಃಖ ಬೇನೆಗಳ ತವರೂರು

ಪ್ರಾಣಿಗಳು ಸಸ್ಯದ ಮೇಲೆ ಜೀವಿಸುವುವು, ಮನುಷ್ಯ ಪ್ರಾಣಿಗಳ ಮೇಲೆ ಜೀವಿಸುವನು. ಅತಿ ಹೀನವಾದುದೆಂದರೆ ಮನುಷ್ಯ ಮನುಷ್ಯರ ಮೇಲೆ ಜೀವಿಸುವುದು; ಬಲಾಢ್ಯನು ಬಲಹೀನನ ಮೇಲೆ ಜೀವಿಸುವುದು.

ಐಶ್ವರ್ಯವಂತರು ದಯೆಯಿಂದ ದೀನರಿಗೆ ಮಾಡುವ ಅಲ್ಪ ಉಪಕಾರ ಬಹಳ ಕಾಲ ಬರುವುದಿಲ್ಲ. ಕೊನೆಗೆ ಅದು ಇಬ್ಬರಿಗೂ ಕೇಡನ್ನಲ್ಲದೆ ಮತ್ತೇನನ್ನೂ ಮಾಡದು. ರೈತರು ಮತ್ತು ಕೂಲಿಕಾರರು ಮರಣೋನ್ಮುಖರಾಗಿದ್ದಾರೆ. ಆದುದರಿಂದ ಬೇಕಾಗಿರುವುದೇನೆಂದರೆ ಐಶ್ವರ್ಯವಂತರು ಅವರಿಗೆ ತಮ್ಮ ಸತ್ವವನ್ನು ಪುನಃ ಗಳಿಸುವಂತೆ ಮಾಡಬೇಕು ಅಷ್ಟೆ. ಹೆಚ್ಚು ಬೇಡ. ಅನಂತರ ರೈತರು, ಕೂಲಿಕಾರರು ತಮ್ಮ ಜೀವನದ ಸಮಸ್ಯೆಗಳನ್ನು ಕಣ್ಣು ಬಿಟ್ಟು ನೋಡಿ ಅದನ್ನು ಎದುರಿಸಿ ನಿವಾರಿಸಿಕೊಳ್ಳುವುದಕ್ಕೆ ಬಿಡಿ. ಆದರೆ ನೀನು ಜೋಪಾನವಾಗಿರಬೇಕು. ಬಡ ರೈತರು, ಕೂಲಿಕಾರರು, ಶ್ರೀಮಂತರು ಇವರುಗಳ ಮಧ್ಯೆ ಅಂತಃಕಲಹವನ್ನು ತಂದೊಡ್ಡಕೂಡದು.... ಯಾರು ಕೆಲಸ ಮಾಡುತ್ತಾರೋ ಅವರು ನನ್ನ ತಲೆಯ ಮೇಲಿನ ಕಿರೀಟವಾಗುತ್ತಾರೆ. ಇದನ್ನು ನಿಜವಾಗಿ ತಿಳಿ. ಕೆಲಸ ಮಾಡುವುದಕ್ಕೆ ಬಾಯಿಮಾತು ಮತ್ತು ಗದ್ದಲ ಪ್ರಯೋಜನವಿಲ್ಲ; ಇವು ನಮ್ಮ ಕಾಲವನ್ನು ವೃಥಾ ವ್ಯರ್ಥ ಮಾಡುವುದು. ಇದು ಪರೋಪಕಾರದ ಕೆಲಸವನ್ನು ಒಂದು ಹೆಜ್ಜೆಯೂ ಮುಂದಕ್ಕೆ ನೂಕದೆ ನಮ್ಮ ಜೀವನದ ಶಕ್ತಿಯನ್ನೆಲ್ಲಾ ಹೀರುವುದು.

ಮೇಲಿನ ವರ್ಗದಲ್ಲಿ ಹಲವಾರು ತಲೆ ತಲಾಂತರಗಳಿಂದ ಹೆಂಗಸರು ಸುಖ ಜೀವನವನ್ನು ನಡೆಸುತ್ತಿರುವರು. ಅವರು ಉಳುವುದಿಲ್ಲ ನೇಯುವುದಿಲ್ಲ ಆದರೂ ಅವರಂತೆ ವೈಭವಯುತ ಸಾಲಮನುಕೂಡ ಅಲಂಕರಿಸಿಕೊಂಡಿಲ್ಲ. ಪಾಪ, ಹುಡುಗರು ನೊಣಗಳಂತೆ ಸಾಯುವರು. ಹುಡುಗಿ ಬೆಕ್ಕಿನಂತೆ ಒಂಭತ್ತು ಜನ್ಮಗಳುಳ್ಳವಳು ಎಂದು ಹಿಂದೂಗಳು ಹೇಳುವರು. ಜನಗಣತಿಯನ್ನು ನೋಡಿದರೆ ಹುಡುಗರಿಗಿಂತ ಅವರು ಬೇಗ ಹೆಚ್ಚುವುದು ಕಾಣುವುದು. ಆದರೂ ಕಷ್ಟಪಟ್ಟು ಕೆಲಸ ಮಾಡಿದಾಗ ಮಾತ್ರ ಕಡಿಮೆಯಾಗುವರು. ಮೇಲಿನ ವರ್ಗದಲ್ಲಿ ಹೆಂಗಸರ ಸಂಖ್ಯೆ ಗಂಡಸರ ಸಂಖ್ಯೆಗಿಂತ ಹೆಚ್ಚು. ಕೆಳಗಿನ ವರ್ಗದಲ್ಲಿ ಸ್ಥಿತಿ ಬದಲಾಗುವುದು. ಅಲ್ಲಿ ಅವರೆಲ್ಲರೂ ಕಷ್ಟಪಟ್ಟು ಕೆಲಸಮಾಡುವರು. ಕೆಲವು ವೇಳೆ ಹೆಂಗಸರು ಗಂಡಸರಿಗಿಂತ ಕಷ್ಟಪಟ್ಟು ಕೆಲಸ ಮಾಡುವರು. ಅವರಿಗೆ ಜೊತೆಗೆ ಮನೆಯ ಕೆಲಸ ಬೇರೆ ಇರುವುದು.

ನಮ್ಮ ಜನಾಂಗದ ಒಂದು ಮಹಾ ಪಾತಕವೇ ಜನಸಾಮಾನ್ಯರನ್ನು ನಿರ್ಲಕ್ಷಿಸಿದ್ದು. ಇದೇ ನಮ್ಮ ಅವನತಿಗೆ ಕಾರಣ. ಜನಸಾಮಾನ್ಯರು ವಿದ್ಯಾವಂತರಾಗಿ ಅವರಿಗೆ ಊಟಕ್ಕೆ ಬಟ್ಟೆಗೆ ಸಾಕಷ್ಟು ಸಿಕ್ಕುವವರೆಗೆ ಯಾವ ರಾಜಕೀಯದಿಂದಲೂ ಏನೂ ಪ್ರಯೋಜನವಿಲ್ಲ. ಅವರು ನಮ್ಮ ವಿದ್ಯಾಭ್ಯಾಸಕ್ಕೆ ತೆರಿಗೆ ತೆರುತ್ತಿರುವರು, ನಮ್ಮ ದೇವಸ್ಥಾನಗಳನ್ನು ಕಟ್ಟುವರು. ಅದಕ್ಕೆ ಬರಲು ನಮ್ಮಿಂದ ಅವರಿಗೆ ಸಿಗುವುದು ನಿಂದೆ. ನಿಜವಾಗಿ ಅವರು ನಮ್ಮ ಗುಲಾಮರಾಗಿರುವರು. ನಾವು ಭರತಖಂಡವನ್ನು ಉದ್ಧಾರ ಮಾಡಬೇಕಾದರೆ ಅವರಿಗಾಗಿ ಕೆಲಸ ಮಾಡಬೇಕು.

ಜನಸಾಮಾನ್ಯರಿಗೆ ಅವರ ಹಕ್ಕನ್ನು ಕೊಡಬೇಕು. ಪ್ರಪಂಚದಲ್ಲೆಲ್ಲಾ ಶ್ರೇಷ್ಠವಾದ ಧರ್ಮ ನಮ್ಮಲ್ಲಿದೆ. ಆದರೆ ನೀವು ಜನರಿಗೆ ಕೆಲಸಕ್ಕೆ ಬಾರದ ಮೂಢನಂಬಿಕೆಗಳನ್ನು ಕೊಡುವಿರಿ. ಅಮರ ಪ್ರವಾಹ ಹತ್ತಿರವೇ ಹರಿಯುತ್ತಿದೆ. ನೀವು ಅವರಿಗೆ ಚರಂಡಿಯ ನೀರನ್ನು ಕೊಡುತ್ತಿರುವಿರಿ. ನಿಮ್ಮ ಮದ್ರಾಸಿನ ಪದವೀಧರರು ಪರಯನನ್ನು ಮುಟ್ಟಲಾರರು. ಆದರೆ ನಮ್ಮ ವಿದ್ಯಾವ್ಯಾಸಾಂಗಕ್ಕೆ ಹಣವನ್ನು ಅವನಿಂದ ಸ್ವೀಕರಿಸಲು ಸಿದ್ಧರಾಗಿರುವರು. ನಾನು ಪ್ರಚಾರಕರನ್ನು ತರಬೇತು ಮಾಡಲು ಎರಡು ಕೇಂದ್ರಗಳನ್ನು ತೆರೆಯುವೆನು. ಅವರು ನಮ್ಮ ಜನರಿಗೆ ಲೌಕಿಕ ಮತ್ತು ಆಧ್ಯಾತ್ಮಿಕ ಶಿಕ್ಷಣಗಳೆರಡನ್ನು ಕಲಿಸುವರು. ಅವು ಭರತಖಂಡವನ್ನೆಲ್ಲಾ ವ್ಯಾಪಿಸುವವರೆಗೆ ಅವರು ಕೇಂದ್ರದಿಂದ ಕೇಂದ್ರಕ್ಕೆ ಹೋಗುತ್ತಿರುವರು.

ದೇವರಲ್ಲಿ ಇಡುವ ಶ್ರದ್ಧೆಗಿಂತ ಹೆಚ್ಚಾಗಿ ಮೊದಲು ಆತ್ಮಶ್ರದ್ಧೆ ಬೇಕಾಗಿದೆ. ಅದು ಮುಖ್ಯ. ಆದರೆ ಕ್ರಮೇಣ ನಾವು ಆತ್ಮಗೌರವವನ್ನು ಕಳೆದುಕೊಳ್ಳುತ್ತಿರುವೆವು. ನಾನು ಸುಧಾರಕರನ್ನು ಇದಕ್ಕೆ ಆಕ್ಷೇಪಿಸುವುದು. ಆಚಾರ ಶೀಲರಲ್ಲಿ ಸ್ವಲ್ಪ ಮೂಢನಂಬಿಕೆ ಇದ್ದರೂ ಅವರಲ್ಲಿ ಶ್ರದ್ಧೆ ಇದೆ. ಆದರೆ ಸುಧಾರಕರಾದರೋ ಸುಮ್ಮನೆ ಪಾಶ್ಚಾತ್ಯರನ್ನು ಅನುಕರಿಸಿ ಅವರು ಹೇಳಿದಂತೆ ಕೇಳುವರು. ಇತರ ದೇಶದ ಜನಸಾಮಾನ್ಯರೊಡನೆ ಹೋಲಿಸಿದರೆ ನಮ್ಮ ಜನರು ದೇವತೆಗಳಂತೆ ಇರುವರು. ಈ ದೇಶ ಒಂದರಲ್ಲೇ ಬಡತನ ಒಂದು ಅಪರಾಧವಾಗಿಲ್ಲ. ಅವರು ದೈಹಿಕವಾಗಿಯೂ, ಮಾನಸಿಕವಾಗಿಯೂ ಚೆನ್ನಾಗಿರುವರು. ಆದರೆ ನಾವಾದರೋ ಅವರನ್ನು ನಿಕೃಷ್ಟ ದೃಷ್ಟಿಯಿಂದ ನೋಡುತ್ತಾ ಹೋದೆವು. ಈಗ ಅವರು ತಮ್ಮ ಶ್ರದ್ಧೆಯನ್ನೆಲ್ಲಾ ಕಳೆದುಕೊಂಡಿರುವರು. ತಾವು ಹುಟ್ಟು ಗುಲಾಮರು ಎಂದು ಭಾವಿಸುತ್ತಿರುವರು. ಅವರ ಹಕ್ಕನ್ನು ಅವರಿಗೆ ಕೊಡಿ. ಸ್ವತಂತ್ರವಾಗಿ ಅವರು ಅದರ ಮೇಲೆ ನಿಂತುಕೊಳ್ಳಲಿ.

ಅಧಿಕಾರ ಮತ್ತು ವಿದ್ಯೆ ಕೆಳಗಿರುವ ದೀನ ಜನರಲ್ಲಿ ವ್ಯಾಪಿಸಲು ಮೊದಲಾದಾಗ ಯುರೋಪ್ ಅಭಿವೃದ್ಧಿಯಾಗಲು ಮೊದಲಾಯಿತು. ಕಸದಂತೆ ಆಚೆ ತಳ್ಳಿದ ಇತರ ದೇಶದ ಹಲವು ಬಡ ಜನರಿಗೆ ಅಮೆರಿಕಾದಲ್ಲಿ ಆಶ್ರಯ ಮತ್ತು ಮನೆ ದೊರೆತಿದೆ. ಅವರೇ ಅಮೆರಿಕಾ ದೇಶದ ಬೆನ್ನುಮೂಳೆ. ಶ್ರೀಮಂತರು ಮತ್ತು ಪಂಡಿತರು ನಿಮ್ಮನ್ನು ಕೇಳಿ ಹೊಗಳುವರೇ ಅಥವಾ ತೆಗಳುವರೇ- ಇದರಿಂದ ಏನೂ ಪ್ರಯೋಜನವಿಲ್ಲ. ಸ್ವಲ್ಪ ಜನರೇ ಕಾಯಾ ವಾಚಾ ಮನಸಾ ಒಟ್ಟಿಗೆ ಕಲೆತರೆ ಅವರು ಪ್ರಪಂಚವನ್ನು ಬದಲಾಯಿಸಬಹುದು. ಈ ದೃಢ ನಂಬಿಕೆಯನ್ನು ಎಂದಿಗೂ ಮರೆಯಬೇಡಿ. ವಿರೋಧವಿದ್ದಷ್ಟೂ ಒಳ್ಳೆಯದೆ. ಒಂದು ನದಿಗೆ ಆತಂಕವಿಲ್ಲದೇ ಇದ್ದರೆ ವೇಗ ಹುಟ್ಟುವುದೇ? ಹೊಸದಾಗಿ ಉತ್ತಮವಾಗಿದ್ದಷ್ಟೂ ಅದಕ್ಕೆ ಪ್ರಾರಂಭದಲ್ಲಿ ಆತಂಕ ಹೆಚ್ಚು. ವಿರೋಧವೆ ಮುಂಬರುವ ಜಯದ ಚಿಹ್ನೆ. ಎಲ್ಲಿ ವಿರೋಧವಿಲ್ಲವೋ ಅಲ್ಲಿ ಜಯವೂ ಇಲ್ಲ.

ಸಾಯುತ್ತಿದ್ದರೂ ನೋಡಿ ಒಂದು ಮುಷ್ಠಿ ಅನ್ನವನ್ನು ಕೊಡಲಾರರು. ಇಲ್ಲಿರುವ ದುರ್ಭಿಕ್ಷಗ್ರಸ್ತ ಅನಾಥರಿಗೆ ಪರದೇಶದಿಂದ ಯಾಚಿಸಿ ಏನಾದರೂ ತಂದರೆ, ಅದನ್ನು ತೆಗೆದುಕೊಳ್ಳಲು ಯತ್ನಿಸುವರು. ಅದು ಸಿಕ್ಕದೇ ಇದ್ದರೆ ಜಗಳ ಮಾಡುವರು. ಇವರೇ ನಮ್ಮ ಶಿಕ್ಷಿತ ದೇಶಬಂಧುಗಳು. ನಮ್ಮ ದೇಶದವರೆಲ್ಲಾ ಹೀಗೇ ಇರುವರು.

ಜನಸಾಮಾನ್ಯರು ಒಂದು ಕುರಿಮಂದೆಯಂತೆ ಮುಂದಿರುವ ಕುರಿ ಹಳ್ಳಕ್ಕೆ ಬಿದ್ದರೆ ಉಳಿದವೆಲ್ಲ ಹಳ್ಳಕ್ಕೆ ಬಿದ್ದು ತಮ್ಮ ಕತ್ತನ್ನು ಮುರಿದುಕೊಳ್ಳುವುವು. ಇದರಂತೆಯೇ ಸಮಾಜದ ಒಬ್ಬ ಮುಂದಾಳು ಏನು ಮಾಡುತ್ತಾನೆಯೋ, ಅದನ್ನು ಉಳಿದವರು ತಾವು ಏನು ಮಾಡುತ್ತಿರುವೆವು ಎಂಬುದನ್ನು ಕೂಡ ಆಲೋಚಿಸದೆ ಅನುಕರಿಸುವರು.

ಯೋಗ-ಭೋಗ : ಈ ದೇಶದಲ್ಲಿ ಯೋಗವೂ ಇಲ್ಲ ಭೋಗವೂ ಇಲ್ಲ. ಯಾರು ಸಂಪೂರ್ಣ ಭೋಗದಿಂದ ತೃಪ್ತರೋ ಅವರಿಗೆ ಮಾತ್ರ ಯೋಗದ ವಿಚಾರ ಹೇಳಲು ತಿಳಿದುಕೊಳ್ಳಲು ಸಾಧ್ಯ. ನಮ್ಮ ಹಿಂದೂಧರ್ಮವಾದರೋ ದುಃಖ ಬೇನೆಗಳ ತೌರೂರಾಗಿ ಉಪವಾಸದಿಂದ ಕೊರಗಿ ದುರ್ಬಲ ಮನಸ್ಕರಾದ ಜನರಿಂದ ತುಂಬಿದೆ.

ಶಾಸ್ತ್ರದಲ್ಲಿ ನಿರ್ಭರತೆಯನ್ನು ಪಂಚಮ ಪುರುಷಾರ್ಥವೆಂದು ಹೇಳಿದೆ. ಆದರೆ ನಮ್ಮ ದೇಶದಲ್ಲಿ ದೈವ ದೈವ ಎಂದುಕೊಳ್ಳುತ್ತಿರುವುದು ಮೃತ್ಯುವಿನ ಚಿಹ್ನೆ, ಮಹಾ ಕಾಪುರುಷತೆಯ ಪರಿಣಾಮ; ಒಬ್ಬ ವಿಚಿತ್ರ ಈಶ್ವರನನ್ನು ಕಲ್ಪಿಸಿಕೊಂಡು ಅವನ ತಲೆಯಮೇಲೆ ತಮ್ಮ ದೋಷಗಳನ್ನೆಲ್ಲಾ ಹೊರಿಸುವ ಪ್ರಯತ್ನ ಮಾತ್ರ.

ರಾಜರಲ್ಲಿ ಹಿಂದಿನ ಕಾಲದ ವೀರ ಕ್ಷಾತ್ರ ತೇಜಸ್ಸಾಗಲೀ, ಬ್ರಾಹ್ಮಣರಲ್ಲಿ ಬ್ರಹ್ಮತೇಜಸ್ಸಾಗಲೀ ಇರಲಿಲ್ಲ. ಇಬ್ಬರೂ ತಮ್ಮ ನೈಜ ಶಕ್ತಿಯನ್ನು ಕಳೆದುಕೊಂಡಿದ್ದರು. ನಿರೀಕ್ಷಿಸಿದಂತೆ ಈ ಎರಡು ಶಕ್ತಿಗಳ ಸಮ್ಮೇಳನ ಪರಸ್ಪರ ಸ್ವಾರ್ಥತೆಯನ್ನು ತೃಪ್ತಿಪಡಿಸಿಕೊಳ್ಳುವುದರಲ್ಲಿ ನಿರತವಾಗಿ, ತಮ್ಮ ಸಾಮಾನ್ಯ ವಿರೋಧಿಗಳನ್ನು ಅದರಲ್ಲಿಯೂ, ಬೌದ್ಧರನ್ನು ಸಮೂಲವಾಗಿ ನಾಶ ಮಾಡುವ ಕೆಲಸದಲ್ಲಿ ಉದ್ಯುಕ್ತವಾಗಿ ಅಧೋಗತಿಗೆ ಇಳಿಯಿತು. ಇಂತಹ ಶಕ್ತಿ ಸಮ್ಮೇಳನದ ಪರಿಣಾಮವಾಗಿ, ರಾಜರು ಜನಸಾಮಾನ್ಯರ ರಕ್ತ ಹೀರುವುದು, ಮತ್ತೊಬ್ಬರ ಆಸ್ತಿಯನ್ನು ಹಾಳುಮಾಡುವುದು ಮುಂತಾದ ದುರಾಚಾರಗಳಲ್ಲಿ ನಿರತರಾಗಿ, ಹಿಂದಿನ ಕಾಲದ ರಾಜರು ಮಾಡುತ್ತಿದ್ದ ರಾಜಸೂಯ ಮುಂತಾದ ವೈದಿಕ ಯಜ್ಞಗಳನ್ನು ಅನುಕರಿಸಲು ವೃಥಾ ಪ್ರಯತ್ನಪಟ್ಟು ಅವುಗಳನ್ನು ವಿಚಿತ್ರ ಅಪಹಾಸ್ಯಕ್ಕೆ ಈಡು ಮಾಡಿದರು. ಅವರು, ಪರೋಪ ಜೀವಿಗಳ ಪರಿವಾರದಿಂದ ಮತ್ತು ದಾಸಾನುದಾಸರಂತೆ ವರ್ತಿಸುವ ಹೊಗಳುಭಟ್ಟರಿಂದ ಆವೃತರಾಗಿ, ತಮ್ಮ ಸ್ವಾತಂತ್ರ್ಯವನ್ನು ನೀಗಿಕೊಂಡರು. ಮಂತ್ರ ತಂತ್ರಗಳ ಆಡಂಬರದಿಂದ ಕೂಡಿದ ಅಪಾರ ವಾಕ್ ಜಾಲದಲ್ಲಿ ಸಿಕ್ಕಿ, ಪಶ್ಚಿಮದಿಂದ ಬಂದ ಮಹಮ್ಮದೀಯ ಧಾಳಿಕಾರರಿಗೆ ಸುಲಭವಾಗಿ ಬಲಿಯಾದರು.

ಬ್ರಾಹ್ಮಣರ ಶಕ್ತಿ ಜೈನರ ಮತ್ತು ಬೌದ್ಧರ ಕ್ರಾಂತಿ ಕಾಲದಲ್ಲಿ ಬಹುಪಾಲು ಕಾರ್ಯ ಕ್ಷೇತ್ರದಿಂದ ಮರೆಯಾಯಿತು; ಇಲ್ಲವೆ ತನ್ನ ವಿರೋಧ ಧರ್ಮಗಳ ಅಡಿಯಾಳಾಗಿ ನಿತ್ರಾಣವಾಗಿ ಜೀವಿಸಿತ್ತು. ಮಿರಹಿ ವಂಶದ ಮತ್ತು ಇತರ ವಂಶಗಳ ಆಳ್ವಿಕೆಯ ಕಾಲದಲ್ಲಿ ಬಂದ ಬ್ರಾಹ್ಮಣ ಶಕ್ತಿ ಕಳೆದುಹೋದ ತನ್ನ ಗೌರವವನ್ನು ಪಡೆಯುವುದಕ್ಕೆ ಕೊನೆಯ ಬಾರಿ ಪ್ರಯತ್ನಿಸಿತು. ಈ ಶ್ರೇಷ್ಠತೆಯನ್ನು ಸ್ಥಾಪಿಸುವ ಪ್ರಯತ್ನದಲ್ಲಿ ಮಧ್ಯ ಏಷ್ಯಾದಿಂದ ಹೊಸದಾಗಿ ಬಂದ ಕ್ರೂರ ಬರ್ಬರ ಜನರ ಪದತಳದಲ್ಲಿ ತಮ್ಮ ಬಾಳನ್ನು ಮಾರಿಕೊಂಡು, ಅವರ ಅಡಿಯಾಳಾದರು. ಅವರನ್ನು ಮೆಚ್ಚಿಸುವುದಕ್ಕಾಗಿ ಅವರ ಹೀನ ಆಚಾರ ವ್ಯವಹಾರಗಳನ್ನು ಭರತಖಂಡದಲ್ಲಿ ಜಾರಿಗೆ ತಂದರು.

ಏನೂ ತಿಳಿಯದ ಪರದೇಶೀಯರನ್ನು ಸುಲಭವಾಗಿ ಮೋಸಗೊಳಿಸುವುದರಲ್ಲಿ ಮಾತ್ರ ನಿರತವಾದ ಆ ಬ್ರಾಹ್ಮಣ ಶಕ್ತಿಯು ಹೊಸ ಹೊಸ ಮಂತ್ರತಂತ್ರಗಳ ಆಧಾರದಿಂದ ವಿಚಿತ್ರವಾದ ಆಚಾರ ವ್ಯವಹಾರಗಳನ್ನು ಆಚರಣೆಗೆ ತಂದಿತು. ಹೀಗೆ ಮಾಡಿದುದರ ಪರಿಣಾಮವಾಗಿ, ತಮ್ಮ ಹಿಂದಿನ ಧರ್ಮ, ಶಕ್ತಿ ಸತ್ವ ಬಹಳ ಹಿಂದಿನಿಂದಲೂ ಅನುಷ್ಠಾನದಲ್ಲಿದ್ದ ಸತ್‌ಚಾರಿತ್ರ-ಇವನ್ನೆಲ್ಲಾ ಕಳೆದುಕೊಂಡರು. ಹೀಗೆ ಆರ್ಯಾವರ್ತವನ್ನೆಲ್ಲಾ ಅತಿ ದುಷ್ಟವಾದ, ಅತಿ ಘೋರವಾದ, ಅತಿ ಹೇಯವಾದ ಜಲದ ಸುಳಿಯಂತೆ ಮಾಡಿದರು. ಇಂತಹ ಅಸಹ್ಯಕರವಾದ ಮೂಢನಂಬಿಕೆಯ ಆಚಾರವನ್ನು ಪ್ರೋತ್ಸಾಹಿಸಿದುದರ ಪರಿಣಾಮವಾಗಿ ತಮ್ಮ ಆತ್ಮಶಕ್ತಿಯನ್ನು ಕಳೆದುಕೊಂಡು ದುರ್ಬಲರಲ್ಲಿ ಅತಿ ದುರ್ಬಲರಾದರು. ಪಶ್ಚಿಮದಿಂದ ಬಂದ ಮಹಮ್ಮದೀಯ ಧಾಳಿಯ ಪ್ರಚಂಡ ಮಾರುತದ ಸೋಂಕಿನಿಂದಲೆ ಅವರು ನೂರಾರು ಚೂರುಗಳಾಗಿ ಒಡೆದು ನಾಶವಾದುದರಲ್ಲಿ ಆಶ್ಚರ್ಯವೇನಿದೆ? ಆ ದೊಡ್ಡ ಬ್ರಾಹ್ಮಣ ಶಕ್ತಿ ನೆಲಸಮವಾಯಿತು.

ನಿಯಮ, ಕಾನೂನು, ವಕೀಲ

ನಿಯಮ, ಶಿಕ್ಷೆ, ಶಾಸನ ಇವುಗಳ ಮೂಲಕ ಸಮಾಜದಲ್ಲಿ ವ್ಯಕ್ತಿಗೆ ನಿರಂತರ ದಾಸತ್ವ, ಬಲಾತ್ಕಾರದಿಂದ ಆತ್ಮ ವಿಸರ್ಜನ ಇವುಗಳ ಫಲ ಮತ್ತು ಪರಿಣಾಮಗಳಾವುವೆಂಬುದಕ್ಕೆ, ನಮ್ಮ ಭರತಖಂಡವೇ ಪ್ರಮುಖವಾದ ಉದಾಹರಣೆ. ಈ ದೇಶದಲ್ಲಿ ಶಾಸ್ತ್ರೋಕ್ತ ವಿಧಿಗನುಸಾರವಾಗಿ ಜನಗಳು ಹುಟ್ಟುವರು. ಬದುಕಿರುವವರೆಗೂ ನಿಯಮಾನುಸಾರವಾಗಿ ಭೋಜನ, ಪಾನ, ವಿವಾಹಾದಿ ಕರ್ಮಗಳೂ ಈ ಪ್ರಕಾರವಾಗಿಯೇ ನಡೆಯುವುವು. ಇನ್ನು ಸಾಯುವುದು ಕೂಡ ಶಾಸ್ತ್ರೋಕ್ತ ರೀತಿಯಲ್ಲಿ, ಈ ಬಗೆಯ ಕಠೋರ ಶಿಕ್ಷೆಯಲ್ಲಿ ಒಂದು ದೊಡ್ಡಗುಣ ಬಿಟ್ಟರೆ ಉಳಿದ ಎಲ್ಲವೂ ದೋಷಮಯ ಗುಣವೇನೆಂದರೆ ಒಂದೆರಡು ಕಾರ್ಯಗಳನ್ನು ಪ್ರತಿನಿತ್ಯವೂ ಅನೇಕ ತಲೆತಲಾಂತರದಿಂದ ಮಾಡಿಮಾಡಿ ಅಭ್ಯಾಸವಾಗಿ ಈಗ ಅಲ್ಪಾಯಾಸದಿಂದ ಜನರು ಅದನ್ನು ಮಾಡಬಲ್ಲರು.

ಮೂರು ಮಣ್ಣಿನ ಉಂಡೆಗಳನ್ನಿಟ್ಟು ನಾಲ್ಕೈದು ಕಡ್ಡಿಗಳನ್ನುರಿಸಿ ಈ ದೇಶದ ಅಡಿಗೆಯವನು ಮಾಡುವ ರುಚಿಕರವಾದ ಅನ್ನ ಪಲ್ಯ ಇನ್ನೆಲ್ಲಿಯೂ ದೊರೆಯದು. ಒಂದು ರೂಪಾಯಿ ಬೆಲೆ ಬಾಳುವಂತಹ ಮಾಂಧಾತನ ಕಾಲದ ಮಗ್ಗದಿಂದ ಹಳ್ಳದಲ್ಲಿ ಕಾಲಿಟ್ಟುಕೊಂಡು ಗಜ ಒಂದಕ್ಕೆ ಇಪ್ಪತ್ತು ರೂಪಾಯಿ ಬೆಲೆಬಾಳುವ ಕಿಂಕಾಪು ಈ ದೇಶದಲ್ಲಿ ಮಾತ್ರವೇ ತಯಾರಿಸಲು ಸಾಧ್ಯ. ಹರಕು ಚಾಪೆ, ಹರಳೆಣ್ಣೆ, ಮಣ್ಣಿನ ಹಣತೆ ಇವುಗಳ ಸಹಾಯದಿಂದ ಘನ ಪಂಡಿತನಾಗುವುದು ಈ ದೇಶದಲ್ಲಿ ಮಾತ್ರ ಸಾಧ್ಯ. ಸೊಟ್ಟ ಮೋರೆಯ ಕುರೂಪಿ ಹೆಂಡತಿಯ ಮೇಲೆ ಸಕಲವನ್ನೂ ಸಹಿಸುವ ಪ್ರೇಮ, ಗುಣಹೀನನೂ, ದುಷ್ಟನೂ ಆದ ಗಂಡನಲ್ಲಿ ಆಜನ್ಮ ಪತಿಭಕ್ತಿ ಈ ದೇಶದಲ್ಲಿ ಮಾತ್ರ ಸಾಧ್ಯ. ಇಷ್ಟೂ ಒಳ್ಳೆಯ ಗುಣಗಳಾಯಿತು.

ಆದರೆ ಇವೆಲ್ಲವನ್ನೂ ಮನುಷ್ಯರು ಯಾವ ರೀತಿ ಮಾಡುತ್ತಾರೆಂದರೆ ಪ್ರಾಣವಿಲ್ಲದ ಯಂತ್ರ ಕೆಲಸ ಮಾಡುವಂತೆ. ಇದರಿಂದ ಮನೋಸ್ಫೂರ್ತಿಯಿಲ್ಲ, ಹೃದಯ ವಿಕಾಸವಿಲ್ಲ, ಚೇತನದ ಚಿಹ್ನೆ ಇಲ್ಲ, ಆಶಾ ತರಂಗವಿಲ್ಲ, ಶಕ್ತಿಯ ಪ್ರಬಲ ಉತ್ತೇಜನವಿಲ್ಲ, ತೀವ್ರಸುಖಾನುಭೂತಿ ಇಲ್ಲ, ನಿಕಟ ದುಃಖ ಸ್ಪರ್ಶವೂ ಇಲ್ಲ, ಹೊಸಹೊಸ ವಿಷಯಗಳನ್ನು ಕಂಡು ಹಿಡಿಯಬೇಕೆಂಬ ಬುದ್ಧಿ ವೈಭವದ ಚಲನೆ ಇಲ್ಲ, ನೂತನತ್ವದ ಇಚ್ಛೆ ಇಲ್ಲ, ನೂತನ ವಸ್ತುಗಳ ಆಚರಣೆ ಇಲ್ಲ, ಇದಕ್ಕಿಂತಲೂ ಉತ್ಕೃಷ್ಟವಾದ ಅವಸ್ಥೆ ಇದೆಯೆ ಇಲ್ಲವೆ ಎಂಬುದು ಮನಸ್ಸಿಗೇ ಬರುವುದಿಲ್ಲ, ಎಲ್ಲಿ ಇದೆಯೋ ಅಲ್ಲಿ ನಂಬಿಕೆಯನ್ನುಂಟು ಮಾಡುವುದಿಲ್ಲ, ನಂಬಿಕೆ ಇದ್ದರೂ ಪ್ರಯತ್ನವಿಲ್ಲ, ಪ್ರಯತ್ನವಿದ್ದರೂ ಉತ್ಸಾಹಭಂಗ ಅದನ್ನು ನಾಶಮಾಡುವುದು...

ಪುನಃ ಮಣ್ಣು ಮುದ್ದೆಗಳಂತೆಯೂ ಇರುವ ಮನುಷ್ಯರಿಂದ ತುಂಬಿದ ಸಮಷ್ಟಿಗೆ ಸಮಾಜವೆಂಬ ಹೆಸರು ಸಲ್ಲುವುದೇನು? ಅಂತಹ ಸಮಾಜಕ್ಕೆ ಕಲ್ಯಾಣವೆಲ್ಲಿಯದು? ಕಲ್ಯಾಣ ಉಂಟಾಗಿದ್ದ ಪಕ್ಷದಲ್ಲಿ ಸಾವಿರಾರು ವರುಷಗಳಿಂದಲೂ ಗುಲಾಮಗಿರಿಯಲ್ಲಿ ನರಳದೆ ಜಗದಲ್ಲಿ ಸರ್ವೋತ್ಕೃಷ್ಟ ಜನಾಂಗವಾಗಿ, ವಿದ್ಯೆಯ ನಿತ್ಯ ಚಿಲುಮೆಯಾಗುತ್ತಿತ್ತು ಈ ಭರತ ಭೂಮಿ... ನಿತ್ಯ ತಿರುಕನ ತ್ಯಾಗದಲ್ಲಿರುವ ಮಹಿಮೆ ಏನು? ನಪುಂಸಕನ ಇಂದ್ರಿಯ ನಿಗ್ರಹದಲ್ಲಿ ಪುಣ್ಯವೇನು? ಭಾವಹೀನ, ಹೃದಯ ಹೀನ, ಉಚ್ಚ ಆಶಾಹೀನ, ಸಮಾಜದಲ್ಲಿ ಇರುವುದೇನು ಇಲ್ಲದೆ ಇರುವುದೇನು?- ಎಂದು ತಿಳಿಯದ ಜ್ಞಾನಹೀನನ ತ್ಯಾಗವಂತಹುದು? ಬಲಾತ್ಕಾರದಿಂದ ಸತಿ ಮಾಡಿಸುವುದರಲ್ಲಿ ಆಕೆಯ ಪತಿ ಭಕ್ತಿ ಎಂಥದ್ದು? ಮೂಢನಂಬಿಕೆಯ ಮೂಲಕ ಜನರಿಂದ ಪುಣ್ಯ ಕೆಲಸಗಳನ್ನು ಏಕೆ ಮಾಡಿಸಬೇಕು? ಅವರನ್ನು ಸ್ವತಂತ್ರರನ್ನಾಗಿ ಮಾಡಿ ಜನಗಳ ಬಂಧನಗಳನ್ನು ಸಾಧ್ಯವಾದಷ್ಟು ಬಿಡಿಸಿ ಎಂದು ನಾನು ಹೇಳುವುದು. ಕೊಳೆಯನ್ನು ಕೊಳೆಯಿಂದ ತೊಳೆಯಲಾದೀತೇ? ಬಂಧನದಿಂದ ಬಂಧನವನ್ನು ಬಿಡಿಸಲಾಗುವುದೆ? ಉದಾಹರಣೆ ಎಲ್ಲಿ? ಸಮಾಜದ ಹಿತಕ್ಕಾಗಿ ಎಂದು ತಮ್ಮ ಸಮಸ್ತ ಸುಖವನ್ನು ತ್ಯಾಗಮಾಡುವಿರೋ ಅಂದು ನಾವು ಬದ್ಧರು, ಮುಕ್ತರು.

ನಿಜವೇನೆಂದರೆ, ನಮ್ಮ ದೇಶದಲ್ಲಿನ ತಂದೆತಾಯಿಗಳು, ಬಂಧುಬಳಗದವರು ತಮ್ಮ ಸ್ವಾರ್ಥಕ್ಕಾಗಿ, ಸಮಾಜದಿಂದ ಅವಮಾನವನ್ನು ತಪ್ಪಿಸಿಕೊಳ್ಳುವುದಕ್ಕಾಗಿ, ಮಮತೆ ಇಲ್ಲದೆ ಮಕ್ಕಳನ್ನು (ಹುಡುಗ ಹುಡುಗಿಯರನ್ನು) ಬಲಿ ಕೊಡಬಲ್ಲರು. ಅನೇಕ ಶತಮಾನಗಳಿಂದಲೂ ಬಂದಿರುವ ಶಿಕ್ಷಣ ಅವರನ್ನು ನಿರ್ದಯರನ್ನಾಗಿ ಮಾಡಿ, ಈ ಕೆಲಸವನ್ನು ಮಾಡಲು ಬಹಳ ಸುಲಭವಾಗಿ ಮಾಡಿವೆ. ಯಾರು ವೀರನೋ ಆತನೇ ತ್ಯಾಗಮಾಡಬಲ್ಲ, ಹೇಡಿಯು ಚಾವಟಿಗೆ ಅಂಜಿ ಒಂದು ಕೈಯಿಂದ ಕಣ್ಣೊರಿಸಿಕೊಳ್ಳುತ್ತ ಮತ್ತೊಂದರಿಂದ ದಾನಮಾಡುತ್ತಾನೆ. ಇಂತಹ ದಾನದಿಂದ ಫಲವೇನು?

ಸರ್ವಸ್ವಾತಂತ್ರವೇ ಆದರ್ಶ. ಮರ ಪ್ರಕೃತಿಯ ನಿಯಮವನ್ನು ಎಂದಿಗೂ ಮೀರುವುದಿಲ್ಲ. ಒಂದು ಹಸು ಕದಿಯುವುದನ್ನು ನಾನು ಎಂದೂ ಕಂಡಿಲ್ಲ, ಹಕ್ಕಿ ಎಂದಿಗೂ ಸುಳ್ಳು ಹೇಳುವುದಿಲ್ಲ. ಆದರೂ ಅವು ಮನುಷ್ಯನಿಗಿಂತ ಮೇಲಲ್ಲ, ಸ್ವಾತಂತ್ರ್ಯದ ಅದ್ಭುತ ಸಮರ್ಥನೆಯೇ ಜೀವನ. ನಿಯಮಕ್ಕೆ ಬಾಗುವುದನ್ನು ನಾವು ಒಂದು ಅತಿಗೆ ತೆಗೆದುಕೊಂಡು ಹೋದರೆ, ಅದು ಸಮಾಜದಲ್ಲಾಗಲೀ, ರಾಜಕೀಯದಲ್ಲಾಗಲೀ, ಧಾರ್ಮಿಕ ಕ್ಷೇತ್ರದಲ್ಲಾಗಲೀ, ನಮ್ಮನ್ನು ಜಡತೆಗೆ ಒಯ್ಯುವುದು. ಹಲವು ನಿಯಮಗಳು ಮೃತ್ಯುವಿನ ಚಿಹ್ನೆ, ಯಾವ ಸಮಾಜದಲ್ಲಿ ಹೆಚ್ಚು ನಿಯಮಗಳಿರುತ್ತವೆಯೋ ಆ ಸಮಾಜದ ನಾಶ ಸನ್ನಿಹಿತವಾಗಿದೆ. ಭರತಖಂಡದ ಚರಿತ್ರೆಯನ್ನು ನೀವು ಗಮನಿಸಿದರೆ ಮತ್ತಾವ ದೇಶದಲ್ಲಿಯೂ ಇಷ್ಟೊಂದು ದಿಗ್ಬಂಧನಗಳು ಇಲ್ಲ, ಆದ ಕಾರಣವೇ ಜನಾಂಗ ಸತ್ತಂತೆ ಇದೆ. □

ಸರ್ವಸ್ವಾತಂತ್ರವೇ ಆದರ್ಶ. ಮರ ಪ್ರಕೃತಿಯ ನಿಯಮವನ್ನು ಎಂದಿಗೂ ಮೀರುವುದಿಲ್ಲ. ಒಂದು ಹಸು ಕದಿಯುವುದನ್ನು ನಾನು ಎಂದೂ ಕಂಡಿಲ್ಲ, ಹಕ್ಕಿ ಎಂದಿಗೂ ಸುಳ್ಳು ಹೇಳುವುದಿಲ್ಲ. ಆದರೂ ಅವು ಮನುಷ್ಯನಿಗಿಂತ ಮೇಲಲ್ಲ, ಸ್ವಾತಂತ್ರ್ಯದ ಅದ್ಭುತ ಸಮರ್ಥನೆಯೇ ಜೀವನ. ನಿಯಮಕ್ಕೆ ಬಾಗುವುದನ್ನು ನಾವು ಒಂದು ಅತಿಗೆ ತೆಗೆದುಕೊಂಡು ಹೋದರೆ, ಅದು ಸಮಾಜದಲ್ಲಾಗಲೀ, ರಾಜಕೀಯದಲ್ಲಾಗಲೀ, ಧಾರ್ಮಿಕ ಕ್ಷೇತ್ರದಲ್ಲಾಗಲೀ, ನಮ್ಮನ್ನು ಜಡತೆಗೆ ಒಯ್ಯುವುದು. ಹಲವು ನಿಯಮಗಳು ಮೃತ್ಯುವಿನ ಚಿಹ್ನೆ, ಯಾವ ಸಮಾಜದಲ್ಲಿ ಹೆಚ್ಚು ನಿಯಮಗಳಿರುತ್ತವೆಯೋ ಆ ಸಮಾಜದ ನಾಶ ಸನ್ನಿಹಿತವಾಗಿದೆ. ಭರತಖಂಡದ ಚರಿತ್ರೆಯನ್ನು ನೀವು ಗಮನಿಸಿದರೆ ಮತ್ತಾವ ದೇಶದಲ್ಲಿಯೂ ಇಷ್ಟೊಂದು ದಿಗ್ಬಂಧನಗಳು ಇಲ್ಲ, ಆದ ಕಾರಣವೇ ಜನಾಂಗ ಸತ್ತಂತೆ ಇದೆ.

SAMVADA' Kannada Monthly. SEPT. 2004 RNI-KAR KAN/2002/9246 CPMG/KA/BGW-706/2003-

ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಸಮರ್ಥ ವಿಶ್ಲೇಷಣೆಗಾಗಿ

ವಿಚಾರಶೂನ್ಯವಾಗುತ್ತಿರುವ ಸಮಾಜದ ಜಾಗೃತಿಗಾಗಿ

ಎಲ್ಲ ಜನವರ್ಗಗಳ ಅಭಿವ್ಯಕ್ತಿ ವೇದಿಕೆಯಾಗಿ

ಇಂದೇ ಚಂದಾದಾರರಾಗಿ

ಸಂವಾದ

ಶೋಷಣೆ ಮುಕ್ತ ಸಮಾಜಕ್ಕಾಗಿ

'ಸಂವಾದ' ಮಾಸಪತ್ರಿಕೆ, ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧